ಇ–ಆಡಳಿತ ಕೇಂದ್ರದ ಮಹತ್ವದ ಪ್ರಯತ್ನಕ್ಕೆ ಪ್ರಚಾರದ ಕೊರತೆ

ಬಳಕೆದಾರರ ಕೊರತೆಯಿಂದ ಬಾಡಿದ ‘ಪದಕಣಜ’

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯ ಸರ್ಕಾರವು ಇ-ಆಡಳಿತ ಕೇಂದ್ರದ ಮೂಲಕ ಜಾರಿಗೊಳಿಸಿರುವ ಇ-ಕನ್ನಡ ಯೋಜನೆಯ ಮಹತ್ವಾಕಾಂಕ್ಷೆಯ ಪ್ರಯತ್ನವಾದ ‘ಪದಕಣಜ’ ಜಾಲತಾಣ ಹಾಗೂ ಆ್ಯಪ್ ನಿರೀಕ್ಷೆಯಷ್ಟು ಜನರನ್ನು ತಲುಪಿಲ್ಲ. ಸೂಕ್ತ ಪ್ರಚಾರ ಮತ್ತು ಬಳಕೆದಾರರ ಕೊರತೆಯಿಂದ ಬಾಡಿದೆ.

ಡಿಜಿಟಲ್ ಯುಗದಲ್ಲಿ ಕನ್ನಡದ ಬಳಕೆ ಹೆಚ್ಚಿಸಲೆಂದೇ ಸದ್ಯ 2.03 ಲಕ್ಷ ಕನ್ನಡ ಪದಗಳು ಹಾಗೂ 79 ಸಾವಿರ ಇಂಗ್ಲಿಷ್ ಪದಗಳನ್ನು ಸೇರಿಸಿದ್ದು, ಗೂಗಲ್‌ಪ್ಲೇ ಸ್ಟೋರ್‌ನಲ್ಲಿ 1 ಸಾವಿರಕ್ಕೂ ಅಧಿಕ ಮಂದಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಕೋವಿಡ್ ಅವಧಿಯಲ್ಲಿ ಎರಡು ವರ್ಷದ ಹಿಂದೆ ಪದಕಣಜವನ್ನು ಲೋಕಾರ್ಪಣೆಗೊಳಿಸಲಾಗಿತ್ತು.

ಈಗ ಕೇಂದ್ರವು ಅದನ್ನು ಜನಪ್ರಿಯಗೊಳಿಸುವುದು ಹೇಗೆ ಎಂಬ ಚಿಂತನೆಯಲ್ಲಿ ತೊಡಗಿದೆ. ಮೈಸೂರಿನಲ್ಲಿ ಫೆ.27, 28ರಂದು ಕೇಂದ್ರವು ಆಯೋಜಿಸಿದ್ದ ಇ-ಕನ್ನಡ ಯೋಜನೆಯ ಸಾಧನೆ, ಪ್ರಗತಿ ಹಾಗೂ 2030ರ ದೃಷ್ಟಿಕೋನ ಕಾರ್ಯಾಗಾರದಲ್ಲಿ ಈ ಬಗ್ಗೆ ಗಂಭೀರ ಚರ್ಚೆಯೂ ನಡೆದಿದೆ.

ವೈದ್ಯಕೀಯ, ಪಕ್ಷಿ, ಕೃಷಿ, ಆಡಳಿತ, ಕಂಪ್ಯೂಟರ್, ಗ್ರಂಥಸಂಪಾದನೆ, ಪ್ರಾಣಿಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಸೂಕ್ಷ್ಮಜೀವಿಶಾಸ್ತ್ರ, ವಿವಿಧ ವೃತ್ತಿಗಳ ಪದಕೋಶಗಳು, ವಿವಿಧ ಇಲಾಖೆಗಳ ಪಾರಿಭಾಷಿಕಪದಕೋಶಗಳುಸೇರಿದಂತೆ 79 ವೈವಿಧ್ಯಮಯ ಪದಕೋಶಗಳನ್ನು ಸೇರ್ಪಡೆಗೊಳಿಸಲಾಗಿದೆ. ಓದುಗರು ನಿರ್ದಿಷ್ಟ ಪದಕೋಶಗಳನ್ನು ಆಯ್ಕೆ ಮಾಡಿಕೊಂಡು, ಪದಗಳ ಅರ್ಥವನ್ನು ಪಡೆದುಕೊಳ್ಳುವ ಸರಳ ವಿಧಾನವನ್ನು ರೂಪಿಸಲಾಗಿದೆ. ಇಂಗ್ಲಿಷ್ ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲೇ ಅರ್ಥಗಳನ್ನು ನೀಡಲಾಗಿದೆ. ಹಾಗಿದ್ದರೂ ಪದಕಣಜ ಹೆಚ್ಚು ಜನರನ್ನು ತಲುಪಿಲ್ಲ.

‘ಪದಕೋಶಗಳನ್ನು ಡಿಜಿಟಲ್ ರೂಪಕ್ಕೆ ತರುವುದು ಸುಲಭದ ಕೆಲಸವಲ್ಲ. ಬಹಳ ಶ್ರಮಪಟ್ಟು ಪದಕಣಜ ರೂಪಿಸಲಾಗಿದೆ. ಆದರೆ, ಅದು ನಿರೀಕ್ಷಿಸಿದಷ್ಟು ಜನಪ್ರಿಯವಾಗಿಲ್ಲ. ಹೆಚ್ಚು ಜನರ ಬಳಿಗೆ ಕೊಂಡೊಯ್ಯುವ ದಾರಿಗಳ ಹುಡುಕಾಟದಲ್ಲಿದ್ದೇವೆ’ ಎಂದು ಮುಖ್ಯಮಂತ್ರಿಗಳ ಇ-ಆಡಳಿತ ಸಲಹೆಗಾರ ಬೇಳೂರು ಸುದರ್ಶನ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪದಕಣಜದ ಎರಡನೇ ಆವೃತ್ತಿಯನ್ನೂ ಹೊರತರುವ ಉದ್ದೇಶವಿದ್ದು, ಅದನ್ನು ಇನ್ನಷ್ಟು ಬಳಕೆದಾರ ಸ್ನೇಹಿಯನ್ನಾಗಿ ರೂಪಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆಯೂ ಇ-ಆಡಳಿತ ಕೇಂದ್ರದೊಂದಿಗೆ ಸಂಪರ್ಕದಲ್ಲಿರುವ ಇ-ಸಮುದಾಯದ ತಜ್ಞರ ಜೊತೆ ಚರ್ಚಿಸಿದ್ದೇವೆ. ಕ್ಲಿಷ್ಟ ಕನ್ನಡ ಪದಗಳ ಉಚ್ಛಾರಣೆಗಾಗಿ ಧ್ವನಿ ತಂತ್ರಾಂಶ ಅಳವಡಿಸುವ ಉದ್ದೇಶವೂ ಇದೆ’ ಎಂದರು.

ಮುಖ್ಯಾಂಶಗಳು

- ಪದಕಣಜ ಎರಡನೇ ಆವೃತ್ತಿ ತರುವ ಯತ್ನ
- ಬಳಕೆದಾರ ಸ್ನೇಹಿಯಾಗಿಸಲು ಕ್ರಮ
- ಇ-ಸಮುದಾಯದ ತಜ್ಞರೊಂದಿಗೆ ಚರ್ಚೆ

ಇ-ಕನ್ನಡ ಯೋಜನೆಯ ಮುಂದಿನ ಐದು ವರ್ಷಗಳ ಹಾದಿ, ಸವಾಲುಗಳು, ಭವಿಷ್ಯದ ದೃಷ್ಟಿಕೋನ ಗಮನದಲ್ಲಿರಿಸಿಕೊಂಡು ಕ್ರಿಯಾಯೋಜನೆಯನ್ನೂ ಸಿದ್ಧಪಡಿಸಲಾಗುತ್ತಿದೆ.

– ಬೇಳೂರು ಸುದರ್ಶನ,
ಮುಖ್ಯಮಂತ್ರಿಗಳ ಇ-ಆಡಳಿತ ಸಲಹೆಗಾರ

ಪ್ರಾಯೋಗಿಕ ಕಾಗುಣಿತ ಪರೀಕ್ಷಕ ತಂತ್ರಾಂಶ

‘ಕನ್ನಡದಲ್ಲಿ ಕಾಗುಣಿತ, ಅಕ್ಷರದೋಷ ಸರಿಪಡಿಸಬಲ್ಲ ತಂತ್ರಾಂಶದ ಕೊರತೆ ಇದ್ದು, ಕನ್ನಡ ಕಾಗುಣಿತ ಪರೀಕ್ಷಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಪ್ರಾಯೋಗಿಕ ಹಂತದಲ್ಲಿದೆ’ ಎಂದು ಬೇಳೂರು ಸುದರ್ಶನ ತಿಳಿಸಿದರು.

‘ಕನ್ನಡದಲ್ಲಿ ಲಭ್ಯವಿರುವ ಉತ್ತಮ ಫಾಂಟುಗಳನ್ನು ಯೂನಿಕೋಡ್ ಮಾನದಂಡಗಳ ಅನುಸಾರ ಅಣಿಗೊಳಿಸುವ ಕೆಲಸ ನಡೆದಿದೆ. ಕನ್ನಡ–ಇಂಗ್ಲಿಷ್, ಇಂಗ್ಲಿಷ್–ಕನ್ನಡ ಅನುವಾದವನ್ನು ಸುಗಮಗೊಳಿಸುವ ಯಂತ್ರಾನುವಾದ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಹೈದರಾಬಾದ್ ವಿಶ್ವವಿದ್ಯಾಲಯ-ದೊಂದಿಗೆ ಒಡಂಬಡಿಕೆ ಮಾಡಿ-ಕೊಳ್ಳಲಾಗಿದೆ. ಅದರ ಮೊದಲ ಆವೃತ್ತಿಯೂ ಪ್ರಾಯೋಗಿಕ ಹಂತದಲ್ಲಿದೆ’ ಎಂದರು.

ಸಾಹಿತಿ ಚನ್ನಪ್ಪ ಕಟ್ಟಿಗೆ ಕಥಾ ಪ್ರಶಸ್ತಿ

ಸಿಂದಗಿ (ವಿಜಯಪುರ ಜಿಲ್ಲೆ): ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ನೀಡುವ 2022ನೇ ಸಾಲಿನ ರಾಜ್ಯಮಟ್ಟದ ‘ಕಥಾ ಪ್ರಶಸ್ತಿ’ಗೆ ಸಿಂದಗಿ ಪಟ್ಟಣದ ಸಾಹಿತಿ ಡಾ.ಚನ್ನಪ್ಪ ಕಟ್ಟಿ ಭಾಜನರಾಗಿದ್ದಾರೆ.

ಡಾ.ಚನ್ನಪ್ಪ ಕಟ್ಟಿ

ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ತಿಳಿಸಿದ್ದಾರೆ.

₹81 ಕೋಟಿ ವಂಚನೆ ಆರೋಪ

ಇಂಜಾಜ್ ವಿರುದ್ಧ ಇ.ಡಿ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚಿನ ಠೇವಣಿ ನೀಡುವುದಾಗಿ ಆಮಿಷ ಒಡ್ಡಿ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಿ ನೂರಾರು ಕೋಟಿ ರೂಪಾಯಿ ವಂಚಿಸಿರುವ ಆರೋಪ ಎದುರಿಸು-ತ್ತಿರುವ ನಗರದ ಇಂಜಾಜ್ ಇಂಟರ್ ನ್ಯಾಷನಲ್ ಕಂಪನಿಯ ಪ್ರವರ್ತಕ-ರಾದ ಮಿಸ್ಬಾವುದ್ದೀನ್ ಎಸ್. ಮತ್ತು ಸುಹೈಲ್ ಅಹ್ಮದ್ ಷರೀಫ್ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಬುಧವಾರ ಆರೋಪಪಟ್ಟಿ ಸಲ್ಲಿಸಿದೆ.

ಠೇವಣಿದಾರರಿಗೆ ವಂಚಿಸಿದ ಆರೋಪದ ಮೇಲೆ ಇಂಜಾಜ್ ಇಂಟರ್ ನ್ಯಾಷನಲ್ ವಿರುದ್ಧ ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಲಾಗಿತ್ತು. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿತ್ತು. ₹ 250 ಕೋಟಿ ಠೇವಣಿ ಸಂಗ್ರಹಿಸಿದ್ದ ಇಂಜಾಜ್ ಕಂಪನಿ, ₹ 100 ಕೋಟಿಗೂ ಹೆಚ್ಚು ಮೊತ್ತವನ್ನು ಠೇವಣಿದಾರರಿಗೆ ಹಿಂದಿರುಗಿಸಿಲ್ಲ ಎಂಬುದು ತನಿಖೆಯಲ್ಲಿ ಪತ್ತೆಯಾಗಿತ್ತು.

ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪಪಟ್ಟಿ ಆಧರಿಸಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು. 2022ರ ನವೆಂಬರ್ 15ರಂದು ಮಿಸ್ಬಾವುದ್ದೀನ್ ಅವರನ್ನು ಬಂಧಿಸಿದ್ದು, ನ್ಯಾಯಾಂಗ ಬಂಧನದಲ್ಲಿದ್ದಾರೆ. ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಪಿಎಂಎಲ್‌ಎ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ.

‘ಮಿಸ್ಬಾವುದ್ದೀನ್ ಮತ್ತು ಸುಹೈಲ್ ಅಹ್ಮದ್ ಕಂಪನಿಯಿಂದ ₹ 81 ಕೋಟಿಯನ್ನು ಸ್ಥಿರಾಸ್ತಿ ಖರೀದಿ ಹಾಗೂ ಇತರ ಉದ್ದೇಶಗಳಿಗಾಗಿ ವರ್ಗಾವಣೆ ಮಾಡಿದ್ದರು. ಸ್ವಂತ ಹಾಗೂ ಸಹಚರರ ಖಾತೆಗಳಿಗೆ ವರ್ಗಾವಣೆ ಮಾಡಿ ಅಕ್ರಮವಾಗಿ ಬಳಸಿಕೊಂಡಿದ್ದರು’ ಎಂದು ಜಾರಿ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ತಾ.ಪಂ, ಜಿ. ಪಂ. ಚುನಾವಣೆ ಅಧಿಸೂಚನೆ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: ’ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ರಾಜ್ಯ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ಸಲ್ಲಿಸಿರುವ ವರದಿಯನ್ನು ಮುಖ್ಯಮಂತ್ರಿ ಅನುಮೋದನೆ ನೀಡಿದ್ದು, ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಅನುಪಾಲನಾ ವರದಿ ಸಲ್ಲಿಸಿದರು. 2022ರ ಡಿಸೆಂಬರ್ 14ರಂದು ಹೈಕೋರ್ಟ್ ಹೊರಡಿಸಿದ ಆದೇಶವನ್ನು ಪಾಲಿಸಲಾಗಿದ್ದು, ಅದರ ಅನುಸಾರ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ’ ಎಂದರು.

‘ಚುನಾವಣೆಗೆ ವಿಳಂಬ ನೀತಿ ಅನು-ಸರಿಸಲಾಗುತ್ತಿದೆ ಎಂದು ಹೈಕೋರ್ಟ್ ವಿಧಿಸಿದ್ದ ₹ 5 ಲಕ್ಷ ದಂಡದಲ್ಲಿ ತಲಾ ₹ 2 ಲಕ್ಷ ಮೊತ್ತವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಬೆಂಗಳೂರು ವಕೀಲರ ಸಂಘಕ್ಕೆ ಪಾವತಿಸಲಾಗಿದೆ. ₹ 1 ಲಕ್ಷ ಮೊತ್ತವನ್ನು ರಾಜ್ಯ ವಕೀಲರ ಗುಮಾಸ್ತರ ಕ್ಷೇಮಾಭಿವೃದ್ಧಿ ಸಂಘಕ್ಕೆ ಪಾವತಿಸಲಾಗಿದೆ’ ಎಂದು ಪಾವತಿ ರಸೀದಿಗಳನ್ನು ನ್ಯಾಯಪೀಠಕ್ಕೆಸಲ್ಲಿಸಿದರು.ಸರ್ಕಾರದಪರ ಹಾಗೂ ರಾಜ್ಯ ಚುನಾವಣಾ ಆಯೋಗದ ಪರ ವಕೀಲರ ಕೋರಿಕೆಯಂತೆ ವಿಚಾರಣೆಯನ್ನು ಗುರುವಾರಕ್ಕೆ (ಮಾ.2) ಮುಂದೂಡಲಾಗಿದೆ.

ಸಿಇಟಿ: ಅರ್ಜಿ ಸಲ್ಲಿಕೆಗೆ ಏ.5ರವರೆಗೆ ಅವಕಾಶ

ಬೆಂಗಳೂರು: ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೇ 20 ಹಾಗೂ 21ರಂದು ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಬಿಡುಗಡೆ ಮಾಡಿದೆ.

ಮೇ 20ರಂದು ಬೆಳಿಗ್ಗೆ 10.30ರಿಂದ 11.50ರವರೆಗೆ ಜೀವಶಾಸ್ತ್ರ, ಮಧ್ಯಾಹ್ನ 2.30ರಿಂದ 3.50ರವರೆಗೆ ಗಣಿತ, 21ರಂದು ಬೆಳಿಗ್ಗೆ 10.30ರಿಂದ 11.50ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30ರಿಂದ 3.50ರವರೆಗೆ ರಸಾಯನಶಾಸ್ತ್ರ ವಿಷಯದ ಪರೀಕ್ಷೆಗಳು ನಡೆಯಲಿವೆ. ಪ್ರತಿ ಪತ್ರಿಕೆಯೂ ತಲಾ 60 ಅಂಕಗಳನ್ನು ಒಳಗೊಂಡಿರುತ್ತದೆ.

22ರಂದು ಬೆಳಿಗ್ಗೆ 11.30ರಿಂದ 12.30ರವರೆಗೆ ಹೊರನಾಡು ಮತ್ತು ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. ಸಿಇಟಿಗೆ ಹಾಜರಾಗುವ ಅಭ್ಯರ್ಥಿಗಳು ಮಾ.2ರಿಂದಲೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಏ.5, ಶುಲ್ಕ ಪಾವತಿಗೆ ಏ.7 ಕೊನೆ ದಿನ. ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪೂರೈಸಿದ ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ನೋಂದಣಿ ಸಂಖ್ಯೆ ನಮೂದಿಸಬೇಕು. ಸಂದೇಹಗಳಿದ್ದರೆ ಪ್ರಾಧಿಕಾರದ keaugcet2023@gmail.com ಗೆ ಇಮೇಲ್ ಕಳುಹಿಸಬಹುದು ಎಂದು ಕೆಇಎ ತಿಳಿಸಿದೆ.

ರಿಯಲ್ ಎಸ್ಟೇಟ್ ಉದ್ಯಮಿ ಮೇಲೆ ಗುಂಡಿನ ದಾಳಿ

ಪ್ರಜಾವಾಣಿ ವಾರ್ತೆ

ನಂಗಲಿ (ಮುಳಬಾಗಿಲು): ಮುಷ್ಟೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಉಪ್ಪರಹಳ್ಳಿ ನಿವಾಸಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ನಾಗರಾಜ್ ಮೇಲೆ ಮಂಗಳವಾರ ರಾತ್ರಿ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದಾರೆ.

ನಾಗರಾಜ್

ಗ್ರಾಮದ ಹೊರವಲಯದಲ್ಲಿರುವ ತೋಟದ ಮನೆಯ ಕಿಟಕಿ ಬಳಿ ಕುಳಿತಿದ್ದ ನಾಗರಾಜ್ ಅವರತ್ತ ಮಂಗಳವಾರ ರಾತ್ರಿ 9 ಗಂಟೆ ವೇಳೆ ಅಪರಿಚಿತ ವ್ಯಕ್ತಿಗಳಿಬ್ಬರು ಗುಂಡು ಹಾರಿಸಿದ್ದಾರೆ. ಆದರೆ, ಗುಂಡುಗಳು ಕಿಟಕಿಯ ಸರಳುಗಳಿಗೆ ತಗುಲಿದ್ದರಿಂದ ನಾಗರಾಜ್ ಅಪಾಯದಿಂದ ಪಾರಾಗಿದ್ದಾರೆ. ಅವರು ಹೊರ ಬಂದು ನೋಡುವಷ್ಟರಲ್ಲಿ ದುಷ್ಕರ್ಮಿಗಳು ಅಲ್ಲಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಪಿ ಎಂ.ನಾರಾಯಣ, ಎಎಸ್‌ಪಿ ವಿ.ಬಿ.ಭಾಸ್ಕರ್, ಡಿವೈಎಸ್‌ಪಿ ಜಯಶಂಕರ್, ಸಿಪಿಐ ಲಕ್ಷ್ಮಿಕಾಂತಯ್ಯ, ಆರಕ್ಷಕ ಉಪ ನಿರೀಕ್ಷಕ ನಂದೀಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ವೈದ್ಯರು ಮತ್ತು ನರ್ಸ್‌ಗಳ ಕೊರತೆ

ಕೋಲಾರ ಜಿಲ್ಲಾಸ್ಪತ್ರೆ: ಒಳರೋಗಿಗಳು ಹೊರಕ್ಕೆ!

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯಲ್ಲಿ ವಾರದಿಂದ ಚಿಕಿತ್ಸೆ ಪಡೆಯುತ್ತಿದ್ದ ಹಲವು ಒಳರೋಗಿಗಳನ್ನು ಬುಧವಾರ ವೈದ್ಯರು ಮತ್ತು ನರ್ಸ್‌ಗಳು ಲಭ್ಯ ಇಲ್ಲವೆಂದು ಹೊರಹಾಕಲಾಗಿದೆ.

ಲಗೇಜು ಸಮೇತ ಆಸ್ಪತ್ರೆ ಆವರಣದಲ್ಲಿ ಕಾದು ಕುಳಿತಿದ್ದ ರೋಗಿಗಳನ್ನು ಅವರ ಕುಟುಂಬ ಸದಸ್ಯರು ಬಂದು ಮನೆಗೆ ಕರೆದೊಯ್ದರು. ರೋಗಿಗಳು ಮತ್ತು ಅವರ ಕುಟುಂಬ ಸದಸ್ಯರು ವೈದ್ಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಕಾಲು ಉರಿಗೆ ವಾರದಿಂದ ಚಿಕಿತ್ಸೆ ಪಡೆಯುತ್ತಿದ್ದೆ. ಮುಷ್ಕರವಿದ್ದು, ವೈದ್ಯರು ಬರುವುದಿಲ್ಲವೆಂದು ಆಸ್ಪತ್ರೆಯಿಂದ ಹೊರಡಲು ಹೇಳಿದರು. ಕಾಲು ಉರಿ ಇನ್ನೂ ವಾಸಿ ಆಗಿಲ್ಲ. ನನ್ನ ಜೊತೆ ಇನ್ನೂ ಹಲವು ರೋಗಿಗಳಿಗೆ ಡಿಸ್ಚಾರ್ಜ್ ಮಾಡಿಕೊಂಡು ಮನೆಗೆ ಹೋಗುವಂತೆ ಸೂಚಿಸಿದರು’ ಎಂದು ಬಂಗಾರಪೇಟೆ ತಾಲ್ಲೂಕಿನ ರೆಡ್ಡಹಳ್ಳಿಯ ಯಲ್ಲಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಕೋಲಾರದಲ್ಲಿ ಬುಧವಾರ ಜಿಲ್ಲಾಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದ್ದರಿಂದ ಆವರಣದಲ್ಲಿ ಕುಳಿತಿದ್ದ ಬಂಗಾರಪೇಟೆ ತಾಲ್ಲೂಕಿನ ರೆಡ್ಡಹಳ್ಳಿಯ ರೋಗಿ

60 ವರ್ಷ ವಯಸ್ಸಿನ ಅವರು ಎಂಟು ದಿನಗಳಿಂದ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಕಾಲಿನ ಮೂಳೆ ಮುರಿತಕ್ಕೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ದಾಖಲಾಗಿದ್ದ ಮುಳಬಾಗಿಲು ತಾಲ್ಲೂಕಿನ ಸಂಗಸಂದ್ರದ ಮುನಿವೆಂಕಟಪ್ಪ ಅವರಿಗೂ ಮನೆಗೆ ತೆರಳುವಂತೆ ವೈದ್ಯರು ಸೂಚಿಸಿದ್ದಾರೆ. ಗಾಯ ಇನ್ನೂ ವಾಸಿಯಾಗದ ಕಾರಣ ನೋವಿನಿಂದ ಆಸ್ಪತ್ರೆ ಆವರಣದಲ್ಲೇ ನರಳುತ್ತಾ ಮನೆಯವರಿಗಾಗಿ ಅವರು ಕಾದು ಕುಳಿತಿದ್ದರು. ಆಸ್ಪತ್ರೆಯ ಸಿಬ್ಬಂದಿ ತಮ್ಮೊಂದಿಗೆ ಅಮಾನವೀಯವಾಗಿ ನಡೆದುಕೊಂಡರು ಎಂದು ಅವರು ನೋವು ತೋಡಿಕೊಂಡರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ಎಸ್.ಎನ್.ವಿಜಯಕುಮಾರ್, ‘ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನರ್ಸ್‌ಗಳು 15 ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಸುಮಾರು 75 ನರ್ಸ್‌ಗಳು ಕೆಲಸಕ್ಕೆ ಬರುತ್ತಿಲ್ಲ. ಬ್ಯಾಂಡೇಜ್ ಕಟ್ಟುವುದು ಸೇರಿದಂತೆ ಎಲ್ಲಾ ಕೆಲಸವನ್ನು ವೈದ್ಯರೇ ಮಾಡುತ್ತಿದ್ದಾರೆ. ಇದಲ್ಲದೇ ಸರ್ಕಾರಿ ನೌಕರರು ಬುಧವಾರ ಮುಷ್ಕರ ನಡೆಸಿದರು. ಆದರೆ, ನಾವು ಯಾವುದೇ ರೋಗಿಯನ್ನು ಹೊರಹೋಗುವಂತೆ ಹೇಳಿಲ್ಲ. ಅವರೇ ಹೋಗಿದ್ದಾರೆ’ ಎಂದರು.

ಗುರುವಾರ, ಮಾರ್ಚ್ 2, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 61 | ಪುಟ 12 + 2 + 2

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಬ್ಯಾಂಕ್ ಆಫ್ ಇಂಡಿಯಾದ 'ಪ್ರೊಬೇಷನರಿ ಆಫೀಸರ್ಸ್' ನೇಮಕಾತಿ ಮಾಹಿತಿ ಇಲ್ಲಿದೆ

ಪಿಯು ಪರೀಕ್ಷೆ: ಹಿಜಾಬ್ ಧರಿಸಿ ಬರಲು ಅವಕಾಶವಿಲ್ಲ 5
'ಬಿಎಸ್‌ವೈ ಜೈಲಿಗೆ ಹಾಕಿಸಿದ್ದೇ ಕಾಂಗ್ರೆಸ್' 6
ಜಿ–20: ರಷ್ಯಾ–ಉಕ್ರೇನ್, ಒಮ್ಮತ ಮೂಡಿಸಲು ಭಾರತ ಕಸರತ್ತು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,411 ▲	17,450 ▲	₹57,700 (ಬೆಂಗಳೂರು) ▲	₹66,200 (ಬೆಂಗಳೂರು) ▲	82.49 ▲

ಗ್ಯಾರಂಟಿ ನಂ. 1
ಗೃಹ ಜ್ಯೋತಿ
ಪ್ರತಿ ಮನೆಗೂ 200 ಯುನಿಟ್ ವಿದ್ಯುತ್ ಉಚಿತ

ಗ್ಯಾರಂಟಿ ನಂ. 2
ಗೃಹಲಕ್ಷ್ಮಿ
ಪ್ರತಿ ಮನೆ ಯಜಮಾನಿಗೆ ತಿಂಗಳಿಗೆ ₹ 2,000 ಉಚಿತ
ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಮಹಿಳೆಯರಿಗೆ ಕಾಂಗ್ರೆಸ್ ನೆರವಿನ ಹಸ್ತ

ಗ್ಯಾರಂಟಿ ನಂ. 3
ಅನ್ನಭಾಗ್ಯ
ಪ್ರತಿ ತಿಂಗಳು ಪ್ರತಿ ವ್ಯಕ್ತಿಗೆ 10 KG ಅಕ್ಕಿ ಉಚಿತ

ಸಮೃದ್ಧ ಕರ್ನಾಟಕ ನಿರ್ಮಿಸಲು ಕಾಂಗ್ರೆಸ್ ಜೊತೆ ಕೈ ಜೋಡಿಸಿ | +91 9537 224 224 | www.prajadhwani.com

ಮೂಲವೇತನದ ಶೇ 17ರಷ್ಟು ಮೊತ್ತ ಹೆಚ್ಚಳ • ಸ್ಥಗಿತಕ್ಕೆ ಹಲವು ಸಂಘಟನೆಗಳ ವಿರೋಧ

ಮಧ್ಯಂತರ ಪರಿಹಾರ: ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ಮುಷ್ಕರಕ್ಕೆ ಮಣಿದಿರುವ ರಾಜ್ಯ ಸರ್ಕಾರ, ಏಪ್ರಿಲ್ 1ರಿಂದ ಅನ್ವಯವಾಗುವಂತೆ ಮೂಲ ವೇತನದ ಶೇಕಡ 17ರಷ್ಟು ಮಧ್ಯಂತರ ಪರಿಹಾರ ಘೋಷಿಸಿದೆ. ಸರ್ಕಾರದ ತೀರ್ಮಾನದ ಬೆನ್ನಲ್ಲೇ ನೌಕರರು ಮುಷ್ಕರ ಕೈಬಿಟ್ಟು, ಬುಧವಾರ ಮಧ್ಯಾಹ್ನದಿಂದಲೇ ಕರ್ತವ್ಯಕ್ಕೆ ಮರಳಿದರು.

ಸರ್ಕಾರದ ಘೋಷಣೆಗಳನ್ನು ಒಪ್ಪಿಕೊಂಡ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ತಕ್ಷಣದಿಂದಲೇ ಮುಷ್ಕರ ಕೈಬಿಡುವ ತೀರ್ಮಾನ ಪ್ರಕಟಿಸಿದರು. ಆದರೆ, ಸಚಿವಾಲಯ ನೌಕರರ ಸಂಘ, ರಾಜ್ಯ ಸರ್ಕಾರಿ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನೌಕರರ ಸಂಘ, ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘಗಳು ಬೇಡಿಕೆಗಳು ಸಂಪೂರ್ಣ ಈಡೇರದೆ ಮುಷ್ಕರ ಸ್ಥಗಿತಗೊಳಿಸಿರುವ ನಿರ್ಧಾರವನ್ನು ವಿರೋಧಿಸಿವೆ.

ಯಾರಿಗೆ ಅನ್ವಯ: ಏಳನೇ ವೇತನ ಆಯೋಗದ ವರದಿ ಬರುವವರೆಗೂ ರಾಜ್ಯ ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳ ನೌಕರರು, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ಶೇ 17ರಷ್ಟು ಮಧ್ಯಂತರ ಪರಿಹಾರ ಲಭಿಸಲಿದೆ. ಈ ವೇತನ ಶ್ರೇಣಿಗಳ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನದಾರರಿಗೂ ಅನ್ವಯವಾಗಲಿದೆ.

ಯುಜಿಸಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ವೇತನ ಪಡೆಯುವ ನೌಕರರಿಗೆ ಇದು ಅನ್ವಯಿಸುವುದಿಲ್ಲ.

6ನೇ ಪುಟ ನೋಡಿ

ವೇತನ ಪರಿಷ್ಕರಣೆಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರ ಸಂಘದ ನೇತೃತ್ವದಲ್ಲಿ ಸರ್ಕಾರಿ ನೌಕರರು ಮುಷ್ಕರ ನಡೆಸಿದ್ದರಿಂದ ಮೈಸೂರು ಕೆ.ಆರ್. ಆಸ್ಪತ್ರೆ ಒಪಿಡಿ ಬಿಕೋ ಎನ್ನುತ್ತಿತ್ತು – ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸರ್ಕಾರದ ನಿರ್ಧಾರದಿಂದ ತೃಪ್ತಿಯಾಗಿಲ್ಲ. ಏಳನೇ ವೇತನ ಆಯೋಗದ ವರದಿ ಬಂದ ಬಳಿಕ ಸರ್ಕಾರ ಕೈಗೊಳ್ಳುವ ತೀರ್ಮಾನವನ್ನು ನೋಡಿ, ಮುಂದಿನ ಹೆಜ್ಜೆ ಇಡುತ್ತೇವೆ.
ಸಿ.ಎಸ್. ಷಡಾಕ್ಷರಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

ನೋಂದಣಿ ಕಚೇರಿಯಲ್ಲಿ ದೇವನಹಳ್ಳಿ ಶಾಸಕ 'ಲಾಕ್'

ದೇವನಹಳ್ಳಿ: ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಬುಧವಾರ ಎಲ್ಲ ಸರ್ಕಾರಿ ಕಚೇರಿಗಳು ಕೆಲಸ ನಿರ್ವಹಿಸದಿದ್ದರೂ ದೇವನಹಳ್ಳಿಯ ಉಪ ನೋಂದಣಾಧಿಕಾರಿ ಕಚೇರಿಗೆ ಹೊರಗಿನಿಂದ ಬೀಗ ಹಾಕಿ ಒಳಗಡೆ ಗುಟ್ಟಾಗಿ ನೋಂದಣಿ ಕೆಲಸದಲ್ಲಿ ತೊಡಗಿದ್ದ ದೇವನಹಳ್ಳಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಮತ್ತು ಕಚೇರಿ ಸಿಬ್ಬಂದಿ ಸಾರ್ವಜನಿಕರ ಆಕ್ರೋಶಕ್ಕೆ ಒಳಗಾದರು.

ತಾಲ್ಲೂಕು ಆಡಳಿತಸೌಧದ 2ನೇ ಮಹಡಿಯಲ್ಲಿರುವ ಉಪ ನೋಂದಣಿ ಕಚೇರಿಗೆ ಶಾಸಕ ನಿಸರ್ಗ ನಾರಾಯಣಸ್ವಾಮಿ ಹಾಗೂ ಸಿಬ್ಬಂದಿ ಬೆಳಿಗ್ಗೆಯೇ ಗುಟ್ಟಾಗಿ ತೆರಳಿದ್ದರು. ಈ ವಿಷಯ ತಿಳಿದ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸಾರ್ವಜನಿಕರೊಂದಿಗೆ ಕಚೇರಿಗೆ ಬಂದು ಕಿಟಕಿ ತೆರೆದಾಗ ಒಳಗೆ ಶಾಸಕ ಮತ್ತು ಸಿಬ್ಬಂದಿ ಸೇರಿದಂತೆ ಹತ್ತಕ್ಕೂ ಹೆಚ್ಚು ಜನರು ನೋಂದಣಿ ಕೆಲಸದಲ್ಲಿ ನಿರತರಾಗಿರುವುದು ಕಂಡು ಬಂದಿತು. 'ಮುಷ್ಕರದ ದಿನ ನಿಮಗೆಲ್ಲ ಇಲ್ಲೇನು ಕೆಲಸ' ಎಂದು ಪ್ರಶ್ನಿಸಿದರು.

6ನೇ ಪುಟ ನೋಡಿ

ಒಪಿಎಸ್: ಎರಡನೇ ಬಾರಿಗೆ ಸಮಿತಿ

ಹಳೆಯ ಪಿಂಚಣಿ ವ್ಯವಸ್ಥೆ (ಒಪಿಎಸ್) ಮರು ಜಾರಿಗೊಳಿಸಬೇಕೆಂಬುದು ರಾಜ್ಯ ಸರ್ಕಾರಿ ನೌಕರರ ಮತ್ತೊಂದು ಪ್ರಮುಖ ಬೇಡಿಕೆಯಾಗಿತ್ತು. ಒಪಿಎಸ್ ಮರು ಜಾರಿಮಾಡುವ ಸಾಧ್ಯತೆ ಕುರಿತು ಅಧ್ಯಯನ ನಡೆಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಎರಡು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ಗಡುವು ನೀಡಲಾಗಿದೆ.

ಹಳೆ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಮಾಡಬೇಕೆಂದು ರಾಜ್ಯ ಸರ್ಕಾರಿ ನೌಕರರ ಸಂಘ ಹಿಂದೆಯೂ ಬೇಡಿಕೆ ಇಟ್ಟಿತ್ತು. ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ (ಎನ್‌ಪಿಎಸ್) ಬದಲಾವಣೆಗಳನ್ನು ಮಾಡುವ ಕುರಿತು ಪರಿಶೀಲಿಸಲು 2018ರಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲಾಗಿತ್ತು. ಈಗ ಒಪಿಎಸ್ ಮರು ಜಾರಿಮಾಡುವ ಸಾಧ್ಯತೆ ಕುರಿತು ಅಧ್ಯಯನಕ್ಕೆ ಸಮಿತಿ ನೇಮಿಸಲಾಗಿದೆ.

ವಿಜಯಕ್ಕೆ ಸಂಕಲ್ಪ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು

ಸುದ್ದಿ 6

6ನೇ ವೇತನ ಆಯೋಗ ಅನ್ವಯ ಸಮಾನ ವೇತನಕ್ಕೆ ಆಗ್ರಹ

ಸಾರಿಗೆ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರನೇ ವೇತನ ಆಯೋಗದ ಅನ್ವಯ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು' ಎಂದು ಆಗ್ರಹಿಸಿ ಸಾರಿಗೆ ನಿಗಮಗಳ ನೌಕರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾ ನಗರ ಸಾರಿಗೆ ನಿಗಮ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಕೆಆರ್‌ಟಿಸಿ) ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಬೇಡಿಕೆ ಈಡೇರಿಸುವವರೆಗೂ ಪ್ರತಿಭಟನೆ ಮುಂದುವರಿಸಲಿದ್ದೇವೆ' ಎಂದು ನೌಕರರು ಹೇಳಿದರು.

5ನೇ ಪುಟ ನೋಡಿ

ಎಲ್‌ಪಿಜಿ ಸಿಲಿಂಡರ್ ಬೆಲೆ ₹50 ಹೆಚ್ಚಳ

ನವದೆಹಲಿ (ಪಿಟಿಐ): ಮನೆ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹ 50 ಹೆಚ್ಚಿಸಲಾಗಿದೆ. ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹ 1,105.50ಗೆ ತಲುಪಿದೆ. ಸುಮಾರು ಎಂಟು ತಿಂಗಳ ಬಳಿಕ ಬೆಲೆ ಏರಿಕೆ ಆಗಿದೆ.

ಉಜ್ವಲಾ ಯೋಜನೆಯ ವ್ಯಾಪ್ತಿಯಲ್ಲಿ ಇಲ್ಲದ ಹೆಚ್ಚಿನ ಗ್ರಾಹಕರಿಗೆ ಈಗ ಎಲ್‌ಪಿಜಿ ಸಿಲಿಂಡರ್‌ಗೆ ಸಬ್ಸಿಡಿ ಸಿಗುತ್ತಿಲ್ಲ. ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಅಡಿಯಲ್ಲಿ ಎಲ್‌ಪಿಜಿ ಸಂಪರ್ಕ ಪಡೆದವರಿಗೆ ಪ್ರತಿ ಸಿಲಿಂಡರ್‌ಗೆ ಕೇಂದ್ರದಿಂದ ₹ 200 ಸಬ್ಸಿಡಿ ದೊರೆಯುತ್ತದೆ.

2022ರ ಜುಲೈ ನಂತರದಲ್ಲಿ ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಪರಿಷ್ಕರಣೆ ಆಗುತ್ತಿರುವುದು ಇದೇ ಮೊದಲು.

ವಾಣಿಜ್ಯ ಬಳಕೆಯ, 19 ಕೆ.ಜಿ. ತೂಕದ ಎಲ್‌ಪಿಜಿ ಬೆಲೆಯನ್ನು ತೈಲ ಮಾರಾಟ ಕಂಪನಿಗಳು ಸಿಲಿಂಡರ್‌ಗೆ ₹ 350.50ರಂತೆ ಹೆಚ್ಚಳ ಮಾಡಿವೆ. ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹ 2,190.50ಗೆ ಏರಿಕೆ ಆಗಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಜನವರಿಯಲ್ಲಿಯೂ ಹೆಚ್ಚಿಸಲಾಗಿತ್ತು.

ಆಳ–ಅಗಲ ಏರುತ್ತಲೇ ಇದೆ ಎಲ್‌ಪಿಜಿ ಬೆಲೆ 9

ನಕಲಿ ಪಹಣಿಗೆ ಭೂ ಪರಿಹಾರ: 'ಲೋಕಾ' ತನಿಖೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರಿ ಜಾಗಕ್ಕೆ ನಕಲಿ ದಾಖಲೆ ಸೃಷ್ಟಿಸಿ, ಭೂ ಪರಿಹಾರ ನೀಡಿದ ಆರೋಪ ಎದುರಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಹೆಚ್ಚುವರಿ ಭೂಸ್ವಾಧೀನಾಧಿಕಾರಿಯಾಗಿದ್ದ ಡಾ. ಬಿ. ಸುಧಾ (ಕೆಎಎಸ್– ಕಿರಿಯ ಶ್ರೇಣಿ) ಮತ್ತು ಬೆಂಗಳೂರು ಉತ್ತರ ಮತ್ತು ಯಲಹಂಕ ತಾಲ್ಲೂಕು ವಿಶೇಷ ಜಿಲ್ಲಾಧಿಕಾರಿಯಾಗಿದ್ದ ಎಸ್.ಎನ್. ಗಂಗಾಧರಯ್ಯ (ಕೆಎಎಸ್– ನಿವೃತ್ತ) ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸಲು ಲೋಕಾಯುಕ್ತಕ್ಕೆ ರಾಜ್ಯ ಸರ್ಕಾರ ಪೂರ್ವಾನುಮತಿ ನೀಡಿದೆ.

ಬಿ. ಸುಧಾ

ಮಧ್ಯವರ್ತಿಗಳಿಗೆ ₹ 1.26 ಕೋಟಿಗೆ ಕರಾರು!

ಪ್ರಕರಣದ ತನಿಖೆ ನಡೆಸಿದ್ದ ಬಿಡಿಎ ಜಾಗೃತ ದಳ, ಕೆಂಪಮ್ಮ ಹೆಸರಿನಲ್ಲಿ ನಕಲಿ ದಾಖಲೆ ಸಲ್ಲಿಕೆ ಆಗಿರುವುದನ್ನು ಪತ್ತೆ ಮಾಡಿತ್ತು. ರಾಮನಗರದ ಕೆಂಪಮ್ಮ ಅವರನ್ನು ವಿಚಾರಣೆಗೆ ಒಳಪಡಿಸಿದಾಗ, 'ಭೂ ಪರಿಹಾರ ಮಂಜೂರು ಮಾಡಿಕೊಳ್ಳುವ ಸಂಬಂಧ ವ್ಯವಹರಿಸಲು ಮಧ್ಯವರ್ತಿಗಳ ಹೆಸರಿಗೆ ₹1.26 ಕೋಟಿಗೆ ಕರಾರು ಮಾಡಿಕೊಟ್ಟಿದ್ದೆ. ಅವರಿಂದ ಇಲ್ಲಿಯವರೆಗೆ ₹1 ಕೋಟಿ ಪಡೆದು, ಬಿಡಿಎದಿಂದ ನನಗೆ ಮಂಜೂರಾದ 15 ನಿವೇಶನಗಳನ್ನು ಅವರು ಸೂಚಿದವರಿಗೆ ಶುದ್ಧ ಕ್ರಯಪತ್ರಗಳನ್ನು ನೋಂದಣಿ ಮಾಡಿಕೊಟ್ಟಿದ್ದೇನೆ' ಎಂದಿದ್ದರು.

ಈ ಆರೋಪದ ತನಿಖೆ ನಡೆಸಿದ್ದ ಎಸಿಬಿ, ಇಬ್ಬರು ಅಧಿಕಾರಿಗಳು ಮಧ್ಯವರ್ತಿಗಳ ಜೊತೆ ಒಡಂಬಡಿಕೆ ಮಾಡಿಕೊಡು ನಕಲಿ ದಾಖಲೆಗಳ ಆಧಾರದಲ್ಲಿ ಕೆಂಪಮ್ಮ ಎಂಬುವರಿಗೆ ಪರಿಹಾರ ರೂಪದಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ಕೊಮ್ಮಘಟ್ಟ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 15 ನಿವೇಶನಗಳನ್ನು ಬಿಡಿಎ ವತಿಯಿಂದ 2018ರ ಮಾ.3ರಂದು ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು. ಎಸಿಬಿ ರದ್ದುಗೊಂಡು, ಅಲ್ಲಿನ ಪ್ರಕರಣಗಳು ಲೋಕಾಯುಕ್ತಕ್ಕೆ ವರ್ಗಾವಣೆಗೊಂಡಿರುವುದರಿಂದ, ತನಿಖೆ ಕೈಗೊಳ್ಳಲು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಪೂರ್ವಾನುಮತಿ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

6ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಫೌಂಡೇಷನ್ ವಿರುದ್ಧ ದೂರು ಕೊಟ್ಟ ಟ್ರಸ್ಟ್ ಸಿಇಒ

'ಯಶಸ್ವಿನಿ' ವಂಚನೆ: ಹಣ ದೋಚುವ ಜಾಲ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜ್ಯ ಸರ್ಕಾರ ಜಾರಿಗೊಳಿಸಿರುವ 'ಯಶಸ್ವಿನಿ ಯೋಜನೆ'ಯ ಹೆಸರಿನಲ್ಲಿ ಹಣ ಪಡೆದು ವಂಚಿಸುತ್ತಿರುವ ಜಾಲ ಸಕ್ರಿಯವಾಗಿದ್ದು, ಇದರ ವಿರುದ್ಧ 'ಯಶಸ್ವಿನಿ ಆರೋಗ್ಯ ರಕ್ಷಣಾ ಟ್ರಸ್ಟ್' ಕಾರ್ಯನಿರ್ವಹಣಾಧಿಕಾರಿ (ಸಿಇಒ) ಠಾಣೆ ಮೆಟ್ಟಿಲೇರಿದ್ದಾರೆ.

ಯೋಜನೆಗೆ ಅರ್ಹರಾದ ಸಹಕಾರ ಸಂಘಗಳ ಸದಸ್ಯರಿಗೆ ಕಾರ್ಡ್ ವಿತರಿಸುವ ಹೊಣೆಯನ್ನು ಸರ್ಕಾರದ ಟ್ರಸ್ಟ್‌ಗೆ ವಹಿಸಲಾಗಿದೆ. ಯೋಜನೆ ಹೆಸರನ್ನು ದುರುಪಯೋಗಪಡಿಸಿಕೊಂಡಿರುವ ಕೆಲ ವ್ಯಕ್ತಿಗಳು ಮತ್ತು ಸಂಸ್ಥೆಗಳು, ಅಕ್ರಮವಾಗಿ ಜಾಹೀರಾತು ನೀಡಿ ಕಾರ್ಡ್ ವಿತರಣೆ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವ ಬಗ್ಗೆ ಸಿಇಒ ಎಂ. ವೆಂಕಟಸ್ವಾಮಿ ಆತಂಕ ವ್ಯಕ್ತಪಡಿಸಿದ್ದಾರೆ.

ಯಶಸ್ವಿನಿ ಕಾರ್ಡ್ ವಂಚನೆ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ಯಾವ ರೀತಿ ವಂಚನೆ ಯಾಗಿದೆ? ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದು ತನಿಖೆಯಿಂದ ತಿಳಿಯಲಿದೆ
ಪಿ. ಕೃಷ್ಣಕಾಂತ್, ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ

ಯಶಸ್ವಿನಿ ಕಾರ್ಡ್ ವಿತರಿಸುವ ಭರವಸೆ ನೀಡಿ ವಂಚಿಸುತ್ತಿರುವವರನ್ನು ಪತ್ತೆ ಮಾಡುವಂತೆ ಪೊಲೀಸರನ್ನು ಕೋರಿದ್ದಾರೆ.

ಪ್ರಜಾವಾಣಿ ವಿಶೇಷ

'ಯಶಸ್ವಿನಿ ಯೋಜನೆ ಹೆಸರಿನಲ್ಲಿ ವಂಚನೆ ಆಗುತ್ತಿರುವ ಬಗ್ಗೆ ವೆಂಕಟಸ್ವಾಮಿ ಅವರು ಫೆ. 18ರಂದು ದೂರು ನೀಡಿದ್ದಾರೆ. 'ವಿಸ್ಡಂ ಪಿಯರಲ್ ಫೌಂಡೇಷನ್' ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಫೌಂಡೇಷನ್ ಆಡಳಿತ ಮಂಡಳಿಯಲ್ಲಿ ಯಾರೆಲ್ಲ ಇದ್ದಾರೆ? ಯಾವ ರೀತಿ ವಂಚನೆ ಮಾಡಿದ್ದಾರೆ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಈದ್ಗಾ ಮಸೀದಿ ವಿಳಾಸದಲ್ಲಿ ಜಾಹೀರಾತು: '2022ರ ನ.1ರಿಂದ ರಾಜ್ಯದಲ್ಲಿ ಯಶಸ್ವಿನಿ ಯೋಜನೆ ಜಾರಿಯಾಗಿದ್ದು, 2023ರ ಜನವರಿ 1ರಿಂದ ನೋಂದಣಿಯಾದ ಸದಸ್ಯರಿಗೆ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ಸಿಇಒ ವೆಂಕಟಸ್ವಾಮಿ ಅವರು ದೂರಿನಲ್ಲಿ ತಿಳಿಸಿದ್ದಾರೆ.

5ನೇ ಪುಟ ನೋಡಿ

CANCER HEALER CENTER
A NEW BEGINNING!
ಕ್ಯಾನ್ಸರ್ ಮುಕ್ತ ಜೀವನ
ಕ್ಯಾನ್ಸರ್ ರೋಗಿಗಳಿಗೆ ಭರವಸೆಯ ಒಂದು ಕಿರಣ
ವಿಶ್ವದ ಮೊದಲ ಮತ್ತು ಏಕೈಕ
ಇಮ್ಯುನೊಥೆರಪಿ
ಕ್ಯಾನ್ಸರ್ ಹೀಲರ್
ಇಮ್ಯುನೊಥೆರಪಿ
ಇದರೊಂದಿಗೆ ಕ್ಯಾನ್ಸರ್ ಸೋಲಿಸಿ
ಡಾ. ತರಂಗ್ ಕೃಷ್ಣ
ಎಂ.ಡಿ. ಕ್ಯಾನ್ಸರ್ ಹೀಲರ್ ಸೆಂಟರ್
Dr. Tarang Krishna's Senior Team Members will meet on 4th March in Bangaluru
Bengaluru: 1/1 A, 2nd Floor, Chinmaya Mission Hospital Road, KFC Signal, HAL Ist Stage, Indiranagar, Karnataka
Helpline: 98100-06264
ಕ್ಯಾನ್ಸರ್ ಹೀಲರ್ ಚಿಕಿತ್ಸೆಯಿಂದ ಪ್ರಯೋಜನ ಪಡೆದ ರೋಗಿಗಳ ವಿಡಿಯೋಗಳನ್ನು ಯೂ ಟ್ಯೂಬ್‌ನಲ್ಲಿ ವೀಕ್ಷಿಸಿ.
YouTube https://youtube.com/DrKrishnasCancerHealerCenter
IMMUNO THERAPY HI HAI RIGHT CHOICE
ಪರಿಣಾಮಕಾರಿ ವೆಚ್ಚ | ಹಸಿವಿನ ನಷ್ಟ ಸಂಭವಿಸುವುದಿಲ್ಲ | ಫಲಿತಾಂಶ ಆಧಾರಿತ ಚಿಕಿತ್ಸೆ | ನೋವು ರಹಿತ ಚಿಕಿತ್ಸೆ
ಯಾವುದೇ ಅಡ್ಡಪರಿಣಾಮಗಳಿಲ್ಲ | ಸಂಶೋಧನೆ ಆಧಾರಿತ ಚಿಕಿತ್ಸೆ | ಹೆಚ್ಚು ಅನುಭವಿ ತಂಡ | ಹೆಚ್ಚಿನ ಯಶಸ್ಸಿನ ಪ್ರಮಾಣ
ಕಿಮೋಥೆರಪಿ ಹಾಗೂ ರೇಡಿಯೋಥೆರಪಿ ಚಿಕಿತ್ಸೆಯೊಂದಿಗೆ ಕೂಡ ಪರಿಣಾಮಕಾರಿ | ರೋಗ ನಿರೋಧಕ ವ್ಯವಸ್ಥೆಯ ಮೇಲೆ ಯಾವುದೇ ಕೆಟ್ಟ ಪರಿಣಾಮವಿಲ್ಲ | ಚಿಕಿತ್ಸೆಯ ನಂತರ ಅತ್ಯಲ್ಪ ಮರುಕಳಿಸುವಿಕೆಯ ಸಾಧ್ಯತೆಗಳು | ಕೂದಲು ಉದುರುವಿಕೆ ಮತ್ತು ತೂಕದ ನಷ್ಟವಿಲ್ಲ
ಕ್ಯಾನ್ಸರ್ ಕೊನೆಯ ಹಂತದಲ್ಲಿಯೂ ಸಹ ಪರಿಣಾಮಕಾರಿ ಪರಿಹಾರ | ಯಶಸ್ವಿ ಚಿಕಿತ್ಸೆಯ ದಾಖಲೆಗಳ ದತ್ತಾಂಶ | ದೀರ್ಘಕಾಲೀನ ಪರಿಣಾಮಗಳು | ಕ್ಯಾನ್ಸರ್‌ಪೀಡಿತ ಕೋಶಗಳನ್ನು ಮಾತ್ರ ಗುರಿಯಾಗಿಸುತ್ತದೆ.
ಇಮ್ಯುನೊಥೆರಪಿಯು ಎಂದರೇನು ಮತ್ತು ಇದು ಕ್ಯಾನ್ಸರ್ ವಿರುದ್ಧ ಹೇಗೆ ಹೋರಾಡುತ್ತದೆ ?
ಕ್ಯಾನ್ಸರ್ ಹೀಲರ್‌ಗಳ ಚಿಕಿತ್ಸೆಯು ದೇಹದಲ್ಲಿ ಪ್ರತಿರೋಧಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಇದು ರೋಗ ನಿರೋಧಕ ರಕ್ಷಣೆಯ ಮೇಲೆ ಕೆಲಸ ಮಾಡುತ್ತದೆ. ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಮೂಲಕ, ಇದು ದೇಹದ ಸಾಮಾನ್ಯ ಕೋಶಗಳ ಮೇಲೆ ರಕ್ಷಾ ಕವಚವಾಗಿ ಕಾರ್ಯನಿರ್ವಹಿಸುತ್ತದೆ. ಮತ್ತು ದೇಹದ ಪ್ರತಿರೋಧದ ಸಾಮರ್ಥ್ಯವು ಎಷ್ಟು ಪ್ರಬಲವಾಗಿದೆಯೆಂದರೆ, ಈಗ ಅದು ಜೀವಕೋಶಗಳನ್ನು ಉತ್ಪಾದಿಸುವ ಮೂಲಕ ಕ್ಯಾನ್ಸರ್‌ನ್ನು ನಾಶಮಾಡುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಕೆಲವೇ ತಿಂಗಳುಗಳಲ್ಲಿ ಕ್ಯಾನ್ಸರ್ ರೋಗಿಯು ಉತ್ತಮ ಗುಣಮಟ್ಟದ ಜೀವನದೊಂದಿಗೆ ಬದುಕಲು ಪ್ರಾರಂಭಿಸುತ್ತಾನೆ. ಈ ಚಿಕಿತ್ಸೆಯು ಈ ಕೆಳಗಿನಂತೆಯೂ ಸಹ ಪರಿಣಾಮಕಾರಿಯಾಗಿದೆ. –ವಯೋಸಹಜ ಕಾರಣಗಳಿಂದ ಕಿಮೋಥೆರಪಿ ತೆಗೆದುಕೊಳ್ಳಲು ಸಾಧ್ಯವಾಗದವರು ಈಗಾಗಲೇ ಕ್ಯಾನ್ಸರ್ ಚಿಕಿತ್ಸೆಯ ಅಡ್ಡ ಪರಿಣಾಮಗಳಿಂದ ತೊಂದರೆಗೊಳಗಾದವರು ಹಾಗೂ ಯಾರ ದೇಹವು ದುರ್ಬಲಗೊಂಡು ಮತ್ತು ಚಿಕಿತ್ಸೆಯನ್ನು ಮುಂದುವರೆಸಲು ಸಾಧ್ಯವಾಗದವರು– ಕಿಮೊಥೆರಪಿ ಮತ್ತು ರೇಡಿಯೊಥೆರಪಿಯೊಂದಿಗೂ ಸಹ ಸರಿಸಮನಾಗಿ ಈ ಚಿಕಿತ್ಸೆಯನ್ನು ಮುಂದುವರೆಸಬಹುದು – ಎಲ್ಲಾ ರೀತಿಯ ಉಂಟಾಗುವ ಅಡ್ಡ ಪರಿಣಾಮಗಳನ್ನು ಇಮ್ಯುನೊಥೆರಪಿಯು ಸಹ ತಡೆಯುತ್ತದೆ.
NEW DELHI, MUMBAI, INDORE, CHANDIGARH, AHMEDABAD, PATNA, RAIPUR, CHENNAI, BANGLORE, HYDERABAD, KOLKATA & DUBAI

G20 ಭಾರತ 2023 INDIA
ಸ್ವಾತಂತ್ರ್ಯದ ಅಮೃತ ಮಹೋತ್ಸವ
ನವ ಭಾರತಕ್ಕಾಗಿ ನವ ಕರ್ನಾಟಕ
ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕೆ ಆದ್ಯತೆ
ಮಕ್ಕಳ ಆಯವ್ಯಯದಡಿ ರೂ.46,277.75 ಕೋಟಿ ಹಂಚಿಕೆ
ಮಹಿಳಾ ಉದ್ದೇಶಿತ ಯೋಜನೆಗಳಿಗೆ ಮಹಿಳಾ ಆಯವ್ಯಯದಡಿ ರೂ.47,255.86 ಕೋಟಿ ಹಂಚಿಕೆ
ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಆರೋಗ್ಯ, ಪೌಷ್ಟಿಕತೆ, ಶಿಕ್ಷಣ, ಕಲ್ಯಾಣ ಕಾರ್ಯಕ್ರಮಗಳು, ವಸತಿ ಮತ್ತು ಕುಡಿಯುವ ನೀರಿನ ವಲಯಗಳಿಗೆ ಒಟ್ಟು ರೂ.3,000 ಕೋಟಿ ನಿಗದಿ
ನಗರ ಪ್ರದೇಶದ ಕಟ್ಟಡ ನಿರ್ಮಾಣ ಮಹಿಳಾ ಕಾರ್ಮಿಕರಿಗೆ ನೆರವಾಗಲು ನಗರ ಪ್ರದೇಶದಲ್ಲಿ 4,000 ಶಿಶುವಿಹಾರಗಳ ಪ್ರಾರಂಭ
ಬಜೆಟ್ 2023-24
ಶ್ರೀ ನರೇಂದ್ರ ಮೋದಿ ಸನ್ಮಾನ್ಯ ಪ್ರಧಾನಮಂತ್ರಿಗಳು
ಶ್ರೀ ಬಸವರಾಜ ಎಸ್. ಬೊಮ್ಮಾಯಿ ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ವಾರ್ತೆ

ಕಸಾಪ ಸಾಮಾನ್ಯ ಸಭೆ 26ಕ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ 106ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಇದೇ 26ರಂದು ಬೆಳಿಗ್ಗೆ 11 ಗಂಟೆಗೆ ವಿಜಯಪುರದ ಕಂದಗಲ್ ಶ್ರೀ ಹಣಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡಿದೆ.

2021-22ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಮಂಡನೆ, ಚರ್ಚೆ ನಡೆಯಲಿದೆ. ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳ ಮೂಲಕ ಸಾಮಾನ್ಯ ಸಭೆಯ ಮಾಹಿತಿ ತಿಳಿಸಲಾಗುತ್ತಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಬಿಬಿಎಂಪಿ ಬಜೆಟ್

ಬೆಂಗಳೂರು: ಬಿಬಿಎಂಪಿಯ 2023-24ನೇ ಸಾಲಿನ ಬಜೆಟ್ ಅನ್ನು ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಅವರು ಗುರುವಾರ ಮಂಡಿಸಲಿದ್ದಾರೆ.

ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್‌ಹಾಲ್) ಬೆಳಿಗ್ಗೆ 11 ಗಂಟೆಗೆ ಬಜೆಟ್ ಮಂಡನೆಯಾಗಲಿದೆ. ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿರಲಿದ್ದಾರೆ.

ಬಜೆಟ್ ಪೂರ್ವ ಸಭೆಗಳಲ್ಲಿ ಭಾಗವಹಿಸಿದ್ದ ಎನ್‌ಜಿಒ, ನಾಗರಿಕ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳು ಹಾಜರಿರಲಿದ್ದಾರೆ. ಪಾಲಿಕೆಯ ವೆಬ್‌ಸೈಟ್ https://bbmp.gov.in, ಮುಖ್ಯ ಆಯುಕ್ತರ ಫೇಸ್‌ಬುಕ್, ಟ್ವಿಟ್ಟರ್ ಪೇಜ್ ಹಾಗೂ ಯೂಟ್ಯೂಬ್ https://www.youtube.com/watch?v=HyYKHmwOU6s ಮೂಲಕ ಬಜೆಟ್ ನೇರ ಪ್ರಸಾರವಾಗಲಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸಿ.ಎಂ ಸೂಚನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೊನೆಯ ಕ್ಷಣದಲ್ಲಿ ಬಜೆಟ್‌ನಲ್ಲಿ ಬದಲಾವಣೆ ಸೂಚಿಸಿದರು. ಬಜೆಟ್‌ಗೆ ಸಮ್ಮತಿ ಪಡೆಯಲು ಬುಧವಾರ ಬೆಳಿಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತೆರಳಿದ್ದರು. ಈ ಸಂದರ್ಭದಲ್ಲಿ ಮುಖ್ಯ ಆಯುಕ್ತರನ್ನು ತರಾಟೆಗೆ ತೆಗೆದುಕೊಂಡ ಮುಖ್ಯಮಂತ್ರಿಯವರು ಕೆಲವು ಬದಲಾವಣೆ ಹಾಗೂ ಯೋಜನೆಗಳನ್ನು ಸೇರಿಸಲು ತಾಕೀತು ಮಾಡಿದರು ಎಂದು ಮೂಲಗಳು ತಿಳಿಸಿವೆ.

2022-23ನೇ ಸಾಲಿನ ಬಜೆಟ್ ಅನ್ನು ಕಳೆದ ವರ್ಷ ಮಾರ್ಚ್ 31ರಂದು ರಾತ್ರಿ 11.30ಕ್ಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ 'ಗುಪ್ತ'ವಾಗಿ ಬಜೆಟ್ ಮಂಡಿಸಲಾಗಿತ್ತು. ಈ ಬಾರಿ ಮಾರ್ಚ್ ಮೊದಲ ವಾರದಲ್ಲಿ ಮುಕ್ತವಾಗಿ ಬಜೆಟ್ ಮಂಡಿಸಲಾಗುತ್ತಿದೆ.

ಜನ್ಮ ಶತಮಾನೋತ್ಸವಕ್ಕೆ ಸಾಕ್ಷಿಯಾದ ಉಪರಾಷ್ಟ್ರಪತಿ ಜಗದೀಪ್ ಧನಕರ್

'ಎಂ.ಎಸ್.ರಾಮಯ್ಯ ಶಿಕ್ಷಣ ಕ್ಷೇತ್ರದ ದಾರಿದೀಪ'

ಪ್ರಜಾವಾಣಿ ವಾರ್ತೆ

ನಗರದ ಎಂ.ಎಸ್.ರಾಮಯ್ಯ ಕಾಲೇಜು ಆವರಣದಲ್ಲಿ ನಡೆದ ರಾಮಯ್ಯ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಎಂ.ಎಸ್.ರಾಮಯ್ಯ ಶತಮಾನೋತ್ಸವ ಭವನವನ್ನು ಬಟನ್ ಒತ್ತುವ ಮೂಲಕ ಉದ್ಘಾಟಿಸಿದರು. ಎಂ.ಆರ್. ಜಯರಾಮ್, ಧನಕರ್ ಅವರ ಪತ್ನಿ ಸುದೇಶಾ ಧನಕರ್, ಥಾವರಚಂದ್ ಗೆಹಲೋತ್, ಜೆ.ಸಿ. ಮಾಧುಸ್ವಾಮಿ ಮತ್ತು ಎಂ.ಆರ್. ಸೀತಾರಾಂ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಗೋಕುಲ ಶಿಕ್ಷಣ ಪ್ರತಿಷ್ಠಾನದ ಮೂಲಕ ಲಕ್ಷಾಂತರ ಜನರ ಶಿಕ್ಷಣಕ್ಕೆ ದಾರಿದೀಪವಾದ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎಂ.ಎಸ್.ರಾಮಯ್ಯ ಅವರ ಜನ್ಮ ಶತಮಾನೋತ್ಸವ ಸಮಾರಂಭ ಬುಧವಾರ ಕಾಲೇಜಿನ ಕ್ಯಾಂಪಸ್‌ನಲ್ಲಿ ನೆರವೇರಿತು.

ಜನ್ಮ ಶತಮಾನೋತ್ಸವ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ರಾಮಯ್ಯ ಅವರ ಜೀವನ, ವ್ಯಕ್ತಿತ್ವ, ಸಾಧನೆ, ಶಿಕ್ಷಣ ಪ್ರೀತಿ, ದೂರದರ್ಶಿತ್ವವನ್ನು ಹೊಗಳಿದರು.

ಎಂ.ಎಸ್.ರಾಮಯ್ಯ ಜನ್ಮಶತಮಾನೋತ್ಸವದ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಅವರ ಜೀವನ, ಸಾಧನೆಯ ಕಿರುಚಿತ್ರ ಅನಾವರಣಗೊಳಿಸಿದ ಉಪ ರಾಷ್ಟ್ರಪತಿ ಜಗದೀಪ್ ಧನಕರ್, 'ವಿಶ್ವವೇ ಭಾರತದತ್ತ ನೋಡುತ್ತಿದೆ. ಪ್ರಪಂಚದ ಇತರೆ ದೇಶಗಳು ಭಾರತವನ್ನು ಹೂಡಿಕೆ ಮತ್ತು ಅವಕಾಶಗಳ ಮಾದರಿ ದೇಶವಾಗಿ ಪರಿಗಣಿಸುತ್ತಿವೆ. ಭಾರತದ ಆರ್ಥಿಕತೆ ವಿಶ್ವದಲ್ಲಿ 5ನೇ ಸ್ಥಾನಕ್ಕೆ ತಲುಪಿದೆ. ಎರಡು ಶತಮಾನ ನಮ್ಮನ್ನು ಆಳಿದ ಬ್ರಿಟಿಷರಿಗಿಂತ ಮುಂದಿದ್ದೇವೆ. ಸರ್ಕಾರದ ನಿಯಮಗಳು, ನಾಯಕತ್ವದ ದೂರದೃಷ್ಟಿಯ ಫಲವಾಗಿ ಇದೆಲ್ಲಾ ಸಾಧ್ಯವಾಗಿದೆ. ಆರ್ಥಿಕತೆಯಲ್ಲಿ ಶೀಘ್ರ 3ನೇ ಸ್ಥಾನ ತಲುಪುತ್ತೇವೆ' ಎಂದರು.

ಶಿಕ್ಷಣದಿಂದಲೇ ಅಭಿವೃದ್ಧಿ: ರಾಜ್ಯಪಾಲ ಥಾವರಚಂದ್ ಗೆಹಲೋತ್, 'ಜೀವನದ ಯಶಸ್ಸಿನಲ್ಲಿ ಶಿಕ್ಷಣ ಮಹತ್ವದ್ದು, ಶಿಕ್ಷಣ ಪಡೆದವರ ಭವಿಷ್ಯ ಉಜ್ವಲವಾಗುತ್ತದೆ. ದೇಶದ ಅಭಿವೃದ್ಧಿಗೆ ತಾಂತ್ರಿಕ ಶಿಕ್ಷಣ ಮುಖ್ಯ. ತಾಂತ್ರಿಕ ಶಿಕ್ಷಣ ಯುವಕರಿಗೆ ಕೌಶಲ ಮತ್ತು ಶ್ರೇಷ್ಠತೆ ಒದಗಿಸುತ್ತದೆ. ಮುಂದಿನ 25 ವರ್ಷಗಳಲ್ಲಿ ಅದ್ಭುತ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಿಸುವ ಜವಾಬ್ದಾರಿ ಯುವಜನರ ಮೇಲಿದೆ' ಎಂದರು.

> **ಯುವಕರು ವಿನಾಶಕಾರಿ ಚಟುವಟಿಕೆಗಳತ್ತ ಆಕರ್ಷಿತರಾಗಬಾರದು. ಪ್ಲೇ ಕಾರ್ಡ್‌ಗಳನ್ನು ಹಿಡಿದು, ಸ್ಲೋಗನ್ ಕೂಗುತ್ತ, ಬೀದಿಯಲ್ಲಿ ಪ್ರತಿಭಟನೆ ಮಾಡುವ ಚಟುವಟಿಕೆಗಳತ್ತ ಗಮನ ಕೊಡಬಾರದು.**
> **–ಜಗದೀಪ್ ಧನಕರ್,** ಉಪರಾಷ್ಟ್ರಪತಿ

ಶಿಕ್ಷಣ ಶಿಖರ ತಲುಪಿದ ನಡಿಗೆ

ಶತಮಾನದ ಹಿಂದೆ ರಾಮಯ್ಯ ಅವರು ಆರಂಭಿಸಿದ ನಡಿಗೆ ಇಂದು ಯಶಸ್ಸಿನ ಶಿಖರ ತಲುಪಿದೆ ಎಂದು ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ಜಯರಾಮ್ ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ರಾಮಯ್ಯನವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಮೂಲಕ ಲಕ್ಷಾಂತರ ಜನರಿಗೆ ಜ್ಞಾನ ನೀಡಿದ್ದಾರೆ. ತನಗಾಗಿ ಬಾಳುವುದೇ ಜೀವನ ಅಲ್ಲ, ಸಮಾಜಕ್ಕಾಗಿ ಬಾಳುವುದೇ ಶ್ರೇಷ್ಠ ಎಂದು ಕೊಂಡಿದ್ದರು. ಕೈವಾರ ತಾತಯ್ಯ ಅವರ ಪರಮ ಭಕ್ತರಾಗಿದ್ದ ಅವರು, ಯೋಗಿನಾರಾಯಣ ಟ್ರಸ್ಟ್ ಮೂಲಕ ಹಲವು ಸೇವೆ ಸಲ್ಲಿಸಿದ್ದಾರೆ ಎಂದರು.

ಎಂ.ಎಸ್.ರಾಮಯ್ಯ ಅವರು ಶಿಕ್ಷಣದ ಆಧಾರದ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸಲು 1962ರಲ್ಲಿ ಗೋಕುಲ ಶಿಕ್ಷಣ ಪ್ರತಿಷ್ಠಾನ ಸ್ಥಾಪಿಸಿದರು. ಗೋಕುಲ ಶಿಕ್ಷಣ ಪ್ರತಿಷ್ಠಾನದ ಮೂಲಕ ತಾಂತ್ರಿಕ, ವೈದ್ಯಕೀಯ ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಬೆಂಗಳೂರು ನಗರವನ್ನು ಶಿಕ್ಷಣ ಕೇಂದ್ರವಾಗಿಸುವಲ್ಲಿ ಗಣನೀಯ ಕೊಡುಗೆ ನೀಡಿದ್ದಾರೆ. ಅವರಿಗೆ ಹಲವು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಮತದಾನ ಜಾಗೃತಿ ಜಾಥಾಕ್ಕೆ ಚಾಲನೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ: ರಾಜಭವನದ ಮುಂಭಾಗ, ಬೆಳಗ್ಗೆ 10.30

ಬಸವರಾಜ ಸಬರದ ಅವರ 12 ಕೃತಿಗಳು ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಉಪನ್ಯಾಸ: ಅರ್ಚನಾ ಆರ್., ರಾಜಪ್ಪ ದಳವಾಯಿ, ಅಧ್ಯಕ್ಷತೆ: ಕಮಲಾ ಹಂಪನಾ, ಪ್ರಾಸ್ತಾವಿಕ ನುಡಿ: ಪಿ. ಮಲ್ಲಿಕಾರ್ಜುನಪ್ಪ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸಬರದ ಬಸಪ್ಪ ಸ್ಮಾರಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.45

ಚಲನಚಿತ್ರ ನಿರ್ದೇಶಕ ಕೆ. ವಿಶ್ವನಾಥ್ ಸಂಸ್ಮರಣೆ: ಟಿ.ಎಸ್. ನಾಗಾಭರಣ, ಶ್ರೀಧರ್, ಶತಾವಧಾನಿ ಆರ್. ಗಣೇಶ್, ಪ್ರಕಾಶ್ ಬೆಳವಾಡಿ, ಮಾಸ್ಟರ್ ಮಂಜುನಾಥ್, ಆಯೋಜನೆ: ಅಭಿಜ್ಞಾನ, ಸ್ಥಳ: ಬಿ.ಪಿ. ವಾಡಿಯಾ ಹಾಲ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

'ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಬದುಕು-ಬರಹ' ಕುರಿತು ಉಪನ್ಯಾಸ: ಉದಂತ ಶಿವಕುಮಾರ್, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಪ್ರಸ್ತಾವನೆ: ಮಹಾಂತೇಶ ದೇಗಾವಿ, ಆಯೋಜನೆ: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ಗಾಯನ: ಅದಿತಿ ನಾರಾಯಣ್, ವಾದ್ಯ ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30



ಮೈಕ್ರೊಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಅವರು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿ ತಾವು ಬರೆದ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದರು. ಅವರಿಬ್ಬರು ಕೃತಕ ಬುದ್ಧಿಮತ್ತೆ ಕುರಿತು ಚರ್ಚಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಕೃಷಿ ಸಮಸ್ಯೆ ಕುರಿತು ಚರ್ಚೆ

ಬೆಂಗಳೂರು: 'ಕೃಷಿ ನೀತಿ, ರೈತರ ಸಂಕಷ್ಟಗಳ ಬಗ್ಗೆ ಚರ್ಚಿಸಲು ಇದೇ ಗುರುವಾರದಿಂದ ಶನಿವಾರದವರೆಗೆ ಗಾಂಧಿ ಭವನದಲ್ಲಿ ರಾಷ್ಟ್ರೀಯ ಕಿಸಾನ್ ಸಮನ್ವಯ ಸಮೂಹ ಸಮಿತಿ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ನವ ಕರ್ನಾಟಕ ರೈತ ಸಂಘದ ದಯಾನಂದ ಸಿ. ಪಾಟೀಲ ತಿಳಿಸಿದರು. ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಭೆಗೆ ಪ್ರತಿ ರಾಜ್ಯದಿಂದ ಮೂರು ಪ್ರತಿನಿಧಿಗಳು ಭಾಗವಹಿಸುತ್ತಾರೆ ಎಂದರು.

JAWAHAR NAVODAYA VIDYALAYA
DODDABALLAPUR, BANGALORE RURAL
Date: 01/03/2023.

TENDER NOTIFICATION

Sealed Tenders are invited from the reputed firms/manufacturers/suppliers/distributors/Services for supply of items for the year 2022-23. 1. FURNITURE, 2. FALSE CEILING/CLADDING FOR CLASS ROOMS, 3. PLAY GROUND DEVELOPMENT WORK/EQUIPMENT. 4. LAYING GRANITE FOR MESS KITCHEN. The Tender documents/details may be obtained from the Office of the Principal, Jawahar Navodaya Vidyalaya, Bashettihalli, Doddaballapura-Taluk between 9.00 A.M to 4.00 P.M on all working days by paying Rs. 200/- by cash. The tender schedule can be downloaded from the Vidyalaya website https://www.navodaya.gov.in/nvs/nvs-school/BANGALORERURAL/en/home. The last date for the submission of sealed tender is 15/03/2023 by 4.00 PM BY HAND/SPEED/REGISTERED POST/COURIER. The tenders will be opened on 16/03/2023 at 11.00 am in the Office of the Principal. Contact Number : 8116438494 (Principal)/9164245308(OS).

Sd/- PRINCIPAL

ನಗರಸಭಾ ಕಾರ್ಯಾಲಯ, ರಾಮನಗರ
ರಾಮನಗರ ಜಿಲ್ಲೆ-562159
Web:www.ramanagaracity.mrc.gov.in Ph: 080-27271286
E-mail: itstaff_ulb_ramanagaram@yahoo.com Helpline No. 080-27276070

ನಂ:ನಸರಾ/ಆಡಳಿತ/ಅ.ವಾ.ಬಾ/ಸಿಆರ್/01/2022-23 ದಿನಾಂಕ: 28-02-2023

ಟೆಂಡರ್ ಪ್ರಕಟಣೆ

2023-24ನೇ ಸಾಲಿನ ನಗರಸಭಾ ನಿಧಿ ಅನುದಾನದಡಿಯಲ್ಲಿ ಕಚೇರಿಯ ಉಪಯೋಗಕ್ಕಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ದಿನಾಂಕ: 15-03-2023ರ ಸಂಜೆ 4-00 ಗಂಟೆಯೊಳಗಾಗಿ ಭಾಗವಹಿಸಿಬಹುದಾಗಿರುತ್ತದೆ. "ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)
1	ನಗರಸಭೆಯ ಮಾನ್ಯ ಅಧ್ಯಕ್ಷರಿಗೆ ಬಾಡಿಗೆ ಆಧಾರದ ಮೇಲೆ ವಾಹನ ಒದಗಿಸುವುದು. (ವಾರ್ಷಿಕ)	4.80	12,000/-	1,180/-

1. ಟೆಂಡರ್ ನಮೂನೆಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-03-2023
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15-03-2023ರ ಸಂಜೆ 4-30 ಗಂಟೆ.
3. ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 16-03-2023ರ ಸಂಜೆ 5-00 ಗಂಟೆಗೆ, ತಪ್ಪಿದಲ್ಲಿ ಮುಂದಿನ ದಿನಾಂಕವನ್ನು ತಿಳಿಸಲಾಗುವುದು.

ಸಹಿ/-
ಪೌರಾಯುಕ್ತರು, ನಗರಸಭೆ, ರಾಮನಗರ

NOTICE INVITING APPLICATIONS FOR ALLOTMENT OF SHOPS AT TB- III, MEG & CENTRE, BANGALORE-560033

1. CO, Trg Bn-III, MEG & Centre, Bangalore-33 invites applications for allotment of various Regimental shops on rental basis at this Bn. Shops would be allotted to the highest bidder based on undermentioned priority in descending order of applications :-
   (a) War widows/widows of def personnel killed while on duty
   (b) Disabled Soldiers (c) Ex-Servicemen
   (d) Spouse/widow of ex-servicemen
2. Details of shops are as under:-

Ser No	Bldg No	Type of Shop	Sqft
(a)	T-26/1	WET Canteen	600
(b)	T-29/2	General Store	250
(c)	T-29/5	Tailor Shop	250
(d)	P-280	Fast Food Corner at Basantar Auditoruim	72

3. The license fees and rebate will be intimated prior to auction process.
4. Application forms will be available at 'Q' Br of this Bn. The same may be obtained by drawing DD on all working days :-
   (a) Issue of Application form : 03 Mar 23 to 06 Mar 23 (1000h to 1300h)
   (b) Date of receipt of application : 09 Mar 23 (upto 0930h)
   (c) DD in favour of : Regt Fund Acct TB-III MEG & Centre payable at SBI TB-III MEG & Centre
   (d) DD Amount : ₹ 500/- (Non refundable).

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: 06/2023, ದಿನಾಂಕ: 24.02.2023
ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಐಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆಗೆ.

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರ ತೆರೆಯುವ ದಿನಾಂಕ
1	17231103ಎ	ಎಲಿಮೆಂಟ್ ಇಂಜಿನ್ ಏರ್ ಫಿಲ್ಟರ್ ಫೈಬರ್‌ಗ್ಲಾಸ್	810 ನಂ.	06.03.2023
2	56231093	ಪಿವಿಸಿ ಸಿಗ್ನಲಿಂಗ್ ಕೇಬಲ್ 2ಸಿ x 2.4 ಚ.ಮಿಮೀ.	400 ಕಿ.ಮೀ.	20.03.2023
3	60225083ಎ	ಸರ್ವೋ ವಾಲ್ವ್	25 ನಂ.	13.03.2023
4	60225019ಬಿ	ಡ್ರಾಯಿಂಗ್ ಸಂ. ಆರ್‌ಡಿಎಸ್‌ಓ ಟಿ-5919 ಪ್ರಕಾರ ಇಆರ್ ಕ್ಲಿಪ್ ಎಂಕೆ-ವಿ	2624075 ನಂ.	14.03.2023
5	81221021	ಇಂಡಸ್ಟ್ರಿಯಲ್ ಕಂಪ್ರೆಸ್ಡ್ ಆಮ್ಲಜನಕ ಅನಿಲ	171068 ಸಿಯುಎಂ	16.03.2023
6	45231259	ಸ್ಟಾಟಿಕ್ ಇನ್‌ವರ್ಟರ್ 2.5 ಕೆವಿಎ, 110 ಡಿಸಿ / 230ವಿ ಎಸಿ	42 ನಂ.	16.03.2023
7	60235004	ಆರ್‌ಡಿಎಸ್‌ಓ ಡ್ರಾಯಿಂಗ್ ಸಂ. ಟಿ-8616 & ಟಿ-8617 ಪ್ರಕಾರ ಮೆಟಲ್ ಲೈನರ್‌ಗಳು	110000 ಸೆಟ್ಟುಗಳು	20.03.2023
8	38221005ಸಿ	ಮಾರ್ಪಡಿಸಲಾದ ಸಂಪೂರ್ಣ ಎಲಾಸ್ಟೋಮೆರಿಕ್ ಪ್ಯಾಡ್	24980 ನಂ.	20.03.2023
9	45231492	ಹ್ಯಾಚ್ ಡೋರ್‌ಗಳಿಗೆ ಪ್ಯಾನೆಲ್ ಫಿಲ್ಟರ್‌ಗಳು	2719 ನಂ.	27.03.2023
10	ಎಲ್3226133	ಪ್ರೈಮರಿ ಸ್ಪ್ರಿಂಗ್	209 ನಂ.	20.03.2023
11	75231017	ಪ್ರೀ ಲಾಮಿನೇಟೆಡ್ ಶೇಡೆಡ್ ಕಾಂಪ್ರೆಗ್	3219 ನಂ.	24.03.2023
12	33235007	ಕೆಬಿ ಪಾರ್ಟ್ ಸಂಖ್ಯೆಗಳ ಪ್ರಕಾರ ಸರ್ಕ್ಯೂಟ್ ಬೋರ್ಡ್ ಎಂಬಿ04ಬಿ ಕಾರ್ಡ್	24 ನಂ.	27.03.2023
13	33235010	ಎಫ್‌ಟಿ ಪಾರ್ಟ್ ಸಂ. 1/600013ಎ ಪ್ರಕಾರ ಜಿಇ ಬೋರ್ಡ್	25 ನಂ.	27.03.2023
14	33235015	ಎಸ್ಕಾರ್ಟ್ಸ್ ಡ್ರಾಯಿಂಗ್ ಸಂ. 3ಇಬಿ 8242/1,2,4,5 ಪ್ರಕಾರ ಜೆರ್ಖುಡ್‌ವಿ ಕಾರ್ಡ್	16 ನಂ.	27.03.2023
15	33235013	ಎಫ್‌ಟಿ ಪಾರ್ಟ್ ನಂ. 1/600008ಎ, 1/600009ಎ ಪ್ರಕಾರ ಎನ್2 ಬೋರ್ಡ್	12 ನಂ.	27.03.2023

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/708/AAD/PRB/SWR/2022-23 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ
S.W.Railways sw_rly SWRRLY southwesternrailway SWRRLY

ಭಾರತ ಸರ್ಕಾರ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ
ಉದ್ಯೋಗ ಮಹಾ ನಿರ್ದೇಶನಾಲಯ,
ಪ.ಜಾ./ಪ.ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ,
ಸರ್ಕಾರಿ ಐಟಿಐ ಆವರಣ, ಡೈರಿ ಸರ್ಕಲ್, ಭನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಕರ್ನಾಟಕ
ಇ-ಮೇಲ್: cgcempbg@nic.in, ಟೆಲಿಫೋನ್: 080-29756192
National Career Service – सही अवसर, सही समय – Right Opportunities, Right Time

NCSC/I/11011/1/2022-Bng Dated: 27-02-2023

"ಪಜಾ/ಪ.ಪಂಗಡದ ನಿರುದ್ಯೋಗಿ ಯುವಕ/ಯುವತಿರಿಗೆ ಬೆಂಗಳೂರಿನಲ್ಲಿ ವಿಶೇಷ ತರಬೇತಿ ನೀಡಲು ಪ್ರತಿಷ್ಠಿತ/ನೋಂದಾಯಿತ ಸಂಸ್ಥೆಗಳಿಂದ ಅರ್ಜಿ ಆಹ್ವಾನ"

ಭಾರತ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿಯ ಅಧೀನ ಕಛೇರಿಯಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಆವರಣ, ಕೌಶಲ್ಯ ಭವನ ಹಿಂಭಾಗ, ಡೈರಿ ಸರ್ಕಲ್, ಬೆಂಗಳೂರು-560029 ಕಛೇರಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ "ಒಂದು ವರ್ಷದ ವಿಶೇಷ ತರಬೇತಿ" ಯೋಜನೆಯಡಿ ಸಾಮಾನ್ಯ ಇಂಗ್ಲೀಷ್, ಸಾಮಾನ್ಯ ಜ್ಞಾನ, ಕಂಪೂಟರ್ ಜ್ಞಾನ, ನ್ಯೂಮಿರಿಕಲ್ ಅಬಿಲಿಟಿ, ಶಾರ್ಟ್‌ಹ್ಯಾಂಡ್/ಸ್ಟೆನೋಗ್ರಾಫೀ (ಶೀಘ್ರಲಿಪಿ) ವಿಷಯಗಳ ತರಬೇತಿ ನೀಡಲು ಪ್ರತಿ ಅಭ್ಯರ್ಥಿಗೆ ನಿಗದಿತ ಸೇವಾ ಶುಲ್ಕ ನೀಡುತ್ತಿದ್ದು, ಅದಕ್ಕಾಗಿ ಅರ್ಹ ಪ್ರತಿಷ್ಠಿತ/ನೋಂದಾಯಿತ ಬೆಂಗಳೂರಿನಲ್ಲಿರುವ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಕಛೇರಿಯ ಇ-ಮೇಲ್ ಮೂಲಕ cgcempbg@nic.in ಅಥವಾ ಖುದ್ದಾಗಿ ಕಚೇರಿಯ ಸಮಯದಲ್ಲಿ ಸಂಪರ್ಕಿಸಿ ಅರ್ಜಿಯನ್ನು ಹಾಗೂ ಸೇವಾ ಷರತ್ತುಗಳನ್ನು ಪಡೆಯಬಹುದು. ಅಗತ್ಯ ದಾಖಲೆಗಳ ಜೊತೆಗೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 10.03.2022, ಸಂಜೆ 5:00 ಒಳಗಾಗಿ ಕಛೇರಿಗೆ ನೋಂದಾಯಿತ ಪೋಸ್ಟ್/ಖುದ್ದಾಗಿ ಬಂದು ಸಲ್ಲಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ಪಡೆಯಲು ಕಛೇರಿಯ ಮುಖ್ಯಸ್ಥರಾದ ಉಪ-ಪ್ರಾದೇಶಿಕ ಉದ್ಯೋಗಾಧಿಕಾರಿಗಳನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಉಪ-ಪ್ರಾದೇಶಿಕ ಉದ್ಯೋಗಾಧಿಕಾರಿ: ಫೋ: 080-29756192 ಮೊ: 09916188914.

ಸಹಿ/-
(ಶಿವಶಾಂತವೀರ ದಿವಾಕರ) ಕೇ.ಸಾ.ಸೇ
ಉಪ-ಪ್ರಾದೇಶಿಕ ಉದ್ಯೋಗಾಧಿಕಾರಿ ಪ.ಜಾ/ಪ.ಪಂ.ದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ
ಬೆಂಗಳೂರು-560 029 (Ph:080-29756192, Mob:09916188914)

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

THE LaLiT
TENDER NOTICE
Sealed tenders are invited on the prescribed Form for the supply of following Items to The LaLiT Ashok Bangalore, for the financial year 2023-24
Indian Fruits & Vegetables, English Vegetables & Imported Fruits, Chinese Food, Mushrooms, Milk & Dairy Products, Poultry - Chicken, Egg, Mutton, Fresh Fish & Seafood, Frozen Seafood, Indian Grocery & Provisions, Imported Grocery, Frozen Peas & Corn, Charcoal & Firewood, Fuel Gel, General Stationery, Printing Stationery, Ice Creams, Chemicals, Cleaning Supply, Paper Supply.
Particulars of specifications and prescribed form can be obtained from the Purchase Office between 10:00 to 16:30 hours on Cash Payment of Rs. 1000/- (Rupees One Thousand only) for each set (Non-Refundable) from 2nd March to 10th March 2023. Sealed Tenders will be received latest by 16:30 hours on 10th March 2023 at the Purchase Office. Late applications shall not be accepted.
The LaLiT Ashok Bangalore Kumara Krupa High Grounds, Bengaluru-560001 Ph: 080-68177777

PUBLIC NOTICE
To Place your Classified Ads Contact 9731810277

JOB OPPORTUNITIES

Multiple Vacancy
REQUIRED IMMEDIATELY HR, Administration, Manager, Accounts, Supervisor, Technical Mechanical, Electronics, Electrical, Computer Engineers 9513822666/ 9513855666

PERSONAL

Change of Name

CHANGE OF NAME
I, JC672828M, Rank:Trade, SUB/DVRMT, Jitendra Singh Yadav, Residing at No. 36, 3rd Main, 6th Cross, Iyappa Temple Block, Viveknagar Post, Bengaluru-560047, have changed my name daughter's name from KANISHKA to KANISHKA YADAV, vide affidavit dated 01.03.2023, before notary Gangaraju, Bangalore.

I,HARENDR Singh, Resident.H.N. 37A/30/5,Madhu Nagar,Agra, UP-282001`have changed my name from Harendr Singh to Harendra Singh vide`affidavit dated 06-07-2021 before`Notary S.R.Ravikumar, Bengaluru.

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಮೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾನಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

I,ARUN SUMATHY GOPIDASS, changed_my name-to ARUN SUMATHY GOPIDAS dated: 27-02-2023 Sworn_before Notary H.S.Sakalesh Aradhya, Bengaluru.

I,ABDUL HAMID S/o.Abdul Sattar R/o.#8/8,6th Cross,Azad Nagar, Chamarajpet, Bangalore- 560018 Have`Changed My Name_to ABDUL HAMEED ABDUL SATTAR.`vide Affidavit`Dated 01-03-2023 Before`Notary L.Shankaranarayana, Bengaluru

CHANGE OF NAME
I, SOWMYA S, residing at No.6, Sapathagiri Residency, 1st Cross, NBK Layout, Guddadahalli Main Road, Hebbal, Bangalore-560 024 have changed my name to SOWMYA DAVID, vide affidavit dated 01.03.2023 before Notary L. Gopalakrishna Bangalore. Henceforth, I shall be known as SOWMYA DAVID only.

CHANGE OF NAME
I, JC672828M, Rank:Trade, SUB/DVRMT, Jitendra Singh Yadav, Residing at No. 36, 3rd Main, 6th Cross, Iyappa Temple Block, Viveknagar Post, Bengaluru-560047, have changed my name daughter's name from AYUSHI to AYUSHI YADAV, vide affidavit dated 01.03.2023, before notary Gangaraju, Bangalore.

I, SUBRAMANYA PRASAD, S/o. Sri. K.Krishna Bhat, Aged about 39 years, residing at No.40/1, Near Shri Nagabrahma Temple, Nagdevanahalli, Jnanabharathi Post, Bangalore-560056. have changed my name to SUBRAMANYA PRASAD K vide affidavit dated 24-02-2023 sworn before RAVI, Advocate & Notary, Bangalore.

I, BOBBY, residing at No.207 2nd floor, Shiva Woods Apartment, NGEF Layout main road, near Anjineya Temple, Nagarbhavi 1st stage, Bangalore, Karnataka-560072 have changed my name to BOBBY OMPRAKASH, vide affidavit dated 28.02.2023 before Notary K.H.Jagadish, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ.: H-GS-UBL-04-2022-23
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬಳ್ಳಾರಿ – ಹದ್ದಿನಗುಂಡು (ಬಿಎವೈ-ಹೆಚ್‌ಡಿಡಿ) ನಿಲ್ದಾಣಗಳ ನಡುವೆ, ರೈಲ್ವೆ ಕಿಮೀ. 208/800-900 ರಲ್ಲಿ ಬಾಕ್ಸ್ ರೋಲಿಂಗ್ ಮಾದರಿಯಲ್ಲಿ ಆರ್‌ಹೆಚ್ ಗಿರ್ಡರ್ ಬಳಸಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ನೊಂದಿಗೆ 1x8.5x5.10ಮೀ. ಅಳತೆಯ ಆರ್‌ಯುಬಿಯ ನಿರ್ಮಾಣ.	ರೂ. 5,46,59,359/-
2	ಹುಬ್ಬಳ್ಳಿ ವಿಭಾಗ: ಹೊಳೆ-ಆಲೂರು, ಯಲವಿಗಿ ಮತ್ತು ಇಂಡಿ ರೋಡ್ ನಿಲ್ದಾಣಗಳಲ್ಲಿ ಲಘು ಉನ್ನತೀಕರಣ / ಸುಧಾರಣಾ ಕಾರ್ಯಗಳು.	ರೂ. 1,92,25,663/-
3	ಹುಬ್ಬಳ್ಳಿ ವಿಭಾಗ: ಬಳ್ಳಾರಿ ದಂಡು ಹಾಲ್ಟ್ ಮತ್ತು ಹಗರಿಬೊಮ್ಮನಹಳ್ಳಿ ನಿಲ್ದಾಣಗಳಲ್ಲಿ ಲಘು ಉನ್ನತೀಕರಣ / ಸುಧಾರಣಾ ಕಾರ್ಯಗಳು.	ರೂ. 2,10,37,155/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.03.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಯೋಜನಾ ವ್ಯವಸ್ಥಾಪಕರು/ಗತಿ ಶಕ್ತಿ ಘಟಕ ಹುಬ್ಬಳ್ಳಿ
PUB/711/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-ಟೆಂಡರು ಸೂಚನೆ ಸಂ.: ECN-TRD-02-2023 ದಿನಾಂಕ: 24.02.2023

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಲೋಂಡಾ ಯಾರ್ಡ್‌ನಲ್ಲಿ ಓಹೆಚ್‌ಇಯ ಮೇಲಿನ ಉಲ್ಲಂಘನೆಗಳನ್ನು ನಿವಾರಿಸುವುದು.	ರೂ. 2,60,82,529.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.03.2023, 11:00 ಗಂಟೆಯವರೆಗೆ

ಇ-ಟೆಂಡರು ಸೂಚನೆ ಸಂ.: ECN-TRD-03-2023 ದಿನಾಂಕ: 25.02.2023

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಗಿಣಿಗೇರ & ಮುನಿರಾಬಾದ ನಡುವೆ ಕಿಮೀ. 126/900-127/000 ರಲ್ಲಿ ಎಲ್‌ಸಿ 72 ಗೆ ಬದಲು ಬರಲಿರುವ ಆರ್‌ಓಬಿಗಾಗಿ ಪ್ರಸ್ತುತವಿರುವ ಓಹೆಚ್‌ಇ ವ್ಯವಸ್ಥೆಯನ್ನು ಮಾರ್ಪಡಿಸುವುದು.	ರೂ. 32,09,984.80

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.03.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ವಿನಿಯೋಗ, ನಿರ್ಮಾಣ, ಬೆಂಗಳೂರು
PUB/709/AAD/PRB/SWR/2022-23
S.W.Railways SWRRLY SWRRLY

ಸಿಆರ್‌ಎಸ್ ಹಸಿರು ನಿಶಾನೆ • ಇದೇ 11ರಂದು ಪ್ರಧಾನಿ ಮೋದಿಯಿಂದ ಉದ್ಘಾಟನೆ ಸಾಧ್ಯತೆ

ವೈಟ್‌ಫೀಲ್ಡ್ ಮೆಟ್ರೊ: ಶೀಘ್ರ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುನಿರೀಕ್ಷಿತ ಕೆ.ಆರ್.ಪುರ– ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗಕ್ಕೆ ಮೆಟ್ರೊ ರೈಲು ಸುರಕ್ಷತಾ ಆಯುಕ್ತರಿಂದ(ಸಿಆರ್‌ಎಸ್) ಹಸಿರು ನಿಶಾನೆ ದೊರೆತಿದ್ದು, ಮುಂದಿನ ವಾರ ರಾಜ್ಯಕ್ಕೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಂದ ಲೋಕಾರ್ಪಣೆಯಾಗುವ ಸಾಧ್ಯತೆ ಇದೆ.

ಕಳೆದ ವಾರ ಸುರಕ್ಷತೆ ಪರಿಶೀಲಿಸಿದ್ದ ಸಿಆರ್‌ಎಸ್ ತಂಡ, ಫೆ.28ರಂದು ಪ್ರಮಾಣ ಪತ್ರ ನೀಡಿದೆ. ವಾಣಿಜ್ಯ ಸಂಚಾರಕ್ಕೆ ಈ ಮಾರ್ಗ ಸುರಕ್ಷಿತವಾಗಿರುವ ಬಗ್ಗೆ ಹಸಿರು ನಿಶಾನೆ ದೊರೆತ ಬೆನ್ನಲ್ಲೇ ಲೋಕಾರ್ಪಣೆಗೆ ಬಿಎಂಆರ್‌ಸಿಎಲ್ ಸಿದ್ಧತೆ ನಡೆಸುತ್ತಿದೆ.

ಮೆಟ್ರೊ ರೈಲು ನಿಲ್ದಾಣಗಳಲ್ಲಿ ಇರುವ ಸಣ್ಣಪುಟ್ಟ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸ್ವಲ್ಪ ಸಮಯ ಬೇಕಿದೆ. ಮಾರ್ಚ್ 15ರ ಕಾಲಮಿತಿಯಲ್ಲಿ ಎಲ್ಲವೂ ಪೂರ್ಣಗೊಳ್ಳಲಿದೆ. ಅದಕ್ಕೂ ಮುನ್ನವೇ ಮೆಟ್ರೊ ರೈಲು ವಾಣಿಜ್ಯ ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಮಾರ್ಚ್ 11ರಂದು ರಾಜ್ಯಕ್ಕೆ ಪ್ರಧಾನಿ ಭೇಟಿ ನೀಡಲಿದ್ದು, ಬೆಂಗಳೂರು–ಮೈಸೂರು ಹೆದ್ದಾರಿ ಲೋಕಾರ್ಪಣೆ ಮಾಡಲಿದ್ದಾರೆ. ಅವರಿಂದಲೇ ವೈಟ್‌ಫೀಲ್ಡ್ ವಿಸ್ತರಿತ ಮೆಟ್ರೊ ಮಾರ್ಗ ಉದ್ಘಾಟನೆ ಮಾಡಿಸಲು ಯೋಚಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ.

15.5 ಕಿಲೋ ಮೀಟರ್ ಉದ್ದದ ಬೈಯಪ್ಪನಹಳ್ಳಿ–ಕೆ.ಆರ್. ಪುರಂ–ವೈಟ್‌ಫೀಲ್ಡ್ ಮಾರ್ಗದಲ್ಲಿ ಕೆ.ಆರ್. ಪುರ–ವೈಟ್‌ಫೀಲ್ಡ್ ನಡುವಿನ 13.71 ಕಿಲೋ ಮೀಟರ್ ಮಾರ್ಗ ಉದ್ಘಾಟನೆಗೆ ಸಿದ್ಧವಾಗಿದೆ. ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವಿನ ಮಾರ್ಗ ಜೂನ್ ಅಂತ್ಯ ಅಥವಾ ಜುಲೈನಲ್ಲಿ ಲೋಕಾರ್ಪಣೆಯಾಗಲಿದೆ. ಆ ತನಕ ಈ ಎರಡು ನಿಲ್ದಾಣಗಳ ನಡುವೆ ಬಿಎಂಟಿಸಿ ಬಸ್‌ಗಳನ್ನು ಫೀಡರ್ ಸೇವೆಗೆ ಬಳಸಿಕೊಳ್ಳಲು ಬಿಎಂಆರ್‌ಸಿಎಲ್ ಅಧಿಕಾರಿಗಳು ನಿರ್ಧರಿಸಿದ್ದಾರೆ.

ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗ

ಕ್ಯೂಆರ್ ಕೋಡ್ ಟಿಕೆಟ್: ಶೇ 50ರಷ್ಟು ಹಣ ವಾಪಸ್

ಬೆಂಗಳೂರು: ಮೆಟ್ರೊ ರೈಲು ಪ್ರಯಾಣಿಕರು ಪೇಟಿಎಂ ಮೂಲಕ ಕ್ಯೂಆರ್ ಕೋಡ್ ಟಿಕೆಟ್ ಖರೀದಿಸಿದರೆ ಶೇ 50ರಷ್ಟು ರಿಯಾಯಿತಿ ದೊರೆಯಲಿದೆ.

ಪೇಟಿಎಂ ಸೂಪರ್ ಆ್ಯಪ್ ಬಳಸಿ ಕ್ಯೂಆರ್ ಕೋಡ್ ಟಿಕೆಟ್ ಖರೀದಿಸಬೇಕು. ₹9 ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಟಿಕೆಟ್ ಖರೀದಿಸಿದರೆ ₹15ರವರೆಗೆ ಹಣ ವಾಪಸ್ ಬರಲಿದೆ. ಈ ರಿಯಾಯಿತಿಗೆ ಅರ್ಹರಾಗಲು ಪ್ರಯಾಣಿಕರು ಮಾರ್ಚ್ 17ಕ್ಕೂ ಮೊದಲು ಟಿಕೆಟ್ ಖರೀದಿಸಬೇಕು ಎಂದು ಪೇಟಿಎಂ ತಿಳಿಸಿದೆ.

ವೈಟ್‌ಫೀಲ್ಡ್– ಕೆ.ಆರ್.ಪುರ ಮಾರ್ಗದ ವಾಣಿಜ್ಯ ಸಂಚಾರಕ್ಕೆ ಸಿಆರ್‌ಎಸ್ ಅನುಮತಿ ಸಿಕ್ಕಿದೆ. ಬಾಕಿ ಕಾಮಗಾರಿಗಳು ಮಾರ್ಚ್ 14ರೊಳಗೆ ಪೂರ್ಣಗೊಳ್ಳಲಿದ್ದು, ಅಷ್ಟರಲ್ಲಿ ಲೋಕಾರ್ಪಣೆಗೆ ಬಿಎಂಆರ್‌ಸಿಎಲ್ ಸಿದ್ಧ ಇರಲಿದೆ.

ಅಂಜುಂ ಪರ್ವೇಜ್, ಬಿಎಂಆರ್‌ಸಿಎಲ್, ವ್ಯವಸ್ಥಾಪಕ ನಿರ್ದೇಶಕ

ಮೆಟ್ರೊ ಸುರಂಗ: ಮತ್ತೊಂದು ಕಡೆ ಕುಸಿತ

ಬೆಂಗಳೂರು: ಮೆಟ್ರೊ ಸುರಂಗ ಮಾರ್ಗದ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ದಿಢೀರ್ ಮಣ್ಣು ಕುಸಿದಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಚನ್ನಯ್ಯನಪಾಳ್ಯದ ಮಸೀದಿ ಪಕ್ಕದಲ್ಲಿ ಗುಂಡಿ ಬಿದ್ದಿದೆ. ಮಸೀದಿ ಗೋಡೆಯ ಪಕ್ಕದಲ್ಲೇ ಮೂರೂವರೆ ಅಡಿಗಳಷ್ಟು ಆಳ ಮತ್ತು ನಾಲ್ಕು ಮೀಟರ್‌ನಷ್ಟು ಅಗಲದ ಗುಂಡಿ ನಿರ್ಮಾಣವಾಗಿದ್ದು, ಕೆಲಕಾಲ ಆತಂಕ ಸೃಷ್ಟಿಸಿತ್ತು.

ತಕ್ಷಣವೇ ಪರಿಹಾರ ಕಾಮಗಾರಿ ಆರಂಭಿಸಿದ ಬಿಎಂಆರ್‌ಸಿಎಲ್ ಅಧಿಕಾರಿಗಳು, ಕಾಂಕ್ರೀಟ್ ತುಂಬಿ ಗುಂಡಿ ಮುಚ್ಚಿದರು.

ಗೊಟ್ಟಿಗೆರೆ– ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ಡೇರಿ ವೃತ್ತದಿಂದ ನಾಗವಾರ ತನಕ ಸುರಂಗ ಮಾರ್ಗ ನಿರ್ಮಾಣವಾಗುತ್ತಿದೆ. ಟಿಬಿಎಂ(ಸುರಂಗ ಕೊರೆಯುವ ಯಂತ್ರ) ‘ರುದ್ರ’ ಡೇರಿ ವೃತ್ತದಿಂದ ಲಕ್ಕಸಂದ್ರ ಕಡೆಗೆ ಹೋಗುತ್ತಿದ್ದು, ಇದೇ ಜಾಗದಲ್ಲಿ ಗುಂಡಿ ಬಿದ್ದಿದೆ.

ನೆಲದಿಂದ 20 ಅಡಿ ಆಳದಲ್ಲಿ ಸುರಂಗ ನಿರ್ಮಾಣವಾಗುತ್ತಿದ್ದು, ಕಲ್ಲು ಬಂಡೆಯನ್ನು ಟಿಬಿಎಂ ಸೀಳುತ್ತಿದೆ. ಟಿಬಿಎಂನ ‘ಕಟರ್ ಹೆಡ್’ 6.5 ಮೀಟರ್ ಎತ್ತರ ಇದ್ದು, ಅದು ಸುತ್ತುವಾಗ ಬಂಡೆ ಕತ್ತರಿಸುತ್ತಿದೆ. ಬಂಡೆಯ ಮೇಲ್ಭಾಗದ ಒಂದು ಮೀಟರ್‌ನಷ್ಟು ಮಣ್ಣನ್ನೂ ಕಟರ್ ಹೆಡ್ ಕೊರೆಯುತ್ತಿರುವುದರಿಂದ ಮೇಲ್ಪದರದ ಮಣ್ಣು ಕುಸಿದಿದೆ. ಕಾಂಕ್ರೀಟ್ ತುಂಬಿ ಗುಂಡಿ ಮುಚ್ಚಲಾಗಿದ್ದು, ಮಸೀದಿಗಾಗಲೀ ರಸ್ತೆಗಾಗಲಿ ಯಾವುದೇ ಅಪಾಯ ಇಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯಕ್ಕೆ ಸಮೀಪದ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದ್ದು, ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ ಎಂದು ಆಡುಗೋಡಿ ಪೊಲೀಸರು ತಿಳಿಸಿದರು.

ಇದೇ ಮಾರ್ಗದಲ್ಲಿ ಬ್ರಿಗೇಡ್ ರಸ್ತೆಯಲ್ಲಿ ಜನವರಿ 12ರಂದು ಸಿಂಕ್ ಹೋಲ್ ನಿರ್ಮಾಣವಾಗಿತ್ತು. ಅದಕ್ಕೂ ಒಂದು ವಾರ ಮುನ್ನ ಹೊರ ವರ್ತುಲ ರಸ್ತೆಯಲ್ಲಿ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕುಸಿದು ತಾಯಿ–ಮಗು ಮೃತಪಟ್ಟಿದ್ದರು.

ಕುಸಿದಿದ್ದ ಗುಂಡಿಯನ್ನು ಕಾಂಕ್ರೀಟ್ ತುಂಬಿ ಮುಚ್ಚಿರುವುದು –ಪ್ರಜಾವಾಣಿ ಚಿತ್ರ

ಗುಬ್ಬಿ ಚನ್ನಬಸವೇಶ್ವರ ರಥೋತ್ಸವ

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಚನ್ನಬಸವೇಶ್ವರ ರಥೋತ್ಸವ ಅದ್ದೂರಿಯಾಗಿ ನಡೆಯಿತು. ನಂದಿಧ್ವಜ, ಲಿಂಗದವೀರರ ಕುಣಿತ, ಮಂಗಳವಾದ್ಯಗಳೊಂದಿಗೆ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು

ಪರದಾಡಿದ ರೋಗಿಗಳು: ಶಾಲೆಯಿಂದ ವಾಪಸ್ ಬಂದ ವಿದ್ಯಾರ್ಥಿಗಳು

ಮುಷ್ಕರ: ಕಚೇರಿ, ಆಸ್ಪತ್ರೆ ಖಾಲಿ ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗೆ ಬಂದು ಚಿಕಿತ್ಸೆ ಸಿಗದೆ ವಾಪಸ್ ತೆರಳಿದ ರೋಗಿಗಳು, ಶಾಲೆಗೆ ಹೋಗಿ ಶಿಕ್ಷಕರಿಲ್ಲದೆ ಮರಳಿ ಬಂದ ವಿದ್ಯಾರ್ಥಿಗಳು, ಸರ್ಕಾರಿ ಕಚೇರಿಗಳಿಗೆ ಎಡತಾಕಿ ವಾಪಸ್ ಹೋದ ಜನ...

ರಾಜ್ಯ ಸರ್ಕಾರಿ ನೌಕರರ ಸಂಘ ಮುಷ್ಕರಕ್ಕೆ ಕರೆ ನೀಡಿದ್ದರಿಂದ ಬುಧವಾರ ಎಲ್ಲೆಡೆ ರಜೆಯ ವಾತಾವರಣ ಇತ್ತು. ವಿಧಾನಸೌಧ ಆದಿಯಾಗಿ ಯಾವುದೇ ಕಚೇರಿಯಲ್ಲೂ ನೌಕರರು ಕೆಲಸ ಮಾಡಲಿಲ್ಲ. ಇದರ ಅರಿವಿಲ್ಲದೆ ಕಚೇರಿಗೆ ಬಂದ ಜನ ಖಾಲಿ ಕುರ್ಚಿ ಮತ್ತು ಬಾಗಿಲಿಗೆ ಹಾಕಿದ್ದ ಬೀಗಗಳನ್ನು ನೋಡಿ ವಾಪಸ್ ಹೋದರು.

ಸರ್ಕಾರಿ ಶಾಲೆಗಳ ಶಿಕ್ಷಕರು ಶಾಲೆಗಳಿಗೆ ಗೈರಾಗಿದ್ದರು. ಶಾಲೆಗಳಿಗೆ ಹೋಗಿದ್ದ ವಿದ್ಯಾರ್ಥಿಗಳು ಕೆಲಕಾಲ ಕಾದು ಬಳಿಕ ಮನೆಗಳಿಗೆ ವಾಪಸ್ ತೆರಳಿದರು. ಮಧ್ಯಾಹ್ನದ ವೇಳೆಗೆ ಮುಷ್ಕರ ವಾಪಸ್ ಪಡೆದರೂ, ಬಹುತೇಕ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಲಿಲ್ಲ. ಇಡೀ ದಿನ ಕಚೇರಿಗಳಲ್ಲಿ ರಜೆಯ ವಾತಾವರಣವೇ ಇತ್ತು.

ಸರ್ಕಾರಿ ಆಸ್ಪತ್ರೆ ಸಿಬ್ಬಂದಿಯೂ ಮುಷ್ಕರದಲ್ಲಿ ಭಾಗವಹಿಸಿದ್ದರಿಂದ ಚಿಕಿತ್ಸೆ ಸಿಗದೆ ರೋಗಿಗಳು ಪರದಾಡಿದರು. ಕೆ.ಸಿ.ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ, ವಿಕ್ಟೋರಿಯಾ ಸೇರಿ ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ಬೆಳಿಗ್ಗೆ ಹೊರ ರೋಗಿಗಳ ವಿಭಾಗ (ಒಪಿಡಿ) ಸೇವೆಯಲ್ಲಿ ವ್ಯತ್ಯಯವಾಯಿತು.

ಒಪಿಡಿ(ಹೊರ ರೋಗಿ ವಿಭಾಗ) ತೆರೆದಿದ್ದರೂ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗಳು ಇರಲಿಲ್ಲ. ಆಸ್ಪತ್ರೆಗೆ ಬಂದವರು ಗೊಂದಲಕ್ಕೆ ಒಳಗಾದರು. ಒಳರೋಗಿಗಳ ವಿಭಾಗದಲ್ಲಿ ಎಂದಿನಂತೆ ಚಿಕಿತ್ಸೆ ಲಭ್ಯವಿತ್ತು. ತೀವ್ರ ನಿಗಾ ಘಟಕ (ಐಸಿಯು), ತುರ್ತುಚಿಕಿತ್ಸಾ ಘಟಕಗಳ ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಕಾರ್ಯ ನಿರ್ವಹಿಸಿದರು.

ಕೆಲವು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಮಾತ್ರ ಎಂಬ ಫಲಕವನ್ನೇ ಅಳವಡಿಸಲಾಗಿತ್ತು. ನೌಕರರ ಸಂಘ ಮುಷ್ಕರ ವಾಪಸ್ ಪಡೆದ ಬಳಿಕ ಒಪಿಡಿ ಸೇವೆಯನ್ನು ಪ್ರಾರಂಭಿಸಲಾಯಿತು.

ಬಿಬಿಎಂಪಿ ಪೌರ ಕಾರ್ಮಿಕರು ಎಂದಿನಂತೆ ಕಾರ್ಯ ನಿರ್ವಹಿಸಿದರು. ಇದರಿಂದಾಗಿ ಸ್ವಚ್ಛತೆ ಕಾರ್ಯದಲ್ಲಿ ಯಾವುದೇ ತೊಡಕಾಗಲಿಲ್ಲ. ಜಲ ಮಂಡಳಿ ಮತ್ತು ಬೆಸ್ಕಾಂ ಕಚೇರಿಗಳಲ್ಲೂ ನೌಕರರು ಕೆಲಸಕ್ಕೆ ಗೈರಾಗಿದ್ದರು. ಆದರೆ, ನೀರು ಮತ್ತು ವಿದ್ಯುತ್ ಸರಬರಾಜಿನಲ್ಲಿ ಯಾವುದೇ ವ್ಯತ್ಯಯ ಆಗಲಿಲ್ಲ.

ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಸಾರಿಗೆ ಇಲಾಖೆ ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗಿದ್ದರು. ಚಾಲನಾ ಪರವಾನಗಿ, ವಾಹನಗಳ ಫಿಟ್‌ನೆಸ್ ಪ್ರಮಾಣಪತ್ರ ಪಡೆಯಲು ಬಂದವರು ಕಾದು ವಾಪಸ್ ಹೋದರು. ಆಸ್ತಿ ನೋಂದಣಿಗಾಗಿ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದವರೂ ಖಾಲಿ ಕುರ್ಚಿಗಳನ್ನು ನೋಡಿ ಮರಳಬೇಕಾಯಿತು.

ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕಾಯುತ್ತಿದ್ದ ಜನರು

ಪಾಲಿಕೆ ಸಿಬ್ಬಂದಿ ಪ್ರತಿಭಟನೆ

ಬಿಬಿಎಂಪಿ ಕಚೇರಿ ಸಿಬ್ಬಂದಿಯೂ ಮುಷ್ಕರ ಬೆಂಬಲಿಸಿ ಕರ್ತವ್ಯಕ್ಕೆ ಗೈರಾಗಿ ದ್ದರು. ಪಾಲಿಕೆಯ ಕೇಂದ್ರ ಕಚೇರಿಯ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ‘ಬೆಂಗಳೂರು ನಗರ ಪ್ರದೇಶದಲ್ಲಿ ವಾಸ ಮಾಡುವವರಿಗೆ ಪ್ರತಿ ತಿಂಗಳು ಖರ್ಚು ಹೆಚ್ಚಾಗುತ್ತಿದೆ. ನೌಕರರ ವೇತನ ಮಾತ್ರ ಕಡಿಮೆ. ಕೋವಿಡ್ ಸಂದರ್ಭದಲ್ಲಿ ಪ್ರಾಣದ ಹಂಗು ತೊರೆದು ಕಾರ್ಯ ನಿರ್ವಹಿಸಿದ್ದು, 30ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಹಗಲಿರುಳು ಕೆಲಸ ಮಾಡುವ ನೌಕರರನ್ನು ಸರ್ಕಾರ ಕಡೆಗಣಿಸಬಾರದು’ ಎಂದರು.

ಮತದಾನ ಬಹಿಷ್ಕಾರಕ್ಕೆ ನಿರ್ಧಾರ

ಬೆಂಗಳೂರು: ಐದು ವರ್ಷದ ಹಿಂದೆ ಕೊಳವೆ ಮಾರ್ಗ ನಿರ್ಮಿಸಿದ್ದರೂ ನಿಯಮಿತವಾಗಿ ಕಾವೇರಿ ನೀರು ಪೂರೈಸದೇ ಇರುವುದನ್ನು ಖಂಡಿಸಿ ಮುಂಬರುವ ವಿಧಾನಸಭೆ ಚುನಾವ ಣೆಯನ್ನು ಬಹಿಷ್ಕರಿಸಲು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಂಪಿಗೆಹಳ್ಳಿಯ ಬಾಲಾಜಿ ಕೃಪಾ ಬಡಾವಣೆ ನಿವಾಸಿಗಳು ತೀರ್ಮಾನಿಸಿದ್ದಾರೆ.

‘ವಾರಕ್ಕೊಮ್ಮೆ ನೀರು ಬಿಡುವುದಾಗಿ ಭರವಸೆ ನೀಡಿದ್ದ ಜಲ ಮಂಡಳಿ ಅಧಿಕಾರಿಗಳು ಮಾತಿನಂತೆ ನಡೆದುಕೊಂಡಿಲ್ಲ. ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನೀರು ಸಿಗುವುದೆಂಬ ಆಸೆಯಿಂದ ಲಕ್ಷಾಂತರ ರೂಪಾಯಿ ತೆತ್ತು ಸಂಪರ್ಕ ಪಡೆದ ತಪ್ಪಿಗೆ ಮೂರ್ನಾಲ್ಕು ವರ್ಷಗಳಿಂದ ಸುಮ್ಮನೆ ಬಿಲ್ ಪಾವತಿಸಬೇಕಾಗಿದೆ’ ಎಂದು ಬಡಾವಣೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕಳೆದ ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಗೆ ಮುನ್ನ ಕ್ಷೇತ್ರದ ಶಾಸಕ ಕೃಷ್ಣ ಬೈರೇಗೌಡ ಅವರು ಬಡಾವಣೆಗೆ ಕಾವೇರಿ ನೀರು ಪೂರೈಕೆಗೆ ಚಾಲನೆ ನೀಡಿದರು. ಆ ನಂತರ, ಶಾಸಕರು ಮತ್ತು ಜಲಮಂಡಳಿ ಮುಖ್ಯ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಉಪಸ್ಥಿತಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಪ್ರತಿ ಶನಿವಾರ ನೀರು ಪೂರೈಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ, ನಾಲ್ಕು ವರ್ಷಗಳಲ್ಲಿ ಒಂದು ತಿಂಗಳು ಸಹ ನಾಲ್ಕೂ ವಾರ ನೀರು ಪೂರೈಸಿಲ್ಲ’ ಎಂದು ದೂರಿದ್ದಾರೆ.

‘ಕೆಲವು ಸಲ ತಿಂಗಳಿಗೊಮ್ಮೆ ನೀರು ಪೂರೈಸಿದ್ದೂ ಇದೆ. ಕೊಳವೆ ಒಡೆದಿದೆ, ಪಂಪಿಂಗ್ ಸ್ಟೇಶನ್‌ನಲ್ಲಿ ವಿದ್ಯುತ್ ಇಲ್ಲ ಎಂದು ಮುಂತಾದ ನೆಪ ಹೇಳುತ್ತಿದ್ದಾರೆ. ಬಡಾವಣೆಯಲ್ಲಿ 300ಕ್ಕಿಂತ ಹೆಚ್ಚು ಮನೆಗಳು ಸಂಪರ್ಕ ಪಡೆದರೆ ವಾರಕ್ಕೆ ಎರಡು ಸಲ ಸಾಕಷ್ಟು ಪ್ರಮಾಣದಲ್ಲಿ ನೀರು ನೀಡುವುದಾಗಿ ಅಧಿಕಾರಿಗಳು ತಿಳಿಸಿದರು. ಬಡಾವಣೆಯಲ್ಲಿನ 380 ಮನೆಗಳ ಪೈಕಿ 302 ಮನೆಗಳು ಅಗತ್ಯ ಶುಲ್ಕ ಪಾವತಿಸಿ ಸಂಪರ್ಕ ಪಡೆದಿವೆ. ಈಗ, ಉಳಿದ ಮನೆಗಳು ಅನಧಿಕೃತವಾಗಿವೆ. ಈ ಮನೆಗಳು ಸಂಪರ್ಕ ಪಡೆದರೆ ನೀರು ಪೂರೈಸುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಅನಧಿಕೃತ ಮನೆಗಳ ಸಂಪರ್ಕ ಕಡಿತಗೊಳಿಸಿ, ಅಧಿಕೃತ ಸಂಪರ್ಕ ಪಡೆದವರಿಗೆ ನಿಯಮಿತವಾಗಿ ನೀರು ಪೂರೈಸಿ ಎಂದು ಮನವಿ ಮಾಡಿದರೆ ಅದಕ್ಕೂ ಸ್ಪಂದಿಸುತ್ತಿಲ್ಲ’ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

11,12ಕ್ಕೆ ನಗರ ಜಿಲ್ಲಾ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 16ನೇ ಸಾಹಿತ್ಯ ಸಮ್ಮೇಳನವನ್ನು ಇದೇ 11 ಮತ್ತು 12ರಂದು ವಸಂತನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದೆ.

15ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2021ರ ಮಾರ್ಚ್ ತಿಂಗಳು ಹೆಬ್ಬಾಳದಲ್ಲಿ ನಡೆಸಲಾಗಿತ್ತು. ಈಗ 16ನೇ ಸಮ್ಮೇಳನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಸಮ್ಮೇಳನಾಧ್ಯಕ್ಷರಾಗಿ ಲೇಖಕಿ ಎಚ್.ಎಸ್. ಶ್ರೀಮತಿ ಆಯ್ಕೆಯಾಗಿದ್ದಾರೆ.

‘ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಉಳಿದರೆ, ಇಡೀ ರಾಜ್ಯದಲ್ಲಿ ಕನ್ನಡ ಉಳಿದೀತು ಎಂಬ ಆಶಯದೊಂದಿಗೆ ಸಮ್ಮೇಳನ ನಡೆಸಲಾಗುತ್ತಿದೆ. ಸಮ್ಮೇಳನವು ಧ್ವಜಾರೋಹಣದೊಂದಿಗೆ ಆರಂಭಗೊಂಡು, ಕನ್ನಡ ಜಾಗೃತಿ ಮೆರವಣಿಗೆ, ಉದ್ಘಾಟನಾ ಸಮಾರಂಭ, ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ಪುಸ್ತಕಗಳ ಲೋಕಾರ್ಪಣೆ, ಕವಿಗೋಷ್ಠಿ, ಸಮ್ಮೇಳನ ಅಧ್ಯಕ್ಷರೊಂದಿಗೆ ಸಂವಾದ, ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವ ಸನ್ಮಾನ, ಕನ್ನಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸಂಗೀತ ಹಾಗೂ ಸಾಂಸ್ಕೃತಿ ಕಾರ್ಯಕ್ರಮ ಸೇರಿ ಹಲವು ವೈಶಿಷ್ಟ್ಯತೆಗಳನ್ನು ಒಳಗೊಳ್ಳಲಿದೆ’ ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

28 ಕ್ಷೇತ್ರಗಳಲ್ಲಿ ಅತೀ ಹೆಚ್ಚು ಸ್ಥಾನ ಪಡೆಯಲು ಪಣ

ಗೆಲ್ಲಬೇಕು, ಗೆಲ್ಲಿಸಬೇಕು– ‘ಕೈ’ ಶಾಸಕರಿಗೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಒಟ್ಟು 28 ಕ್ಷೇತ್ರಗಳಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲಲೇಬೇಕೆಂಬ ಪಣತೊಟ್ಟಿರುವ ರಾಜ್ಯ ಕಾಂಗ್ರೆಸ್ ನಾಯಕರು, ನಿರಂತರವಾಗಿ ಗೆಲ್ಲುತ್ತಾ ಬಂದಿರುವ ಶಾಸಕರಿಗೆ ತಾವು ಗೆಲ್ಲುವ ಜೊತೆಗೆ ಇತರರನ್ನು ಗೆಲ್ಲಿಸಿಕೊಂಡು ಬರುವ ಗುರಿ ನೀಡಿದ್ದಾರೆ.

‘ಸರ್ವಜ್ಞ ನಗರ ಕ್ಷೇತ್ರದ ಕೆ.ಜೆ. ಜಾರ್ಜ್, ಚಾಮರಾಜಪೇಟೆಯ ಜಮೀರ್ ಅಹಮದ್, ಬಿಟಿಎಂ ಲೇಔಟ್ ಕ್ಷೇತ್ರದ ರಾಮಲಿಂಗಾರೆಡ್ಡಿ, ಶಾಂತಿನಗರದ ಎನ್.ಎ. ಹ್ಯಾರಿಸ್ ಈ ಬಾರಿಯೂ ನಿರಾಯಾಸವಾಗಿ ಗೆಲ್ಲುವ ಸಾಮರ್ಥ್ಯ ಉಳಿಸಿಕೊಂಡಿದ್ದಾರೆ. ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡುವ ಜೊತೆಗೆ, ಆತಂಕ ಎದುರಿಸುತ್ತಿರುವ ಶಾಸಕರ ಬೆನ್ನಿಗೆ ನಿಲ್ಲುವಂತೆ ಸಲಹೆ ನೀಡಲಾಗಿದೆ’ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದರು.

‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ಬಗ್ಗೆ ಚರ್ಚೆ ನಡೆಸಿದ್ದು, ಹೆಚ್ಚು ಸ್ಥಾನ ಗೆಲ್ಲಲೇಬೇಕೆಂಬ ಗುರಿ ನೀಡಿದ್ದಾರೆ.’

‘ಕ್ಷೇತ್ರ ಉಳಿಸಿಕೊಳ್ಳುವ ಜೊತೆಗೆ, ನಗರದಲ್ಲಿ ಇನ್ನಷ್ಟು ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲು ಸಹಕರಿಸಬೇಕು. ಈ ಬಾರಿ ಪಕ್ಷ ಅಧಿಕಾರಕ್ಕೆ ಬರುವ ಸಾಧ್ಯತೆ ಹೆಚ್ಚಿದೆ. ಈ ನಿಟ್ಟಿನಲ್ಲಿ ನಿಮ್ಮ ಜವಾಬ್ದಾರಿ ಹೆಚ್ಚಿದೆ. ಶಾಸಕರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿದವರ ಮೇಲೆ ಹೆಚ್ಚಿನ ಹೊಣೆಗಾರಿಕೆ ಇದ್ದು, ನಿಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳಬೇಕು ಎಂದು ಹಿರಿಯ ಶಾಸಕರಿಗೆ ಸೂಚಿಸಲಾಗಿದೆ’ ಎಂದೂ ಅವರು ಹೇಳಿದರು.

‘ದಿನೇಶ್ ಗುಂಡೂರಾವ್ (ಗಾಂಧಿನಗರ), ಎಂ. ಕೃಷ್ಣಪ್ಪ (ವಿಜಯನಗರ), ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ), ಸೌಮ್ಯಾ ರೆಡ್ಡಿ (ಜಯನಗರ), ಮಾಜಿ ಶಾಸಕ ಆರ್.ವಿ. ದೇವರಾಜ್ (ಚಿಕ್ಕಪೇಟೆ) ಅವರಿಗೆ ಈ ಬಾರಿ ತೀವ್ರ ಪೈಪೋಟಿ ಎದುರಾಗುವ ಸಾಧ್ಯತೆ ಇದೆ ಎಂದು ಪಕ್ಷದ ಆಂತರಿಕ ಸಮೀಕ್ಷೆಯಲ್ಲಿ ಗೊತ್ತಾಗಿದೆ. ಆದರೆ, ಈ ರೀತಿ ಪೈಪೋಟಿ ಎದುರಿಸುವವರು ಕ್ಷೇತ್ರ ಗೆಲ್ಲುವಲ್ಲಿ ಯಶಸ್ಸು ಕಾಣುತ್ತಾರೆ ಎಂಬ ವಿಶ್ವಾಸವಿದೆ. ಈಗಾಗಲೇ ಎಚ್ಚೆತ್ತುಕೊಂಡು ಹೆಚ್ಚಿನ ಮತಗಳ ಅಂತರದಿಂದ ಗೆಲುವಿಗೆ ಸಜ್ಜಾಗಬೇಕು’ ಎಂಬ ಸಲಹೆಯನ್ನೂ ನೀಡಲಾಗಿದೆ’ ಎಂದೂ ಅವರು ವಿವರಿಸಿದರು.

‘ಆಪರೇಷನ್ ಕಮಲ’ದಿಂದಾಗಿ ಬೆಂಗಳೂರಿನ ನಾಲ್ವರು ಶಾಸಕರು ‘ಕೈ’ ತ್ಯಜಿಸಿದ್ದರು. ಎಸ್.ಟಿ. ಸೋಮಶೇಖರ್, ಬೈರತಿ ಬಸವರಾಜು, ಮುನಿರತ್ನ ಬಿಜೆಪಿ ಪಾಳಯದಲ್ಲಿದ್ದಾರೆ.

ಮಾಜಿ ಸಚಿವ ರೋಷನ್ ಬೇಗ್ ಕೂಡಾ ಪಕ್ಷ ತ್ಯಜಿಸಿದ್ದು, ಜೆಡಿಎಸ್ ಕಡೆಗೆ ಮುಖ ಮಾಡುವ ಸಾಧ್ಯತೆ ಇದೆ. ಅವರೆಲ್ಲರೂ ಮತ್ತೆ ‘ಕೈ’ ಹಿಡಿಯುವ ಸಾಧ್ಯತೆ ಇಲ್ಲ. ಅವರು ಪ್ರತಿನಿಧಿಸುವ ಯಶವಂತಪುರ, ಕೆ.ಆರ್.ಪುರ ಮತ್ತು ಆರ್‌ಆರ್ ನಗರ ಕ್ಷೇತ್ರದಲ್ಲಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕಿದೆ. ಆರ್‌ಆರ್ ನಗರ ಕ್ಷೇತ್ರಕ್ಕೆ ಕುಸುಮಾ ಅವರಿಗೆ ಮತ್ತೆ ಟಿಕೆಟ್ ನೀಡುವ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆ ನಡೆದಿದೆ.

ಜಿ.ಎಲ್.ರಮೇಶ್ ಅವರಿಗೆ ‘ಸ್ವರಮೇಧಾ ಸಂಗೀತ ವಿಭೂಷಣ’ ಬಿರುದು ನೀಡಿ ಗೌರವಿಸಲಾಯಿತು. ಚಿನ್ಮಯ ರಾವ್, ನವೀನ್ ಸಜ್ಜು, ಪ್ರಶಾಂತ ಅಯ್ಯಂಗಾರ್ ಮತ್ತಿತರರು ಇದ್ದಾರೆ.

ಸಂಗೀತ ಸಾಧಕರಿಗೆ ‘ಸ್ವರಮೇಧಾ’ ಗೌರವ

ಬೆಂಗಳೂರು: ಸ್ವರಮೇಧಾ ಇಂಟರ್ ನ್ಯಾಷನಲ್ ಮ್ಯೂಸಿಕ್ ಅಕಾಡೆಮಿ ನಗರ ದಲ್ಲಿ ಹಮ್ಮಿಕೊಂಡ ಸ್ವರಮೇಧಾ ಸಂಗೀತೋತ್ಸವದಲ್ಲಿ ಸಂಗೀತ ಸಾಧಕರನ್ನು ಗೌರವಿಸಲಾಯಿತು. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಹಾಗೂ ಚಿಂತನೆಯ ಕಾರ್ಯಕ್ರಮ ನಡೆದವು.

ಮೃದಂಗ ವಿದ್ವಾಂಸ ಜಿ.ಎಲ್. ರಮೇಶ್ ಅವರಿಗೆ ‘ಸ್ವರಮೇಧಾ ಸಂಗೀತ ವಿಭೂಷಣ’, ಹಿನ್ನೆಲೆ ಗಾಯಕ ನವೀನ್ ಸಜ್ಜು ಅವರಿಗೆ ‘ಸ್ವರಮೇಧಾ ಸಂಗೀತಶ್ರೀ’ ಹಾಗೂ ವೀಣಾ ವಾದಕ ವಿದ್ವಾನ್ ಪ್ರಶಾಂತ ಅಯ್ಯಂಗಾರ್ ಅವರಿಗೆ ‘ಸ್ವರಮೇಧಾ ಸಂಗೀತರತ್ನ’ ಬಿರುದು ನೀಡಿ ಗೌರವಿಸಲಾಯಿತು.

ಸ್ವರಮೇಧಾ ಸಂಸ್ಥಾಪಕ ಚಿನ್ಮಯ ರಾವ್ ಅವರಿಂದ ಗುರುವಂದನೆ ಸ್ವೀಕರಿಸಿ ಮಾತನಾಡಿದ ವಿದ್ವಾನ್ ಶೃಂಗೇರಿ ಎಚ್.ಎಸ್ ನಾಗರಾಜ್, ‘ಭಾರತೀಯ ಸಂಗೀತ ಹಾಗೂ ಭಾರತೀಯ ಸನಾ ತನ ವಿದ್ಯೆಗಳ ಆಳ–ಅಗಲವನ್ನು ವಿಶ್ವದಾದ್ಯಂತ ಪ್ರತಿಷ್ಠಾಪಿಸಬೇಕಾಗಿದೆ’ ಎಂದರು. ಪ್ರಶಾಂತ ಅಯ್ಯಂಗಾರ್, ‘ಸಂಗೀತ ವಿದ್ಯೆ ಕೇವಲ ಸಂಪಾದನೆಗೆ ಸೀಮಿತವಾಗದೆ, ಅದು ಅನುಸಂಧಾನದ ಕಡೆಗೆ ಸಾಗುವಂತಾಗಬೇಕಿದೆ’ ಎಂದರು. ‘ಜೀವನ ವಿಕಾಸಕ್ಕೆ ಸ್ವರಮೇಧಾ ಸಂಗೀತ’ ಎಂಬ ವಿಚಾರ ಕುರಿತು ಚಿಂತಕ ರಾಘವೇಂದ್ರ ಗುರೂಜಿ ಉಪನ್ಯಾಸ ನೀಡಿದರು. ಜನಸೇವಾ ವಿದ್ಯಾಕೇಂದ್ರದ ಮುಖ್ಯಸ್ಥ ನಿರ್ಮಲ್ ಕುಮಾರ್, ನಟ ರಮೇಶ್ ಭಟ್ ಇದ್ದರು.





ನಿಧನ ವಾರ್ತೆ

ಅರುಳಪ್ಪ ಜೋಸೆಫ್

ಬೆಂಗಳೂರು: ಎಚ್‌ಎಎಲ್ ನಿವೃತ್ತ ಉದ್ಯೋಗಿ ಅರುಳಪ್ಪ ಜೋಸೆಫ್ (82) ಅವರು ಅನಾರೋಗ್ಯದಿಂದಾಗಿ ನಗರದ ಆಸ್ಪತ್ರೆಯೊಂದರಲ್ಲಿ ಮಂಗಳವಾರ (ಫೆ. 28) ನಿಧನರಾದರು.

ಸುಲ್ತಾನ್‌ಪಾಳ್ಯದಲ್ಲಿ ನೆಲೆಸಿದ್ದ ಅರುಳಪ್ಪ ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಹೋರಾಟಗಳಲ್ಲಿ ಅರುಳಪ್ಪ ಭಾಗವಹಿಸಿದ್ದರು.

ಸ್ವಂತ ಊರಾದ ಮೈಸೂರು ಬಳಿಯ ಪಾಲನಹಳ್ಳಿಯಲ್ಲಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರ ಕಚೇರಿ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಟೆಂಡರ್ ಪ್ರಕಟಣೆ ಸಂಖ್ಯೆ: 25/2022–23 ದಿನಾಂಕ : 27/02/2023

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ 2 ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಆಹ್ವಾನಿಸಲಾಗಿದೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 25/2022–23 ದಿನಾಂಕ: 27/02/2023 ರಲ್ಲಿನ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ವ್ಯಾಪ್ತಿಯ ಅಟಲ್ ಭೂಜಲ್ ಯೋಜನೆ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕ್ರಮವಾಗಿ ಐಟಂವಾರು ಇ- ಪ್ರಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ (Single Cover System) ಈ ಕೆಳಗೆ ನಮೂದಿಸಿರುವ ಕಾಮಗಾರಿಗೆ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿದ್ದು, ಲೋಕೋಪಯೋಗಿ ಇಲಾಖೆ ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗೆ ಇಲಾಖಾ ವೆಬ್‌ಸೈಟ್ http://eproc.karnataka.gov.in ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಗಳಿಗೆ ಈ ಕಚೇರಿ ದೂರವಾಣಿ ಸಂಖ್ಯೆ : 08156–295427ಗೆ ಕರೆ ಮಾಡಿ ಹಾಗೂ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ.

1	E- procurement ಮುಖಾಂತರ ಅರ್ಜಿಸಲ್ಲಿಸಲು ಹಾಗೂ ಷೆಡ್ಯೂಲ್ ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿಮಾಡಿ ಸಲ್ಲಿಸುವ ಕೊನೆಯ ದಿನಾಂಕ:	10/03/2023 ರಂದು 16.00 ಗಂಟೆಯ ವರೆಗೆ
2	ಟೆಂಡರ್ ತೆರೆಯುವ ದಿನಾಂಕ	15/03/2023 ರಂದು 11.00 ಗಂಟೆಯ ನಂತರ
3	ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ)	E- procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	"ಇ.ಎಂ.ಡಿ (ರೂ ಗಳಲ್ಲಿ) "	ಕಾಲಮಿತಿ ಮಳೆಗಾಲ ಸೇರಿ	ಗುತ್ತಿಗೆದಾರರ ಧರ್ಜೆ
1	2	3	4	5	6
ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮಾತ್ರ					
1	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಸಿದ್ದೇಪಲ್ಲಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	40.00	34000.00	3 ತಿಂಗಳು	1 ಮತ್ತು 2 ನೇ ಧರ್ಜೆ
2	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಮಣಿಗಾನಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	43000.00	3 ತಿಂಗಳು	1 ಮತ್ತು 2 ನೇ ಧರ್ಜೆ
3	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ವೈಜಕೂರು ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	30.00	25500.00	3 ತಿಂಗಳು	1 ಮತ್ತು 2 ನೇ ಧರ್ಜೆ
ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮಾತ್ರ					
1	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಗಾಜಲಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	43000.00	3 ತಿಂಗಳು	1 ಮತ್ತು 2 ನೇ ಧರ್ಜೆ
ಎಲ್ಲಾ ವರ್ಗದ ಗುತ್ತಿಗೆದಾರರಿಗೆ.					
1	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಚಿಕ್ಕಮುನಿಮಂಗಲ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	30.00	51000.00	3 ತಿಂಗಳು	1 ಮತ್ತು 2 ನೇ ಧರ್ಜೆ
2	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಬಿಲ್ಲಾಂಡ್ಲಹಳ್ಳಿ ಗ್ರಾಮದ ಓಬಳೇಶ್ವರ ದೇವಾಲಯದ ಬಳಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	85000.00	3 ತಿಂಗಳು	1 ಮತ್ತು 2 ನೇ ಧರ್ಜೆ
3	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಯನುಮಲಪಾಡಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	85000.00	3 ತಿಂಗಳು	1 ಮತ್ತು 2 ನೇ ಧರ್ಜೆ
4	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಅಟ್ಟೂರು ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	85500.00	3 ತಿಂಗಳು	1 ಮತ್ತು 2 ನೇ ಧರ್ಜೆ
5	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಕೃಷ್ಣರಾಜಪುರ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	30.00	50000.00	3 ತಿಂಗಳು	1 ಮತ್ತು 2 ನೇ ಧರ್ಜೆ
6	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಯಗುವಕೋಟೆ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	85500.00	3 ತಿಂಗಳು	1 ಮತ್ತು 2 ನೇ ಧರ್ಜೆ
7	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಬೋದನಮರಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	30.00	50000.00	3 ತಿಂಗಳು	1 ಮತ್ತು 2 ನೇ ಧರ್ಜೆ
8	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ತಿನಕಲ್ಲು ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	50.00	85000.00	3 ತಿಂಗಳು	1 ಮತ್ತು 2 ನೇ ಧರ್ಜೆ
9	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಮುಂಗಾನಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	40.00	68000.00	3 ತಿಂಗಳು	1 ಮತ್ತು 2 ನೇ ಧರ್ಜೆ

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಚಿಕ್ಕಬಳ್ಳಾಪುರ

ಹಣಕಾಸು ವ್ಯವಹಾರ: ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲು

ಬೇಕರಿ ಮೇಲೆ ಗ್ರಾಹಕ ದಾಳಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹಣಕಾಸು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬೇಕರಿ ಮಾಲೀಕ ಹಾಗೂ ಗ್ರಾಹಕನ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಕಾಶ್ ಎಂಬಾತ ಬೇಕರಿ ಮೇಲೆ ದಾಳಿ ಮಾಡಿ, ಗಾಜಿನ ಡಬ್ಬಿಗಳನ್ನು ಒಡೆದಿದ್ದಾನೆ. ಜೀವ ಬೆದರಿಕೆ ಹಾಕಿದ್ದಾನೆ' ಎಂದು ಬೇಕರಿ ಮಾಲೀಕ ರಘುನಾಥ್ ಶೆಟ್ಟಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿ ಪ್ರಕಾಶ್ ಅವರನ್ನು ಬಂಧಿಸಿದ್ದಾರೆ.

'ರಘುನಾಥ್ ಶೆಟ್ಟಿಗೆ ₹ 60 ಸಾವಿರ ಸಾಲ ಕೊಟ್ಟಿದ್ದೆ. ಅದರಲ್ಲಿ ₹ 40 ಸಾವಿರ ಮಾತ್ರ ವಾಪಸು ನೀಡಿದ್ದರು. ಉಳಿದ ಹಣ ಕೇಳಲು ಹೋದಾಗ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿ ಪ್ರಕಾಶ್ ಸಹ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ. ಸಾಲದ ಬಗ್ಗೆ ಸದ್ಯಕ್ಕೆ ಯಾವುದೇ ದಾಖಲೆ ಒದಗಿಸಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ.

ಆಗಿದ್ದೇನು ? 'ರಘುನಾಥ್ ಶೆಟ್ಟಿ ಅವರು ಮಾಳಗಾಳದಲ್ಲಿ ಬೇಕರಿ ಇಟ್ಟುಕೊಂಡಿದ್ದಾರೆ. ಪ್ರಕಾಶ್, ನಿತ್ಯವೂ ಬೇಕರಿಗೆ ಬಂದು ಹೋಗುತ್ತಿದ್ದರು. ಹೀಗಾಗಿ, ಇಬ್ಬರ ನಡುವೆ ಹಣಕಾಸು ವ್ಯವಹಾರವಿತ್ತು' ಎಂದು ಪೊಲೀಸರು ಹೇಳಿದರು.

'ಮಂಗಳವಾರ ಬೆಳಿಗ್ಗೆ ಬೇಕರಿಗೆ ಹೋಗಿದ್ದ ಪ್ರಕಾಶ್, ಸಾಲದ ವಿಚಾರವಾಗಿ ಮಾತನಾಡಿದ್ದರು. ಪೆಟ್ರೋಲ್ ಖರೀದಿಗಾದರೂ ಹಣ ನೀಡುವಂತೆ ಕೋರಿದ್ದರು. ತಮ್ಮ ಬಳಿ ಹಣವಿಲ್ಲವೆಂದು ಮಾಲೀಕರು ಹೇಳಿದ್ದರು. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಆಗಿತ್ತು. ಪ್ರಕಾಶ್ ರಾತ್ರಿಯೂ ಬೇಕರಿ ಬಳಿ ಹೋಗಿದ್ದರು. ಅವರನ್ನು ರಘುನಾಥ್ ಥಳಿಸಿದ್ದರು. ಸ್ಥಳೀಯರು ಜಗಳ ಬಿಡಿಸಿದ್ದರು' ಎಂದು ತಿಳಿಸಿದರು.

'ರಾತ್ರಿ ಸ್ಥಳದಿಂದ ತೆರಳಿದ್ದ ಪ್ರಕಾಶ್, ಬುಧವಾರ ಬೆಳಿಗ್ಗೆ ಪುನಃ ಬೇಕರಿ ಬಳಿ ಹೋಗಿದ್ದರು. ಮರದ ತುಂಡಿನಿಂದ ಬೇಕರಿಯ ಗಾಜಿನ ಡಬ್ಬಿ ಒಡೆದು ಹಾಕಿದ್ದರು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಇಬ್ಬರಿಂದಲೂ ಹೇಳಿಕೆ ಪಡೆದು, ಎರಡೂ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ. ಪ್ರಕಾಶ್ ಮೇಲೆ ನಡೆದ ಹಲ್ಲೆಯ ವೈದ್ಯಕೀಯ ವರದಿ ಸಹ ಬಂದಿದೆ' ಎಂದು ಪೊಲೀಸರು ಹೇಳಿದರು.

ಸರ ಕಿತ್ತೊಯ್ದಿದ್ದ ಆರೋಪಿ ಬಂಧನ

ಬೆಂಗಳೂರು: ವಿಳಾಸ ಕೇಳುವ ನೆಪದಲ್ಲಿ ಮಹಿಳೆಯೊಬ್ಬರ ಚಿನ್ನದ ಸರ ಕಿತ್ತೊಯ್ದಿದ್ದ ಆರೋಪಿ ಟಿ. ದರ್ಶನ್ (23) ಎಂಬುವವರನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಉಲ್ಲಾಳು ಮುಖ್ಯರಸ್ತೆಯ ದರ್ಶನ್, ಫೆ. 6ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಮಹಿಳೆ ನೀಡಿದ್ದ ದೂರಿನಡಿ ತನಿಖೆ ಕೈಗೊಂಡು ಈತನನ್ನು ಇತ್ತೀಚೆಗೆ ಬಂಧಿಸಲಾಗಿದೆ. ₹ 3 ಲಕ್ಷ ಮೌಲ್ಯದ ಚಿನ್ನದ ಗಟ್ಟಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ನಿವಾಸಿಯಾದ ಮಹಿಳೆ, ಬೆಳಿಗ್ಗೆ ಮನೆ ಎದುರು ಕಸಗುಡಿಸುತ್ತಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿ, ವಿಳಾಸ ಕೇಳುವ ನೆಪದಲ್ಲಿ ಮಾತನಾಡಿಸಿದ್ದ. ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ.

ಟೆಕಿ ವಾಟ್ಸ್‌ಆ್ಯಪ್ ಹ್ಯಾಕ್: ಹಣ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಾಫ್ಟ್‌ವೇರ್ ಎಂಜಿನಿಯರೊಬ್ಬರ ವಾಟ್ಸ್‌ಆ್ಯಪ್ ಹ್ಯಾಕ್ ಮಾಡಿ ಪರಿಚಯಸ್ಥರಿಗೆ ಸಂದೇಶ ಕಳುಹಿಸಿ ₹ 35 ಸಾವಿರ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಗಸಂದ್ರ ನಿವಾಸಿಯಾಗಿರುವ 26 ವರ್ಷದ ಯುವತಿ, ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ತಮಗಾದ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಯುವತಿ, ಇನ್‌ಸ್ಟಾಗ್ರಾಮ್‌ನಲ್ಲಿ ಖಾತೆ ಹೊಂದಿದ್ದಾರೆ. ಅಲ್ಲಿಯೇ ಅವರಿಗೆ ವ್ಯಕ್ತಿಯೊಬ್ಬರ ಪರಿಚಯವಾಗಿತ್ತು. ಸಂದೇಶ ಕಳಹಿಸಿದ್ದ ವ್ಯಕ್ತಿ, ಮೊಬೈಲ್ ಸಂಖ್ಯೆ ನೀಡುವಂತೆ ಕೋರಿದ್ದ. ಯುವತಿ, ಮೊಬೈಲ್ ಸಂಖ್ಯೆ ನೀಡಿದ್ದರು. ಇದಾದ ನಂತರವೇ ವಾಟ್ಸ್‌ಆ್ಯಪ್ ಹ್ಯಾಕ್ ಆಗಿರುವುದಾಗಿ ಯುವತಿ ದೂರಿದ್ದಾರೆ.'

'ಹ್ಯಾಕ್ ಮಾಡಿದ್ದ ಯುವತಿಯ ವಾಟ್ಸ್‌ಆ್ಯಪ್ ಸಂಖ್ಯೆಯಿಂದ, ಅವರ ಪರಿಚಿತರಿಗೆ ಆರೋಪಿ ಸಂದೇಶ ಕಳುಹಿಸಿದ್ದ. ಆರ್ಥಿಕ ತೊಂದರೆ ಹಾಗೂ ಆರೋಗ್ಯ ಸಮಸ್ಯೆ ಇರುವುದಾಗಿ ಹೇಳಿ ₹ 35 ಸಾವಿರ ವರ್ಗಾವಣೆ ಮಾಡಿಸಿಕೊಂಡಿದ್ದ. ಈ ಸಂಗತಿ ತಿಳಿಯುತ್ತಿದ್ದಂತೆ ಯುವತಿ, ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಅರಣ್ಯಕ್ಕೆ ಬೆಂಕಿ: ಸಿಬ್ಬಂದಿ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ನ್ಯಾಯಾಂಗ ಬಡಾವಣೆಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಬುಧವಾರ ಬೆಂಕಿ ಹೊತ್ತಿ ಉರಿದಿದ್ದು, ಅದನ್ನು ನಂದಿಸುವುದಕ್ಕಾಗಿ ಸ್ಥಳಕ್ಕೆ ಹೋಗಲು ಅಗ್ನಿಶಾಮಕ ಸಿಬ್ಬಂದಿ ಪರದಾಡುವಂತಾಯಿತು.

ರೈಲ್ವೆ ಪರ್ಯಾಯ ರಸ್ತೆಗೆ ಹೊಂದಿಕೊಂಡಿರುವ ಅರಣ್ಯ ಭೂಮಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದನ್ನು ನೋಡಿದ್ದ ಹೊಯ್ಸಳ ಸಿಬ್ಬಂದಿ, ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ಮುಖ್ಯರಸ್ತೆ ಮೂಲಕ ನ್ಯಾಯಾಂಗ ಬಡಾವಣೆಗೆ ಬಂದಿದ್ದ ಅಗ್ನಿಶಾಮಕ ವಾಹನ, ಕಿರಿದಾದ ರಸ್ತೆಯಿಂದಾಗಿ ಬೆಂಕಿ ಕಾಣಿಸಿಕೊಂಡ ಸ್ಥಳಕ್ಕೆ ಹೋಗಲು ಸಾಧ್ಯವಾಗಲಿಲ್ಲ.

ಬಂದ ದಾರಿಯಲ್ಲಿ ವಾಪಸು ಹೋದ ವಾಹನ, ಅಲ್ಲಾಳಸಂದ್ರದ ಮಾರ್ಗವಾಗಿ ಸುತ್ತುವರಿದು ನಾಲ್ಕನೇ ಅಡ್ಡರಸ್ತೆ ಮೂಲಕ ಅರಣ್ಯ ಪ್ರದೇಶಕ್ಕೆ ತೆರಳಿತು. ತಡವಾಗಿ ಸ್ಥಳಕ್ಕೆ ತಲುಪಿದ ಸಿಬ್ಬಂದಿ, ತ್ವರಿತವಾಗಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಶಿವಮೂರ್ತಿ ಶರಣರ ಅರ್ಜಿ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿರುವ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರಕ್ಕೆ (ಮಾ.2) ನಿಗದಿ ಮಾಡಲಾಗಿದೆ.

ಈ ಸಂಬಂಧ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ ಎಚ್. ಎಂ.ವಿಶ್ವನಾಥ್ ಮತ್ತು ಮಠದ ತಾತ್ಕಾಲಿಕ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 25316/2022ರ ಮುಂದುವರಿದ ವಿಚಾರಣೆ ಮಧ್ಯಾಹ್ನ 2.30ಕ್ಕೆ ಆರಂಭವಾಗಲಿದೆ.

'ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988ರ ಕಲಂ 8 (2)ರಡಿ ಶರಣರು ತಮ್ಮ ಅಧಿಕಾರ ಚಲಾಯಿಸಲು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನಿರ್ಬಂಧ ವಿಧಿಸಿರುವುದು ಕಾನೂನು ಬಾಹಿರ' ಎಂಬುದು ಅರ್ಜಿದಾರರ ಆಕ್ಷೇಪ.

ಚಿರತೆ ದಾಳಿ: ಬಾಲಕನಿಗೆ ಗಾಯ

ಚನ್ನಪಟ್ಟಣ: ತಾಲ್ಲೂಕಿನ ಚಿಕ್ಕಬೋರೇಗೌಡನದೊಡ್ಡಿ ಗ್ರಾಮದಲ್ಲಿ ಬುಧವಾರ ಸಂಜೆ ಚಿರತೆಯೊಂದು ಬಾಲಕನೊಬ್ಬನ ಮೇಲೆ ದಾಳಿ ಮಾಡಿದೆ.

ಚಿರತೆ ದಾಳಿಯಲ್ಲಿ ಗ್ರಾಮದ ಗೌತಮ್ (13) ಗಾಯಗೊಂಡಿದ್ದು, ಕುತ್ತಿಗೆ ಹಾಗೂ ದೇಹದ ಇತರ ಭಾಗಗಳಿಗೆ ಗಾಯಗಳಾಗಿವೆ. ಮದ್ದೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ.

ಪಿಯು ಡಿಡಿ ಅಮಾನತು

ತುಮಕೂರು: ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಗಂಗಾಧರ್ ಅವರನ್ನು ಅಮಾನತು ಮಾಡಿ ಶಾಲಾ ಶಿಕ್ಷಣ ಇಲಾಖೆ ಆದೇಶಿಸಿದೆ.

ಜಿಲ್ಲೆಯಲ್ಲಿ ಪ್ರಥಮ ಪಿಯುಸಿ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ. ನಾಲ್ಕು ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು. ಭೌತವಿಜ್ಞಾನ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದರೂ, ಅದೇ ಪ್ರಶ್ನೆ ಪತ್ರಿಕೆಯನ್ನು ನೀಡಿ ಪರೀಕ್ಷೆ ನಡೆಸಲಾಗಿತ್ತು.

ಪಿಯು ಡಿಡಿಯಾಗಿ (ಪ್ರಭಾರ) ಬಸವಲಿಂಗಪ್ಪ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೂಡಲಪಾಳ್ಯ ವಾರ್ಡ್‌ನ ಪಂಚಶೀಲನಗರ ಬಿಡಿಎ ಅಪಾರ್ಟ್‌ಮೆಂಟ್ ಬಳಿ ನೂತನವಾಗಿ ನಿರ್ಮಿಸಿರುವ ಪ್ರಸನ್ನ ವಿದ್ಯಾಗಣಪತಿ ದೇವಸ್ಥಾನ, ಬಿಡಿಎ ಅಪಾರ್ಟ್‌ಮೆಂಟ್ ಉದ್ಯಾನವನ ಹಾಗೂ ಜಗಜ್ಯೋತಿ ನಗರದಲ್ಲಿ ನೂತನವಾಗಿ ನಿರ್ಮಿಸಲಾದ ಶನೇಶ್ವರ ಸ್ವಾಮಿ ದೇವಸ್ಥಾನವನ್ನು ವಸತಿ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು.

ಜೋಡಿ ಕೊಲೆ ಪ್ರಕರಣ: ಮತ್ತಿಬ್ಬರ ಬಂಧನ

ದೊಡ್ಡಬಳ್ಳಾಪುರ: ದೊಡ್ಡಬೆಳವಂಗಲದಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿ ವೇಳೆ ನಡೆದ ಜೋಡಿ ಕೊಲೆ ಪ್ರಕರಣದ ಐದನೇ ಆರೋಪಿ ಹುಲಿಕುಂಟೆ ಗ್ರಾಮದ ದೀಪು ಮತ್ತು ಭರತ್ ಎಂಬುವವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಇದರೊಂದಿಗೆ ಜೋಡಿಕೊಲೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ. ಪ್ರಕರಣದ ಆರೋಪಿಗಳೊಂದಿಗೆ ಸಹಕರಿಸಿದ್ದ ಹಾಗೂ ನೇರವಾಗಿ ಭಾಗಿಯಾಗಿರುವ ಇನ್ನೂ 9 ಜನ ಆರೋಪಿಗಳನ್ನು ಬಂಧಿಸಬೇಕಿದೆ. ಬಂಧಿತ ಆರೋಪಿ ಭರತ್ ಹೆಸರು ಸಹ ಎಫ್‌ಐಆರ್‌ನಲ್ಲಿ ಇರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಕೊಲೆ ಪ್ರಕರಣದ ಪ್ರಮುಖ ಆರೋಪಿ ಹುಲಿಕುಂಟೆ ವಿನಯ್ ಮತ್ತು ತ್ರಿಮೂರ್ತಿ ಎಂಬುವವರ ಕಾಲಿಗೆ ಗುಂಡು ಹೊಡೆದು ಪೊಲೀಸರು ಬಂಧಿಸಿದ್ದರು. ಮತ್ತೊಬ್ಬ ಆರೋಪಿ ಮತ್ತು ವಿನಯ್ ಸಹೋದರ ಅನಿಲ್ ಎಂಬಾತ ನ್ಯಾಯಾಲಯಕ್ಕೆ ಶರಣಾಗಿದ್ದ.

ಬೇಕು–ಬೇಡಗಳ ನಡುವೆ ಸ್ಯಾಂಕಿ ರಸ್ತೆ ವಿಸ್ತರಣೆ, ಮೇಲ್ಸೇತುವೆ • ಪಟ್ಟು ಬಿಡದ ಬಿಬಿಎಂಪಿ ಅಧಿಕಾರಿಗಳು • ಅವಕಾಶ ನೀಡಲೊಲ್ಲದ ಸ್ಥಳೀಯ ನಿವಾಸಿಗಳು

ಸ್ಯಾಂಕಿಗೆ ಬೇಕೆ 'ಮೇಲ್ಸೇತುವೆ' ಕುಣಿಕೆ?

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಂಚಾರ ದಟ್ಟಣೆ ನಿವಾರಣೆಗೆ ಮೇಲ್ಸೇತುವೆ ನಿರ್ಮಾಣ ಮಾಡಬೇಕು, ಇದಕ್ಕಾಗಿ ಕೆರೆಯ ಏರಿಯನ್ನೂ ವಿಸ್ತರಿಸಲಾಗುತ್ತದೆ ಎಂದು ಬಿಬಿಎಂಪಿ ಸ್ಯಾಂಕಿ ರಸ್ತೆಯಲ್ಲಿ ಕಾಮಗಾರಿಗೆ ಮುಂದಾಗಿದೆ. ಮೇಲ್ಸೇತುವೆ ನಿರ್ಮಾಣದಿಂದ ಸುಗಮ ಸಂಚಾರ ಸಾಧ್ಯವಾಗುವುದಿಲ್ಲ, ಬದಲಿಗೆ ಇನ್ನಷ್ಟು ಹೆಚ್ಚಾಗುತ್ತದೆ ಎಂದು ಸ್ಥಳೀಯ ನಿವಾಸಿಗಳು ಉದಾಹರಣೆ ಸಹಿತ ವಿವರಿಸುತ್ತಿದ್ದಾರೆ. ಆದರೂ ನಾಗರಿಕರ ಸೇವೆಗಳನ್ನು ನೀಡಬೇಕಾದ ಬಿಬಿಎಂಪಿ ಕೇಳುತ್ತಿಲ್ಲ...

ನಗರದ ಪ್ರತಿಷ್ಠಿತ ಸ್ಯಾಂಕಿ ಕೆರೆ ಏರಿ ಮೇಲಿನ ರಸ್ತೆಯ ವಿಸ್ತರಣೆ ಹಾಗೂ ಆ ಕಾಮಗಾರಿಗೆ ಹೆಚ್ಚುವರಿಯಾಗಿ ಮೇಲ್ಸೇತುವೆ ನಿರ್ಮಾಣ ತೀವ್ರ ವಿವಾದಕ್ಕೆ ಗುರಿಯಾಗಿದೆ. ಸ್ಥಳೀಯ ನಿವಾಸಿಗಳು 'ಸ್ಯಾಂಕಿ ಕೆರೆ ತಂಡ'ವಾಗಿ ಈ ಮೇಲ್ಸೇತುವೆ, ರಸ್ತೆ ವಿಸ್ತರಣೆ ಬೇಡ ಎನ್ನುತ್ತಿದ್ದಾರೆ. ಪ್ರತಿಭಟನೆ, ರ‍್ಯಾಲಿ, ಕಪ್ಪುಬಟ್ಟೆ ಪ್ರದರ್ಶನವನ್ನು ನಿತ್ಯವೂ ಮಾಡುತ್ತಿದ್ದಾರೆ. ಆದರೆ, ಬಿಬಿಎಂಪಿ ಅಧಿಕಾರಿಗಳು ತಮ್ಮ ಪಟ್ಟು ಬಿಡದೆ ಮೇಲ್ಸೇತುವೆಯನ್ನು ಮಾಡಿಯೇ ತೀರುತ್ತೇವೆ ಎನ್ನುತ್ತಿದ್ದಾರೆ. ನಾಗರಿಕರ ಹಿತರಕ್ಷಣೆ ಕಾಪಾಡಬೇಕಾದ, ಅವರ ಬೇಡಿಕೆ, ಆಗ್ರಹಗಳನ್ನು ಪರಿಶೀಲಿಸುವ ಸೌಜನ್ಯವನ್ನೂ ಪಾಲಿಕೆ ಮರೆಯುತ್ತಿರುವ ಹಿಂದಿನ ಉದ್ದೇಶವೇನು ಎಂಬುದು ಸ್ಥಳೀಯರ ಪ್ರಶ್ನೆ.

ಸ್ಯಾಂಕಿ ರಸ್ತೆ ಮೇಲ್ಸೇತುವೆ ನಿರ್ಮಾಣ ಮಾಡಿದರೆ ಪಾರಂಪರಿಕ 50ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗುತ್ತದೆ. ಇದರಿಂದ ಪಾರಂಪರಿಕ ಮರಗಳು ಬುಡಮೇಲಾಗುತ್ತವೆ. ಮೇಲ್ಸೇತುವೆ ನಿರ್ಮಾಣದಿಂದ ಸಂಚಾರ ದಟ್ಟಣೆ ನಿವಾರಣೆ ಆಗುವುದಿಲ್ಲ. ಹೀಗಾಗಿ ಮೇಲ್ಸೇತುವೆ ಬೇಡ' ಎಂಬ ಆಗ್ರಹದ ಝುಟ್ಕಾ.ಒಆರ್‌ಜಿ ಸಂಸ್ಥೆ ಆಯೋಜಿಸಿದ್ದ ಸಹಿ ಆಂದೋಲನಕ್ಕೆ 25 ಸಾವಿರಕ್ಕೂ ಹೆಚ್ಚು ಮಂದಿ ಡಿಜಿಟಲ್ ಸಹಿ ಮಾಡಿ ಬೆಂಬಲಿಸಿದ್ದಾರೆ. ಆದರೂ ಬಿಬಿಎಂಪಿ ಒಂದಷ್ಟು ಜನ ಮೇಲ್ಸೇತುವೆ ಬಯಸುತ್ತಿದ್ದಾರೆ ಎನ್ನುತ್ತಿದೆ. ಬೆಂಬಲಿಸುವವರು ಯಾರು ಎಂಬುದನ್ನು ಬಹಿರಂಗಪಡಿಸಿಲ್ಲ.

ಮೇಲ್ಸೇತುವೆಯಿಂದ ಆರು ಕಡೆ 'ಬಾಟಲ್‌ನೆಕ್'!

ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆಯನ್ನು ನಿರ್ಮಿಸುವುದರಿಂದ ಆರು ಸ್ಥಳಗಳಲ್ಲಿ 'ಬಾಟಲ್‌ನೆಕ್' ದಟ್ಟಣೆ (ನಕ್ಷೆಯಲ್ಲಿ ಇರುವಂತೆ) ಉಂಟಾಗುತ್ತದೆ. ಇದಕ್ಕೆ ಹೆಚ್ಚುವರಿಯಾಗಿ, ಉದ್ದೇಶಿತ ಮೇಲ್ಸೇತುವೆ ಕೆಳಗಿನ ವೈಯಾಲಿಕಾವಲ್‌ನಿಂದ ಸದಾಶಿವನಗರ 13ನೇ ರಸ್ತೆ ಜಂಕ್ಷನ್‌ನಲ್ಲಿ ನಾಲ್ಕು ಇಳಿಜಾರುಗಳು ಬರುವುದರಿಂದ ಇಲ್ಲಿ ಇನ್ನಷ್ಟು ಸಂಚಾರ ದಟ್ಟಣೆ ಉಂಟಾಗಲಿದೆ.

'ಸ್ಯಾಂಕಿ ಕೆರೆ ತಂಡ' ಹೇಳುವುದೇನು?

ಸ್ಯಾಂಕಿ ಕೆರೆ ತಂಡ
CITIZENS FOR SANKEY

ಮೇಲ್ಸೇತುವೆ ನಿರ್ಮಾಣ ಮಾಡಿದರೆ ಮೊದಲ ದಿನದಿಂದಲೇ ದಟ್ಟಣೆ ಹೆಚ್ಚಾಗುತ್ತದೆ. ಸ್ಯಾಂಕಿ ಕೆರೆಯ ವಿಸ್ತೀರ್ಣವೂ ಕಡಿಮೆಯಾಗಿ, ಪ್ರವಾಹದ ಆತಂಕ ಎದುರಾಗುತ್ತದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಾಪಮಾನ, ಮಾಲಿನ್ಯ ಹೆಚ್ಚಾಗುತ್ತದೆ. ದಟ್ಟಣೆಯಿಂದ ಸದಾಶಿವನಗರದ ವಸತಿ ಪ್ರದೇಶಗಳ ರಸ್ತೆ ಹಾಗೂ ಪೂರ್ಣಪ್ರಜ್ಞ ಶಾಲೆ, ಮೈದಾನದ ಸುತ್ತಮುತ್ತ ವಾಹನಗಳ ಸಂಚಾರ ಅಧಿಕವಾಗುತ್ತದೆ. ಪಾದಚಾರಿ ಮಾರ್ಗ ಕಡಿತವಾಗುತ್ತದೆ.

ಸ್ಯಾಂಕಿ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ನಿರ್ಮಾಣ ಯೋಜನೆಯನ್ನು ಕೈಬಿಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಮುಖೇನ ಮನವಿ ಮಾಡಿಕೊಳ್ಳಲಾಗಿದೆ. ಈ ಮೇಲ್ಸೇತುವೆಯಿಂದ ಉಂಟಾಗುವ ಸಮಸ್ಯೆಗಳನ್ನು ಡಲ್ಟ್ ಹಾಗೂ ಬಿಎಂಎಲ್‌ಟಿಎಗೆ ಸಲ್ಲಿಸಲಾಗಿದೆ.

ಪರಿಸರದ ಮೇಲಾಗುವ ದುಷ್ಪರಿಣಾಮ...

ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸಿದರೆ 58 ಮರಗಳ ಬದಲು 85 ಮರಗಳನ್ನು ಕಡಿಯಬೇಕಾಗುತ್ತದೆ. ಅಲ್ಲದೆ 400ಕ್ಕೂ ಹೆಚ್ಚು ಗಿಡ–ಮರಗಳಿಗೆ ಹಾನಿಯಾಗುತ್ತದೆ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಪರಿಸರದ ಮೇಲಿನ ಪರಿಣಾಮ' ವರದಿ ತಿಳಿಸಿದೆ. ಮೇಲ್ಸೇತುವೆ ಮಾಡುವ ಪ್ರದೇಶದಲ್ಲಿ ಪಾರಂಪರಿಕವಾದ ಹಾಗೂ ಅಸಾಮಾನ್ಯವಾದ 85 ಮರಗಳನ್ನು ಕಡಿಯಬೇಕಾಗುತ್ತದೆ. ಇದರಲ್ಲಿ 34 ಪ್ರಭೇದದ ಮರಗಳಿವೆ. ಸ್ಯಾಂಕಿ ಕೆರೆಯ ಏರಿ ಸೇರಿದಂತೆ ಈ ಭಾಗದಲ್ಲಿ ಬೆಳೆದು ನಿಂತಿರುವ ಸುಮಾರು 400 ಗಿಡಗಳಿಗೆ ಮೇಲ್ಸೇತುವೆ ನಿರ್ಮಾಣದಿಂದ ಪರೋಕ್ಷವಾಗಿ ಹಾನಿಯಾಗಲಿದೆ. ಏರಿ ಅಗೆತದಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಪ್ರೊ. ಹರಿಣಿ ನಾಗೇಂದ್ರ, ಪ್ರೊ. ಸೀಮಾ ಮುಂಡೋಲಿ ಹಾಗೂ ವೃಕ್ಷ ಫೌಂಡೇಷನ್‌ನ ವಿಜಯ್ ನಿಶಾಂತ್ ಅವರು ನೀಡಿರುವ ವರದಿಯಲ್ಲಿ ವಿವರಿಸಿದ್ದಾರೆ.

ಈ ವರದಿಯಂತೆ, ಪರಿಸರದ ಮೇಲೆ ಪ್ರಮುಖವಾಗಿ ಐದು ಅಂಶಗಳಲ್ಲಿ ದುಷ್ಪರಿಣಾಮವಾಗಲಿದೆ. ಹಸಿರು ಹೊದಿಕೆ ಕಡಿಮೆಯಾಗಿ, ಇಂಗಾಲದ ಪ್ರಮಾಣ ಹೆಚ್ಚಾಗುತ್ತದೆ. ವಾಯುಮಾಲಿನ್ಯ ಹೆಚ್ಚಾಗುತ್ತದೆ. ವಾತಾವರಣದಲ್ಲಿ ಅನಿರೀಕ್ಷಿತ ದುಷ್ಪರಿಣಾಮ ಹೆಚ್ಚಾಗುತ್ತದೆ. ನಗರ ಜೀವವೈವಿಧ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತದೆ. ಸ್ಯಾಂಕಿ ಕೆರೆಯಲ್ಲಿನ ಜೀವವೈವಿಧ್ಯಕ್ಕೆ ದಕ್ಕೆಯಾಗುತ್ತದೆ.

ಪರ್ಯಾಯ ಪರಿಹಾರ...

ಐಐಎಸ್‌ಸಿಯ ಟ್ರಾಫಿಕ್ ಸಿಸ್ಟಮ್ಸ್ ಎಂಜಿನಿಯರಿಂಗ್ ವಿಭಾಗದ ಡಾ. ಆಶಿಸ್ ವರ್ಮಾ ಅವರ ಪ್ರಕಾರ, 'ಟ್ರಾಫಿಕ್ ಸಿಗ್ನಲ್ ಟೈಮಿಂಗ್ ಆಪ್ಟಿಮೈಸೇಷನ್'ನಿಂದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಬಹುದು. ಇದರಿಂದ ಮೇಲ್ಸೇತುವೆಯ ಕೋಟ್ಯಂತರ ರೂಪಾಯಿ ವೆಚ್ಚವನ್ನೂ ಉಳಿಸಬಹುದಾಗಿದೆ'.



ಪಾಲಿಕೆ ಅಧಿಕಾರಿಗಳು ಹೇಳುವುದೇನು?

ವಾಹನ ದಟ್ಟಣೆ ನಿವಾರಣೆಗೆ ಸ್ಯಾಂಕಿ ರಸ್ತೆ ವಿಸ್ತರಣೆ ಜೊತೆಗೆ ಮೇಲ್ಸೇತುವೆ ನಿರ್ಮಿಸುವುದು ಅನಿವಾರ್ಯ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಸ್ಯಾಂಕಿ ರಸ್ತೆ ವಿಸ್ತರಣೆ ಬಗ್ಗೆ ನಾವು ನ್ಯಾಯಾಲಯದಲ್ಲೇ ಸ್ಪಷ್ಟಪಡಿಸಿದ್ದೇವೆ. ಇದೀಗ ಮೇಲ್ಸೇತುವೆ ಹಾಗೂ ಅಂಡರ್ ಪಾಸ್ ನಿರ್ಮಿಸಲು ತಾಂತ್ರಿಕವಾಗಿ ಯೋಜನೆ ಮಾಡಿದ್ದೇವೆ. ಇದು ಅತ್ಯಗತ್ಯವಾಗಿ ಬೇಕಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ರಸ್ತೆ ವಿಸ್ತರಣೆ ಮಾತ್ರ ಮಾಡಿದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಹೀಗಾಗಿ ತಾಂತ್ರಿಕವಾಗಿ ನಾವು ಮೇಲ್ಸೇತುವೆ, ಅಂಡರ್‌ಪಾಸ್ ನಿರ್ಮಾಣಕ್ಕೆ ಬದ್ಧವಾಗಿದ್ದೇವೆ. ಹಲವರು ಮೇಲ್ಸೇತುವೆ ಮಾಡಿ ಎನ್ನುತ್ತಿದ್ದಾರೆ. ಕೆಲವರು ಬೇಡ ಎನ್ನುತ್ತಿದ್ದಾರೆ. ತಾಂತ್ರಿಕವಾಗಿ ನಾವು ಮುಂದಡಿ ಇಟ್ಟಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಬೇರೆ ಬೇರೆ ಅಭಿಪ್ರಾಯ ಇದ್ದೇ ಇರುತ್ತದೆ. ಬೆಂಗಳೂರು ಮೆಟ್ರೊಪಾಲಿಟನ್ ಭೂಸಾರಿಗೆ ಪ್ರಾಧಿಕಾರದವರಿಗೂ (ಬಿಎಂಎಲ್‌ಟಿಎ) ಈ ಮೇಲ್ಸೇತುವೆ ಬಗ್ಗೆ ಮಾಹಿತಿ ನೀಡಲಾಗಿದೆ' ಎಂದು ಹಲವು ಸಂದರ್ಭದಲ್ಲಿ ಮೇಲ್ಸೇತುವೆ ನಿರ್ಮಾಣವನ್ನು ಸಮರ್ಥಿಸಿಕೊಂಡಿದ್ದಾರೆ.

ಇನ್ನು ಸ್ಯಾಂಕಿ ರಸ್ತೆ ಮೇಲ್ಸೇತುವೆಯ ರುವಾರಿ, ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್, 'ಸರ್ಕಾರದಿಂದ ಅನುಮತಿ ಪಡೆದು ಆರಂಭಿಸಲಾಗಿದೆ. ದೂರದೃಷ್ಟಿಯಿಂದ ಈ ಮೇಲ್ಸೇತುವೆ ನಿರ್ಮಿಸಲಾಗುತ್ತಿದ್ದು, ವಾಹನ ದಟ್ಟಣೆ ಕಡಿಮೆಯಾಗಲಿದೆ. ಕಾವೇರಿ ಜಂಕ್ಷನ್‌ನಲ್ಲಿ ದಟ್ಟಣೆ ಆಗುತ್ತದೆ ಎಂದರೆ ಅಲ್ಲೊಂದು ಮೇಲ್ಸೇತುವೆ ಕಟ್ಟೋಣ' ಎಂದು ಸಾರ್ವಜನಿಕ ಸಭೆಯಲ್ಲೇ ಹೇಳಿದ್ದಾರೆ.

ಬಿಬಿಎಂಪಿಯ ಡಿಪಿಆರ್‌ನಲ್ಲಿ ಹೀಗಿದೆ...

ಸ್ಯಾಂಕಿ ಕೆರೆಯ ಮೇಲಿನ ರಸ್ತೆ ವಿಸ್ತರಣೆ ಜೊತೆಗೆ, ಭಾಷ್ಯಂ ವೃತ್ತದ ಮೂಲಕ ಗುಟ್ಟಹಳ್ಳಿ ಮುಖ್ಯರಸ್ತೆ ಮತ್ತು ಸ್ಯಾಂಕಿ ರಸ್ತೆ ನಡುವೆ 995 ಮೀಟರ್ ಮೇಲ್ಸೇತುವೆ ನಿರ್ಮಾಣದಿಂದ ಜಂಕ್ಷನ್‌ಗಳಲ್ಲಿನ ವಾಹನ ದಟ್ಟಣೆ ನಿವಾರಣೆಯಾಗಿ, ಪ್ರಯಾಣದ ಅವಧಿ ಕಡಿಮೆಯಾಗುತ್ತದೆ ಎಂದು ಬಿಬಿಎಂಪಿ ಸಿದ್ಧಪಡಿಸಿರುವ ವಿಸ್ತೃತ ಯೋಜನಾ ವರದಿಯಲ್ಲಿ ತಿಳಿಸಲಾಗಿದೆ. ಜಂಕ್ಷನ್‌ಗಳಲ್ಲಿ ಆಗುತ್ತಿರುವ ವಿಳಂಬ ಹಾಗೂ ಸಂಚಾರ ಸ್ಥಗಿತದಿಂದಾಗುವ ವೆಚ್ಚವನ್ನೂ ಕಡಿಮೆ ಮಾಡಬಹುದು. ಜಂಕ್ಷನ್‌ಗಳಲ್ಲಿ ಸುರಕ್ಷಿತ ಹಾಗೂ ಸುಗಮ ಸಂಚಾರ ಸಾಧ್ಯವಾಗುತ್ತದೆ. ಅಪಘಾತ ಮತ್ತು ಸಣ್ಣಪುಟ್ಟ ಘರ್ಷಣೆಗಳು ಕಡಿಮೆಯಾಗುತ್ತವೆ ಎಂದು ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಬೊಮ್ಮಾಯಿ ಅಂಕಲ್' ಮೇಲ್ಸೇತುವೆ ಬೇಡ...

ಮಲ್ಲೇಶ್ವರ, ವೈಯಾಲಿಕಾವಲ್ ಮತ್ತು ಸದಾಶಿವನಗರದಲ್ಲಿರುವ ಸುಮಾರು 2 ಸಾವಿರ ವಿದ್ಯಾರ್ಥಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು, 'ಬೊಮ್ಮಾಯಿ ಅಂಕಲ್... ಮೇಲ್ಸೇತುವೆ ನಿರ್ಮಿಸಬೇಡಿ. ನಮಗೆ ಆಟವಾಡಲು ಸ್ಥಳ ಇಲ್ಲವಾಗುತ್ತದೆ. ದಟ್ಟಣೆ, ಮಾಲಿನ್ಯ ಹೆಚ್ಚಾಗುತ್ತದೆ' ಎಂದಿದ್ದಾರೆ.

ಸ್ಥಳೀಯರ ಮಾತೇನು?

ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತದೆ. ಬಿಎಂಎಲ್‌ಟಿಎ ಈ ಯೋಜನೆಯನ್ನು ಪರಿಶೀಲಿಸಿಲ್ಲ. ಅಲ್ಲದೆ, ಕೆರೆಯ 30 ಮೀಟರ್ ಬಫರ್ ಝೋನ್‌ನಲ್ಲಿ ಮೇಲ್ಸೇತುವೆ ನಿರ್ಮಾಣ ಮಾಡಿದರೆ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಆದೇಶವನ್ನು ಉಲ್ಲಂಘಿಸಿದಂತಾಗುತ್ತದೆ. ಈ ಯೋಜನೆಯ ಬಗ್ಗೆ ವಿಸ್ತೃತವಾಗಿ ನಾಗರಿಕರೊಂದಿಗೆ ಚರ್ಚೆ ನಡೆಸಿಲ್ಲ. ಸ್ಯಾಂಕಿ ಕೆರೆಯ ಏರಿ ಇದರಿಂದ ದುರ್ಬಲವಾಗುವುದು ಅತ್ಯಂತ ಆತಂಕದ ವಿಷಯ. ಈ ಮೇಲ್ಸೇತುವೆ ನಿರ್ಮಾಣದ ಬದಲು ಪರ್ಯಾಯ ಮಾರ್ಗಗಳ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಪಾರಂಪರಿಕ ಮರಗಳು ನಷ್ಟವಾಗುತ್ತವೆ. ಹಲವು ಸ್ತರಗಳಲ್ಲಿ ವಾಹನ ಸಂಚಾರ ಹೆಚ್ಚಾಗುವ ಜೊತೆಗೆ ದಟ್ಟಣೆಯೂ ಅಧಿಕವಾಗಿ ವೃದ್ಧರು, ವಿದ್ಯಾರ್ಥಿಗಳು ಸೇರಿದಂತೆ ಪಾದಚಾರಿಗಳಿಗೆ ಸಂಕಷ್ಟ ಹೆಚ್ಚಾಗುತ್ತದೆ ಎಂಬುದು ಮಲ್ಲೇಶ್ವರ, ಸದಾಶಿವನಗರ, ವೈಯಾಲಿಕಾವಲ್ ನಿವಾಸಿಗಳ ಅಭಿಪ್ರಾಯ.

ಯೋಜನಾಬದ್ಧ ನಗರ ನಮ್ಮ ಹಕ್ಕು

ಬಿಬಿಎಂಪಿ ಮತ್ತು ಸರ್ಕಾರ ಸ್ಯಾಂಕಿ ರಸ್ತೆ ಮೇಲ್ಸೇತುವೆ ಯೋಜನೆಯಲ್ಲಿ ಪ್ರಾಥಮಿಕ ಪ್ರಕ್ರಿಯೆ ಅನುಸರಿಸಿಲ್ಲ. ಜನಪ್ರತಿನಿಧಿಗಳು ದೀರ್ಘಕಾಲದ ಪರಿಹಾರಗಳನ್ನು ಇಲ್ಲಿನ ದಟ್ಟಣೆ ನಿವಾರಣೆಗೆ ನೀಡಬೇಕಿತ್ತು. ಮರಗಳು, ಕೆರೆಗಳು ನಮ್ಮ ಪರಂಪರೆ. ನಾವು ಇವುಗಳನ್ನು ಇಂತಹ ಅನಗತ್ಯ ಯೋಜನೆಗಳಿಗಾಗಿ ಕಳೆದುಕೊಳ್ಳುತ್ತಿದ್ದೇವೆ. ಇನ್ನು ಮುಂದೆ ನಾಗರಿಕರು ಇಂತಹವುಗಳ ಅಗತ್ಯವಿಲ್ಲ ಎಂದು ಹೇಳಬೇಕಿದೆ. ಯೋಜನಾಬದ್ಧ ನಗರ ನಮ್ಮ ಹಕ್ಕಾಗಿದ್ದು, ಅದನ್ನು ಸಾಧಿಸಿಕೊಳ್ಳಬೇಕಿದೆ.

ಕಿಮ್ಸುಕಾ ಅಯ್ಯರ್, ಸಿಟಿಜನ್ಸ್ ಫಾರ್ ಸ್ಯಾಂಕಿ

ಪರಂಪರೆ, ಪರಿಸರ ಉಳಿಯಬೇಕು



ಸ್ಯಾಂಕಿ ರಸ್ತೆಯ ವಿಸ್ತರಣೆ ಹಾಗೂ ಮೇಲ್ಸೇತುವೆಯನ್ನು ನಾನು ಸ್ಥಳೀಯ ನಿವಾಸಿಯಾಗಿ ವಿರೋಧಿಸುತ್ತೇನೆ. ಈ ಯೋಜನೆ ಕಾರ್ಯಗತವಾದರೆ ಇಲ್ಲಿನ ವಾಹನ ದಟ್ಟಣೆ ಹೆಚ್ಚಾಗುವ ಜೊತೆಗೆ ಪರಿಸರ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ. ನಾಗರಿಕರ ಸುರಕ್ಷೆ ಹಾಗೂ ಸ್ವಾಸ್ಥ್ಯವೂ ಹಾಳಾಗುತ್ತದೆ. ಪ್ರತಿಯೊಬ್ಬರಿಗೂ ಅನುಕೂಲವಾಗುವ ಸುಸ್ಥಿರ ಅಭಿವೃದ್ಧಿಯತ್ತ ಗಮನಹರಿಸಬೇಕು. ಉತ್ತಮ ದಾರಿಯಲ್ಲಿ ನಡೆದು ನಮ್ಮ ಪರಂಪರೆ, ಪರಿಸರ, ನಮ್ಮ ಜನರನ್ನು ಉಳಿಸಬೇಕಿದೆ.

ಮಧುಸೂಧನ್, ಸದಾಶಿವನಗರ

ದಟ್ಟಣೆ ಹೆಚ್ಚಿಸುವುದು ಪ್ರಮಾದ

ಸುಸ್ಥಿರ ಮತ್ತು ದೀರ್ಘಕಾಲಿಕ ಪರಿಹಾರಗಳು ನಮಗೆ ಬೇಕಿವೆ. ಮರಗಳನ್ನು ಕಡಿಯುವುದು, ಕಟ್ಟಡ, ಮೇಲ್ಸೇತುವೆ ನಿರ್ಮಾಣ, ರಸ್ತೆ ವಿಸ್ತರಣೆ ಯೋಜನೆಯಿಂದ ನಮ್ಮ ಸಮಸ್ಯೆಗಳು ನಿವಾರಣೆ ಆಗುವುದಕ್ಕಿಂತ ಅವೇ ಸಮಸ್ಯೆಗಳಾಗುತ್ತವೆ. ಈ ಮೇಲ್ಸೇತುವೆಯಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ದಟ್ಟಣೆಯನ್ನು ವರ್ಗಾಯಿಸುತ್ತಿದ್ದೇವೆ. ಈಗಾಗಲೇ ಅಧಿಕ ದಟ್ಟಣೆ ಕಾವೇರಿ ಮ್ಯಾಜಿಕ್ ಬಾಕ್ಸ್ ಬಳಿ ಇದ್ದು, ಇದನ್ನು ಮತ್ತಷ್ಟು ಹೆಚ್ಚಿಸುವುದು ದೊಡ್ಡ ಪ್ರಮಾದ.

ಲಕ್ಷ್ಮಿ ಶರತ್, ಸಿಟಿಜನ್ಸ್ ಫಾರ್ ಸ್ಯಾಂಕಿ

ಅನಗತ್ಯ ಯೋಜನೆ ಬೇಡ

ವೈಟ್ ಟಾಪಿಂಗ್, ರಸ್ತೆ ವಿಸ್ತರಣೆ, ಮೇಲ್ಸೇತುವೆ ಸೇರಿದಂತೆ ನಗರದಲ್ಲಿ ಅನಗತ್ಯವಾದ ಮೂಲ ಸೌಕರ್ಯಗಳನ್ನು ನಿರ್ಮಿಸಲಾಗುತ್ತಿದೆ. ಸಾರ್ವಜನಿಕ ಸಾರಿಗೆಯನ್ನು ಬಿಟ್ಟು, ಖಾಸಗಿ ವಾಹನಗಳತ್ತ ಜನರು ವಾಲುವುದನ್ನು ನಾವು ಕಂಡಿದ್ದೇವೆ. ಇದೀಗ ಬಸ್‌ಗಳನ್ನು ಮತ್ತೆ ಬಳಸಬೇಕಾಗಿದೆ. ಪಾದಚಾರಿಗಳು, ವಾಯುವಿಹಾರಿಗಳು ಮತ್ತು ಸೈಕಲ್ ಸವಾರರಿಗೆ ನಗರ ಯೋಜನೆ ಕೇಂದ್ರೀಕೃತವಾಗಬೇಕು. ಕಡಿಮೆ ಅಂತರದ ಪ್ರದೇಶಗಳ ರಸ್ತೆಗಳು ನಡೆದು ಸಾಗುವಂತಿರಬೇಕು.

ಕೃಷ್ಣ ಪನ್ಯಾಮ್, ಮಲ್ಲೇಶ್ವರ

ಮೇಲ್ಸೇತುವೆ ಬೇಡವೇ ಬೇಡ

ಉತ್ತಮ ಆಡಳಿತದ ಖಾತರಿ ಒದಗಿಸುವ ಯೋಜನೆಯೊಂದರಲ್ಲಿ ನಾಗರಿಕರ ಪಾತ್ರ ಎಷ್ಟು ಮುಖ್ಯ ಎಂಬುದು ಸ್ಯಾಂಕಿ ರಸ್ತೆ ಮೇಲ್ಸೇತುವೆ ಯೋಜನೆಯಿಂದ ಬಹಿರಂಗವಾಗಿದೆ. ಈ ಯೋಜನೆಯನ್ನು ಸಾರ್ವಜನಿಕವಾಗಿ ಪ್ರಕಟಿಸಿದ ನಂತರ, ಸುತ್ತಮುತ್ತಲಿನ ಜನರ ಸಹಕಾರ ದೊರೆತು, ಸ್ಥಳೀಯ ನಿವಾಸಿಗಳು ಒಗ್ಗಟ್ಟಾಗಿ ಹೋರಾಡುವ 'ಸ್ಯಾಂಕಿ ಕೆರೆ ತಂಡ' ರಚನೆಯಾಯಿತು. ನಮ್ಮ ಮರ, ಪಕ್ಷಿ, ಕೆರೆಯನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದೇವೆ. ಮೇಲ್ಸೇತುವೆ ಬೇಡ ಎಂಬುದೇ ನಮ್ಮ ಮುಖ್ಯ ಬೇಡಿಕೆ.

ಪ್ರೀತಿ ಸುಂದರ್‌ರಾಜನ್, ಸ್ಯಾಂಕಿ ಕೆರೆ ತಂಡ

ಸ್ಯಾಂಕಿ ರಸ್ತೆ ಮೇಲ್ಸೇತುವೆ: ಮರ ಕಡಿಯುವ ಕಡತಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ರಸ್ತೆ ವಿಸ್ತರಣೆ, ಮೇಲ್ಸೇತುವೆ ಯೋಜನೆಗಾಗಿ ಮರ ಕಡಿಯಲು ಅರಣ್ಯ ಸಂರಕ್ಷಣಾಧಿಕಾರಿಗೆ ನೀಡಿರುವ ಕಡತವನ್ನು ವಾಪಸ್ ಪಡೆದುಕೊಳ್ಳುವಂತೆ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರಿಗೆ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಮಲ್ಲೇಶ್ವರ, ವೈಯಾಲಿಕಾವಲ್, ಸದಾಶಿವನಗರದ ನಿವಾಸಿಗಳ ಕಲ್ಯಾಣ ಸಂಘಗಳ ಸದಸ್ಯರು ಹಾಗೂ ಸ್ಯಾಂಕಿ ಕೆರೆ ತಂಡದವರು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ತುಷಾರ್ ಗಿರಿನಾಥ್, 'ಮರಗಳ ಕಡಿತ ಮಾಡುವ ಯೋಜನೆ ಇದೀಗ ಬಿಎಲ್‌ಟಿಎಯಲ್ಲಿದೆ. ಅಲ್ಲಿ ತೀರ್ಮಾನವಾಗುವವರೆಗೂ ಮರ ಕಡಿಯಲು ಅನುಮತಿ ನೀಡುವ ಪ್ರಕ್ರಿಯೆ ನಡೆಯುವುದು ಬೇಡ ಎಂದು ಪ್ರಹ್ಲಾದ್ ಹಾಗೂ ಡಿಸಿಎಫ್ ಸರೀನಾ ಅವರಿಗೆ ಸೂಚಿಸಿದರು' ಎಂದು ಸ್ಯಾಂಕಿ ಕೆರೆ ತಂಡದ ಸದಸ್ಯರು ಹೇಳಿದರು.

'ಸ್ಯಾಂಕಿ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ಯೋಜನೆಗಾಗಿ ಮರಗಳನ್ನು ಕಡಿಯುವ ಬಗ್ಗೆ ಅನುಮತಿ ಪಡೆಯಲು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಡಿಸಿಎಫ್ ಸರೀನಾ ಅವರಿಗೆ ಕಡತ ಕಳುಹಿಸಿದ್ದರು. ಈ ಇಬ್ಬರೂ ಅಧಿಕಾರಿಗಳನ್ನು ಭೇಟಿ ಮಾಡಿ ಪ್ರಕ್ರಿಯೆ ನಿಲ್ಲಿಸುವಂತೆ ಕೋರಿದ್ದೆವು. ಆದರೆ ಅವರು ಸ್ಪಂದಿಸಲಿಲ್ಲ. ಹೀಗಾಗಿ ಮುಖ್ಯ ಆಯುಕ್ತರನ್ನು ಭೇಟಿ ಮಾಡಿ ಮನವಿ ಮಾಡಿದಾಗ ಅವರು ನಮ್ಮ ಮುಂದೆಯೇ ಅಧಿಕಾರಿಗಳಿಗೆ ಸೂಚನೆ ನೀಡಿದರು' ಎಂದು ಸ್ಯಾಂಕಿ ಕೆರೆ ತಂಡದ ಪ್ರೀತಿ ಸುಂದರ್‌ರಾಜನ್ ತಿಳಿಸಿದರು.

'ಉತ್ತಮ ಬೆಂಗಳೂರಿಗಾಗಿ ನಾಗರಿಕರು ಮತ್ತು ಸರ್ಕಾರಿ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಬೇಕು. ಸ್ಯಾಂಕಿ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ಯೋಜನೆಯನ್ನು ಕೈಬಿಡುವವರೆಗೂ ನಮ್ಮ ಹೋರಾಟ ಬಿಡುವುದಿಲ್ಲ' ಎಂದು ಸಿಟಿಜನ್ಸ್ ಫಾರ್ ಸ್ಯಾಂಕಿ ಕಿಮ್ಸುಕಾ ಅಯ್ಯರ್ ತಿಳಿಸಿದರು.

ಲಕ್ಕೂರು ರೈಲ್ವೆ ಸೇತುವೆ–ಕುರುವೆಲ್‌ವರೆಗಿನ ಮಾರ್ಗ

ಹದಗೆಟ್ಟ ರಸ್ತೆ: ಪರದಾಟ

ಪ್ರಜಾವಾಣಿ ವಾರ್ತೆ

ನರಸೀಪುರ ಸೇತುವೆಯ ಪಕ್ಕ ಬಿದ್ದಿರುವ ಎಂ ಸ್ಯಾಂಡ್

ದಾಬಸ್ ಪೇಟೆ: ಇಲ್ಲಿಂದ ಮಧುಗಿರಿ, ಪಾವಗಡ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಮೂರರಲ್ಲಿ ಲಕ್ಕೂರು ರೈಲ್ವೆ ಸೇತುವೆಯಿಂದ ನೆಲಮಂಗಲ ತಾಲ್ಲೂಕಿನ ಗಡಿಭಾಗ ಕುರುವೆಲ್‌ವರೆಗೆ ಏಳೆಂಟು ಕಿ.ಮೀ. ಉದ್ದಕ್ಕೂ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ.

ಇದರಿಂದ, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗಿದೆ ಹಾಗೂ ಅಪಘಾತಗಳಿಗೆ ಕಾರಣವಾಗಿದೆ ಎಂದು ವಾಹನ ಸವಾರರು ದೂರಿದ್ದಾರೆ.

ರಸ್ತೆ ಈ ಪರಿ ಹಾಳಾಗಲು ಮಾಕೇನಹಳ್ಳಿ ಗೋಮಾಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್‌ಗಳಿಂದ ದಿನನಿತ್ಯ ಜಲ್ಲಿ, ಎಂ. ಸ್ಯಾಂಡ್‌ಗಳನ್ನು ಕೊಂಡೊಯ್ಯುವ ನೂರಾರು ಟಿಪ್ಪರ್ ಲಾರಿಗಳೇ ಕಾರಣ ಎಂದು ಇಲ್ಲಿನ ಸ್ಥಳೀಯರು ಆರೋಪಿಸುತ್ತಾರೆ.

ಈ ಲಾರಿಗಳು ನಿಯಮಗಳನ್ನು ಮೀರಿ ಹೆಚ್ಚಿನ ಪ್ರಮಾಣದಲ್ಲಿ ಎಂ. ಸ್ಯಾಂಡ್ ಮತ್ತು ಜಲ್ಲಿಯನ್ನು ಹೊತ್ತೊಯ್ಯುತ್ತಿವೆ. ರಸ್ತೆಯು ಈ ವಾಹನಗಳ ತೂಕ ತಡೆಯುವಷ್ಟು ಸಾಮರ್ಥ್ಯ ಇಲ್ಲದಿರುವುದರಿಂದ ರಸ್ತೆ ಹಾಳಾಗಿ, ಅಲ್ಲಲ್ಲಿ ಗುಂಡಿಗಳು ಬಿದ್ದು ಅಪಾಯಕ್ಕೆ ಆಹ್ವಾನ ನೀಡುತ್ತಿವೆ ಎನ್ನುತ್ತಾರೆ ಸ್ಥಳೀಯರು.

ನರಸೀಪುರ ತೋಪಿನಿಂದ ದಾಬಸ್ ಪೇಟೆ ಮಾರ್ಗದಲ್ಲಿ ಎರಡು ಸೇತುವೆಗಳಲ್ಲಿ ಗುಂಡಿಗಳು ಬಿದ್ದಿವೆ. ವೇಗವಾಗಿ ಸಂಚರಿಸುವ ವಾಹನಗಳು ಸೇತುವೆಯ ಗುಂಡಿಯನ್ನು ಗಮನಿಸಿ ಬ್ರೇಕ್ ಹಾಕಿದರೆ ಹಿಂದಿನಿಂದ ವೇಗವಾಗಿ ಬರುವ ವಾಹನಗಳು ಡಿಕ್ಕಿಯಾಗಿ ಅಪಘಾತಗಳಾಗುತ್ತಿವೆ. ಗುಂಡಿ ತಪ್ಪಿಸಲು ಹೋಗಿ ಬ್ರೇಕ್ ಹಾಕಿದರೆ ವಾಹನದಿಂದ ಬಿದ್ದು ಸವಾರರು ಗಾಯ ಮಾಡಿಕೊಳ್ಳುತ್ತಿದ್ದಾರೆ. ರಾತ್ರಿ ವೇಳೆಯಂತೂ ಅತಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಇನ್ನು ಇಲ್ಲಿ ಲಾರಿಗಳಿಂದ ಬಿದ್ದ ಜಲ್ಲಿ ಮತ್ತು ಎಂ ಸ್ಯಾಂಡ್‌ನಿಂದಲೂ ಅಪಘಾತಗಳಾಗುತ್ತಿವೆ.

'ರಸ್ತೆಯ ಪಕ್ಕದಲ್ಲಿಯೇ ಎಂ ಸ್ಯಾಂಡ್ ಬಿದ್ದಿದ್ದು, ಸ್ವಲ್ಪ ಪಕ್ಕಕ್ಕೆ ವಾಹನ ಹೋದರೆ ಸ್ಕಿಡ್ ಆಗಿ ಬೀಳುವಂತಹ ಸ್ಥಿತಿ ಇದೆ. ಹಲವರು ಈಗಾಗಲೇ ಬಿದ್ದಿದ್ದಾರೆ. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ' ಎನ್ನುತ್ತಾರೆ ದಿನನಿತ್ಯ ಇದೇ ರಸ್ತೆಯಲ್ಲಿ ಸಂಚರಿಸುವ ಸವಾರ ಮಂಜುನಾಥ್.

'ಕೆಲವು ದಿನಗಳಿಂದಷ್ಟೇ ಈ ರಸ್ತೆಯಲ್ಲಿ ಸಂಚರಿಸುವ ಟಿಪ್ಪರ್ ಲಾರಿಗಳನ್ನು ತಡೆದು, ಅವುಗಳ ಮಾಲೀಕರು ಮತ್ತು ಚಾಲಕರಿಂದ ರಸ್ತೆಗೆ ಬಿದ್ದ ಜಲ್ಲಿ ಮತ್ತು ಎಂ ಸ್ಯಾಂಡ್ ಶುಚಿ ಮಾಡಿಸುವ ಮೂಲಕ ಪ್ರತಿಭಟನೆ ಮಾಡಲಾಗಿತ್ತು. ಆಗ ಕ್ರಷರ್ ಮಾಲೀಕರ ಸಂಘದ ನೆಲಮಂಗಲ ತಾಲ್ಲೂಕು ಅಧ್ಯಕ್ಷರು ರಸ್ತೆ ಸರಿಪಡಿಸುವ ಮತ್ತು ಎಂ ಸ್ಯಾಂಡ್ ಮತ್ತು ಜಲ್ಲಿ ರಸ್ತೆಗೆ ಬೀಳದಂತೆ ನೋಡಿಕೊಳ್ಳುವ ಭರವಸೆ ನೀಡಿದ್ದರು. ಆದರೆ, ಇದು ಈಡೇರಿಲ್ಲ' ಎಂದು ರಾಷ್ಟ್ರೀಯ ಸಾಮಾಜಿಕ ನ್ಯಾಯದಳ ಸಹ ಕಾರ್ಯದರ್ಶಿ ಸಂಪತ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

42 ಹಾಸಿಗೆ ಐಸಿಯು ಘಟಕಕ್ಕೆ ಚಾಲನೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ 42 ಹಾಸಿಗೆಗಳ ವೈದ್ಯಕೀಯ ತೀವ್ರ ನಿಗಾ ಘಟಕಕ್ಕೆ (ಐಸಿಯು) ಬುಧವಾರ ಚಾಲನೆ ನೀಡಲಾಯಿತು.

ಈ ಐಸಿಯು ಹಾಸಿಗೆಗಳನ್ನು ₹ 4 ಕೋಟಿ ವೆಚ್ಚದಲ್ಲಿ ಸಿಫಾನಿ ಮತ್ತು ಧನರಾಜ್ ಡಾಗಾ ಬ್ಲಾಕ್‌ನಲ್ಲಿ ನಿರ್ಮಿಸಲಾಗಿದೆ. ದಿವಂಗತ ಎಚ್. ರಾಮಯ್ಯರೆಡ್ಡಿ ಅವರ ಸ್ಮರಣಾರ್ಥ ಕುಟುಂಬಸ್ಥರು ಘಟಕ ನಿರ್ಮಾಣಕ್ಕೆ ದಾನ ನೀಡಿದ್ದಾರೆ. 32 ಹಾಸಿಗೆಗಳನ್ನು ಬಿಪಿಎಲ್ ಕುಟುಂಬದವರು ಹಾಗೂ 10 ಹಾಸಿಗೆಗಳನ್ನು ಗಣ್ಯರಿಗೆ ಎಂದು ಮೀಸಲಿಡಲಾಗಿದೆ.

'ನೂತನವಾಗಿ ನಿರ್ಮಿಸಲಾಗಿರುವ ಐಸಿಯು ಘಟಕ ವಿಶ್ವದರ್ಜೆ ಮಾನ್ಯತೆ ಹೊಂದಿದ್ದು, ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ದಾನಿಗಳ ಸಹಾಯದಿಂದ ಅಭಿವೃದ್ಧಿಗೊಂಡಿರುವ ಸಂಸ್ಥೆ, ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಜಗತ್ತಿನ ಪ್ರಮುಖ ಸರ್ಕಾರಿ ಆಸ್ಪತ್ರೆಯಾಗಿ ಹೊರಹೊಮ್ಮಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಲೋಕೇಶ್ ತಿಳಿಸಿದ್ದಾರೆ.

ಐಸಿಯು ಘಟಕ

ಸಂಸ್ಥೆಯ ನಿಕಟಪೂರ್ವ ನಿರ್ದೇಶಕ ಡಾ.ಸಿ. ರಾಮಚಂದ್ರ, ಪರಿಸರ ತಜ್ಞ ಯಲ್ಲಪ್ಪರೆಡ್ಡಿ, ಉದ್ಯಮಿ ಎಚ್.ಆರ್. ರಾಜಶೇಖರ್, ವೈದ್ಯಕೀಯ ಅಧೀಕ್ಷಕ ಡಾ.ವಿ.ಬಿ.ಗೌಡ, ನಿವಾಸಿ ವೈದ್ಯಾಧಿಕಾರಿ ಪ್ರಭಾ ಶೇಷಾಚಾರ್ ಇದ್ದರು.

'ರಾಜ್ಯದ ಹಲವೆಡೆ ರೋಪ್‌ವೇ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ರೋಪ್‌ವೇಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ. ನಂದಿಬೆಟ್ಟದಲ್ಲಿ ₹ 96 ಕೋಟಿ ವೆಚ್ಚದ ರೋಪ್‌ವೇ ನಿರ್ಮಾಣ ಕಾಮಗಾರಿಗೆ ಮಾರ್ಚ್ 15ರ ಒಳಗೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಹೇಳಿದರು.

ಅಂಜನಾದ್ರಿ ಬೆಟ್ಟದಲ್ಲಿ ₹ 20 ಕೋಟಿ ವೆಚ್ಚದಲ್ಲಿ ಅತಿಥಿಗಳ ಕೊಠಡಿ ನಿರ್ಮಿಸಲಾಗುತ್ತಿದೆ. ರೋಪ್‌ವೇ ನಿರ್ಮಾಣಕ್ಕೆ ನೀಲನಕ್ಷೆ ಸಿದ್ಧವಾಗಿದೆ. ಅಗತ್ಯವಿರುವ ಖಾಸಗಿ ಜಮೀನು ಬಳಸಿಕೊಳ್ಳಲು ಮಾತುಕತೆ ನಡೆದಿದೆ. ಕೇಂದ್ರ ಸರ್ಕಾರದ ಪರ್ವತಮಾಲಾ ಯೋಜನೆ ಅಡಿ ಉತ್ತರ ಕನ್ನಡ ಜಿಲ್ಲೆಯ ಯಾನ, ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿ, ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಬೆಟ್ಟಗಳಲ್ಲಿ ರೋಪ್‌ವೇ ನಿರ್ಮಾಣಕ್ಕೆ ಸರ್ವೆಕಾರ್ಯ ನಡೆದಿದೆ. ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ ಹಲವು ಬೆಟ್ಟಗಳಲ್ಲಿ ನಿರ್ಮಾಣ ಕಾರ್ಯ ಆರಂಭಿಸಲಾಗುವುದು ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿಹಾರಧಾಮಗಳ ಸಂಸ್ಥೆಗೆ ₹ 15 ಕೋಟಿ ಲಾಭ: ಎರಡು ವರ್ಷಗಳ ಹಿಂದೆ ₹ 1 ಕೋಟಿ ನಷ್ಟ ಅನುಭವಿಸಿದ್ದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ 2022–23ನೇ ಸಾಲಿನಲ್ಲಿ ₹ 15 ಕೋಟಿ ಲಾಭ ಗಳಿಸಿದೆ. ರಾಜ್ಯದಲ್ಲಿ 26 ರೆಸಾರ್ಟ್‌ಗಳನ್ನು ಸಂಸ್ಥೆ ನಡೆಸುತ್ತಿದ್ದು, ಇನ್ನೂ ನಾಲ್ಕು ಹೊಸ ರೆಸಾರ್ಟ್‌ಗಳನ್ನು ಶೀಘ್ರ ಆರಂಭಿಸಲಾಗುವುದು ಎಂದರು.

ಸಂಸ್ಥೆಗೆ ಮಂಜೂರಾದ 650 ಹುದ್ದೆಗಳಲ್ಲಿ 187 ಕಾಯಂ ನೌಕರರು ಇದ್ದಾರೆ. 357 ನೌಕರರು ಗುತ್ತಿಗೆ ಆಧಾರದಲ್ಲಿ, 294 ನೌಕರರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. 50 ನೌಕರರನ್ನು ಈಚೆಗೆ ಕಾಯಂ ಮಾಡಲಾಗಿದೆ. ನೌಕರರ ಮಕ್ಕಳ ಶಿಕ್ಷಣಕ್ಕೆ ನೆರವು, ಸಾಲ ಸೌಲಭ್ಯ ನೀಡಲಾಗುತ್ತಿದೆ. ಕಬಿನಿ, ಎಚ್.ಡಿ.ಕೋಟೆಯ ಕೆಲ ಸರ್ಕಾರಿ ಶಾಲೆಗಳಿಗೆ ದೇಣಿಗೆ ನೀಡಲಾಗಿದೆ ಎಂದರು.

ಸ್ಪರ್ಧಾ ವಾಣಿ

‘ಬಿಒಐ’ನಲ್ಲಿ ಹೀಗಿದೆ ನೇಮಕ ಪ್ರಕ್ರಿಯೆ

ಪ್ರೊಬೇಷನರಿ ಆಫೀಸರ್ಸ್ ಹುದ್ದೆಗಳು

ಆರ್ ಕೆ ಬಾಲಚಂದ್ರ

ಬ್ಯಾಂಕ್ ಆಫ್ ಇಂಡಿಯಾದ ‘ಪ್ರೊಬೇಷನರಿ ಆಫೀಸರ್ಸ್’ ಹುದ್ದೆಗಳ ನೇಮಕಾತಿ ಮೂರು ಹಂತಗಳಲ್ಲಿ ನಡೆಯುತ್ತದೆ. ಆಯ್ಕೆ ಪ್ರಕ್ರಿಯೆಯಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನ ಹೇಗಿರುತ್ತದೆ ?

ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಿಲಿಮ್ಸ್ (ಪೂರ್ವ ಸಿದ್ಧತಾ ಪರೀಕ್ಷೆ) ಮತ್ತು ಮುಖ್ಯ ಪರೀಕ್ಷೆ, ನಂತರ ಸಂದರ್ಶನವಿರುತ್ತದೆ. ಪ್ರಿಲಿಮ್ಸ್ ಪಾಸು ಮಾಡಿದವರು, ಮುಖ್ಯ ಪರೀಕ್ಷೆಗೆ ಅರ್ಹರಾಗುತ್ತಾರೆ ಎಂಬ ನಿಯಮಗಳಿವೆ.

ಆದರೆ ಬ್ಯಾಂಕ್ ಆಫ್ ಇಂಡಿಯಾದ(ಬಿಒಐ) ಪ್ರೊಬೇಷನರಿ ಆಫೀಸರ್ಸ್ ಹುದ್ದೆಗಳ ನೇಮಕಾತಿ ವಿಷಯದಲ್ಲಿ ಹಾಗಿಲ್ಲ. ಇಲ್ಲಿ ಕೇವಲ ಒಂದು ಪರೀಕ್ಷೆ ಬರೆದರೆ ಸಾಕು. ಈ ಪರೀಕ್ಷೆಯೊಂದಕ್ಕೆ ತಯಾರಿ ನಡೆಸುತ್ತಾ, ವಿಷಯಗಳನ್ನು ಮನದಟ್ಟು ಮಾಡಿಕೊಂಡರೆ ಸಾಕು, ಯಶಸ್ಸು ನಿಮ್ಮದಾಗುತ್ತದೆ.

ಕಳೆದ ಸಂಚಿಕೆಯಲ್ಲಿ ಇದೇ ಬಿಒಐ, ಪ್ರೊಬೇಷನರಿ ಅಧಿಕಾರಿ ಹುದ್ದೆಗಳ ಎರಡು ಗ್ರೇಡ್‌ಗಳಿಗೆ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆ ಪ್ರಕ್ರಿಯೆ ಸೇರಿದಂತೆ ಪ್ರಾಥಮಿಕ ವಿವರಗಳನ್ನು ಪ್ರಕಟಿಸಲಾಗಿತ್ತು.

ಈ ಸಂಚಿಕೆಯಲ್ಲಿ ಅರ್ಜಿ ಸಲ್ಲಿಕೆ ನಂತರ ನೇಮಕಾತಿಗಾಗಿ ನಡೆಯುವ ಪರೀಕ್ಷೆಗಳು, ಅದರಲ್ಲಿರುವ ಪ್ರಶ್ನೆ ಪತ್ರಿಕೆಗಳು ಮತ್ತು ಅಂತಿಮವಾಗಿ ಅಭ್ಯರ್ಥಿಯನ್ನು ಆಯ್ಕೆ ಮಾಡುವ ವಿಧಾನಗಳ ಬಗ್ಗೆ ತಿಳಿಯೋಣ.

ನೇಮಕಾತಿ ಪ್ರಕ್ರಿಯೆ ಹೇಗೆ ?

ನೇಮಕಾತಿ ಮೂರು ಹಂತಗಳಲ್ಲಿ ನಡೆಯಲಿದೆ. ಆನ್‌ಲೈನ್ ಪರೀಕ್ಷೆ. ನಂತರ ಗುಂಪು ಚರ್ಚೆ (GD-Group Discussion). ಮೂರನೆಯ ಹಂತ ವೈಯಕ್ತಿಕ ಸಂದರ್ಶನ. ಆನ್‌ಲೈನ್ ಪರೀಕ್ಷೆಯಲ್ಲಿ ಅರ್ಹರಾದ ವರನ್ನು ಶಾರ್ಟ್‌ಲಿಸ್ಟ್ ಮಾಡಲಾಗುವುದು. ಅವರು ಪಡೆದ ಅಂಕಗಳ ಆಧಾರದ ಮೇಲೆ ಗುಂಪು ಚರ್ಚೆ ಮತ್ತು ವೈಯಕ್ತಿಕ ಸಂದರ್ಶನಕ್ಕೆ ಆಹ್ವಾನಿಸಲಾಗುವುದು.

I ಆನ್‌ಲೈನ್ ಪರೀಕ್ಷೆ ವಿವರ:

ಇದು ಮೂರೂವರೆ ಗಂಟೆ ಅವಧಿಯ ಪರೀಕ್ಷೆಯಾಗಿದೆ. 225 ಅಂಕಗಳಿಗೆ 157 ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಕ್ರಮ ಸಂಖ್ಯೆ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ (ನಿಮಿಷ)
1	ಇಂಗ್ಲಿಷ್ ಭಾಷೆ	35	40	40
2	ರೀಸನಿಂಗ್ ಅಪ್ಟಿಟ್ಯೂಡ್	45	60	60
3	ಜನರಲ್/ಎಕಾನಮಿ/ ಬ್ಯಾಂಕಿಂಗ್ ಅವೇರ್‌ನೆಸ್	40	40	35
4	ಡೇಟಾ ಅನಾಲಿಸಿಸ್ ಮತ್ತು ಇಂಟರ್‌ಪ್ರಿಟೇಷನ್	35	60	45
5	ಇಂಗ್ಲಿಷ್ ಭಾಷೆಯ ಡಿಸ್ಕ್ರಿಪ್ಟಿವ್	2	25	30
	ಒಟ್ಟು	157	225	210

ಅಂತಿಮ ಆಯ್ಕೆ ಹೀಗಿರುತ್ತದೆ

ಆನ್‌ಲೈನ್ ಪರೀಕ್ಷೆ, ವೈಯಕ್ತಿಕ ಸಂದರ್ಶನ ಮತ್ತು ಗುಂಪು ಚರ್ಚೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ, ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಂತಿಮ ಪಟ್ಟಿಯನ್ನು ಆಯಾ ವರ್ಗಗಳ ಅಭ್ಯರ್ಥಿಗಳಿಗೆಗೆ ಅವರೋಹಣ ಕ್ರಮದಲ್ಲಿ ಸಿದ್ಧಪಡಿಸಲಾಗುತ್ತದೆ.

ಅಂತಿಮ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನ ಅಂಕಗಳನ್ನು ಪಡೆದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್ ಪರೀಕ್ಷೆ ಅಂಕಗಳ ಆಧಾರದ ಮೇಲೆ, ಅವರನ್ನು ಮೆರಿಟ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರಿಸಲಾಗುತ್ತದೆ. ಒಂದು ವೇಳೆ ಆನ್‌ಲೈನ್ ಪರೀಕ್ಷೆಯಲ್ಲಿ ಪಡೆದ ಅಂಕಗಳೂ ಸಮಾನವಾಗಿದ್ದರೆ, ವಯಸ್ಸಿನ ಪ್ರಕಾರ ಹಿರಿಯ ಅಭ್ಯರ್ಥಿಯನ್ನು ಮೆರಿಟ್ ಲಿಸ್ಟ್‌ನಲ್ಲಿ ಮೊದಲ ಪ್ರಾಶಸ್ತ್ಯದಲ್ಲಿ ಇರಿಸಲಾಗುತ್ತದೆ. ನಂತರ ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿಯೇ ಉತ್ತರ ಬರೆಯಬೇಕು. ಎಲ್ಲ ಪ್ರಶ್ನೆ ಪತ್ರಿಕೆಗಳು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿರಲಿವೆ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷ್ ವಿವರಣಾತ್ಮಕ ಪತ್ರಿಕೆಯ ಪರೀಕ್ಷೆಯು ಅರ್ಹತೆ ಸ್ವರೂಪ(Qualifying) ಹೊಂದಿರುತ್ತದೆ. ಈ ಎರಡು ಪತ್ರಿಕೆಗಳಲ್ಲಿ ಪಡೆದ ಅಂಕಗಳನ್ನು ಮೆರಿಟ್ ಪಟ್ಟಿ ಸಿದ್ಧಪಡಿಸುವ ವೇಳೆ ಪರಿಗಣಿಸುವುದಿಲ್ಲ.

ಪರೀಕ್ಷೆಗಳಲ್ಲಿ ತಪ್ಪು ಉತ್ತರ ಗುರುತಿಸಿದ್ದಲ್ಲಿ, ಪ್ರತಿ ಪ್ರಶ್ನೆಗೆ ನಿಗದಿಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

II. ಸಂದರ್ಶನ:

ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳ ವೈಯಕ್ತಿಕ ಸಂದರ್ಶನವನ್ನು ಬ್ಯಾಂಕ್ ನಡೆಸುತ್ತದೆ. ಸಂದರ್ಶನಕ್ಕಾಗಿ ನಿಗದಿಪಡಿಸಲಾದ ಒಟ್ಟು ಅಂಕಗಳು 60.

ಅರ್ಹತಾ ಅಂಕಗಳು: ಸಾಮಾನ್ಯ/ಇಡಬ್ಲ್ಯುಎಸ್ ವರ್ಗದ ಅಭ್ಯರ್ಥಿಗಳಿಗೆ ಶೇ 40 (ಕನಿಷ್ಠ 24 ಅಂಕಗಳು) ಮತ್ತು ಎಸ್‌ಸಿ/ಎಸ್‌ಟಿ/ಒಬಿಸಿ/ಅಂಗವಿಕಲ ವರ್ಗದ ಅಭ್ಯರ್ಥಿಗಳಿಗೆ ಶೇ 35 (ಕನಿಷ್ಠ 21 ಅಂಕಗಳು)

III. ಗುಂಪು ಚರ್ಚೆ (GD)

ಕೆಲವು ಆಯ್ದ ಕೇಂದ್ರಗಳಲ್ಲಿ ಆನ್‌ಲೈನ್ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಗುಂಪು ಚರ್ಚೆ ನಡೆಸಲಾಗುತ್ತದೆ. ಗುಂಪು ಚರ್ಚೆಗೆ ನಿಗದಿಪಡಿಸಲಾದ ಒಟ್ಟು ಅಂಕಗಳು 40. ಕನಿಷ್ಠ ಅರ್ಹತಾ ಅಂಕಗಳು ಸಾಮಾನ್ಯ/ಇಡಬ್ಲ್ಯುಎಸ್ ವರ್ಗದ ಅಭ್ಯರ್ಥಿಗಳಿಗೆ ಶೇ 40 (ಕನಿಷ್ಠ 16 ಅಂಕಗಳು) ಮತ್ತು ಎಸ್‌ಸಿ/ಎಸ್‌ಟಿ/ಒಬಿಸಿ/ಅಂಗವಿಕಲ ವರ್ಗದ ಅಭ್ಯರ್ಥಿಗಳಿಗೆ ವರ್ಗದ ಅಭ್ಯರ್ಥಿಗಳಿಗೆ ಶೇ 35 (ಕನಿಷ್ಠ 14 ಅಂಕಗಳು).

ಅಂದ ಹಾಗೆ, ಬಿಒಐನಲ್ಲಿ ಆಫೀಸರ್ ಹುದ್ದೆಗೆ ನೇಮಕಗೊಳ್ಳುವ ಮುನ್ನ, ಪಿಜಿಡಿಬಿಎಫ್ ಕೋರ್ಸ್ ಪಾಸ್ ಮಾಡುವುದು ಕಡ್ಡಾಯ. ಆ ಕೋರ್ಸ್ ಸೇರಲು ₹3.5 ಲಕ್ಷ ಶುಲ್ಕ ಪಾವತಿಸಬೇಕು. ಇದಕ್ಕಾಗಿ ಬ್ಯಾಂಕ್ ಸಾಲ-ಸೌಲಭ್ಯ ನೀಡುತ್ತದೆ. ಕೋರ್ಸ್ ಪಾಸ್ ಆದ ಮೇಲೂ ಬ್ಯಾಂಕ್‌ನೊಂದಿಗೆ ಇಂತಿಷ್ಟು ವರ್ಷ ಇಲ್ಲಿಯೇ ಕೆಲಸ ಮಾಡುತ್ತೇನೆಂದು ‘ಒಪ್ಪಂದ’ ಮಾಡಿಕೊಳ್ಳಬೇಕು. ಅದು ಹೇಗೆ? - **ಮುಂದಿನ ವಾರದ ಸಂಚಿಕೆಯಲ್ಲಿ ಉತ್ತರ ನಿರೀಕ್ಷಿಸಿ.**

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ



ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ‘ಸಾಮಾನ್ಯ ಜ್ಞಾನ’ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಭಾರತದ ಮೊದಲ ಲಿಥಿಯಂ ಐಯಾನ್ ಸೆಲ್ ಉತ್ಪಾದನಾ ಘಟಕ ಆಂಧ್ರಪ್ರದೇಶದ ತಿರುಪತಿಯಲ್ಲಿ ಕಾರ್ಯಾರಂಭ ಮಾಡಿದೆ, ಈ ಘಟಕ ಪ್ರತಿ ನಿತ್ಯ 20,000 ಸೆಲ್‌ಗಳನ್ನು ಉತ್ಪಾದಿಸಬಲ್ಲದು.

2) ಪ್ರಸ್ತುತ ಭಾರತ ತನಗೆ ಅಗತ್ಯವಿರುವ ಲಿಥಿಯಂ ಅಯಾನ್ ಸೆಲ್‌ಗಳನ್ನು ಸಂಪೂರ್ಣವಾಗಿ ಆಮದು ಮಾಡಿಕೊಳ್ಳುತ್ತಿದೆ. ಚೀನಾ, ದಕ್ಷಿಣ ಕೊರಿಯ, ವಿಯೆಟ್ನಾಂ ಹಾಗೂ ಹಾಂಕಾಂಗ್‌ಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಆದರೆ ಕಾಶ್ಮೀರದಲ್ಲಿ ಭಾರಿ ಪ್ರಮಾಣದ ಲಿಥಿಯಂ ನಿಕ್ಷೇಪ ಪತ್ತೆ ಹಚ್ಚಲಾಗಿದೆ.

3) ಜಗತ್ತಿನಲ್ಲಿ ಅತಿ ಹೆಚ್ಚು ಲಿಥಿಯಂ ಸಂಗ್ರಹವನ್ನು ಚಿಲಿ ದೇಶ ಹೊಂದಿದೆ. ಅಲ್ಲಿ 93 ಲಕ್ಷ ಟನ್‌ನಷ್ಟು ಲಿಥಿಯಂ ಸಂಗ್ರಹವಿದೆ. ಇದಲ್ಲದೇ ಆಸ್ಟ್ರೇಲಿಯಾ, ಅರ್ಜೆಂಟೀನಾ ಹಾಗೂ ಚೀನಾ ದೇಶಗಳಲ್ಲಿಯೂ ಲಿಥಿಯಂ ಲಭ್ಯವಿದೆ. ಇತ್ತೀಚಿನ ಶೋಧನೆಯ ಪ್ರಕಾರ ಭಾರತವು 59 ಲಕ್ಷ ಟನ್ ಲಿಥಿಯಂ ಹೊಂದಿದೆ.

4) ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಭಾರಿ ಪ್ರಮಾಣದ ಲಿಥಿಯಂ ನಿಕ್ಷೇಪ ಪತ್ತೆಯಾಗಿದೆ, ನಮ್ಮ ರಾಜ್ಯದಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಅಲ್ಲಾಪಟ್ಟಣ ಮತ್ತು ಮರಳಗಾಲ ಗ್ರಾಮ ವ್ಯಾಪ್ತಿಯಲ್ಲಿ ಲಿಥಿಯಂ ನಿಕ್ಷೇಪ ಇರುವುದಾಗಿ ಭಾರತೀಯ ಭೂ ವೈಜ್ಞಾನಿಕ ಸಮೀಕ್ಷಾ ತಂಡ ದೃಢಪಡಿಸಿಸಿದೆ.

ಉತ್ತರ ಸಂಕೇತಗಳು
- ಎ) 1, 2, ಮತ್ತು 4 ಮಾತ್ರ ಸರಿಯಾಗಿವೆ
- ಬಿ) 1, 3, ಮತ್ತು 4 ಮಾತ್ರ ಸರಿಯಾಗಿವೆ
- ಸಿ) 1, 2, ಮತ್ತು 4 ಮಾತ್ರ ಸರಿಯಾಗಿವೆ
- ಡಿ)1, 2, 3, 4 ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2) ಆಲ್ಪ್ ಡಿಜಿಟಲ್ ಟೆಕ್ನಾಲಾಜಿ ಎಂಬ ಸಾಫ್ಟ್‌ವೇರ್ ಕಂಪನಿ ವಡ್ಡಿನಕೊಪ್ಪ ಎಂಬ ಹಳ್ಳಿಯಲ್ಲಿ ತನ್ನ ಶಾಖೆಯೊಂದನ್ನು ತೆರೆದಿದೆ. ಹಾಗಾದರೆ ಈ ಹಳ್ಳಿ ಎಲ್ಲಿದೆ?
- ಎ) ಉತ್ತರ ಕನ್ನಡ ಜಿಲ್ಲೆಯ ಶಿರಸಿ
- ಬಿ) ಬೆಂಗಳೂರಿನ ಶ್ರೀನಗರ
- ಸಿ) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು
- ಡಿ) ಹಾಸನ ಜಿಲ್ಲೆಯ ಹಿರಿಸಾವೆ

ಉತ್ತರ:- ಎ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಭಾರತದ ಅತಿದೊಡ್ಡ ಹೆಲಿಕಾಪ್ಟರ್ ಉತ್ಪಾದನಾ ಘಟಕವನ್ನು ತುಮಕೂರಿನ ಗುಬ್ಬಿ ತಾಲೂಕಿನ ಬಿದರೆಹಳ್ಳಕಾವಲ್‌ನಲ್ಲಿ ಆರಂಭಿಸಲಾಗಿದೆ.

2) ತುಮಕೂರಿನ ಬಿದರೆಹಳ್ಳಕಾವಲ್‌ನಲ್ಲಿ ಆರಂಭಿಸಲಾದ ಹೆಲಿಕಾಪ್ಟರ್ ಉತ್ಪಾದನಾ ಘಟಕವು ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಸೇರಿದೆ.

3) ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ಹೆಲಿಕಾಪ್ಟರ್ ಘಟಕವನ್ನು ಮೊದಲ ಗ್ರೀನ್ ಫೀಲ್ಡ್ ಹೆಲಿಕಾಪ್ಟರ್ ಫ್ಯಾಕ್ಟರಿ ಎಂದು ಗುರುತಿಸಲಾಗಿದೆ.

ಉತ್ತರ ಸಂಕೇತಗಳು :-
- ಎ) 1 ಮತ್ತು 3 ಮಾತ್ರ ಸರಿಯಾಗಿದೆ
- ಬಿ) 1 ಮತ್ತು 2 ಮಾತ್ರ ಸರಿಯಾಗಿದೆ
- ಸಿ) ಎಲ್ಲವೂ ತಪ್ಪಾಗಿವೆ. ಡಿ) 1, 2 ಮತ್ತು 3 ಮೂರು ಸರಿಯಾಗಿದೆ

ಉತ್ತರ: ಡಿ

4) ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ದೇಗುಲದಲ್ಲಿ ರಾಮನ ವಿಗ್ರಹವನ್ನು ನಿರ್ಮಿಸಲು ಸಾಲಿಗ್ರಾಮ ಶಿಲೆಯನ್ನು ಎಲ್ಲಿಂದ ತರಿಸಿಕೊಳ್ಳಲಾಗಿದೆ?

ಎ) ನೇಪಾಳ ಬಿ) ಥಾಯ್ಲೆಂಡ್
ಸಿ) ಮ್ಯಾನ್ಮಾರ್ ಡಿ) ಇಂಡೋನೇಷಿಯಾ

ಉತ್ತರ: ಎ

5) ಜೀವಿತಾವಧಿಯಲ್ಲಿ ಒಂದು ಲಕ್ಷ ಲೀಟರ್‌ಗೂ ಅಧಿಕ ಹಾಲು ನೀಡಬಲ್ಲ ಭಾರಿ ಸಾಮರ್ಥ್ಯದ ಮೂರು ಹಸುಗಳನ್ನು ಸೃಷ್ಟಿಸಿರುವುದಾಗಿ ಯಾವ ದೇಶದ ವಿಜ್ಞಾನಿಗಳು ಘೋಷಿಸಿದ್ದಾರೆ?

ಎ) ಬ್ರಿಟನ್ ಬಿ) ಜಪಾನ್
ಸಿ) ನ್ಯೂಜಿಲೆಂಡ್ ಡಿ) ಚೀನಾ

ಉತ್ತರ: ಡಿ

6) ಎರಡನೇ ಆಡಳಿತ ಸುಧಾರಣಾ ಆಯೋಗದ 4 ಮತ್ತು 5ನೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಗ್ರಾಮೀಣ ಕೋಟಾವನ್ನು ‘ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿ ಕೋಟಾವಾಗಿ ಪರಿವರ್ತಿಸಬೇಕು’ ಇಲ್ಲವೇ ಶೇ 7.5ರಷ್ಟು ಸೀಟುಗಳನ್ನು ಅವರಿಗೆ ಮೀಸಲಿಡಬೇಕು.

2) ಗ್ರಾಮೀಣ ವ್ಯಾಸಂಗ, ಕನ್ನಡ ಮಾಧ್ಯಮ, ಹೈದರಾಬಾದ್ ಕರ್ನಾಟಕ ಮೊದಲಾದ ಪ್ರಮಾಣಪತ್ರಗಳ ಸಿಂಧುತ್ವವನ್ನು ಜೀವಿತಾವಧಿಗೆ ವಿಸ್ತರಿಸಬೇಕು.

3) ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿ 8 ಕ್ಕೆ ಇಳಿಸುವುದು, ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸಮೀಪದ ಶಾಲೆಗಳಲ್ಲಿ ವಿಲೀನ ಮಾಡುವುದು, ಉತ್ತಮ ಆಡಳಿತಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು.

4) ನೇಮಕಾತಿ ಪ್ರಕ್ರಿಯೆಗಳಲ್ಲಿ ದಾಖಲಾತಿ ಪರಿಶೀಲನಾ ಕಾರ್ಯವನ್ನು ಆಯಾ ಇಲಾಖೆಗಳೇ ಮಾಡಬೇಕು. ಇದರಿರಿಂದ ಕೆಪಿಎಸ್‌ಸಿ ಆಯ್ಕೆ ಪ್ರಕ್ರಿಯೆಗಳನ್ನು ತ್ವರಿತಗೊಳಿಸಬಹುದು

ಮೇಲಿನ ಯಾವೆಲ್ಲಾ ಶಿಫಾರಸ್ಸುಗಳನ್ನು ಮಾಡಿದೆ?

ಉತ್ತರ ಸಂಕೇತಗಳು :

ಎ) 1 ಮತ್ತು 3 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 2 ಮಾತ್ರ . ಡಿ) 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ

ಉತ್ತರ: ಡಿ

7) ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಘೋಷಿಸಲಾದ ‘ಶ್ರೀ ಅನ್ನ’ ಯಾವುದಕ್ಕೆ ಸಂಬಂಧಿಸಿದೆ?

ಎ) ಸಿರಿಧಾನ್ಯ ಬಿ) ರಸಗೊಬ್ಬರ
ಸಿ) ಹಿರಿಯ ನಾಗರಿಕರ ಪಿಂಚಣಿ
ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ: ಎ

8) ಆರ್ಥಿಕ ಸಮೀಕ್ಷೆ 2022-23ರ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಏಪ್ರಿಲ್ 1 ರಿಂದ ಶುರುವಾಗುವ ಆರ್ಥಿಕ ವರ್ಷದಲ್ಲಿ ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಶೇ 6 ರಿಂದ ಶೇ 6.8 ಇರಲಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ(2020-21ರಲ್ಲಿ) ದೇಶದ ಜಿಡಿಪಿಯು ಶೇ 8.7ರಷ್ಟು ಕಂಡಿತ್ತು. ಈ ವರ್ಷದ (2022-23ರಲ್ಲಿ) ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ನಿರೀಕ್ಷೆ ಇದೆ.

2) ಫಿಸಿಕಲ್ ಡೆಫಿಸಿಟ್ 2020-21ರಲ್ಲಿ ಜಿಡಿಪಿಯ ಶೇ 9.2ರಷ್ಟಿತ್ತು 2021-22ರಲ್ಲಿ ಜಿಡಿಪಿಯ ಶೇ 6.7ಕ್ಕೆ ಇಳಿಯಿತು, ವಿತ್ತ ವರ್ಷ 2022-23ರಲ್ಲಿ ಜಿಡಿಪಿಯ ಶೇ 6.4ಕ್ಕೆ ಇಳಿಯುವ ಸಾಧ್ಯತೆ ಇದೆ.

3) ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರವು 2020-21ರಲ್ಲಿ ಶೇ. 3.3ರಷ್ಟು ಬೆಳವಣಿಗೆ ದಾಖಲಿಸಿದರೆ 2021-22ರಲ್ಲಿ ಶೇ 3ರಷ್ಟು ಬೆಳವಣಿಗೆ ದರವನ್ನು ದಾಖಲಿಸಿತು. 2022-23ರಲ್ಲಿ ಶೇ 3.5ರಷ್ಟು ಬೆಳವಣಿಗೆ ದಾಖಲಿಸುವ ನಿರೀಕ್ಷೆ ಇದೆ.

4) ಕೈಗಾರಿಕಾ ವಲಯವು 2020-21ರಲ್ಲಿ ಶೇ (-)3.3ರಷ್ಟು ಬೆಳವಣಿಗೆ ದಾಖಲಿಸಿದರೆ 2021-22ರಲ್ಲಿ ಶೇ 10.3ರಷ್ಟು ಬೆಳವಣಿಗೆ ದರವನ್ನು ದಾಖಲಿಸಿತು. 2022-23ರಲ್ಲಿ ಶೇ 4.1ರಷ್ಟು ಬೆಳವಣಿಗೆ ದಾಖಲಿಸುವ ನಿರೀಕ್ಷೆ ಇದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
- ಎ) ಹೇಳಿಕೆ 1 ಮತ್ತು 3ರ ಮಾತ್ರ ಸರಿಯಾಗಿದೆ
- ಬಿ) ಹೇಳಿಕೆ 1, 2, ಮತ್ತು 3 ಮಾತ್ರ ಸರಿಯಾಗಿದೆ
- ಸಿ) ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ
- ಡಿ) ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

ಮಾದರಿ ಪ್ರಶ್ನೋತ್ತರ

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

12) ಜಮೀನ್ದಾರಿ ಪದ್ಧತಿ ಕಾಲ ಕ್ರಮೇಣ ಎಲ್ಲೆಲ್ಲಿ ವಿಸ್ತರಣೆಗೆ ಒಳಗಾಯಿತು?

ಉತ್ತರ:- ಈ ಪದ್ಧತಿಯು ಕ್ರಮೇಣ ಒಡಿಶಾ, ಆಂಧ್ರ ಮತ್ತು ವಾರಣಾಸಿ ಪ್ರಾಂತ್ಯಗಳಿಗೆ ವಿಸ್ತರಣೆಯಾಯಿತು.

13) ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

14) ಥಿಯೋಸಾಫಿಕಲ್ ಸೊಸೈಟಿ ಉದ್ದೇಶವೇನು?

ಉತ್ತರ:- ಥಿಯೋಸಾಫಿಕಲ್ ಸೊಸೈಟಿಯ ಪ್ರಮುಖ ಉದ್ದೇಶವೆಂದರೆ ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು. ಮನುಷ್ಯನ ಅಂತರ್ಯದಲ್ಲಿರುವ ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು, ಯಾವುದೇ ಬೇಧ-ಭಾವ ಇಲ್ಲದ ವಿಶ್ವಭಾತೃತ್ವದ ನಿರ್ಮಾಣ, ವೈಚಾರಿಕತೆಯ ತುಲನಾತ್ಮಕ ಅಧ್ಯಯನ ನಡೆಸುವುದು ಮತ್ತು ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವುದು ಇದರ ಮುಖ್ಯ ಉದ್ದೇಶವಾಗಿತ್ತು

15) ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಹಿಡಿಯುವಿಕೆ ಕಾನೂನು ಬಾಹಿರ, ಏಕೆ?

ಉತ್ತರ: ತಾಯಿಯ ಗರ್ಭದಲ್ಲಿರುವ ಭ್ರೂಣವು ಹೆಣ್ಣಾಗಿದ್ದರೆ, ಪಾಲಕರು ಗರ್ಭದಲ್ಲಿಯೇ ಕೊಂದು ಹಾಕುವ ಮೂಲಕ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ ಹೀಗಾಗಿ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ.

16) ಭಾರತದ ಭೂಬಳಕೆಯ ಎಷ್ಟು ಮಾದರಿಯನ್ನು ವರ್ಗಗಳಾಗಿ ವಿಂಗಡಿಸಬಹುದು ? ಅವು ಯಾವುವು?

ಉತ್ತರ:- ಭಾರತದ ಭೂಬಳಕೆಯ ಮಾದರಿಯನ್ನು ಈ ರೀತಿ ವರ್ಗಗಳಾಗಿ ವಿಂಗಡಿಸಬಹುದು: (1) ನಿವ್ವಳ ಸಾಗುವಳಿ ಪ್ರದೇಶ. (2) ಅರಣ್ಯ ಭೂಮಿ. (3) ವ್ಯವಸಾಯೇತರ ಭೂ ಬಳಕೆ, (4) ಬೀಳು ಭೂಮಿ, (5) ಹುಲ್ಲುಗಾವಲು, (6) ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ ಇತ್ಯಾದಿ.

17) ಬಿಳಿ ಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?

ಉತ್ತರ: ವರ್ಗಿಸ್ ಕುರಿಯನ್ ಇವರನ್ನು ‘ಬಿಳಿ ಕ್ರಾಂತಿಯ ಪಿತಾಮಹ’ ಎಂದು ಕರೆಯುತ್ತಾರೆ.

18) ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು?

ಉತ್ತರ:- ರಾಬರ್ಟ್ ಕ್ಲೈವ್

19) ನಾಗಾರ್ಜುನ ಸಾಗರ ಯೋಜನೆ ಬಗ್ಗೆ ವಿವರಿಸಿ.

ಉತ್ತರ:- ಆಂಧ್ರ ಪ್ರದೇಶದ ನಂದಿಕೊಂಡ ಗ್ರಾಮದ ಬಳಿ ಕೃಷ್ಣಾ ನದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗಿದೆ. ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆ ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ. ಇದು ಸುಮಾರು 8.30 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದೆ

20) ಯಾವುದನ್ನು ಪ್ರವಾಹ ಕಾಲುವೆಗಳು ಎನ್ನುವರು?

ಉತ್ತರ: ಯಾವುದೇ ರೀತಿಯ ಅಣೆಕಟ್ಟೆಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು. ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ನೀರು ಹರಿಯುವುದು. ಇವುಗಳಿಗೆ ಪ್ರವಾಹ ಕಾಲುವೆಗಳು ಎಂದು ಕರೆಯುವರು.

21) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ಧ ಹೋರಾಡಿದಳು?

ಉತ್ತರ:- ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಪದ್ಧತಿಯ ವಿರುದ್ಧ ರಾಣಿ ಚೆನ್ನಮ್ಮ ಹೋರಾಡಿದರು.

22) ಮಳೆ ಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ ಎಷ್ಟು ವಿಧಗಳು ಇವೆ? ಅವು ಯಾವುವು ಉದಾಹರಣೆಯೊಂದಿಗೆ ವಿವರಿಸಿ.

ಉತ್ತರ:- ಮಳೆಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ ಇದರಲ್ಲಿ ಎರಡು ವಿಧಗಳಿವೆ. (1) ಮಳೆ ಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು. ಉದಾ : ಮನೆಯ ಚಾವಣಿಯಿಂದ. (2) ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು. ಉದಾ : ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸುವುದು. ಮನೆಯ ಚಾವಣಿಯ ಮೇಲೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸಿ ದಿನ ನಿತ್ಯದ ಬಳಕೆಗೆ ಬಳಸುವುದು. ಇದರಿಂದ ಸಾರ್ವಜನಿಕ ನೀರು ಪೂರೈಕೆಯ ಮೇಲಿನ ಅವಲಂಬನೆ ಕಡಿಮೆ ಮಾಡುವುದು. ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು. ಇತ್ಯಾದಿ

23) ವಾಯುವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ, ಏಕೆ?

ಉತ್ತರ: ವಾಯುವ್ಯ ಭಾರತದಲ್ಲಿ ಗೋಧಿ ಅತಿಮುಖ್ಯ ರಬಿ ಬೆಳೆಯಾಗಿದೆ. ಈ ಪ್ರದೇಶದಲ್ಲಿ ಚಳಿಗಾಲದಲ್ಲಿ ತಂಪಾದ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿರುವ ವಾಯುಗುಣವಿರುತ್ತದೆ. ಇದು ಗೋಧಿ ಬೇಸಾಯಕ್ಕೆ ಅತ್ಯಂತ ಸೂಕ್ತವಾಗಿದೆ ಹೀಗಾಗಿ ವಾಯುವ್ಯ ಭಾರತದಲ್ಲಿ ಗೋಧಿ ಅತಿಮುಖ್ಯ ಹಿಂಗಾರು ಬೆಳೆಯಾಗಿದೆ

24) ಮಿಶ್ರ ಬೇಸಾಯ ಎಂದರೇನು?

ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೇ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ ‘ಮಿಶ್ರ ಬೇಸಾಯ’ ಎಂದು ಕರೆಯುವರು

25) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

ಉತ್ತರ:- ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆ ಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಭೌತವಿಜ್ಞಾನ

ಪಿಯುಸಿ

61) ಭಾರತದಲ್ಲಿ ಪರಮಾಣು ಶಕ್ತಿ ಕಾರ್ಯಕ್ರಮದ ಕುರಿತು ಬರೆಯಿರಿ

ಉತ್ತರ:- ಭಾರತದಲ್ಲಿ ಪರಮಾಣು ಶಕ್ತಿ ಕಾರ್ಯಕ್ರಮವು ಹೋಮಿ ಜೆ. ಭಾಭಾ ಇವರ ನೇತೃತ್ವದಲ್ಲಿ ಸ್ವಾತಂತ್ರ ಪಡೆಯುವ ವೇಳೆಗೆ ಆರಂಭವಾಯಿತು. ಭಾರತದಲ್ಲಿ ಪ್ರಥಮ ಬೈಜಿಕ ಕ್ರಿಯಾಕಾರಿಯ (ಅಪ್ಸರಾ ಹೆಸರಿನ) ರಚನೆ ಮತ್ತು ನಿರ್ಮಾಣ ಐತಿಹಾಸಿಕವಾದದ್ದು. ಇದು ಅಗಸ್ಟ್ 4, 1956ರಲ್ಲಿ ಕಾರ್ಯಾರಂಭ ಮಾಡಿತು. ಇದರಲ್ಲಿ ಸಮೃದ್ಧ ಯುರೇನಿಯಂನ್ನು ಇಂಧನವಾಗಿ ಮತ್ತು ನೀರನ್ನು ಮಂದಕಾರಿಯನ್ನಾಗಿ ಬಳಸಲಾಯಿತು. ಇದರ ನಂತರದ ಇನ್ನೊಂದು ಮೈಲಿಗಲ್ಲು: 1960ರಲ್ಲಿ CIRUS (Canada India Research U.S.) ಕ್ರಿಯಾಕಾರಿಯ ರಚನೆ ಮೂಲಕ ಮಾಡಲಾಯಿತು. ಇದರಲ್ಲಿ 40MV ಕ್ರಿಯಾಕಾರಿಯಲ್ಲಿ ನೈಸರ್ಗಿಕ ಯುರೇನಿಯಂನ್ನು ಇಂಧನವಾಗಿ ಮತ್ತು ಭಾರ ನೀರನ್ನು ಮಂದಕಾರಿಯನ್ನಾಗಿ ಬಳಸಲಾಯಿತು.

ಅಪ್ಸರಾ ಮತ್ತು CIRUSಗಳು ಮೂಲ ಮತ್ತು ಅನ್ವಯಿಕ ಬೈಜಿಕ ವಿಜ್ಞಾನದ ವ್ಯಾಪಕ ಕ್ಷೇತ್ರಗಳಲ್ಲಿ ಸಂಶೋಧನೆಗೆ ಪ್ರಚೋದಿಸಿದವು.

ಸ್ವಾತಂತ್ರ್ಯ ಬಂದ ಆರಂಭದ ಎರಡು ದಶಕಗಳಲ್ಲಿನ ಪರಮಾಣು ಶಕ್ತಿ ಕಾರ್ಯಕ್ರಮದ ಮಹತ್ವದ ಮೈಲಿಗಲ್ಲು ಎಂದರೆ, ಟ್ರಾಂಬೆಯಲ್ಲಿ ಪ್ಲುಟೋನಿಯಂ ಘಟಕದ ರಚನೆ ಮತ್ತು ನಿರ್ಮಾಣ, ಇದು ಭಾರತದಲ್ಲಿ ಇಂಧನ ಮರುಬಳಕೆಯ ತಾಂತ್ರಿಕತೆಗೆ ನಾಂದಿಯಾಯಿತು (ಕ್ರಿಯಾಕಾರಿಯಲ್ಲಿ ಉಪಯೋಗಿಸಿದ ಇಂಧನದಿಂದ ಉಪಯುಕ್ತ ವಿದಳನ ಮತ್ತು ಫಲವತ್ತಾದ ಬೈಜಿಕ ಪದಾರ್ಥಗಳನ್ನು ಬೇರ್ಪಡಿಸುವಿಕೆ). ತದನಂತರ ಕಾರ್ಯರೂಪಕ್ಕೆ ಬಂದ ಸಂಶೋಧನಾ ಕ್ರಿಯಾಕಾರಿಗಳೆಂದರೆ, ZERLINA, PURNIMA (I, II III), DRUVA KAMINI.

KAMINI ಇದು U-233ಯನ್ನು ಇಂಧನವನ್ನಾಗಿ ಬಳಸಿಕೊಂಡ ದೇಶದ ಪ್ರಥಮ ಬೃಹತ್ ಸಂಶೋಧನಾ ಕ್ರಿಯಾಕಾರಿಯಾಗಿದೆ. ಈ ಸಂಶೋಧನಾ ಕ್ರಿಯಾಕಾರಿಯ ಮೂಲ ಉದ್ದೇಶ ವಿದ್ಯುತ್ ಶಕ್ತಿಯ ಉತ್ಪಾದನೆಯಾಗಿರದೆ, ಬೈಜಿಕ ವಿಜ್ಞಾನ ಮತ್ತು ತಾಂತ್ರಿಕತೆಯ ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ಅನುಕೂಲ ಕಲ್ಪಿಸುವುದಾಗಿದೆ.

ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮತ್ತು ಬೈಜಿಕ ತಾಂತ್ರಿಕತೆಯ ಎಲ್ಲ ವಿಷಯಗಳ ಸ್ವಾವಲಂಬನೆಯನ್ನು ಸಾಧಿಸುವುದು. ಭಾರತದ ಪರಮಾಣು ಶಕ್ತಿ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ. 1950ರ ದಶಕದ ಆರಂಭದಲ್ಲಿ ಕೈಗೊಳ್ಳಲಾದ ಪರಮಾಣು ಖನಿಜಗಳ ಅನ್ವೇಷಣೆಯು, ಭಾರತದ ಯುರೇನಿಯಂ ನಿಕ್ಷೇಪ ಸೀಮಿತವಾಗಿದ್ದು, ಥೋರಿಯಂ ನಿಕ್ಷೇಪ ಸಾಕಷ್ಟು ಸಮೃದ್ಧವಾಗಿದೆ ಎಂಬುದನ್ನು ಸೂಚಿಸಿತು. ಹೀಗಾಗಿ ನಮ್ಮ ದೇಶವು ಬೈಜಿಕ ಶಕ್ತಿ ಉತ್ಪಾದನೆಗೆ ಮೂರು ಹಂತದ ಕಾರ್ಯತಂತ್ರವನ್ನು ಅಳವಡಿಸಿಕೊಂಡಿತು. ಮೊದಲ ಹಂತದಲ್ಲಿ ನೈಸರ್ಗಿಕ ಯುರೇನಿಯಂನ್ನು ಇಂಧನವನ್ನಾಗಿ ಮತ್ತು ಭಾರಜಲವನ್ನು ಮಂದಕಾರಿಯನ್ನಾಗಿ ಬಳಸುವುದು. ಕ್ರಿಯಾಕಾರಿಯಿಂದ ತೆಗೆದ ಇಂಧನದ ಮರುಬಳಕೆಯಿಂದ ಪಡೆದ ಪ್ಲುಟೋನಿಯಂ-239ನ್ನು ನಂತರ ಎರಡನೆ ಹಂತದ ಕ್ರಿಯಾಕಾರಿಯಾದ - ‘ವೇಗದ ಬ್ರೀಡರ್ ಕ್ರಿಯಾಕಾರಿ’ಯಲ್ಲಿ ಇಂಧನವನ್ನಾಗಿ ಬಳಸುವುದು. ಈ ಕ್ರಿಯಾಕಾರಿಗಳು ಸರಪಳಿ ಕ್ರಿಯೆಯನ್ನು ಮುಂದುವರೆಸಲು ವೇಗದ ನ್ಯೂಟ್ರಾನುಗಳನ್ನು ಬಳಸುತ್ತವೆ (ಆದ್ದರಿಂದ ಮಂದಕಾರಿ ಅನವಶ್ಯಕ) ಮತ್ತು ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವುದರ ಜೊತೆಗೆ ತಾನು ಬಳಸುವುದಕ್ಕಿಂತ ಹೆಚ್ಚಿನ ವಿದಳನ ಪದಾರ್ಥವನ್ನು (ಪ್ಲುಟೋನಿಯಂ) ಉತ್ಪಾದಿಸುತ್ತದೆ. ಆದ್ದರಿಂದ ಇವುಗಳನ್ನು ಬ್ರೀಡರ್ ಕ್ರಿಯಾಕಾರಿ ಎಂದು ಕರೆಯುತ್ತಾರೆ. ಮೂರನೇ ಹಂತದ ವೇಗದ ಬ್ರೀಡರ್ ಕ್ರಿಯಾಕಾರಿಗಳು ಥೋರಿಯಂ-232 ರಿಂದ ವಿದಳನ ಯುರೇನಿಯಂ-233 ಯನ್ನು ಉತ್ಪಾದಿಸುವುದು ಮತ್ತು ಇದರ ಆಧಾರದ ಮೇಲೆ ವಿದ್ಯುಚ್ಛಕ್ತಿ ಕ್ರಿಯಾಕಾರಿಗಳನ್ನು ನಿರ್ಮಿಸುವುದು. ಪ್ರಸ್ತುತ ಭಾರತದಲ್ಲಿ ಪರಮಾಣು ಶಕ್ತಿ ಕಾರ್ಯಕ್ರಮದ ಎರಡನೇ ಹಂತದಲ್ಲಿ ಸಮರ್ಥವಾಗಿದ್ದು, ಮೂರನೇ (ಥೋರಿಯಂ ಬಳಕೆ) ಹಂತದಲ್ಲಿ ಸಾಕಷ್ಟು ಕೆಲಸವಾಗಬೇಕಿದೆ.

ಖನಿಜಗಳ ಅನ್ವೇಷಣೆ ಮತ್ತು ಗಣಿಗಾರಿಕೆಯ ಸಂಕೀರ್ಣ ತಾಂತ್ರಿಕತೆ, ಇಂಧನ ತಯಾರಿಕೆ, ಭಾರಜಲ ಉತ್ಪಾದನೆ, ಕ್ರಿಯಾಕಾರಿ ರಚನೆ, ನಿರ್ಮಾಣ ಮತ್ತು ಬಳಕೆ, ಇಂಧನ ಮರುಬಳಕೆ ಇತ್ಯಾದಿಗಳಲ್ಲಿ ದೇಶವು ಪ್ರಭುತ್ವ ಸಾಧಿಸಿದೆ. ದೇಶದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿದ ಒತ್ತಡಕೊಳಪಟ್ಟ ಭಾರಜಲ ಕ್ರಿಯಾಕಾರಿಗಳು (PHWRs) ಕಾರ್ಯಕ್ರಮದ ಮೊದಲ ಹಂತದ ಯಶಸ್ಸನ್ನು ಸೂಚಿಸುತ್ತವೆ. ಈಗ ಭಾರತವು ಭಾರಜಲ ಉತ್ಪಾದನೆಯಲ್ಲಿ ಸ್ವಾವಲಂಬನೆಗಿಂತ ಹೆಚ್ಚಾಗಿಯೇ ಬೆಳೆದಿದೆ. ವಿಕಿರಣ ರಕ್ಷಣೆಯ ಕಠಿಣ ಮಾನದಂಡಗಳಿಗನುಗುಣವಾಗಿ, ರಚನೆ ಮತ್ತು ಬಳಕೆಯಲ್ಲಿ ವಿಸ್ತೃತ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದು ಭಾರತೀಯ ಪರಮಾಣು ಶಕ್ತಿ ಕಾರ್ಯಕ್ರಮದ ಹೆಗ್ಗುರುತಾಗಿದೆ.

62) ಬೈಜಿಕ ಬಂಧಕ ಬಲದ ವೈಶಿಷ್ಟ್ಯಗಳ ಬಗ್ಗೆ ಬರೆಯಿರಿ

ಉತ್ತರ:- ಬೈಜಿಕ ಬಂಧಕ ಬಲದ ಅನೇಕ ವೈಶಿಷ್ಟ್ಯಗಳು ಹೀಗಿವೆ.(ಇವುಗಳನ್ನು 1930 ರಿಂದ 1950ರ ಅವಧಿಯಲ್ಲಿ ಮಾಡಲಾದ ಬಗೆ-ಬಗೆಯ ಪ್ರಯೋಗಗಳಿಂದ ಪಡೆಯಲಾಗಿದೆ)

(i) ರಾಶಿಗಳ ನಡುವಿನ ಗುರುತ್ವಾಕರ್ಷಣ ಬಲ ಅಥವಾ ವಿದ್ಯುದಾವೇಶಗಳ ನಡುವೆ ವರ್ತಿಸುವ ಕೂಲಂಬ್ ಬಲಗಳಿಗಿಂತ ಬೈಜಿಕ ಬಲವು ಹೆಚ್ಚು ಶಕ್ತಿಯುತವಾಗಿರುತ್ತದೆ. ಬೈಜಿಕ ಬಲವು ನ್ಯೂಕ್ಲಿಯಸ್ ಒಳಗಡೆ ಇರುವ ಪ್ರೋಟಾನುಗಳ ನಡುವಿನ ಕೂಲಂಬ್ ವಿಕರ್ಷಕ ಬಲವನ್ನು ಮೀರಿಸುವಷ್ಟಿರಬೇಕು. ಬೈಜಿಕ ಬಲವು ಕೂಲಂಬ್ ಬಲಕ್ಕಿಂತ ಹೆಚ್ಚು ಶಕ್ತಿಯುತವಾಗಿರುವುದರಿಂದ ಇದು ಸಾಧ್ಯವಾಗಿದೆ. ಗುರುತ್ವಾಕರ್ಷಣ ಬಲವು ಕೂಲಂಬ್ ಬಲಕ್ಕಿಂತಲೂ ಬಹಳ ದುರ್ಬಲವಾಗಿರುತ್ತದೆ.

(ii) ಎರಡು ನ್ಯೂಕ್ಲಿಯಾನುಗಳ ನಡುವಿನ ಅಂತರ ಕೆಲವು ಫೆಮ್ಟೋಮೀಟರ್‌ಗಳಿಗಿಂತ ಜಾಸ್ತಿ ಇರುವುದರಿಂದ, ಅವುಗಳ ನಡುವಿನ ಬೈಜಿಕ ಬಲವು ಶೂನ್ಯವಾಗುತ್ತದೆ. ಇದು, ಒಂದು ಮಧ್ಯಮ ಅಥವಾ ಬೃಹತ್ ಗಾತ್ರದ ನ್ಯೂಕ್ಲಿಯಾಸ್ಸಿನಲ್ಲಿ ಸಂತೃಪ್ತ ಬಲಕ್ಕೆ ಅನುವು ಮಾಡಿಕೊಡುತ್ತವೆ. ಪ್ರತಿ ನ್ಯೂಕ್ಲಿಯಾನ್ ಬಂಧಕ ಶಕ್ತಿಯು ಸ್ಥಿರವಾಗಿರುವುದಕ್ಕೆ ಇದು ಕಾರಣವಾಗಿದೆ. ಎರಡು ನ್ಯೂಕ್ಲಿಯಾನುಗಳ ನಡುವಿನ ಪ್ರಚ್ಛನ್ನ ಶಕ್ತಿ ಮತ್ತು ಅಂತರಗಳ ಸಂಬಂಧವನ್ನು ಸೂಚಿಸುವ ಅಂದಾಜು ನಕ್ಷೆಯನ್ನು ಚಿತ್ರದಲ್ಲಿ ತೋರಿಸಲಾಗಿದೆ.



(ಇಲ್ಲಿ ಚಿತ್ರವಿದೆ) ಅಂತರದ ಫಲನವಾಗಿ ಒಂದು ಜೊತೆ ನ್ಯೂಕ್ಲಿಯಾನುಗಳ ಪ್ರಚ್ಛನ್ನಶಕ್ತಿ ಡಿ0, ಗಿಂತ ಹೆಚ್ಚಿನ ಅಂತರಕ್ಕೆ , ಬಲವು ಆಕರ್ಷಣಕಾರಿ ಮತ್ತು r_0ಗಿಂತ ಕಡಿಮೆ ಅಂತರಕ್ಕೆ ಬಲವು ಪ್ರಬಲವಾಗಿ ವಿಕರ್ಷಣಾಕಾರಿ. ಅಂತರ r_0, ಅಂದಾಜು 0.8 fm ರಷ್ಟಿದ್ದಾಗ, ಪ್ರಚ್ಛನ್ನ ಶಕ್ತಿಯು ಕಡಿಮೆಯಾಗಿರುತ್ತದೆ. ಅಂತರಗಳು 0.8 fm ಕ್ಕಿಂತ ಹೆಚ್ಚು ಇದ್ದಾಗ ಬಲವು ಆಕರ್ಷಕ ಮತ್ತು ಅವು 0.8 fm ಕ್ಕಿಂತ ಕಡಿಮೆ ಅಂತರದಲ್ಲಿದ್ದಾಗ ಬಲವು ವಿಕರ್ಷಕವಾಗಿರುತ್ತದೆ ಎಂಬುದು ಇದರ ತಾತ್ಪರ್ಯ.

(iii) ನ್ಯೂಟ್ರಾನ್-ನ್ಯೂಟ್ರಾನ್, ಪ್ರೋಟಾನ್-ನ್ಯೂಟ್ರಾನ್ ಮತ್ತು ಪ್ರೋಟಾನ್-ಪ್ರೋಟಾನುಗಳ ನಡುವಿನ ಬೈಜಿಕ ಬಲವು ಅಂದಾಜು ಒಂದೇ ಆಗಿರುತ್ತದೆ. ಬೈಜಿಕ ಬಲವು ವಿದ್ಯುದಾವೇಶದ ಮೇಲೆ ಅವಲಂಬಿತವಾಗಿರುವುದಿಲ್ಲ. ಕೂಲಂಬ್ ನಿಯಮ ಅಥವಾ ನ್ಯೂಟನ್ ಗುರುತ್ವಾಕರ್ಷಣೆ ನಿಯಮಗಳಿಗಿರುವಂತೆ, ಬೈಜಿಕ ಬಲಕ್ಕೆ ಸರಳ ಗಣಿತೀಯ ರಚನೆ ಇರುವುದಿಲ್ಲ.

ಪ್ರಜಾವಾಣಿ ನೋಡಿಯೊ

ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಸಾರಿಗೆ ನೌಕರರ ಪ್ರತಿಭಟನೆ

ಒಂದನೇ ಪುಟದಿಂದ...

'ರಾಜ್ಯದ ಎಲ್ಲ ನಿಗಮಗಳಲ್ಲಿ ನೌಕರರು, ಹಗಲು- ರಾತ್ರಿ ದುಡಿಯುತ್ತಿದ್ದಾರೆ. ನೌಕರರ ಪರಿಶ್ರಮದಿಂದ ನಿಗಮಗಳು ಅಭಿವೃದ್ಧಿಯಾಗುತ್ತಿವೆ. ಆದರೆ, ನೌಕರರ ಬಗ್ಗೆ ಸಾರಿಗೆ ಸಚಿವರಿಗೆ ಯಾವುದೇ ಕಾಳಜಿ ಇಲ್ಲ. ಆರನೇ ವೇತನ ಆಯೋಗದ ಶಿಫಾರಸು ಜಾರಿಗೊಳಿಸುವ ಭರವಸೆ ನೀಡಿದ್ದ ಸಚಿವರು, ಕೊಟ್ಟ ಮಾತು ತಪ್ಪಿದ್ದಾರೆ' ಎಂದು ನೌಕರರು ಆಕ್ರೋಶ ವ್ಯಕ್ತಪಡಿಸಿದರು.

'1992ರ ನಂತರ ಸಾರಿಗೆ ನಿಗಮಗಳಲ್ಲಿ ನೌಕರರ ಚುನಾವಣೆ ನಡೆದಿಲ್ಲ. ಕೂಡಲೇ ಚುನಾವಣೆ ನಡೆಸಬೇಕು. ಈ ಹಿಂದೆ ಮುಷ್ಕರದ ಸಂದರ್ಭದಲ್ಲಿ ನೌಕರರ ಮೇಲೆ ದಾಖಲಿಸಿದ್ದ ಪ್ರಕರಣಗಳನ್ನು ಹಿಂಪಡೆಯಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಗ್ರಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯಕ್ಕೆ ಆಗ್ರಹ • ಸರ್ಕಾರದಿಂದ ನಿರ್ಲಕ್ಷ್ಯ– ಆರೋಪ

ಅಂಗನವಾಡಿ ನಿವೃತ್ತ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯಕ್ಕಾಗಿ ಅಂಗನವಾಡಿ ನಿವೃತ್ತ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಜೀವಮಾನವಿಡಿ ಅಂಗನವಾಡಿಗಳಲ್ಲಿ ದುಡಿದು ನಿವೃತ್ತಿ ಹೊಂದಿರುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಆರ್ಥಿಕವಾಗಿ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ವೃದ್ಧಾಪ್ಯವನ್ನು ಅಂತ್ಯಂತ ಜಿಗುಪ್ಸೆಯಿಂದ ನಡೆಸುತ್ತಿದ್ದೇವೆ' ಎಂದು ಪ್ರತಿಭಟನಕಾರರು ಹೇಳಿದರು.

'ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಜಾರಿಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿದ್ದೆವು. ಆರು ವರ್ಷ ವಯೋಮಾನದೊಳಗಿನ ಮಕ್ಕಳು ಮತ್ತು ಅವರ ತಾಯಂದಿರ ಪೌಷ್ಠಿಕ ಆಹಾರ, ಆರೋಗ್ಯ ರಕ್ಷಣೆಯೊಂದಿಗೆ ಶಾಲಾ ಪೂರ್ವ ಶಿಕ್ಷಣದ ಜವಾಬ್ದಾರಿಯನ್ನು ನಿರ್ವಹಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಯ ರೂವಾರಿಗಳಾಗಿದ್ದೇವೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ನಿವೃತ್ತ ನೌಕರರು ಬುಧವಾರ ಪ್ರತಿಭಟನೆ ನಡೆಸಿದರು

ಈ ರೀತಿ ಮಹತ್ತರ ಸೇವೆ ಸಲ್ಲಿಸಿದವರ ಬಗ್ಗೆ ಸರ್ಕಾರ ಕಾಳಜಿ ತೋರದೆ ನಿರ್ಲಕ್ಷ್ಯ ವಹಿಸಿದೆ' ಎಂದು ದೂರಿದರು.

ನಿವೃತ್ತಿಯಾದಾಗ ಅತಿ ಕನಿಷ್ಠ ಪ್ರಮಾಣದ ಇಡಿಗಂಟು ನೀಡಿ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ವಯೋಸಹಜ ಕಾಯಿಲೆಗಳಿಂದ ಬಳಲುತ್ತಿರುವ ನಿವೃತ್ತರು, ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಪರದಾಡುತ್ತಿದ್ದಾರೆ. ತಿಂಗಳಿಗೆ ಕನಿಷ್ಠ ₹5 ಸಾವಿರ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಗ್ರಾಚ್ಯುಟಿ ಸೌಲಭ್ಯ ಪಡೆಯಲು ಅಂಗನವಾಡಿ ನೌಕರರು ಅರ್ಹರು ಎಂಬ ಸುಪ್ರೀಂ ಕೋರ್ಟ್ ತೀರ್ಪು ಜಾರಿ ಮಾಡಲು ಸರ್ಕಾರ ಹೊರಟಿರುವುದು ಸ್ವಾಗತಾರ್ಹ. ಇದು ಈಗಾಗಲೇ ನಿವೃತ್ತಿಯಾಗಿರುವವರಿಗೂ ಸಿಗಬೇಕು ಎಂದು ಮನವಿ ಮಾಡಿದರು.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಭ್ರಷ್ಟಾಚಾರದ ಆರೋಪದಡಿಯಲ್ಲಿ ದೆಹಲಿ ಸರ್ಕಾರದ ಇಬ್ಬರು ಮಂತ್ರಿಗಳನ್ನು ಬಂಧಿಸಿರುವುದರಿಂದ 'ಆಪ್'ಗೆ ಧಕ್ಕೆ ಉಂಟಾಗಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

'12ರಂದು ಮದ್ದೂರಿನ ಸಭೆಯಲ್ಲಿ ಪ್ರಧಾನಿ ಭಾಗಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು ಮಾರ್ಚ್ 12ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದು, ಮದ್ದೂರಿನ ಗೆಜ್ಜಲಗೆರೆಯಲ್ಲಿ ನಡೆಯುವ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ವಿಶೇಷ ರಕ್ಷಣಾ ದಳ ಅನುಮತಿ ಕೊಟ್ಟರೆ 2 ಕಿ.ಮೀ ರೋಡ್ ಶೋ ನಡೆಸಲಾಗುವುದು. ನಂತರ ಸಭೆ ನಡೆಯಲಿದೆ' ಎಂದು ಮಾಹಿತಿ ನೀಡಿದರು.

'ರಸ್ತೆಯ ಟೋಲ್ ಸಂಗ್ರಹವನ್ನು ಮಾರ್ಚ್ 14ಕ್ಕೆ ಮುಂದೂಡಲಾಗಿದೆ. ಬೆಂಗಳೂರು– ನಿಡಗಟ್ಟದವರೆಗೂ ಟೋಲ್ ಸಂಗ್ರಹ ನಡೆಯಲಿದೆ' ಎಂದರು.

'ಎಕ್ಸ್‌ಪ್ರೆಸ್ ವೇಯಲ್ಲಿನ ಸರ್ವಿಸ್ ರಸ್ತೆ ಕಾಮಗಾರಿಯನ್ನು ನಾಲ್ಕೇ ದಿನಕ್ಕೆ ಪೂರ್ಣಗೊಳಿಸಬಹುದು. ಆದರೆ, ಜಮೀನು ವ್ಯಾಜ್ಯ ಹೈಕೋರ್ಟ್‌ನಲ್ಲಿದೆ. ರಸ್ತೆ ಮಾಡಲು ಆಗಿಲ್ಲ. ಹೈಕೋರ್ಟ್ ತಡೆಯಾಜ್ಞೆ ತೆರವಿಗೂ ಪ್ರಯತ್ನ ನಡೆಸಲಾಗಿದೆ' ಎಂದು ಹೇಳಿದರು.

'ಕಾಂಗ್ರೆಸ್ ಆಡಳಿತದಲ್ಲಿ ಮೈಸೂರು–ಊಟಿ ಹೆದ್ದಾರಿಗೆ ಸರ್ವಿಸ್ ರಸ್ತೆಯೇ ಆಗಿಲ್ಲ. ಆದರೂ, ಟೋಲ್ ಸಂಗ್ರಹ ಆರಂಭಿಸಿದರು. ಈಗ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆ ಬಗ್ಗೆ ಮಾತಾಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಇಂಡುವಾಳು, ಬೂದನೂರು, ಪಾಂಡವಪುರದಲ್ಲಿ ಬಾಕಿ ಇರುವ ಹೆದ್ದಾರಿ ನಿರ್ಮಾಣ ಕಾರ್ಯವನ್ನು ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು' ಎಂದು ಹೇಳಿದರು.

ಪಿಯು ಪರೀಕ್ಷೆ: ಹಿಜಾಬ್ ಧರಿಸಿ ಬರಲು ಅವಕಾಶವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 9ರಿಂದ ಆರಂಭವಾಗಲಿರುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಹಾಜರಾಗಲು ಅನುಮತಿ ನೀಡಬೇಕೆಂಬ ಮುಸ್ಲಿಂ ವಿದ್ಯಾರ್ಥಿನಿಯರ ಮನವಿಯನ್ನು ಪರಿಗಣಿಸದಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಅಧಿಕಾರಿಗಳಿಗೆ ಸೂಚಿಸಿದೆ.

'ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಉಡುಪಿ, ಚಿಕ್ಕಬಳ್ಳಾಪುರ, ಚಾಮರಾಜನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಪದವಿಪೂರ್ವ ಕಾಲೇಜುಗಳ ಕೆಲವು ಮುಸ್ಲಿಂ ವಿದ್ಯಾರ್ಥಿನಿಯರು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿದ್ದಾರೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಹಿಜಾಬ್ ವಿಷಯವು ಸುಪ್ರೀಂ ಕೋರ್ಟ್‌ನಲ್ಲಿದೆ. ಹೀಗಾಗಿ, ಪರೀಕ್ಷೆಯ ಸಮಯದಲ್ಲಿ ಹಿಜಾಬ್ ಅನುಮತಿಸುವ ಪ್ರಶ್ನೆಯೇ ಇಲ್ಲ' ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು. ಅಲ್ಲದೆ, 'ಈ ಕಾರಣಕ್ಕೆ ಯಾವುದೇ ವಿದ್ಯಾರ್ಥಿನಿ ಪರೀಕ್ಷೆಗೆ ಗೈರಾಗುತ್ತಾರೆ ಎಂದೂ ಭಾವಿಸುವುದಿಲ್ಲ' ಎಂದೂ ಹೇಳಿದರು.

'ಹಿಜಾಬ್ ಧರಿಸುವುದು ಇಸ್ಲಾಮಿಕ್ ನಂಬಿಕೆಯ ಅಗತ್ಯ ಧಾರ್ಮಿಕ ಆಚರಣೆಯ ಭಾಗ ಅಲ್ಲ' ಎಂದು ರಾಜ್ಯ ಹೈಕೋರ್ಟ್ ಕಳೆದ ವರ್ಷ ಮಾರ್ಚ್‌ನಲ್ಲಿ ಅಭಿಪ್ರಾಯಪಟ್ಟಿತ್ತು. ವಿದ್ಯಾರ್ಥಿಗಳು ನಿಗದಿಪಡಿಸಿದ ಸಮವಸ್ತ್ರವನ್ನು ಧರಿಸಬೇಕು ಎಂಬ 2022 ಫೆ. 5ರಂದು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

'ಕಳೆದ ಒಂದು ವಾರದಲ್ಲಿ ಪರೀಕ್ಷೆಗೆ ಹಿಜಾಬ್ ಧರಿಸಲು ಅನುಮತಿ ಕೋರಿ ಎರಡು ಮನವಿಗಳು ಬಂದಿವೆ. ನಾವು ಅವುಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದೇವೆ. ಎಲ್ಲ ವಿದ್ಯಾರ್ಥಿಗಳಿಗೆ ನಿಯಮಾವಳಿಗಳನ್ನು ಅನುಸರಿಸುವಂತೆ ಸೂಚನೆ ನೀಡಿದ್ದೇವೆ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜೊಂದರ ಪ್ರಾಂಶುಪಾಲರು ಹೇಳಿದರು.

'ಯಶಸ್ವಿನಿ' ವಂಚನೆ: ಹಣ ದೋಚುವ ಜಾಲ

ಒಂದನೇ ಪುಟದಿಂದ...

'ಜಯನಗರ 4ನೇ ಹಂತದ ಈದ್ಗಾ ಮಸೀದಿ ವಿಳಾಸ ನೀಡಿರುವ ವಿಸ್ಡಂ ಪಿಯರಲ್ ಫೌಂಡೇಷನ್ ಆಡಳಿತ ಮಂಡಳಿ, 'ಯಶಸ್ವಿನಿ ಕಾರ್ಡ್ ಮಾಡಿಕೊಡಲಾಗುವುದು' ಎಂಬ ಜಾಹೀರಾತು ಪೋಸ್ಟರ್‌ಗಳನ್ನು ಹಲವೆಡೆ ಅಂಟಿಸಿದೆ. ರಾಜ್ಯ ಸರ್ಕಾರದ ಹೆಸರು, ಸಹಕಾರ ಇಲಾಖೆ ಹಾಗೂ ಸರ್ಕಾರಿ ಲಾಂಛನವನ್ನು ಅಕ್ರಮವಾಗಿ ಜಾಹೀರಾತಿಯಲ್ಲಿ ಮುದ್ರಿಸಲಾಗಿದೆ' ಎಂದು ದೂರಿನಲ್ಲಿ ಹೇಳಿದ್ದಾರೆ.

'ಜಾಹೀರಾತು ನೋಡಿ ಸಂಪರ್ಕಿಸುವ ಜನರಿಂದ ಹಣ ಪಡೆದು ವಂಚಿಸುತ್ತಿರುವ ಮಾಹಿತಿ ಇದೆ. ಈದ್ಗಾ ಮಸೀದಿ ಒಳಗೆ ಹೋಗಲು ಅನುಮತಿ ಇಲ್ಲದಿದ್ದರಿಂದ, ಫೌಂಡೇಷನ್ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿಲ್ಲ. ಆರೋಪಿಗಳ ಕೃತ್ಯದಿಂದ ಯಶಸ್ವಿನಿ ಯೋಜನೆಗೆ ಕಳಂಕ ಬರುವ ಸಾಧ್ಯತೆ ಇದೆ. ಹೀಗಾಗಿ, ಫೌಂಡೇಷನ್ ವಿರುದ್ಧ ಕಾನೂನು ಕ್ರಮ ಜರುಗಿಸಿ' ಎಂದೂ ವೆಂಕಟಸ್ವಾಮಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಾರ್ಡ್ ಬಳಸಿ ಆರೋಗ್ಯ ಸೇವೆ?

'ವಿಸ್ಡಂ ಪಿಯರಲ್ ಫೌಂಡೇಷನ್ ವತಿಯಿಂದ ಜನರಿಗೆ ಯಶಸ್ವಿನಿ ಕಾರ್ಡ್ ವಿತರಿಸಿರುವ ಮಾಹಿತಿ ಇದೆ. ಅದೇ ಕಾರ್ಡ್ ಬಳಸಿಕೊಂಡು ಕೆಲವರು, ಆರೋಗ್ಯ ಸೇವೆ ಪಡೆದುಕೊಂಡಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲವರನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ. ಕೃತ್ಯದಲ್ಲಿ ಹಲವು ಅಧಿಕಾರಸ್ಥರೂ ಭಾಗಿಯಾಗಿರುವ ಶಂಕೆ ಇದ್ದು, ನೋಟಿಸ್ ನೀಡಲು ತಯಾರಿ ಮಾಡಿಕೊಳ್ಳುತ್ತಿದ್ದೇವೆ. ಫೌಂಡೇಷನ್ ನೀಡುತ್ತಿದ್ದ ಕಾರ್ಡ್‌ಗಳು ಅಸಲಿಯೋ ಅಥವಾ ನಕಲಿಯೋ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿವೆ.

4ರಿಂದ ರಾಷ್ಟ್ರೀಯ ಲಿಂಗಾಯತ ಮಹಾಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ಸಮಿತಿಯು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ತೇರು ಮೈದಾನದಲ್ಲಿ ಇದೇ 4 ಮತ್ತು 5ರಂದು ಪ್ರಥಮ ರಾಷ್ಟ್ರೀಯ ಲಿಂಗಾಯತ ಮಹಾಧಿವೇಶನವನ್ನು ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರು, 'ಮಹಾಧಿವೇಶನದ ಸರ್ವಾಧ್ಯಕ್ಷರಾಗಿ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿಯಾದ ಎಸ್.ಎಂ. ಜಾಮದಾರ್ ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಲಿದ್ದಾರೆ. ಲಿಂಗಾಯತ ಸಂಘಟನೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಈ ಮಹಾಧಿವೇಶನ ಸಹಕಾರಿಯಾಗಲಿದೆ' ಎಂದು ಮಾಹಿತಿ ನೀಡಿದರು.

ವಿದುಷಿ ನೀಲಾ ರಾಮ್‌ಗೋಪಾಲ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಿದುಷಿ ನೀಲಾ ರಾಮ್‌ಗೋಪಾಲ್ (87) ಅವರು ಬುಧವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಅರಕೆರೆಯಲ್ಲಿರುವ ಅವರ ಪುತ್ರನ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ.

ತಮಿಳುನಾಡಿನಲ್ಲಿ 1935ರಲ್ಲಿ ಜನಿಸಿದ ಅವರು, ರಾಮ್‌ಗೋಪಾಲ್ ಅವರನ್ನು ಮದುವೆಯಾದ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದರು. ತಮಿಳುನಾಡಿನ ತ್ಯಾಗರಾಜಪುರಂ ಎಂಬ ಹಳ್ಳಿಯಿಂದ ಆರಂಭವಾದ ಅವರ ಗಾಯನ ಯಾತ್ರೆ, ಲಂಡನ್‌ನ ಭಾರತೀಯ ಭವನದವರೆಗೂ ತಲುಪಿದೆ. 72 ಮೇಳಕರ್ತ ರಾಗಗಳನ್ನು ಹಾಡಿ 19 ಧ್ವನಿಸುರಳಿ ಹೊರತಂದಿದ್ದಾರೆ. 59ನೇ ವರ್ಷದಲ್ಲಿ ಅವರು ಕ್ಯಾನ್ಸರ್‌ಗೆ ತುತ್ತಾಗಿದ್ದರು. ಕ್ಯಾನ್ಸರ್ ಜಯಿಸಿದ ಅವರು, ಮತ್ತೆ ಗಾಯನದಲ್ಲಿ ತೊಡಗಿಕೊಂಡಿದ್ದರು. ಅಪಾರ ಸಂಖ್ಯೆಯಲ್ಲಿ ಶಿಷ್ಯರನ್ನು ಹೊಂದಿರುವ ಅವರು, 'ನೀಲಾ ಮಾಮಿ' ಎಂದೇ ಪ್ರಸಿದ್ಧರಾಗಿದ್ದರು.

ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಸಂಗೀತ ಕಲಾಚಾರ್ಯ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾಶ್ರೀ', ರಾಮಸೇವಾ ಮಂಡಳಿ ನೀಡುವ ಸಂಗೀತ ಚೂಡಾಮಣಿ ಸೇರಿ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ.

M.P. STATE MINOR FOREST PRODUCE (TRADING & DEVELOPMENT) CO-OPERATIVE FEDERATION LIMITED

Sports Complex, Indira Nikunj, 74 Bungalows Bhopal-462003 (Madhya Pradesh), Tel. : 2674349, 2760858
Fax : 0755-2552628, E-mail : mpmfpit@gmail.com
Website : www.mfpfederation.com/emfp.mp.gov.in

Notification No. T.P.(2023)-II Bhopal, Dated 28.02.2023

SUMMARY OF ONLINE TENDER NOTICE FOR THE ADVANCE SALE OF TENDU LEAVES FOR COLLECTION SEASON 2023

(1) Online Submission and Opening of e-Tender : e-Tender can be submitted Online from 16.03.2023 to 20.03.2023 till 3.00 P.M. in the e-Procurement portal **https://mfpfederation.abcprocure.com** only, the tender will be opened online on 20.03.2023 from 3.30 P.M. on the last day of submission.
(2) Earnest Money Deposit : Only online payment of 8% of the purchase Capacity through e-Procurement portal **https://mfpfederation.abcprocure.com**
(3) Registration : (i) The tenderer must be registered as the Manufacturer/Trader of the tendu leaves in any division of Madhya Pradesh for the year 2023. (ii) The intending tenderers are required to get registered for participation in e-Tender according to procedure specified in e-Procurement portal **https:// mfpfederation.abcprocure.com**
(4) Digital Certificate : The tenderer will have to obtain Digital Signature Certificate from above portal or any other vendor for online registration on e-Procurement portal as well as for submission of online Tender.
The tender notice along with tender form, tenderer's agreement, lot list and other Annexure may be downloaded from 10.03.2023 from Federation's above mentioned website or e-Procurement portal **https://mfpfederation.abcprocure.com** only. Amendments/Notices will be available on above website and e-Procurement portal.
For any assistance in e-tendering please contact our service provider E-Procurement Technologies Ltd., Ahmedabad On following contact details
Phone : 079 35022180/35022167/68136871/6854/6848/6849/6850, 9081000427, 9374519729, 6353217080, 9081003339, Fax : 079 4001 6816
E-Mail : nandan.v@eptl.in, dinesh.k@eptl.in, dharam@eptl.in, info@abcprocure.com & support@abcprocure.com
Mr. Nandan (Phone : 09081000427) & Mr. Dinesh (Phone : 09374519729)

M.P. Madhyam/108752/2023 **MANAGING DIRECTOR**

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ,
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು

ಸಂಖ್ಯೆ/ಬಿ4/ಎಲ್.ಎನ್.ಡಿ/ರೈಬಾ/ಸಿಆರ್–31/2022–23 **ದಿ: 27.02.2023**

ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2022–23ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3 ರಲ್ಲಿನ ಷರತ್ತುಗಳಿಗನುಗುಣವಾಗಿ" ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ.

ಉಪಯೋಗಿತ ರೈಲ್ವೆ ಹಳಿಗಳನ್ನು ವಿವಿಧ ರೈಲು ನಿಲ್ದಾಣಗಳಿಂದ ಸಾಗಾಣಿಕೆ ಮಾಡಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು.	2.50 ಕಿ.ಮೀ. (2 ಯುನಿಟ್)	133.20 ಲಕ್ಷಗಳು*

(*ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 13.03.2023 ಸಂಜೆ 5.30 ಗಂಟೆ. ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: ಮತ್ತು ಸಮಯ: 20.03.2023 ಸಂಜೆ 5.30 ಗಂಟೆ.
ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ದೂರವಾಣಿ: 08222–252041 E-Mail : dirnagarahole@aranya.gov.in

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು

DIPR/DDMYS/KSMCA/1099/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರ್‌ರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–6/.ಟೆಂಡರ್.ಅಧಿಸೂಚನೆ/2022–23/9474 ದಿನಾಂಕ: 28.02.2023

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ (01) ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: **165454** ಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ರೂ. 300.00 ಲಕ್ಷಗಳು**, 3) ಟೆಂಡರಿಗಿಟ್ಟ ಮೊತ್ತ: **ರೂ. 254.06 ಲಕ್ಷಗಳು**, 4) ಗುತ್ತಿಗೆದಾರರ ಅರ್ಹತೆ ವಿವರ : "ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, "ಕ್ಲಾಸ್–I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು, "ಕ್ಲಾಸ್–II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ, "ಕ್ಲಾಸ್–III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ, "ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು." 5) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ರೂ. 3,82,000.00, 6) ಪ್ರೀ ಬಿಡ್ ಮಿಟಿಂಗ: **08/03/2023 (11.00 ಗಂಟೆ)**, 7) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **09/03/2023 (17.30 ಗಂಟೆ)**, 8) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **10/03/2023 (16.00 ಗಂಟೆ)** 9) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ: **13/03/2023 (16.30 ಗಂಟೆ)**, 10) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **14/03/2023 (16.30 ಗಂಟೆ)**, 11) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1387/ಎಂ.ಸಿ.&ಎ/2022–23

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್ 25536625, 25536789

IFTNO. ಕಹಾಮ/ಅಭಿ/ಸೋಲಾರ್‌ಗ್ರೂಪ್‌ಕ್ಯಾಪ್ಟಿವ್/2022–23 **ದಿನಾಂಕ: 01.03.2023**

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ – 3ನೇ ಕರೆ

ಕರ್ನಾಟಕ ಹಾಲು ಮಹಾ ಮಂಡಳವು ಗ್ರೂಪ್ ಕ್ಯಾಪ್ಟಿವ್ ಅಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಟೆಂಡರನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://eproc.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ help desk ಇ–ಮೇಲ್; hphelpdesk.blr@intarvo.com ಮತ್ತು ಸಹಾಯವಾಣಿ ಸಂಖ್ಯೆ: 080–25501227/ 25501216 ಸಂಪರ್ಕಿಸಬಹುದಾಗಿದೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ ಸಂಖ್ಯೆ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಕರ್ನಾಟಕ ಹಾಲು ಮಹಾ ಮಂಡಳಿಯು ಗ್ರೂಪ್ ಕ್ಯಾಪ್ಟಿವ್ ಅಡಿಯಲ್ಲಿ ಅಂದಾಜು 110 ಮೆಗಾ ವ್ಯಾಟ್ ಸೋಲಾರ್ ವಿದ್ಯುತ್ ಸ್ಥಾವರದ ವಿನ್ಯಾಸ, ಹಣಕಾಸು, ಅಳವಡಿಕೆ ಮತ್ತು 25 ವರ್ಷಗಳ ನಿರ್ವಹಣೆ ಕೆಲಸಗಳ ಸಂಬಂಧ.	1 ಜಾಬ್	4,31,00,000/–	18 ತಿಂಗಳು (ಅನುಷ್ಠಾನ) 25 ವರ್ಷ (ನಿರ್ವಹಣೆ)

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: ದಿ. 02.03.2023 ರಿಂದ 13.03.2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ದಿ.13.03.2023 ರ ಸಾಯಂಕಾಲ 4:00 ಗಂಟೆಯವರೆಗೆ.
3. ಪ್ರಿ–ಬಿಡ್ ಸಭೆ ದಿನಾಂಕ 06.03.2023 ರ ಬೆಳಿಗ್ಗೆ 11.30 ಗಂಟೆಗೆ.
4. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: ದಿ. 14.03.2023 ರಂದು ಸಾಯಂಕಾಲ 04:30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ/ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.inನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

Infosys
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಅಂಚೆ ಮತದಾನ ಪ್ರಕಟಣೆ

ಸದಸ್ಯರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ತಿದ್ದುಪಡಿಗೊಂಡಿರುವ ಕಂಪನಿಗಳ ಕಾಯ್ದೆ, 2013ರ (**"ಕಾಯ್ದೆ"**) ಸೆಕ್ಷನ್ 108 ಮತ್ತು 110 ಅನ್ನು ತಿದ್ದುಪಡಿಗೊಂಡಿರುವ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014 (**"ಮ್ಯಾನೇಜ್‌ಮೆಂಟ್ ರೂಲ್ಸ್"**) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ವಯ, ಕಾರ್ಪೊರೇಟ್ ಸಚಿವಾಲಯ, ಭಾರತ ಸರ್ಕಾರ (**"ಎಂಸಿಎ ಸರ್ಕ್ಯೂಲರ್ಸ್"**) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸ. 14/2020 ದಿನಾಂಕ ಏಪ್ರಿಲ್ 8, 2020ರ, 17/2020ರ ದಿನಾಂಕ ಏಪ್ರಿಲ್ 13, 2020ರ, 20/2020 ದಿನಾಂಕ ಮೇ 5, 2020ರ 22/2020 ದಿನಾಂಕ ಜೂನ್ 15, 2020ರ, 33/2020 ದಿನಾಂಕ ಸೆಪ್ಟಂಬರ್ 28, 2020ರ, 39/2020 ದಿನಾಂಕ ಡಿಸೆಂಬರ್ 31, 2020ರ, 10/2021 ದಿನಾಂಕ ಜೂನ್ 23, 2021ರ, 20/2021 ದಿನಾಂಕ ಡಿಸೆಂಬರ್ 8, 2021ರ, 3/2021 ದಿನಾಂಕ ಮೇ 5, 2022ರ ಮತ್ತು 11/2022 ದಿನಾಂಕ ಡಿಸೆಂಬರ್ 28, 2022 ಮೇರೆಗೆ, ಭಾರತೀಯ ಕಂಪನಿ ಸೆಕ್ರೆಟರೀಸ್ ಸಂಸ್ಥೆಯಿಂದ ಹೊರಡಿಸಲಾಗಿರುವ ಜನರಲ್ ಮೀಟಿಂಗ್‌ಗಳಿಗೆ ಸಂಬಂಧಿತ ಸೆಕ್ರೆಟರಿಯಲ್ ಸ್ಟಾಂಡರ್ಡ್ ಮೇರೆಗೆ, ತಿದ್ದುಪಡಿಗೊಂಡಿರುವ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015ರ ಮೇರೆಗೆ ಮತ್ತು ಇನ್ನಿತರ ಅನ್ವಯಿತ ಕಾನೂನು, ನಿಯಮಗಳು ಮತ್ತು ನಿಯಮಾವಳಿಗಳು (ತಾತ್ಕಾಲಿಕವಾಗಿ ಕಾಲಕ್ಕೆ ತಕ್ಕಂತೆ ಚಾಲ್ತಿಯಲ್ಲಿರುವ ಯಾವುದೇ ಶಾಶನಬದ್ಧ ಮಾರ್ಪಾಡುಗಳ ಅಥವಾ ರಿ–ಎನಾಕ್ಟ್‌ಮೆಂಟ್) ಮೇರೆಗೆ, ರಿಮೋಟ್ ಇ–ವೋಟಿಂಗ್ (**"ಇ–ವೋಟಿಂಗ್"**) ಪ್ರಕ್ರಿಯೆ ಮುಖಾಂತರ ಕೆಳಕಂಡ ಠರಾವುಗಳಿಗೆ ಇನ್‌ಫೋಸಿಸ್ ಲಿಮಿಟೆಡ್‌ನ (**"ಕಂಪನಿ"**) ಸದಸ್ಯರ ಅನುಮೋದನೆ ಕೋರಲಾಗಿದೆ:

ವಿಶೇಷ ಠರಾವಿನ ವಿವರ
ಗೋವಿಂದ ವೈದಿರಾಮ್ ಅಯ್ಯರ್ (DIN: 00169343) ಇವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರಾಗಿ ನೇಮಕ ಮಾಡುವುದು

ಎಂಸಿಎ ಸುತ್ತೋಲೆಗಳ ಪ್ರಕಾರ, ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಜೊತೆಗೆ ತನ್ನ ಇಮೇಲ್ ವಿಳಾಸಗಳನ್ನು ಫೆಬ್ರವರಿ 24, 2022 ರಂದು (**"ಕಟ್‌ಆಫ್–ದಿನಾಂಕ"**) ನೋಂದಣಿ ಮಾಡಿಕೊಂಡಿರುವ ಎಲ್ಲಾ ಸದಸ್ಯರಿಗೆ, ಬುಧವಾರ, ಮಾರ್ಚ್ 1, 2023 ರಂದು ವಿದ್ಯುನ್ಮಾನ ವಿಧಾನದಲ್ಲಿ, ಕಂಪನಿಯು ಅಂಚೆ ಮತದಾನ ಪ್ರಕಟಣೆಯ ಜೊತೆಗೆ ವಿವರಣಾತ್ಮಕ ವರದಿಯನ್ನು ರವಾನಿಸಿರುತ್ತದೆ.

ಎಡಿಆರ್ ಡಿಪಾಸಿಟರಿ ಆಗಿರುವ, ಅಮೇರಿಕದ ಡಚ್ ಬ್ಯಾಂಕ್ ಟ್ರಸ್ಟ್ ಕಂಪನಿಗೆ ಕೂಡ ಅಂಚೆ ಮತದಾನ ಪ್ರಕಟಣೆಯನ್ನು ಒದಗಿಸಲಾಗಿದ್ದು, ಅವರು ಇದನ್ನು (1) ಕಂಪನಿಯ ಇಕ್ವಿಟಿ ಷೇರುಗಳ ಅಡಿಯಲ್ಲಿನ ಅಮೇರಿಕನ್ ಡಿಪಾಸಿಟರಿ ಷೇರುಗಳನ್ನು (**"ಎಡಿಎಸ್"**) ಸಾಬೀತುಪಡಿಸಬಲ್ಲ ಅಮೇರಿಕನ್ ಡಿಪಾಸಿಟರಿ ರಸೀದಿಗಳನ್ನು ಹೊಂದಿರುವ ನೋಂದಾಯಿತ ಹಿಡುವಳಿದಾರರಿಗೆ; ಮತ್ತು (2) ದಿ ಡಿಪಾಸಿಟರಿ ಟ್ರಸ್ಟ್ ಕಂಪನಿ (**"ಡಿಟಿಸಿ"**) ಮೇಲಿಂಗ್ ಏಜೆಂಟ್, ನಂತರದಲ್ಲಿ ಅವರ ಮತದಾನ ಸೂಚನಾ ನಮೂನೆಗಳನ್ನು ಮೇಲ್ ಮಾಡುವ ಇವರು, ಡಿಟಿಸಿ'ಯಲ್ಲಿ ಬ್ಯಾಂಕ್, ಬ್ರೋಕರ್ ಅಥವಾ ಇನ್ನಿತರ ನಾಮಿನಿಗಳ ಹಾಗೂ ಫಲಾನುಭವಿ ಎಡಿಎಸ್ ಹಿಡುವಳಿದಾರರಿಗೆ ಅಂಚೆ ಮತದಾನದ ಪ್ರಕಟಣೆಯ ಸಮೇತ ಮೇಲ್ ರವಾನಿಸುತ್ತಾರೆ.

ಸದರಿ ನೋಟಿಸ್ ಕಂಪನಿಯ www.infosys.com ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ, ಇದಕ್ಕೆ ಸಂಬಂಧಿತ ಬಿಎಸ್‌ಇ ಲಿಮಿಟೆಡ್ (**"ಬಿಎಸ್‌ಇ"**) ವೆಬ್‌ಸೈಟ್: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್‌ನ (**"ಎನ್‌ಎಸ್‌ಇ"**) www.nseindia.com ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿದ್ದು ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ (**"ಎನ್‌ಎಸ್‌ಡಿಎಲ್"**) www.evoting.nsdl.com ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತದೆ.

ಎಂಸಿಎ ಸುತ್ತೋಲೆಗಳ ನಿಯಮಗಳ ಪ್ರಕಾರ, ಸದಸ್ಯರು ಇ–ವೋಟಿಂಗ್ ವಿಧಾನದಲ್ಲಿ ಮಾತ್ರ ಮತ ಚಲಾಯಿಸಬಹುದು. ಸದಸ್ಯರ ಮತದಾನದ ಹಕ್ಕುಗಳನ್ನು, ಕಟ್‌ಆಫ್ ದಿನಾಂಕದಂದು ಅವರು ಹೊಂದಿರುವ ಕಂಪನಿಯ ಇಕ್ವಿಟಿ ಷೇರುಗಳ ಆಧಾರದ ಮೇರೆಗೆ ನಿರ್ಧರಿಸಲಾಗುತ್ತದೆ. ಕಟ್‌ಆಫ್ ದಿನಾಂಕದಂದು ಕಂಪನಿಯ ಷೇರುದಾರ ಅಗಿಲ್ಲದಿರುವ ಯಾವುದೇ ವ್ಯಕ್ತಿಯು ಸದರಿ ಅಂಚೆ ಮತದಾನ ಪ್ರಕಟಣೆಯನ್ನು ಕೇವಲ ತನ್ನ ಮಾಹಿತಿಗಾಗಿ ಎಂದು ಮಾತ್ರ ಭಾವಿಸತಕ್ಕದ್ದು.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ, ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ (**"ಎನ್‌ಎಸ್‌ಡಿಎಲ್"**) ಇವರನ್ನು ಸೇವಾ ಪೂರೈಕೆದಾರರನ್ನಾಗಿ ನಿಯೋಜಿಸಿಕೊಂಡಿರುತ್ತದೆ. ಸದರಿ ಇ–ವೋಟಿಂಗ್ ಪ್ರಕ್ರಿಯೆಯು **ಗುರುವಾರ, ಮಾರ್ಚ್ 2, 2023 ರಂದು ಬೆಳಗ್ಗೆ 09.00 ಗಂಟೆ** ಆರಂಭವಾಗುತ್ತದೆ ಮತ್ತು **ಶುಕ್ರವಾರ, ಮಾರ್ಚ್ 31, 2023 ರಂದು ಸಂಜೆ 05.00 ಗಂಟೆಗೆ** ಮುಕ್ತಾಯವಾಗುತ್ತದೆ. ತದನಂತರ ಎನ್‌ಎಸ್‌ಡಿಎಲ್ ಇವರಿಂದ ಇ–ವೋಟಿಂಗ್ ಪ್ರಕ್ರಿಯೆ ಅಂತ್ಯಗೊಳ್ಳುತ್ತದೆ.

ಇನ್ನೂವರೆಗೆ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ವಿದ್ಯುನ್ಮಾನ ವಿಧಾನದ ಷೇರುಗಳನ್ನು ಹೊಂದಿದ್ದಲ್ಲಿ ಅಂತಹವರು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಮುಖಾಂತರ ತಮ್ಮ ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳತಕ್ಕದ್ದು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು einward.ris@kfintechcom ವಿಳಾಸಕ್ಕೆ ಮೇಲ್ ಬರೆಯುವ ಮೂಲಕವಾಗಲಿ ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಂ ಟವರ್ ಬಿ, ಪ್ಲಾಟ್ 31 & 32, ಫೈನಾನ್ಷಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಳ, ಹೈದರಾಬಾದ್ – 500032 ವಿಳಾಸಕ್ಕೆ ಲಿಖಿತ ಮನವಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು.

ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವುದಕ್ಕಾಗಿ, ಹೇಮಂತ್, ಹೊಳ್ಳ & ಕೋ., (ಸದಸ್ಯತ್ವ ಸಂ. ಎಫ್‌ಸಿಎಸ್ 6347) (ಸಿಪಿ ನಂ. 6519) ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ, ಕಂಪನಿಯ ಮಂಡಳಿಯಿಂದ ಪರಿಶೀಲಕರನ್ನಾಗಿ ನಿಯೋಜಿಸಲಾಗಿದೆ.

ಯಾವುದೇ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ, www.evoting.nsdl.com ವೆಬ್‌ಸೈಟ್‌ನ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಫ್ರಿಕ್ವೆಂಟ್ಲಿ ಆಸ್ಕಡ್ ಕ್ವೆಶ್ಚನ್ಸ್ ಅಡಿಯಲ್ಲಿ ಲಭ್ಯವಿರುವ ಷೇರುದಾರರ ಮತ್ತು ಇ–ವೋಟಿಂಗ್ ಯೂಸರ್ ಮ್ಯಾನುಯಲ್ ಅನ್ನು ಪರಿಶೀಲಿಸಬಹುದು ಅಥವಾ 022–4886 7000 / 022–2499 7000 ಸಂಖ್ಯೆಗೆ ಸಂಪರ್ಕಿಸಬಹುದು ಅಥವಾ evoting@nsdl.co.in ವಿಳಾಸಕ್ಕೆ ಮನವಿ ಸಲ್ಲಿಸಬಹುದು.

ಇ–ವೋಟಿಂಗ್ ಪರಿಶೀಲನೆಯ ನಂತರ, ಪರಿಶೀಲಕರು ತಮ್ಮ ವರದಿಯನ್ನು ಚೇರ್ಮನ್ ಅಥವಾ ಚೇರ್ಮನ್ನರ ಇನ್ನಿತರ ಯಾವುದೇ ಅಧಿಕೃತ ವ್ಯಕ್ತಿಗೆ ಸಲ್ಲಿಸುತ್ತಾರೆ, ಮತ್ತು ಅಂಚೆ ಮತದಾನದ ಮೂಲಕ ನಡೆದ ಮತದಾನ ಫಲಿತಾಂಶವನ್ನು ಏಪ್ರಿಲ್ 2, 2023 ರೊಳಗೆ ಘೋಷಿಸಲಾಗುತ್ತದೆ ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿ (https://www.infosys.com/investors/shareholder-services/postal-ballot.html) ಮತ್ತು ಎನ್‌ಎಸ್‌ಡಿಎಲ್' ರವರ (https://www.evoting.nsdl.com) ವೆಬ್‌ಸೈಟ್‌ನಲ್ಲಿ ಕೂಡ ಪ್ರಕಟಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜಸ್, ಡಿಪಾಸಿಟರಿ, ರಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಜೊತೆಗೆ ಕೂಡ ಫಲಿತಾಂಶವನ್ನು ತಿಳಿಸಲಾಗಿದೆ.

ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ ಅಥವಾ ದೂರು ದುಮ್ಮಾನಗಳಿದ್ದಲ್ಲಿ, ಷೇರುದಾರರು ಶೋಭಾ ಆನಂದ್, ಡೆಪ್ಯೂಟಿ ವೈಸ್ ಪ್ರೆಸಿಡೆಂಟ್, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಂ ಟವರ್ ಬಿ, ಪ್ಲಾಟ್ 31 & 32, ಫೈನಾನ್ಷಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಳ, ಹೈದರಾಬಾದ್ – 500032 ಇವರನ್ನು ಫೋನ್ ನಂ.: 1800–309–4001 ಸಂಖ್ಯೆಯಲ್ಲಿ ಸಂಪರ್ಕಿಸಬಹುದು. ಇಮೇಲ್ ಐಡಿ: shobha.anand@kfintech.com; einward.ris@kfintech.com; ದೂರವಾಣಿ ಸಂಖ್ಯೆ – 1800–309–4001. ಅಲ್ಲದೆ, ಷೇರುದಾರರು ಅಮಿತ್ ವಿಶಾಲ್, ಅಸಿಸ್ಟಂಟ್ ವೈಸ್ ಪ್ರೆಸಿಡೆಂಟ್ ಅಥವಾ ಪಲ್ಲವಿ ಮ್ಹಾತ್ರೆ, ಸೀನಿಯರ್ ಮ್ಯಾನೇಜರ್, ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್, 4ನೇ ಮಹಡಿ, ಎ ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ – 400013, ಭಾರತ ಇವರನ್ನು ಕೂಡ ಸಂಪರ್ಕಿಸಬಹುದು. ಸಂಪರ್ಕಿಸುವ ವಿವರ: evoting@nsdl.co.in ದೂರವಾಣಿ ಸಂಖ್ಯೆ – 022–4886 7000 / 022–2499 7000

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್.ಮಣಿಕಂಠ
ಕಂಪನಿ ಕಾರ್ಯದರ್ಶಿ

ಮಾರ್ಚ್ 1, 2023
ಬೆಂಗಳೂರು, ಭಾರತ

ವಿಜಯ ಸಂಕಲ್ಪ ಯಾತ್ರೆ ಮೂಲಕ ವಿಜಯ ಪತಾಕೆ: ಜೆ.ಪಿ.ನಡ್ಡಾ ಹೇಳಿಕೆ

ಚುನಾವಣೆಗೆ ರಣಕಹಳೆ ಮೊಳಗಿಸಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ಮಹದೇಶ್ವರಬೆಟ್ಟ (ಚಾಮರಾಜನಗರ): ರಾಜ್ಯದ ಎಲ್ಲ ಕ್ಷೇತ್ರಗಳನ್ನು ಸಂದರ್ಶಿಸುವ ವಿಜಯ ಸಂಕಲ್ಪ ಯಾತ್ರೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಸಿದ್ಧ ಯಾತ್ರಾ ಸ್ಥಳ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಚಾಲನೆ ನೀಡಿ ವಿಧಾನಸಭಾ ಚುನಾವಣೆಯ ರಣಕಹಳೆ ಮೊಳಗಿಸಿದರು.

ಪ್ರಚಾರ ರಥಕ್ಕೆ ಚಾಲನೆ ನೀಡಿ ಮಹದೇಶ್ವರ ಬೆಟ್ಟ ಮತ್ತು ಹನೂರಿನಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, ‘ಮಲೆಮಹದೇಶ್ವರ ಸ್ವಾಮಿಯ ಆಶೀರ್ವಾದ ಪಡೆದು ಆರಂಭಿಸಿರುವ ಯಾತ್ರೆಯ ಮೂಲಕ ಜನರ ಆಶೀರ್ವಾದ ಪಡೆದು ಕರ್ನಾಟಕದಲ್ಲಿ ಪಕ್ಷವು ವಿಜಯ ಪತಾಕೆ ಹಾರಿಸಲಿದೆ. ಕರ್ನಾಟಕ ಅಭಿವೃದ್ಧಿಯಾಗಬೇಕಾದರೆ, ಬಿಜೆಪಿಗೆ ಶಕ್ತಿ ತುಂಬಬೇಕು. ಇದಕ್ಕಾಗಿ ರಾಜ್ಯದ ಜನರು ಚುನಾವಣೆಯಲ್ಲಿ ‘ಕಮಲ’ ಅರಳಿಸಬೇಕು’ ಎಂದರು.

‘ನಾಲ್ಕು ಕಡೆಗಳಿಂದ ಯಾತ್ರೆ ಹೊರಡಲಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಗುರುವಾರ ಬೆಳಗಾವಿಯಲ್ಲಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇನ್ನೆರಡು ಕಡೆಗಳಲ್ಲಿ ಉದ್ಘಾಟಿಸಲಿದ್ದಾರೆ. ರಾಜ್ಯದ ಎಲ್ಲ 224 ಕ್ಷೇತ್ರಗಳಿಗೂ ಯಾತ್ರೆ ಸಂಚರಿಸಿ, 20 ದಿನಗಳಲ್ಲಿ 8000 ಕಿ.ಮೀ ಕ್ರಮಿಸಲಿದ್ದು, 75 ಸಮಾವೇಶ, 150ಕ್ಕೂ ಹೆಚ್ಚು ರೋಡ್ ಶೋಗಳು ನಡೆಯಲಿವೆ’ ಎಂದರು.

ಬಿಜೆಪಿ ದಿಗ್ವಿಜಯ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಪಕ್ಷವನ್ನು ಮತ್ತೊಮ್ಮೆ ವಿಜಯಶಾಲಿ ಮಾಡಬೇಕು ಎಂದು ಮಲೆ ಮಹದೇಶ್ವರ ಸ್ವಾಮಿಯಲ್ಲಿ ಸಂಕಲ್ಪ ಮಾಡಿದ್ದೇವೆ. ಅದು ಆಗಿಯೇ ತೀರುತ್ತದೆ’ ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ‘ಮೋದಿಯಂತಹ ಪ್ರಧಾನಿ, ಅಮಿತ್ ಶಾ, ಜೆ.ಪಿ.ನಡ್ಡಾ ಅವರಂತಹ ನಾಯಕರು ಪಕ್ಷದಲ್ಲಿದ್ದಾರೆ. ರಾಜ್ಯದಾದ್ಯಂತ ಓಡಾಡಿ 140ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಿಸುವ ಸಂಕಲ್ಪ ಮಾಡಿದ್ದೇನೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಸಚಿವರಾದ ಅರಗ ಜ್ಞಾನೇಂದ್ರ, ವಿ.ಸುನಿಲ್ ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಕೆ.ಎಸ್.ಈಶ್ವರಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಶಾಸಕ ನಿರಂಜನಕುಮಾರ್, ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಇದ್ದರು.

ಚಾಮರಾಜನಗರ ಜಿಲ್ಲೆಯ ಹನೂರಿನಲ್ಲಿ ಬುಧವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಭಾಗವಹಿಸಿದ್ದ ಜನಸ್ತೋಮ

ಬಿಎಸ್‌ವೈ, ಬೊಮ್ಮಾಯಿಗೆ ಹೊಗಳಿಕೆ

ಹನೂರಿನಲ್ಲಿ ನಡೆದ ಸಮಾವೇಶದಲ್ಲಿ ನಡ್ಡಾ ಅವರು ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರನ್ನು ಹಾಡಿ ಹೊಗಳಿದರು. ‘ಇಬ್ಬರೂ ರಾಜ್ಯದ ಚಿತ್ರಣವನ್ನೇ ಬದಲಿಸಿದ್ದಾರೆ. ಹೆದ್ದಾರಿ, ವಿಮಾನ ನಿಲ್ದಾಣಗಳಂತಹ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ ಹಾಗೂ ಹೊಸ ಶಿಕ್ಷಣ ನೀತಿ ಅನುಷ್ಠಾನದಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿದೆ. ವಿಮಾನಗಳು, ಹೆಲಿಕಾಪ್ಟರ್‌ಗಳ ತಯಾರಿಕೆಯಲ್ಲಿ ರಾಜ್ಯ ಮುಂದಿದೆ’ ಎಂದರು.

‘ಯಡಿಯೂರಪ್ಪ ಬೇಕು’

ಎಂಟು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಜನ ಯಡಿಯೂರಪ್ಪ ಭಾಷಣಕ್ಕಾಗಿ ಕಾದು ಕುಳಿತಿದ್ದರು. ಬೇಗ ಹೋಗಬೇಕಾಗಿದ್ದರಿಂದ ನಡ್ಡಾ ಮೊದಲು ಮಾತನಾಡಿದರು. ಆದರೆ, ಭಾಷಣದ ನಡುವೆ ಜನರು ಯಡಿಯೂರಪ್ಪ ಪರ ಘೋಷಣೆ ಕೂಗಿ ಅವರು ಮಾತನಾಡಬೇಕು ಎಂದು ಒತ್ತಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ನಡ್ಡಾ, ನಿಮ್ಮ ಭಾವನೆ ಅರ್ಥವಾಗುತ್ತದೆ. ಕೆಲವು ನಿಮಿಷ ತಾಳ್ಮೆಯಿಂದಿರಿ’ ಎಂದು ಕೋರಿದರು. ಹಾಗಿದ್ದರೂ, ಜನ ‘ಯಡಿಯೂರಪ್ಪ ಬೇಕು’ ಎಂದು ಕೂಗುತ್ತಲೇ ಇದ್ದರು.

ಎದ್ದು ಕಾಣಿಸಿದ ಸೋಮಣ್ಣ ಗೈರು

ಯಾತ್ರೆಯ ಮೊದಲ ತಂಡದಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರ ಗೈರುಹಾಜರಿ ಕಾರ್ಯಕ್ರಮದಲ್ಲಿ ಎದ್ದು ಕಂಡಿತು. ಅವರು ಭಾಗವಹಿಸದೇ ಇದ್ದುದು ಕಾರ್ಯಕರ್ತರ ನಡುವೆ ಚರ್ಚೆಗೆ ಗ್ರಾಸವಾಯಿತು.

ಸುದ್ದಿ 2 ನಿಮಿಷ

ಲಂಚ: ಬೆಸ್ಕಾಂ ಎ.ಇ ಬಂಧನ

ಬೆಂಗಳೂರು: ಮನೆಯೊಂದರ ಆವರಣದಲ್ಲಿದ್ದ ವಿದ್ಯುತ್ ಕಂಬ ಸ್ಥಳಾಂತರಿಸುವ ಕಾಮಗಾರಿಯ ಕಾರ್ಯಾದೇಶ ನೀಡಲು ₹ 20,000 ಲಂಚ ಪಡೆಯುತ್ತಿದ್ದ ಬೆಸ್ಕಾಂ ಬೆನ್ನಿಗಾನಹಳ್ಳಿ ಕಾರ್ಯಾಚರಣೆ ಮತ್ತು ನಿರ್ವಹಣೆ (ಇ–10) ಉಪ ವಿಭಾಗದ ಸಹಾಯಕ ಎಂಜಿನಿಯರ್ ವಿದ್ಯಾ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬೆಸ್ಕಾಂನ–10 ಉಪ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ ಮನೆಯೊಂದರ ಆವರಣದಲ್ಲಿದ್ದ ವಿದ್ಯುತ್ ಕಂಬದ ಸ್ಥಳಾಂತರ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನಾರಾಯಣಪುರ ನಿವಾಸಿ ಅರವಿಂದ್ ಎಂಬ ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಬೇಕಿತ್ತು. ಅವರು ಕಚೇರಿಯನ್ನು ಸಂಪರ್ಕಿಸಿದ್ದಾಗ ಕಾರ್ಯಾದೇಶ ನೀಡಲು ₹25,000 ಲಂಚ ಕೊಡುವಂತೆ ಸಹಾಯಕ ಎಂಜಿನಿಯರ್ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ₹ 5,000 ಪಡೆದುಕೊಂಡಿದ್ದರು.

ಬೆಸ್ಕಾಂ ಸಹಾಯಕ ಎಂಜಿನಿಯರ್ ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ಗುತ್ತಿಗೆದಾರ ದೂರು ನೀಡಿದ್ದರು. ಬೆನ್ನಿಗಾನಹಳ್ಳಿಯಲ್ಲಿರುವ ಬೆಸ್ಕಾಂ ಕಚೇರಿಯಲ್ಲೇ ಬುಧವಾರ ₹20,000 ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಲೋಕಾಯುಕ್ತ ಡಿವೈಎಸ್ಪಿ ಉಮಾದೇವಿ ಆರ್. ಮತ್ತು ತಂಡ ಆರೋಪಿ ವಿದ್ಯಾ ಅವರನ್ನು ಬಂಧಿಸಿದೆ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್ ಪಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ.

18 ಮಂದಿಗೆ ಜಾನಪದ ಲೋಕ ಪ್ರಶಸ್ತಿ

ರಾಮನಗರ: ಇಲ್ಲಿನ ಜಾನಪದ ಲೋಕದಲ್ಲಿ ಮಾರ್ಚ್ 4 ಮತ್ತು 5ರಂದು ಬುಡಕಟ್ಟು ಜಾನಪದ ಲೋಕೋತ್ಸವ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭ ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ನಾಡಿನ 18 ಕಲಾವಿದರು, ಜನಪದ ತಜ್ಞರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪರಿಷತ್ತಿನ ಅಧ್ಯಕ್ಷ ಪ್ರೊ. ಹಿ.ಶಿ. ರಾಮಚಂದ್ರೇಗೌಡ ತಿಳಿಸಿದ್ದಾರೆ.

ಪ್ರಶಸ್ತಿ ₹10 ಸಾವಿರದಿಂದ ₹25ಸಾವಿರದವರೆಗಿನ ನಗದು ಪುರಸ್ಕಾರ ಹಾಗೂ ಫಲಕ ಒಳಗೊಂಡಿದೆ. ಮಾರ್ಚ್ 5ರಂದು ಸಂಜೆ 5.30ಕ್ಕೆ ಜಾನಪದ ಲೋಕದ ಬಯಲು ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಡಿ.ವಿ. ಸದಾನಂದ ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪ್ರಶಸ್ತಿ ಪುರಸ್ಕೃತರು: ಯಲ್ಲವ್ವ ಮಾದರ (ಬೆಳಗಾವಿ), ಸೋಮಶೇಖರ ಇಮ್ರಾಪುರ (ಧಾರವಾಡ), ಶಾರದ ಸೋಮಯ್ಯ (ಕೊಡಗು), ಕಡಬ ಶ್ರೀನಿವಾಸ (ಬೆಂಗಳೂರು), ಶಿವನಂಜೇಗೌಡ (ಹಾಸನ), ಗೌರಮ್ಮ (ರಾಮನಗರ), ಸೂಲಗಿತ್ತಿ ಸೋಬಾನೆ ನಂಜಮ್ಮ (ತುಮಕೂರು), ದೊಡ್ಡಮನಿ ಗೋಪಾಲಪ್ಪ (ವಿಜಯನಗರ), ಹೇರಂಜೆ ಗೋಪಾಲ ಗಾಣಿಗ (ಉಡುಪಿ), ಉಸ್ತಾದ್ ಮಿರ್ಜಿ ಪೈಲ್ವಾನ್ (ಬಳ್ಳಾರಿ), ಮಹದೇವಪ್ಪ ಮೋನಪ್ಪ ಬಡಿಗೇರ (ಬಾಗಲಕೋಟೆ), ಶಿವಲಿಂಗಪ್ಪ (ಕೊಪ್ಪಳ), ಕೆ.ವಿ. ರಮೇಶ್ (ಕಾಸರಗೋಡು), ಶರಣಯ್ಯ ಸ್ವಾಮಿ (ಬೀದರ್), ವೈ.ನಿಂಗಪ್ಪ (ಬಳ್ಳಾರಿ), ಶಿವಾನಂದ ಕಳವೆ, ಶಾಂತಿ ನಾಯಕ್ (ಉತ್ತರ ಕನ್ನಡ).

ವಿಶೇಷ ಪುರಸ್ಕಾರ: ಕುರುವ ಬಸವರಾಜು (ಬೆಂಗಳೂರು).

‘ಬಿಜೆಪಿ, ಕಾಂಗ್ರೆಸ್‌ನಿಂದ ಆಹ್ವಾನ’

ಸುಮಲತಾ

ಮದ್ದೂರು: ‘ರಾಜ್ಯ ರಾಜಕಾರಣಕ್ಕೆ ಬರುವಂತೆ ಬಿಜೆಪಿ, ಕಾಂಗ್ರೆಸ್ ಆಹ್ವಾನಿಸಿದ್ದು, ನನ್ನ ಕಾರ್ಯಕರ್ತರ ಅಭಿಪ್ರಾಯ ಪಡೆದ ಬಳಿಕ ನಿರ್ಧರಿಸುವೆ’ ಎಂದು ಸಂಸದೆ ಸುಮಲತಾ ಅಂಬರೀಷ್ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚುನಾವಣೆಗೆ ಎಷ್ಟು ದಿನಗಳಿವೆ ಎಂಬುದ ಕ್ಕಿಂತಲೂ ಎಷ್ಟು ಅನುಕೂಲ ಕರ ವಾತಾವರಣವಿದೆ ಎಂಬುದು ಮುಖ್ಯ. ರಾಜ್ಯ ರಾಜಕಾರಣಕ್ಕೆ ಬರುವ ಮಾತನಾಡಲು ಇನ್ನೂ ಸಮಯ ಬಂದಿಲ್ಲ’ ಎಂದರು.

‘ದಶಪಥ ಹೆದ್ದಾರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಸದೆಯಾಗಿ ಭಾಗವಹಿಸುತ್ತೇನೆ ಅಷ್ಟೇ. ಜಿಲ್ಲೆಗೆ ವಿಶೇಷ ಅನುದಾನ ನೀಡುವಂತೆ ಪ್ರಧಾನಿಗೆ ಮನವಿ ಮಾಡುವೆ’ ಎಂದರು.

ಮೋದಿ ಸಾವು ಯಾರೂ ಬಯಸಿಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಪ್ರಧಾನಿ ನರೇಂದ್ರ ಮೋದಿ ಅವರ ಸಾವಿಗೆ ಕಾಂಗ್ರೆಸ್ ಜಪ ಮಾಡುತ್ತಿದೆ ಎಂಬುದು ದೊಡ್ಡ ಸುಳ್ಳು. ಈ ರೀತಿ ಯಾರೂ ಎಲ್ಲಿಯೂ ಹೇಳಿಲ್ಲ. ತಮ್ಮಷ್ಟಕ್ಕೆ ತಾವೇ ಇಂಥ ಭಾವುಕ ಸನ್ನಿವೇಶ ಹುಟ್ಟುಹಾಕುವುದು ಅವರಿಗೆ ಕರಗತ’ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯನನ್ನು ಮುಗಿಸಿಬಿಡಿ ಎಂದು ಅಶ್ವತ್ಥನಾರಾಯಣ ಬಹಿರಂಗವಾಗಿ ಹೇಳಿದರು. ನಮ್ಮ ಭಾವನೆಗಳು ಅವರಷ್ಟು ಕೆಟ್ಟದಾಗಿಲ್ಲ. ಪ್ರಧಾನಿ ಆರೋಗ್ಯವಾಗಿರಲಿ, ಹೆಚ್ಚು ಕಾಲ ಬದುಕಲಿ’ ಎಂದು ಅವರು ನಗರದಲ್ಲಿ ಬುಧವಾರ ಮಾಧ್ಯಮದವರ ಮುಂದೆ ಹೇಳಿದರು.

‘ಪಾಪ; ಯಡಿಯೂರಪ್ಪ ಸದನದಲ್ಲೇ ಕಣ್ಣೀರಿಟ್ಟರು. ಅವರು ಒಳಗೊಳಗೇ ಕುದಿಯುತ್ತಿದ್ದಾರೆ. ಬಿಜೆಪಿ ಸೋತು ಮನೆ ಸೇರಬೇಕು ಎಂದೇ ಬಯಸುತ್ತಿದ್ದಾರೆ’ ಎಂದೂ ಕುಟುಕಿದರು.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪಂತಬಾಳೇಕುಂದ್ರಿಯಲ್ಲಿ ‘ಪ್ರಜಾಧ್ವನಿ’ ಯಾತ್ರೆಯಲ್ಲಿ ಮಾತನಾಡಿದ ಅವರು, ‘ಬೆಳಗಾವಿ ಗ್ರಾಮೀಣ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಛತ್ರಪತಿ ಶಿವಾಜಿ ಮೂರ್ತಿ ಪ್ರತಿಷ್ಠಾಪಿಸಿದ್ದಾರೆ. ಅದರ ಉದ್ಘಾಟನೆಗೆ ಮುಖ್ಯಮಂತ್ರಿಯೇ ಹಟ ಹಿಡಿದಿದ್ದಾರೆ. ಬೊಮ್ಮಾಯಿ ಅವರಿಗೆ ನಾಚಿಕೆ ಆಗಬೇಕು’ ಎಂದು ಕಿಡಿ ಕಾರಿದರು.

‘ಪ್ರಧಾನಿ ಕೋವಿಡ್ ಬಂದಾಗ ರಾಜ್ಯಕ್ಕೆ ಬರಲಿಲ್ಲ, ಪ್ರವಾಹ ಬಂದಾಗ ಬರಲಿಲ್ಲ. ಈಗ ಚುನಾವಣೆ ಕಾಲಕ್ಕೆ ವಾರಕ್ಕೊಮ್ಮೆ ಬರುತ್ತಿದ್ದಾರೆ. ಬೆಳಗಾವಿಯಲ್ಲಿ ಬಾಡಿಗೆ ಜನರ ಕರೆತಂದು ರೋಡ್ ಶೋ ಮಾಡಿದರು. ಬೆಳಗಾವಿಗೆ ಏನು ಕೊಟ್ಟರು? ಕಳಸಾ ಬಂಡೂರಿ ಬಗ್ಗೆ ಏಕೆ ಮಾತಾಡಲಿಲ್ಲ? ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಏಕೆ ಬಾಯಿಬಿಡಲಿಲ್ಲ?’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

‘ನನ್ನ ಅಧಿಕಾರದ ವೇಳೆ ₹10,600 ಕೋಟಿ ಹೊರೆಯಾದರೂ ಆರನೇ ವೇತನ ಆಯೋಗ ಜಾರಿ ಮಾಡಿದೆ. ಮುಂದೆ ಕೂಡ ನಾನೇ ಏಳನೇ ವೇತನ ಆಯೋಗ ಜಾರಿ ಮಾಡುತ್ತೇನೆ’ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಅವರು ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಅವರೊಂದಿಗೆ ರೋಡ್ ಶೋ ಕೂಡ ನಡೆಸಿದರು.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪಂತಬಾಳೇಕುಂದ್ರಿ ಗ್ರಾಮದಲ್ಲಿ ಬುಧವಾರ ‘ಪ್ರಜಾಧ್ವನಿ’ ಯಾತ್ರೆ ಅಂಗವಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಅವರು ರೋಡ್ ಶೋ ನಡೆಸಿದರು

ಬೆಳಗಾವಿಯಲ್ಲಿ ಪ್ರಧಾನಿ ಕಾರ್ಯಕ್ರಮಕ್ಕೆ ₹25 ಕೋಟಿ ವೆಚ್ಚವಾಗಿದೆ ಎಂದು ಸರ್ಕಾರ ಹೇಳಿದೆ. ಸರ್ಕಾರದ ಹಣದಿಂದ ರೋಡ್ ಶೋ ಮಾಡಿದ್ದು ನಾಚಿಕೆಗೇಡು

ಸತೀಶ ಜಾರಕಿಹೊಳಿ
ಕೆಪಿಸಿಸಿ ಕಾರ್ಯಾಧ್ಯಕ್ಷ

‘ಬಿಎಸ್‌ವೈ ಅವರನ್ನೇ ಸಿಎಂ ಮಾಡಲಿ’

ಹಾಸನ: ‘ಪ್ರಧಾನಿ ನರೇಂದ್ರ ಮೋದಿ, ಯಡಿಯೂರಪ್ಪ ಅವರಿಗೆ ತಲೆಬಾಗಿ ನಮಿಸಿದರೆ ಸಾಲದು. ಯಡಿಯೂರಪ್ಪ ಅವರ ಕಣ್ಣಲ್ಲಿ ನೀರು ಹಾಕಿಸಿದ್ದು ಏಕೆ ಎಂಬುದನ್ನು ಸ್ಪಷ್ಟಪಡಿಸಬೇಕು. ತನಿಖಾ ಸಂಸ್ಥೆಗಳ ವಿಚಾರಣೆ ಹೆಸರಲ್ಲಿ ಅವರ ಕುಟುಂಬಕ್ಕೆ ನೀಡಿದ ಕಿರುಕುಳದ ಬಗ್ಗೆ ಮಾತನಾಡಲಿ. ಅವರ ನಾಯಕತ್ವದಲ್ಲೇ ಚುನಾವಣೆ ನಡೆಸುವುದಾದರೆ,ಅವರನ್ನು ಇವತ್ತೇ ಮುಖ್ಯಮಂತ್ರಿಯನ್ನಾಗಿ ಮಾಡಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆರಂಭದಲ್ಲಿ ಬೊಮ್ಮಾಯಿ ನಾಯಕತ್ವದಲ್ಲಿ ಚುನಾವಣೆ ಎಂದರು. ನಂತರ ಪ್ರಧಾನಿ ಮುಖ ನೋಡಿ ಮತ ಹಾಕಿ ಎಂದರು. ಈಗ ಯಡಿಯೂರಪ್ಪ ಅವರ ವಿಚಾರ ಪ್ರಸ್ತಾಪಿಸುತ್ತಿದ್ದಾರೆ. ಬಿಜೆಪಿ ತನ್ನ ನಾಯಕರನ್ನು ಬಳಸಿ ಬಿಸಾಡುವ ಸಿದ್ಧಾಂತ ಹೊಂದಿದೆ. ರಾಜ್ಯದಲ್ಲಿ ಬಿಜೆಪಿ ನಾಯಕತ್ವವೇ ಇಲ್ಲದ ಪಕ್ಷವಾಗಿದೆ. ಬೊಮ್ಮಾಯಿ ಅವರನ್ನು ಬಿಜೆಪಿಯವರೇ ನಾಯಕ ಎಂದು ಒಪ್ಪಿಕೊಳ್ಳುತ್ತಿಲ್ಲ’ ಎಂದು ಟೀಕಿಸಿದರು.

‘150 ಕ್ಷೇತ್ರಗಳಲ್ಲಿನ ಟಿಕೆಟ್ ಪಟ್ಟಿ ಸಿದ್ಧವಾಗಿದೆ. ಮಾ.7– 8 ರಂದು ಸ್ಕ್ರೀನಿಂಗ್ ಕಮಿಟಿ ಸಭೆ ನಡೆಯಲಿದೆ. ನಂತರ ಅಂತಿಮ ಪಟ್ಟಿ ಪ್ರಕಟಿಸುತ್ತೇವೆ’ ಎಂದರು.

‘ಅರಕಲಗೂಡು ಕ್ಷೇತ್ರದ ಶಾಸಕ ಎ.ಟಿ. ರಾಮಸ್ವಾಮಿ ನನ್ನನ್ನು ಭೇಟಿ ಮಾಡಿ ಮಾತನಾಡಿದ್ದಾರೆ. ಪಕ್ಷ ಈ ಬಗ್ಗೆ ಇನ್ನೂ ತೀರ್ಮಾನಿಸಬೇಕಿದೆ. ಅರಸೀಕೆರೆ ಶಾಸಕ ಶಿವಲಿಂಗೇಗೌಡರು ಈಗಾಗಲೇ ಹೇಳಿಕೊಂಡಿರುವಂತೆ, ಮಾ.5 ರಂದು ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಮಾಡಲು ಸಿದ್ದರಾಮಯ್ಯ ಅರಸೀಕೆರೆಗೆ ಹೋಗುತ್ತಿದ್ದಾರೆ’ ಎಂದು ಹೇಳುವ ಮೂಲಕ ಕಾಂಗ್ರೆಸ್ ಸೇರ್ಪಡೆಯ ಸುಳಿವು ನೀಡಿದರು.

ಎಚ್.ಪಿ. ಸ್ವರೂಪ್ ಕಾಂಗ್ರೆಸ್ ಸೇರುವ ಬಗ್ಗೆ ಮಾತುಕತೆ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ರೇವಣ್ಣ ಅವರ ಜತೆ ಎ.ಮಂಜು ಹಾಗೂ ನಾವು ಮಂಜು ಜತೆ ಮಾತನಾಡುತ್ತಿರುವುದು ನಿಜ. ಅದೇ ರೀತಿ ಸ್ವರೂಪ್ ಕೂಡ ಎಲ್ಲ ಪಕ್ಷದವರ ಜತೆ ಮಾತನಾಡುತ್ತಿದ್ದಾರೆ’ ಎಂದರು.

ಮಧ್ಯಂತರ ಪರಿಹಾರ: ಮುಷ್ಕರ ಅಂತ್ಯ

ಒಂದನೇ ಪುಟದಿಂದ...

ಮುಖ್ಯಮಂತ್ರಿಯಿಂದಲೇ ಪ್ರಕಟಣೆ: ನೌಕರರು ಮುಷ್ಕರ ಆರಂಭಿಸುವುದನ್ನು ತಡೆಯುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೌಕರರ ಸಂಘದ ಪದಾಧಿಕಾರಿಗಳ ಜತೆ ಮಂಗಳವಾರ ತಡರಾತ್ರಿವರೆಗೂ ಸಭೆ ನಡೆಸಿದ್ದರು. ಆದರೆ, ಸಹಮತ ಮೂಡದ ಕಾರಣದಿಂದ ಸಂಧಾನ ವಿಫಲವಾಗಿತ್ತು. ನಿಗದಿಯಂತೆ ಬುಧವಾರ ಬೆಳಿಗ್ಗೆ ರಾಜ್ಯದಾದ್ಯಂತ ನೌಕರರು ಮುಷ್ಕರ ಆರಂಭಿಸಿದ್ದರು. ರಾಜ್ಯದ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಸರ್ಕಾರಿ ಸೇವೆಗಳು ಸ್ಥಗಿತಗೊಂಡಿದ್ದವು.

ಮುಷ್ಕರ ಆರಂಭದ ಬಳಿಕವೂ ನೌಕರರ ಸಂಘದ ಪದಾಧಿಕಾರಿಗಳ ಮನವೊಲಿಕೆಗೆ ಕಸರತ್ತು ನಡೆಯಿತು. ಹಣಕಾಸು ಇಲಾಖೆಯ ಅಧಿಕಾರಿಗಳ ಜತೆ ಚರ್ಚಿಸಿದ ಮುಖ್ಯಮಂತ್ರಿ, ಶೇ 17ರಷ್ಟು ಮಧ್ಯಂತರ ಪರಿಹಾರ ಹಾಗೂ ಒಪಿಎಸ್ ಜಾರಿಮಾಡುವ ಸಾಧ್ಯತೆಗಳ ಕುರಿತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ನೇಮಿಸುವುದಾಗಿ ಪ್ರಕಟಿಸಿದರು. ತಕ್ಷಣದಿಂದಲೇ ಮುಷ್ಕರ ಕೈಬಿಡುವಂತೆ ನೌಕರರಲ್ಲಿ ಮನವಿ ಮಾಡಿದರು.

ಆದೇಶದ ಬೆನ್ನಲ್ಲೇ ನಿರ್ಧಾರ: ಮುಖ್ಯಮಂತ್ರಿಯವರು ನೌಕರರ ಬೇಡಿಕೆ ಈಡೇರಿಕೆ ಕುರಿತು ಘೋಷಣೆ ಮಾಡಿದ ಬಳಿಕ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳು ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜತೆ ಸಭೆ ನಡೆಸಿದರು. ಸರ್ಕಾರದ ಭರವಸೆ ಕುರಿತು ಆದೇಶಗಳ ಪ್ರತಿಗಳನ್ನು ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರಿಗೆ ಹಸ್ತಾಂತರಿಸಿದರು.

ಆದೇಶಗಳ ಪ್ರತಿಯೊಂದಿಗೆ ನೌಕರರ ಸಂಘದ ಕಚೇರಿಗೆ ತೆರಳಿದ ಷಡಾಕ್ಷರಿ, ಸಂಘದ ಇತರ ಪದಾಧಿಕಾರಿಗಳ ಜತೆ ಕೆಲಕಾಲ ಚರ್ಚಿಸಿದರು. ನಂತರ ಪತ್ರಿಕಾಗೋಷ್ಠಿ ನಡೆಸಿದ ಅವರು, ತಕ್ಷಣದಿಂದಲೇ ನೌಕರರ ಮುಷ್ಕರವನ್ನು ಹಿಂಪಡೆಯುವ ನಿರ್ಧಾರ ಪ್ರಕಟಿಸಿದರು.

ಸೇವೆ ಸ್ಥಗಿತ: ಪರದಾಡಿದ ಜನ

ವೇತನ ಪರಿಷ್ಕರಣೆ, ಹಳೆಯ ಪಿಂಚಣಿ ಪದ್ಧತಿ (ಒಪಿಎಸ್) ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ಮುಷ್ಕರ ನಡೆಸಿದ್ದರಿಂದ ರಾಜ್ಯದಾದ್ಯಂತ ಬುಧವಾರ ಅರ್ಧ ದಿನ ಸರ್ಕಾರಿ ಸೇವೆಗಳು ಸ್ಥಗಿತವಾಗಿದ್ದವು. ಇದರಿಂದ ರಾಜ್ಯದ ವಿವಿಧೆಡೆ ಜನರು ಪರದಾಟ ಅನುಭವಿಸಿದರು.

ಬೆಳಿಗ್ಗೆಯಿಂದಲೇ ರಾಜ್ಯದ ಬಹುತೇಕ ಸರ್ಕಾರಿ ಕಚೇರಿಗಳು ಅಧಿಕಾರಿಗಳು, ಸಿಬ್ಬಂದಿ ಇಲ್ಲದೇ ಬಿಕೋ ಎನ್ನುತ್ತಿದ್ದವು. ರಾಜ್ಯದ ಆಡಳಿತದ ಶಕ್ತಿ ಕೇಂದ್ರವಾದ ವಿಧಾನಸೌಧ, ವಿಕಾಸಸೌಧ, ಎಂ.ಎಸ್. ಬಿಲ್ಡಿಂಗ್‌ಗಳಲ್ಲೂ ನೌಕರರಿಲ್ಲದೆ ಸರ್ಕಾರಿ ಕಚೇರಿಗಳು ಬಣಗುಡುತ್ತಿದ್ದವು.

ಆಸ್ಪತ್ರೆಗಳಲ್ಲೂ ವೈದ್ಯರು, ಸಿಬ್ಬಂದಿ ಸಂಖ್ಯೆ ಕಡಿಮೆ ಇತ್ತು. ಶಿಕ್ಷಕರು, ಉಪನ್ಯಾಸಕರು, ಪ್ರಾಧ್ಯಾಪಕರೂ ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದರಿಂದ ಶಾಲೆ, ಕಾಲೇಜುಗಳ ಬಾಗಿಲು ತೆರೆಯಲಿಲ್ಲ. ಪ್ರಥಮ ವರ್ಷದ ಪಿಯುಸಿ ಪರೀಕ್ಷೆಯೂ ಮುಂದೂಡಿಕೆಯಾಯಿತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ (ಆರ್‌ಟಿಒ) ಕಚೇರಿಗಳು, ಉಪ ನೋಂದಣಿ ಕಚೇರಿಗಳೂ ಅರ್ಧ ದಿನ ಬಂದ್ ಆಗಿದ್ದವು. ಇದರಿಂದಾಗಿ ರಾಜ್ಯದಾದ್ಯಂತ ವಾಹನಗಳ ನೋಂದಣಿ, ಸ್ಥಿರಾಸ್ತಿಗಳ ನೋಂದಣಿ, ದಾಖಲೆ ಪತ್ರಗಳ ನೋಂದಣಿಯೂ ಸ್ಥಗಿತವಾಗಿತ್ತು. ನೋಂದಣಿ ಕೆಲಸಕ್ಕೆ ಪೂರ್ವನಿಗದಿತವಾಗಿ ಸಿದ್ಧತೆ ಮಾಡಿಕೊಂಡಿದ್ದ ಸಾವಿರಾರು ಮಂದಿ ಸಂಕಷ್ಟಕ್ಕೆ ಸಿಲುಕಿದರು.

ಚಿಕಿತ್ಸೆ ಇಲ್ಲದೆ ಸಂಕಷ್ಟ: ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು, ಶುಶ್ರೂಷಕಿಯರು ಮತ್ತು ಇತರ ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗಿದ್ದರು. ಹೊರ ರೋಗಿ ವಿಭಾಗದಲ್ಲಿ ಯಾವುದೇ ಸೇವೆ ಲಭ್ಯವಿರಲಿಲ್ಲ. ಚಿಕಿತ್ಸೆಗಾಗಿ ಬಂದವರನ್ನು ವಾಪಸ್ ಕಳುಹಿಸುತ್ತಿದ್ದ ದೃಶ್ಯಗಳು ಎಲ್ಲೆಡೆ ಕಂಡುಬಂದವು.

ಕೋಲಾರ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಒಳ ರೋಗಿಗಳನ್ನು ಮುಷ್ಕರದ ಕಾರಣದಿಂದ ಬಲವಂತವಾಗಿ ಬಿಡುಗಡೆ ಮಾಡಲಾಗಿದೆ.

‘ಬಿಎಸ್‌ವೈ ಜೈಲಿಗೆ ಹಾಕಿಸಿದ್ದೇ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಅವರ ಮೇಲೆ ಕಾಂಗ್ರೆಸ್ ನಾಯಕರು ಈಗ ಪ್ರೀತಿಯ ಮಳೆ ಸುರಿಸುತ್ತಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷವೇ ಬಿಎಸ್‌ವೈ ಅವರನ್ನು ಜೈಲಿಗೆ ಹಾಕಿಸಿದ್ದು ಎಂದು ಕಂದಾಯ ಸಚಿವ ಆರ್.ಅಶೋಕ ಆರೋಪಿಸಿದರು.

ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಯಡಿಯೂರಪ್ಪ ವಿರುದ್ಧ ಕೇಸು ದಾಖಲಿಸಿತು. ಕೇಂದ್ರದಲ್ಲಿದ್ದ ಯುಪಿಎ ಸರ್ಕಾರ ಮತ್ತು ಅಂದಿನ ರಾಜ್ಯಪಾಲರು ಮಸಲತ್ತು ನಡೆಸಿ ಜೈಲಿಗೆ ಹೋಗುವಂತೆ ಮಾಡಿದರು. ಇದರಲ್ಲಿ ಸೋನಿಯಾ ಗಾಂಧಿ ಪಾತ್ರವೂ ಇದೆ ಎಂದು ತಿಳಿಸಿದರು.

ಎನ್‌ಡಿಎ ಸರ್ಕಾರ ಸಿಬಿಐ ದುರ್ಬಳಕೆ ಮಾಡುತ್ತಿದೆ ಎಂದು ಕಾಂಗ್ರೆಸ್ ದೂರುತ್ತಿದೆ. ಆಗ ಯುಪಿಎ ಸರ್ಕಾರ ದುರ್ಬಳಕೆ ಮಾಡಿಕೊಂಡಿಲ್ಲವೇ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಿರ್ನಾಮವಾಗಲಿದೆ. ‘ಕಾಂಗ್ರೆಸ್ ಮುಕ್ತ ಕರ್ನಾಟಕ’ ಮಾಡಲು ವಿಜಯ ಸಂಕಲ್ಪ ರಥ ಯಾತ್ರೆ ನಿರ್ಣಾಯಕ ಯಾತ್ರೆಯಾಗಲಿದೆ ಎಂದರು.

‘ನಮ್ಮ ಅಶ್ವಮೇಧದ ಕುದುರೆಗಳನ್ನು ಬಿಟ್ಟಿದ್ದೇವೆ. ಕಟ್ಟಿ ಹಾಕುವ ಧೈರ್ಯ ಸಿದ್ದರಾಮಯ್ಯ ಸೇರಿದಂತೆ ಯಾರಿಗೂ ಇಲ್ಲ. ಅಂತಿಮವಾಗಿ ಜಯ ನಮ್ಮದೇ. ಒಂದೇ ಸಲಕ್ಕೆ ಪಕ್ಷದ ಹವಾ ಏಳಲಿದೆ. ಈವರೆಗೆ ಮಾಡಿರುವ ಎಲ್ಲ ಸಮೀಕ್ಷೆಗಳಲ್ಲೂ ನಮ್ಮ ಪಕ್ಷವೇ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಹೇಳಿವೆ. ಹೀಗಾಗಿ ಮತ್ತೆ ನಾವೇ ಅಧಿಕಾರದ ಗದ್ದುಗೆ ಏರಲಿದ್ದೇವೆ’ ಎಂದರು.

ಮಾ.3 ನಾಲ್ಕನೇ ಯಾತ್ರೆಗೆ ಚಾಲನೆ: ನಾಲ್ಕನೇ ಯಾತ್ರೆ ಇದೇ 3 ರಂದು ಆವಟಿಯ ಚೆನ್ನಕೇಶವ ದೇವಾಲಯದ ಆವರಣದಿಂದ ಆರಂಭವಾಗಲಿದೆ. ಇದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚಾಲನೆ ನೀಡಲಿದ್ದಾರೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಯಾತ್ರೆ ನಡೆಯಲಿದೆ.

ಭಾಸ್ಕರ್ ರಾವ್ ಬಿಜೆಪಿ ಸೇರ್ಪಡೆ

ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರು ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮ್ಮುಖದಲ್ಲಿ ಬುಧವಾರ ಬಿಜೆಪಿ ಸೇರಿದರು.

ಒಂದು ವರ್ಷದ ಹಿಂದೆ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಆಮ್ ಆದ್ಮಿ ಪಕ್ಷವನ್ನು(ಎಎಪಿ) ಸೇರಿದ್ದರು.

ಸೇರ್ಪಡೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎಎಪಿಯು ರಾಜ್ಯದಲ್ಲಿ ಬೆಳೆಯುವ ಲಕ್ಷಣ ಕಾಣಿಸುತ್ತಿಲ್ಲ. ಬಿಜೆಪಿ ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಪ್ರಧಾನಿ ಮೋದಿಯವರು ದೇಶವನ್ನು ಜಾಗತಿಕ ಮಟ್ಟದಲ್ಲಿ ಪ್ರಬಲವಾಗಿ ಬೆಳೆಸಿದ್ದಾರೆ. ದೇಶದ ಸರ್ವ ಜನರ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ. ಹಾಗಾಗಿ, ಬಿಜೆಪಿ ಸೇರಿದ್ದೇನೆ’ ಎಂದರು.

ನೋಂದಣಿ ಕಚೇರಿಯಲ್ಲಿ ದೇವನಹಳ್ಳಿ ಶಾಸಕ ಲಾಕ್

ಒಂದನೇ ಪುಟದಿಂದ...

ಮಾಧ್ಯಮಗಳಿಗೆ ಮಾಹಿತಿ ನೀಡಿ, ಕಿಟಕಿಗಳ ಮೂಲಕ ಒಳಗಿನ ದೃಶ್ಯಗಳನ್ನು ಮೊಬೈಲ್‌ಗಳಲ್ಲಿ ಚಿತ್ರೀಕರಿಸಿಕೊಂಡರು. ಕ್ಯಾಮೆರಾಗಳನ್ನು ಕಂಡು ಒಳಗಿದ್ದ ಸಿಬ್ಬಂದಿ ಅವಿತುಕೊಂಡರು. ಕಚೇರಿ ಸಿಬ್ಬಂದಿಯೊಬ್ಬರು ಬೀಗ ತೆರೆಯಲು ಮುಂದಾದಾಗ ಅಲ್ಲಿದ್ದ ಜನರು ಮತ್ತು ಕಾರ್ಯಕರ್ತರು ಅವರನ್ನು ತಡೆದರು. ‘ಯಾರು ಬೀಗ ಹಾಕಿದ್ದಾರೋ ಅವರೇ ಸ್ಥಳಕ್ಕೆ ಬರಬೇಕು’ ಎಂದು ಪಟ್ಟು ಹಿಡಿದರು. ಹೀಗಾಗಿ ತಾಸುಗಟ್ಟಲೇ ಶಾಸಕ ಮತ್ತು ಸಿಬ್ಬಂದಿ ಕಚೇರಿ ಒಳಗೆ ಬಂಧಿಯಾಗಿದ್ದರು.

ಶಾಸಕರ ಗನ್‌ಮ್ಯಾನ್ ಬೀಗ ತೆರೆಯಲು ಬಂದಾಗ ಅವರನ್ನೂ ತಡೆಯಲಾಯಿತು. ಆಗ ಶಾಸಕರು ಕರೆ ಮಾಡಿ ಪಕ್ಷದ ಕಾರ್ಯಕರ್ತರನ್ನು ಕರೆಸಿದರು. ಸ್ಥಳಕ್ಕೆ ಬಂದ ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರು ಹೊರದೂಡಲು ಯತ್ನಿಸಿದರು. ಸ್ಥಳದಲ್ಲಿದ್ದ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಅಲ್ಲಿದ್ದ ಪೊಲೀಸರು ಮೇಲಧಿಕಾರಿಗಳಿಗೆ ಮಾಹಿತಿ ನೀಡಿದರು.

20ಕ್ಕೂ ಹೆಚ್ಚು ಸಿಬ್ಬಂದಿ ಜತೆ ಸ್ಥಳಕ್ಕೆ ಬಂದ ದೇವನಹಳ್ಳಿಯ ಸಬ್ ಇನ್‌ಸ್ಪೆಕ್ಟರ್ ಧರ್ಮೇಗೌಡ ಅವರು ಕಚೇರಿ ಬೀಗ ತೆರೆದು ಶಾಸಕ ನಾರಾಯಣಸ್ವಾಮಿ ಹಾಗೂ ಕಚೇರಿ ಸಿಬ್ಬಂದಿಯನ್ನು ಹೊರಗೆ ಕರೆತಂದರು. ಶಾಸಕರು ಹೊರ ಬರುತ್ತಿದ್ದಂತೆಯೇ ನೆರೆದಿದ್ದ ಸಾರ್ವಜನಿಕರು ಮತ್ತು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರಶ್ನೆಗಳ ಸುರಿಮಳೆಗೈದರು.

ಕಿಡಿಗೇಡಿಗಳ ಕೆಲಸ: ಶಾಸಕ ನಿಸರ್ಗ

‘ಮಹಿಳೆಯರಿಗೆ ನ್ಯಾಯ ಒದಗಿಸಲು ಉಪ ನೋಂದಣಾಧಿಕಾರಿ ಕಚೇರಿಗೆ ಬಂದಿದ್ದೆ. ಇದೇ ವೇಳೆ ಹೊರಗಿನಿಂದ ಕಿಡಿಗೇಡಿಗಳು ಬೀಗ ಹಾಕಿ ವದಂತಿ ಹಬ್ಬಿಸಿದ್ದಾರೆ’ ಎಂದು ಪೊಲೀಸ್ ಬಂದೋಬಸ್ತ್‌ನಲ್ಲಿ ಹೊರ ಬಂದ ಶಾಸಕ ನಿಸರ್ಗ ನಾರಾಯಣಸ್ವಾಮಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

‘ಕಚೇರಿಯಲ್ಲಿ ನೋಂದಣಾಧಿಕಾರಿಗಳು ಇಲ್ಲದಿದ್ದರೆ ನೋಂದಣಿ ಮಾಡಿಸಲು ಹೇಗೆ ಸಾಧ್ಯ? ಯಾವುದೇ ರೀತಿಯ ಅಕ್ರಮ ಕೆಲಸದಲ್ಲಿ ಭಾಗಿಯಾಗಿಲ್ಲ. ಊಹಾಪೋಹಗಳ ಮೂಲಕ ತೇಜೋವಧೆ ಮಾಡಿದರೆ ಸಹಿಸುವುದಿಲ್ಲ’ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಮುಷ್ಕರ ಸ್ಥಗಿತಕ್ಕೆ ವಿರೋಧ

ಮುಷ್ಕರಕ್ಕೆ ಕರೆನೀಡುವ ಮೊದಲು ನಮ್ಮ ಜತೆ ಚರ್ಚಿಸಿದ್ದ ಷಡಾಕ್ಷರಿ, ಅಂತ್ಯಗೊಳಿಸುವ ತೀರ್ಮಾನವನ್ನು ಏಕಪಕ್ಷೀಯವಾಗಿ ಕೈಗೊಂಡಿದ್ದಾರೆ. ಸರ್ಕಾರದ ತೀರ್ಮಾನದಿಂದ ನೌಕರರಿಗೆ ಯಾವ ಅನುಕೂಲವೂ ಆಗುವುದಿಲ್ಲ. ನೌಕರರ ಸಂಘದ ಅಧ್ಯಕ್ಷರ ಏಕಪಕ್ಷೀಯ ತೀರ್ಮಾನ ಖಂಡನೀಯ.

– **ಪಿ. ಗುರುಸ್ವಾಮಿ,** ಅಧ್ಯಕ್ಷ, ಸಚಿವಾಲಯ ನೌಕರರ ಸಂಘ

ಶೇ 40ರಷ್ಟು ಮಧ್ಯಂತರ ಪರಿಹಾರ ಮತ್ತು ಒಪಿಎಸ್ ಮರು ಜಾರಿ ಆಗುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂಬ ಹೇಳಿಕೆ ಆಧರಿಸಿ ಬೆಂಬಲ ನೀಡಿದ್ದೆವು. ಈಗ ಆಗಿರುವ ತೀರ್ಮಾನದಿಂದ 3.5 ಲಕ್ಷ ನೌಕರರಿಗೆ ಅನ್ಯಾಯವಾಗಿದೆ. ಇದಕ್ಕೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ನೇರ ಹೊಣೆ.

– **ಶಾಂತಾರಾಮ,** ಅಧ್ಯಕ್ಷ, ಎನ್‌ಪಿಎಸ್ ನೌಕರರ ಸಂಘ

ಒಪಿಎಸ್ ಮರು ಜಾರಿಯೇ ನಮ್ಮ ಪ್ರಮುಖ ಬೇಡಿಕೆಯಾಗಿತ್ತು. ಅಧ್ಯಯನ ಸಮಿತಿ ನೇಮಿಸುವ ಸರ್ಕಾರದ ತೀರ್ಮಾನ ಒಪ್ಪಿ ಮುಷ್ಕರ ಹಿಂಪಡೆದಿರುವುದು ನೌಕರರಿಗೆ ಮಾಡಿರುವ ದ್ರೋಹ. ಒಪಿಎಸ್ ಜಾರಿಗೆ ಮುಂದಿನ ದಿನಗಳಲ್ಲಿ ಮತ್ತೆ ಹೋರಾಟ ಅನಿವಾರ್ಯ.

– **ಮಹದೇವಯ್ಯ ಮಠಪತಿ,** ಗೌರವಾಧ್ಯಕ್ಷ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ

ರಾಜಕಾರಣಿಗಳ ಜತೆಯಲ್ಲೇ ಸೇವಾವಧಿ ಕಳೆದಿರುವ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಮುಷ್ಕರದ ಮಾತನಾಡಿದಾಗಲೇ ವ್ಯವಸ್ಥಿತ ಪ್ರಹಸನ ಇದರ ಹಿಂದಿರುವ ವಾಸನೆ ಬಡಿದಿತ್ತು. ಸರ್ಕಾರಿ ನೌಕರರ ಹೋರಾಟದ ಇತಿಹಾಸದಲ್ಲಿ ದಾಖಲಾದ ಮಹಾಮೋಸ ಇದು.

– **ನಿಂಗೇಗೌಡ ಎಚ್.,** ಅಧ್ಯಕ್ಷ, ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ.

ಬುಕ್ ಬ್ರಹ್ಮ: ಕಥಾ ಸ್ಪರ್ಧೆ, ಕಾದಂಬರಿ ಪುರಸ್ಕಾರ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ‘ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ’ಗೆ ಕಥೆಗಳನ್ನು ಹಾಗೂ ‘ಕಾದಂಬರಿ ಪುರಸ್ಕಾರ’ಕ್ಕೆ ಕಾದಂಬರಿಗಳನ್ನು ಆಹ್ವಾನಿಸಿದೆ.

ಕಾದಂಬರಿ ಪುರಸ್ಕಾರವು ₹ 1 ಲಕ್ಷ ನಗದು ಒಳಗೊಂಡಿದೆ. ಆಯ್ಕೆಯಾದ ಕೃತಿಯ ಲೇಖಕರಿಗೆ ₹ 75 ಸಾವಿರ ಹಾಗೂ ಪ್ರಕಾಶಕರಿಗೆ ₹ 25 ಸಾವಿರ ನೀಡಲಾಗುತ್ತದೆ. ಮೆಚ್ಚುಗೆ ಪಡೆಯುವ ನಾಲ್ಕು ಕಾದಂಬರಿಗಳಿಗೆ ತಲಾ ₹ 5 ಸಾವಿರ ನೀಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

ಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕಥೆಗೆ ₹ 50 ಸಾವಿರ ನಗದು ಇರಲಿದೆ. ದ್ವಿತೀಯ ಸ್ಥಾನ ಪಡೆದ ಕಥೆಗೆ ₹ 25 ಸಾವಿರ, ತೃತೀಯ ಸ್ಥಾನ ಪಡೆದ ಕಥೆಗೆ ₹ 15 ಸಾವಿರ ನಗದು ಇರಲಿದೆ. ಉಳಿದಂತೆ ಐದು ಕಥೆಗಳಿಗೆ ತಲಾ ₹ 5 ಸಾವಿರ ನಗದು ನೀಡಲಾಗುತ್ತದೆ. ಅಂತಿಮ ಸುತ್ತಿಗೆ ಆಯ್ಕೆಯಾಗುವ 17 ಕಥೆಗಳಿಗೆ ತಲಾ ₹ 2 ಸಾವಿರ ರೂಪಾಯಿ ನೀಡಲಾಗುತ್ತದೆ. ಆಯ್ಕೆಯಾದ 25 ಕಥೆಗಳನ್ನು ಒಳಗೊಂಡ ಪುಸ್ತಕ ಪ್ರಕಟಿಸಲಾಗುತ್ತದೆ.

ಕಾದಂಬರಿ ಪುರಸ್ಕಾರಕ್ಕೆ ಕಾದಂಬರಿಗಳ ನಾಲ್ಕು ಪ್ರತಿಗಳನ್ನು ಏ.15ರೊಳಗೆ ಕಳುಹಿಸಬೇಕು. ಕಥಾ ಸ್ಪರ್ಧೆಗೆ ಕಥೆಗಳನ್ನು ಕಳುಹಿಸಲು ಮೇ 31 ಕಡೆಯ ದಿನಾಂಕ. ಆ.15ರಂದು ಪ್ರಶಸ್ತಿ ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕಾದಂಬರಿ ಹಾಗೂ ಕಥೆಗಳನ್ನು ಕಳುಹಿಸಬೇಕಾದ ವಿಳಾಸ: ಪ್ರಧಾನ ಸಂಪಾದಕ, ಬುಕ್ ಬ್ರಹ್ಮ ಕನ್ನಡ, ಮೂರನೇ ಮಹಡಿ, ಆರ್. ಕೆ ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಕಾಂಪೌಂಡ್, ಎಲೆಕ್ಟ್ರಾನಿಕ್ಸ್ ಸಿಟಿ ಮೊದಲ ಹಂತ, ಬೆಂಗಳೂರು-560100

ಸಂಪರ್ಕ ಸಂಖ್ಯೆ: 78926 08118

ನಕಲಿ ಪಹಣಿಗೆ ಭೂ ಪರಿಹಾರ: ‘ಲೋಕಾ’ ತನಿಖೆ

ಒಂದನೇ ಪುಟದಿಂದ...

ಮಧ್ಯವರ್ತಿಗಳಾದ ಮಂಜುನಾಥ್ ಮತ್ತು ನಾಗೇಶ್ ಸೂಚಿಸಿದ ವ್ಯಕ್ತಿಗಳಿಗೆ ಕೆಂಪಮ್ಮ 2018ರ ಮಾರ್ಚ್ 22ರಿಂದ ಏಪ್ರಿಲ್ 12 ರ ಅವಧಿಯಲ್ಲಿ ನಿವೇಶನಗಳನ್ನು ಮಾರಾಟ ಮಾಡಿ ಕೋಟ್ಯಂತರ ರೂಪಾಯಿ ಗಳಿಸಿರುವುದು ತನಿಖೆಯಿಂದ ದೃಢಪಟ್ಟಿತ್ತು. ಈ ಅಕ್ರಮದಲ್ಲಿ ಕಂದಾಯ ಇಲಾಖೆ ಮತ್ತು ಬಿಡಿಎ ಅಧಿಕಾರಿಗಳು ಭಾಗಿಯಾಗಿರುವುದು ಕಂಡುಬಂದಿರುವುದರಿಂದ, ಭ್ರಷ್ಟಾಚಾರ ತಡೆ ಕಾಯ್ದೆ ಅನ್ವಯ ತನಿಖೆಗೆ ಪೂರ್ವಾನುಮತಿ ಕೋರಲಾಗಿತ್ತು.

ಏನಿದು ಪ್ರಕರಣ?: ಕೆಂಪೇಗೌಡ ಬಡಾವಣೆಗೆ ಭೂಸ್ವಾಧೀನಪಡಿಸಿಕೊಂಡ ಯಶವಂತರಪುರ ಹೋಬಳಿಯ ಕನ್ನಲ್ಲಿ ಗ್ರಾಮದ ಸರ್ವೆ ನಂಬರ್ 93ರಲ್ಲಿ 22 ಎಕರೆ 32 ಗುಂಟೆ ಜಮೀನು ಚನ್ನಪ್ಪ, ಬೈಲಪ್ಪ, ವೆಂಕಟಪ್ಪ, ರೇವಣ್ಣ, ಸಚ್ಚಿನಚಾರಿ, ಸಚ್ಚಿದಾನಂದ ಮೂರ್ತಿ, ಗಂಗಾಧರಪ್ಪ, ಬಸಯ್ಯ, ಬಿ.ಆರ್. ರಾಜಕುಮಾರ್ ಎಂಬವರ ಸ್ವಾಧೀನದಲ್ಲಿರುವುದಾಗಿ ಬಿಡಿಎಗೆ 2012ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ವರದಿ ನೀಡಿದ್ದರು. ಆದರೆ, ಮಧ್ಯವರ್ತಿಗಳಾದ ಮಂಜುನಾಥ್ ಮತ್ತು ನಾಗೇಶ್ ಬಿಡಿಎದಿಂದ ಅಕ್ರಮವಾಗಿ ಪರಿಹಾರ ಪಡೆಯಲು ಒಳಸಂಚು ನಡೆಸಿ, ಈ ಸರ್ವೆ ನಂಬರ್‌ನಲ್ಲಿ 2 ಎಕರೆ ಜಮೀನು ರಾಮನಗರದ ಕೆಂಪಮ್ಮ ಹೆಸರಿಗೆ 1957ರಲ್ಲಿ ದರಖಾಸ್ತು ರೂಪದಲ್ಲಿ ಮಂಜೂರಾಗಿದೆ ಎಂದು ಕೈ ಬರಹದಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದರು. ಈ ದಾಖಲೆಗಳನ್ನು 2017ರ ಫೆ. 4ರಂದು ಕೆಂಪಮ್ಮ ಅವರು ತಹಶೀಲ್ದಾರ್‌ಗೆ ಸಲ್ಲಿಸಿ ಪಹಣಿಯಲ್ಲಿ ಹೆಸರು ನಮೂದಿಸಲು ಕೋರಿದ್ದರು. ಆದರೆ, ಸಾಗುವಳಿ ಚೀಟಿ, ಮೂಲ ಮಂಜೂರಾತಿ ಕಡತ ಲಭ್ಯ ಇಲ್ಲವೆಂದು ಬೆಂಗಳೂರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು.

ನಂತರ ಈ ಬಗ್ಗೆ ಬೆಂಗಳೂರು ಉತ್ತರ ತಾಲ್ಲೂಕು ವಿಶೇಷ ಜಿಲ್ಲಾಧಿಕಾರಿ ಎಸ್.ಎನ್. ಗಂಗಾಧರಯ್ಯ ಈ ಪ್ರಕರಣದ ವಿಚಾರಣೆ ನಡೆಸಿದ್ದು, ಕೆಂಪಮ್ಮ ಅವರಿಗೆ ಮಂಜೂರಾದ ಕಡತ ಇಲ್ಲದಿದ್ದರೂ, ಪಹಣಿಯಲ್ಲಿ ಹೆಸರು ದಾಖಲಿಸಲು ಆದೇಶಿಸಿದ್ದರು. ಈ ನಕಲಿ ದಾಖಲೆಗಳನ್ನು ಕೆಂಪಮ್ಮ ಅವರ ಮೂಲಕ ಬಿಡಿಎಗೆ ಸಲ್ಲಿಸಿದ ಮಧ್ಯವರ್ತಿಗಳು, ಬಿಡಿಎ ಭೂಸ್ವಾಧೀನಾಧಿಕಾರಿಯಾಗಿದ್ದ ಬಿ. ಸುಧಾ ಮತ್ತು ಇತರ ಅಧಿಕಾರಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು 2 ಎಕರೆಗೆ ಬದಲಿಯಾಗಿ, 19,166 ಚದರ ಅಡಿ ವಿಸ್ತೀರ್ಣದ ಅಭಿವೃದ್ಧಿಪಡಿಸಿದ 15 ನಿವೇಶನಗಳನ್ನು ಕೆಂಪಮ್ಮ ಅವರಿಗೆ ಹಂಚಿಕೆ ಮಾಡುವ ಬಗ್ಗೆ 2017ರ ಜುಲೈ 31ರಂದು ಅನುಮೋದಿಸಿದ್ದರು.

ಈ ಮಧ್ಯೆ, ಹುಚ್ಚ ಹನುಮಯ್ಯ ಎಂಬವರು, ಸರ್ವೆ ನಂಬರ್ 93ರಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ಕೋರ್ಟ್‌ನಲ್ಲಿ ಅಸಲು ದಾವೆ ಹೂಡಿದ್ದರು. ಕೆಂಪಮ್ಮ ಅವರಿಗೆ ಬಿಡಿಎದಿಂದ ಪರಿಹಾರ ನೀಡಬಾರದೆಂದು ಬಿಡಿಎಗೆ ಮನವಿ ಸಲ್ಲಿಸಿದ್ದರು. ಉಪವಿಭಾಗಾಧಿಕಾರಿಯ 2017 ಜುಲೈ 7ರಂದು ಭೂಮಾಪಕರು ನೀಡಿದ ನಕ್ಷೆಯಂತೆ ಹುಚ್ಚ ಹನುಮಯ್ಯ ಸ್ವಾಧೀನಾನುಭವದಲ್ಲಿ ಇರುವುದಾಗಿ ಜಿಲ್ಲಾಧಿಕಾರಿಗೆ ವರದಿ ನೀಡಿದ್ದರು. ಇದೇ ವಿಚಾರದಲ್ಲಿ ಬಿಎಸ್‌ಪಿಯ ಮಾರಸಂದ್ರ ಮುನಿಯಪ್ಪ ಕೂಡಾ ಬಿಡಿಎಗೆ ದೂರು ಸಲ್ಲಿಸಿದ್ದರು. ಈ ನಡುವೆ, ಇನ್ನೊಬ್ಬ ಮಹಿಳೆ, ‘ನಾನು ನಿಜವಾದ ಕೆಂಪಮ್ಮ’ ಆಗಿದ್ದು, ರಾಮನಗರದ ಕೆಂಪಮ್ಮಗೆ ಪರಿಹಾರ ನೀಡಬಾರೆಂದು 2018ರ ಜುಲೈ 13ರಂದು ಬಿಡಿಎಗೆ ಮನವಿ ಸಲ್ಲಿಸಿದ್ದರು.

ಎಚ್‌ಎಎಲ್ ನಿರ್ಮಿತ 70 ವಿಮಾನ ಖರೀದಿಗೆ ಒಪ್ಪಿಗೆ

ಎಚ್‌ಟಿಟಿ–40 ವಿಮಾನ

ನವದೆಹಲಿ(ಪಿಟಿಐ): ವಾಯುಪಡೆಗಾಗಿ ಎಚ್‌ಎಎಲ್ ನಿರ್ಮಿತ 70 ತರಬೇತಿ ವಿಮಾನಗಳನ್ನು (ಎಚ್‌ಟಿಟಿ-40) ₹6,828 ಕೋಟಿ ವೆಚ್ಚದಲ್ಲಿ ಖರೀದಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಭದ್ರತೆ ಕುರಿತ ಸಂಪುಟ ಸಮಿತಿಯು (ಸಿಸಿಎಸ್) ಬುಧವಾರ ಅನುಮೋದನೆ ನೀಡಿದೆ.

ನೌಕಾಪಡೆಗೆ ₹ 3 ಸಾವಿರ ಕೋಟಿ ವೆಚ್ಚದಲ್ಲಿ ಮೂರು ತರಬೇತಿ ನೌಕೆಗಳನ್ನು ಖರೀದಿಸುವುದಕ್ಕೂ ಸಮಿತಿ ಅನುಮೋದನೆ ನೀಡಿದೆ. ಎಲ್ ಆಂಡ್ ಟಿ ಕಂಪನಿಯು ಈ ನೌಕೆಗಳನ್ನು ಪೂರೈಸಲಿದೆ.

ಈ ಕುರಿತು ಟ್ವೀಟ್ ಮಾಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, 'ಈ ವಿಮಾನಗಳನ್ನು ಮುಂದಿನ ಆರು ವರ್ಷಗಳ ಅವಧಿಯಲ್ಲಿ ಪೂರೈಕೆ ಮಾಡಲಾಗುತ್ತದೆ' ಎಂದಿದ್ದಾರೆ.

'ದೇಶದ ರಕ್ಷಣಾ ಕ್ಷೇತ್ರವನ್ನು ಸ್ವಾವಲಂಬಿಯನ್ನಾಗಿಸುವ ಹಾಗೂ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಈ ನಿರ್ಧಾರ ಮಹತ್ವದ ಹೆಜ್ಜೆಯಾಗಿದೆ. ದೇಶದಲ್ಲಿರುವ ನೂರಾರು ಸಣ್ಣ, ಮಧ್ಯಮ ಉದ್ದಿಮೆಗಳಿಗೆ ವಿಪುಲ ಅವಕಾಶಗಳು ತೆರೆದುಕೊಳ್ಳಲಿವೆ' ಎಂದೂ ಹೇಳಿದ್ದಾರೆ.

'ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿರ್ಮಿಸುವ ಈ ವಿಮಾನಗಳು ಕಡಿಮೆ ವೇಗದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ಹೀಗಾಗಿ, ಇವುಗಳನ್ನು ಬಳಸಿ ಪರಿಣಾಮಕಾರಿ ತರಬೇತಿ ನೀಡಲು ಸಾಧ್ಯ' ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

'ಬಿಬಿಸಿ: ಭಾರತ ಕಾನೂನು ಪಾಲಿಸಬೇಕು'

ನವದೆಹಲಿ: ಬಿಬಿಸಿ ಕಚೇರಿಗಳಲ್ಲಿ ತೆರಿಗೆ ಅಧಿಕಾರಿಗಳು ಕೈಗೊಂಡಿದ್ದ 'ಪರಿಶೀಲನೆ'ಯನ್ನು ಸಮರ್ಥಿಸಿಕೊಂಡಿರುವ ಸಚಿವ ಎಸ್.ಜೈಶಂಕರ್, 'ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಕಂಪನಿಗಳು ಈ ನೆಲದ ಕಾನೂನು ಹಾಗೂ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಬ್ರಿಟನ್ ವಿದೇಶಾಂಗ ಸಚಿವ ಜೇಮ್ಸ್ ಕ್ಲೆವರ್ಲಿ ಅವರಿಗೆ ಬುಧವಾರ ಹೇಳಿದರು.

ಜಿ-20 ಗುಂಪಿನ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿರುವ ಕ್ಲೆವರ್ಲಿ ಅವರು, ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದ್ದಾರೆ. ಬಿಬಿಸಿಯ ದೆಹಲಿ ಮತ್ತು ಮುಂಬೈ ಕಚೇರಿಗಳಲ್ಲಿ ಇತ್ತೀಚೆಗೆ ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಅಧಿಕಾರಿಗಳು 'ಪರಿಶೀಲನೆ' ನಡೆಸಿದ್ದನ್ನು ಕ್ಲೆವರ್ಲಿ ಈ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬೆಳವಣಿಗೆ ಕುರಿತು ಪ್ರಧಾನಿ ರಿಷಿ ಸುನಕ್ ಕಳವಳ ವ್ಯಕ್ತಪಡಿಸಿದ್ದನ್ನು ವಿವರಿಸಿದಾಗ, ಜೈಶಂಕರ್ ಅವರು ಈ ಮಾತುಗಳನ್ನು ಹೇಳಿದರು ಎಂದು ಮೂಲಗಳು ಹೇಳಿವೆ.

2002ರ ಗುಜರಾತ್ ಗಲಭೆ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರ ವಿವಾದಕ್ಕೆ ಕಾರಣವಾಗಿತ್ತು. ಈ ಸಾಕ್ಷ್ಯಚಿತ್ರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿತ್ತು.

ಈ ಕ್ರಮ ಕೈಗೊಂಡ ಕೆಲ ವಾರಗಳ ನಂತರ ಸಿಬಿಡಿಟಿ ಅಧಿಕಾರಿಗಳು ಬಿಬಿಸಿ ಕಚೇರಿಗಳಲ್ಲಿ ಮೂರು ದಿನಗಳ ಕಾಲ 'ಪರಿಶೀಲನೆ' ನಡೆಸಿದ್ದರು.

ಈ ವಿಷಯವು ಬ್ರಿಟನ್ ಸಂಸತ್‌ನಲ್ಲಿಯೂ ಪ್ರತಿಧ್ವನಿಸಿತ್ತು.

'ಬಿಬಿಸಿಯು ಭಾರತದಲ್ಲಿ ನಡೆಸುತ್ತಿರುವ ಕಾರ್ಯಾಚರಣೆಯ ಪ್ರಮಾಣಕ್ಕೂ, ಅದು ಘೋಷಿಸಿರುವ ತನ್ನ ಆದಾಯ ಮತ್ತು ಲಾಭಗಳಿಗೆ ಹೊಂದಿಕೆಯಾಗುತ್ತಿಲ್ಲ' ಎಂದು ಆದಾಯ ತೆರಿಗೆ ಅಧಿಕಾರಿಗಳು ಹೇಳಿದ್ದಾರೆ.

'ಬಿಬಿಸಿ ಆಡಳಿತವು ತಾನು ಮಾಡಿರುವ ಕೆಲ ಪಾವತಿಗಳಿಗೆ ಸಂಬಂಧಿಸಿ ತೆರಿಗೆ ಪಾವತಿಸಿಲ್ಲ. ಈ ಪಾವತಿಗಳು ಭಾರತದಲ್ಲಿನ ತನ್ನ ಆದಾಯ ಎಂಬುದನ್ನು ಸಹ ಬಿಬಿಸಿ ಬಹಿರಂಗಪಡಿಸದಿರುವ ಅಂಶ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂತು' ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಶಾಸಕರನ್ನು ಸ್ಪೀಕರ್ ಅನರ್ಹಗೊಳಿಸಿದ್ದರೆ ಶಿಂದೆ ಸಿ.ಎಂ ಆಗುತ್ತಿರಲಿಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): '39 ಶಾಸಕರ ಅನರ್ಹತೆಗೆ ಸಂಬಂಧಿಸಿ ಬಾಕಿ ಇದ್ದ ಅರ್ಜಿಗಳ ಕುರಿತು ನಿರ್ಧಾರ ಕೈಗೊಳ್ಳದಂತೆ ಸ್ಪೀಕರ್ ಅವರನ್ನು ತಡೆಯದೇ ಇದ್ದಲ್ಲಿ ಶಿವಸೇನಾ ಮುಖಂಡ ಏಕನಾಥ ಶಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿ ಆಗುತ್ತಿರಲಿಲ್ಲ' ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐದು ಸದಸ್ಯರಿದ್ದ ಸಾಂವಿಧಾನಿಕ ಪೀಠ ಅರ್ಜಿಯ ವಿಚಾರಣೆ ನಡೆಸಿತು.

'ಶಿಂದೆ ಹಾಗೂ ಇತರ ಶಾಸಕರ ವಿರುದ್ಧದ ಅನರ್ಹತೆ ಅರ್ಜಿ ಕುರಿತು ಸ್ಪೀಕರ್ ಕ್ರಮಕೈಗೊಳ್ಳಲಿಲ್ಲ. ಹೀಗಾಗಿ, ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಶಿಂದೆ ಅವರಿಗೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಿದರು. ನಂತರ, ಬಹುಮತ ಸಾಬೀತುಪಡಿಸಿದರು ಎಂಬುದು ಉದ್ಧವ್ ಠಾಕ್ರೆ ಬಣದ ವಾದ. ಅವರ ಮಟ್ಟಿಗೆ ಅವರ ವಾದ ಸರಿಯಾಗಿದೆ' ಎಂದು ಶಿಂದೆ ಪರ ವಕೀಲ ನೀರಜ್ ಕಿಶನ್ ಕೌಲ್ ಅವರಿಗೆ ನ್ಯಾಯಪೀಠ ಹೇಳಿತು.

ಎರಡೂ ಪಕ್ಷಗಳ ಪರ ವಕೀಲರ ವಾದಗಳನ್ನು ಆಲಿಸಿದ ನ್ಯಾಯಪೀಠ, ವಿಚಾರಣೆಯನ್ನು ಗುರುವಾರ ಮುಂದುವರಿಸುವುದಾಗಿ ಹೇಳಿತು.

ರಾಜಸ್ಥಾನ: ಮಾ. 8ರಂದು ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಅವಕಾಶ

ಜೈಪುರ (ಪಿಟಿಐ): ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ. 8ರಂದು ರಾಜಸ್ಥಾನದಲ್ಲಿ ಮಹಿಳೆರಿಗೆ ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ.

ರಾಜಸ್ಥಾನದ ಸಾರಿಗೆ ನಿಗಮಕ್ಕೆ ಸೇರಿದ ಎಲ್ಲಾ ಬಸ್‌ಗಳಲ್ಲೂ ಈ ಸೌಲಭ್ಯ ಇರಲಿದ್ದು, ಸುಮಾರು 8.50 ಲಕ್ಷ ಮಹಿಳೆಯರು ಪ್ರಯಾಣಿಸುವ ನಿರೀಕ್ಷೆ ಇದೆ. ರಾಜ್ಯ ಸರ್ಕಾರದ ಅಧಿಕೃತ ಹೇಳಿಕೆ ಪ್ರಕಾರ, ಬೊಕ್ಕಸಕ್ಕೆ ಸುಮಾರು ₹7.50 ಕೋಟಿ ಹೊರೆಯಾಗಲಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಸಂ.033/ಪಿಬಿ/ಗುತ್ತಿಗೆ/8443–5054/2022–23/8734 ದಿನಾಂಕ : 27–02–2023
ಮುಂದೂಡಿದ ಪ್ರಕಟಣೆ ನಂ. 01
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/8443–5054/2022–23/8657/ ದಿನಾಂಕ : 22–02–2023 ರಲ್ಲಿನ ಕಾಮಗಾರಿಗಳ ಕ್ರಸಂ.1 (ನಂ.164865) ಮತ್ತು ಕ್ರಸಂ.2 (ನಂ.163215)ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ.
(1) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ವೇಳೆ : **13–03–2023** ರ ಸಾಯಂಕಾಲ 04–00 ಗಂಟೆಯವರೆಗೆ (2) ಗುತ್ತಿಗೆ ಪತ್ರಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : **14–03–2023**ರ ಸಾಯಂಕಾಲ 04–30 ಗಂಟೆಗೆ (3) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ವೇಳೆ : **16–03–2023** ಬೆಳಿಗ್ಗೆ 11.00 ಗಂಟೆಗೆ
ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/588/2022–23

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)
Phone: 08375-249097 e-mail: dc_haveri@yahoo.co.in
ನಂ:ಪುಸ(04)/ನಹ–3/ವಹಿ–63/1/2022–23 ದಿನಾಂಕ: 27–02–2023
ಅಲ್ಪಾವಧಿ ಮರು–ಟೆಂಡರ ಇ–ಪ್ರಕಟಣೆ (ದ್ವಿಲಕೋಟಿ ಪದ್ಧತಿಯಲ್ಲಿ) (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)
ಹಾವೇರಿ ಜಿಲ್ಲೆಯ ಸವಣೂರು ಪುರಸಭೆಯ ಇಂಡೆಂಟ್ ಸಂಖ್ಯೆ : DMA/2022-23/OW/WORK_INDENT 143769 Call-2 ರೂ. 84.06 ಲಕ್ಷಗಳಿಗೆ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ–3 ರಡಿ ಉಳಿತಾಯ ಮೊತ್ತದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001 ಕ್ಕೆ ಒಳಪಟ್ಟು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರನ್ನು KW–3 ಷರತ್ತಿಗೊಳಪಟ್ಟು ಆಹ್ವಾನಿಸಲಾಗಿದೆ. ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಇ–ಪ್ರೊಕ್ಯೂರಮೆಂಟ್ ಮುಖಾಂತರ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾನಗರಾಭಿವೃದ್ಧಿಕೋಶ ಹಾವೇರಿ ಜಿಲ್ಲೆ ಹಾವೇರಿ ಇಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿಕೋಶ ಹಾವೇರಿ,
ವಾ.ಸಾ.ಇ/ಹಾವೇರಿ/583/2022–23/ದೇಶಪಾಂಡೆಪಬ್ಲಿಸಿಟಿ

(ಕರ್ನಾಟಕ ಸರ್ಕಾರ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:15/2022–23 ದಿನಾಂಕ:27.02.2023
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ವಿಭಾಗ ವ್ಯಾಪ್ತಿಯ 2022–23ನೇ ಸಾಲಿನ ವಿವೇಕ ಯೋಜನೆ ಪಿ.ಯು ಕಟ್ಟಡಗಳು, 2020–21 & 2021–22ನೇ ಸಾಲಿನ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ, 2022–23ನೇ ಸಾಲಿನ 5054 ಮಳೆಹಾನಿ ಯೋಜನೆ, 2022–23ನೇ ಸಾಲಿನ 15ನೇ ಹಣಕಾಸು ಅನುದಾನ, 5054 ಎಸ್.ಸಿ.ಪಿ/ಟಿ.ಎಸ್.ಪಿ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್ ಅನ್ನು ಇ – ಪ್ರೊಕ್ಯೂರ್‌ಮೆಂಟ್ ಅಡಿ ಅಂತರ್ಜಾಲದಲ್ಲಿ ದಿ:01–03–2023 ರಿಂದ ದಿ:15–03–2023ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು www.eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ದಿ:15–03–2023 ರವರೆಗೆ ಗುತ್ತಿಗೆದಾರರು ಈ ಕಛೇರಿಯನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:17–03–2023 ರಂದು ಸಂಜೆ 4.00 ಗಂಟೆಯ ನಂತರ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕ್ರ ಸಂ 1 ಮತ್ತು 5ರ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪ.ರಾಜ್.ಇಂ.ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1160/2022–23

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2022–23/7648 ದಿನಾಂಕ:28/02/2023
ಅಲ್ಪಾವಧಿ ಇ–ಟೆಂಡರ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 5054–ಜಿಮುರ ಸುಧಾರಣೆ ಅಡಿ 2 ಕಾಮಗಾರಿಗಳು, 5054–ರಾಹೆ ಸುಧಾರಣೆ ನಿರ್ವಹಣೆ ಅಡಿ 2 ಕಾಮಗಾರಿಗಳು ಹಾಗೂ 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 2 ಕಾಮಗಾರಿ, 3054–04–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 1 ಕಾಮಗಾರಿ, 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿ ಮತ್ತು 5054–ನಬಾರ್ಡ ಅಡಿ 2 ಕಾಮಗಾರಿ ಹೀಗೆ ಒಟ್ಟು 10 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 80.00 ಲಕ್ಷ ಹಾಗೂ ರೂ. 416.66 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:08–03–2023 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:10–03–2023 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:13–03–2023 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 15–03–2023 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1913/KSMCA/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ರಾಮನಗರ ವಿಶೇಷ ವಿಭಾಗ, ರಾಮನಗರ.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 29/2022–23 ದಿನಾಂಕ: 24–02–2023
ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 01 ಸಂಖ್ಯೆಯ ಅಂದಾಜು ಮೊತ್ತ ರೂ. 800.00 ಲಕ್ಷದ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇಎಂಡಿ ಮುಂತಾದ ಇತರ ಮಾಹಿತಿಗಳನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಚೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.
1. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡ್ಯಾಕುಮೆಂಟ್‌ನ್ನು ದಿನಾಂಕ: 24–02–2023 ರಿಂದ 04–03–2023 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 04–03–2023 ವೇಳೆ 16–00 ಗಂಟೆಯೊಳಗೆ ಸಲ್ಲಿಸುವುದು.
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 06–03–2023 ವೇಳೆ 16–30 ಗಂಟೆ. (ಸಾಧ್ಯವಾದಲ್ಲಿ)
4. ಆರ್ಥಿಕ ಬಿಡ್ ತೆರೆಯುವ ದಿನಾಂಕ ನಂತರದಲ್ಲಿ ತಿಳಿಸಲಾಗುವುದು.
ಹೆಚ್ಚಿನ ವಿವರಗಳಿಗಾಗಿ ಈ ಕಚೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ರಾಮನಗರ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in
ಅಲ್ಪಾವಧಿ ಟೆಂಡರ್ ಪ್ರಕಟಣೆ
ಉಲ್ಲೇಖ:– No: EE/ KNNL/ BCD-5/DVG/PB-6/MK/2022-23 /3361 Dt: 24.02.2023
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ., ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಪತ್ರದಲ್ಲಿ ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಡಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ದಿ: **24.02.2023** ರಿಂದ **03.03.2023** ಸಂಜೆ 4.00 ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತ ಸ್ಪಷ್ಟೀಕರಣ **ದಿನಾಂಕ: 27.02.2023** ಸಂಜೆ 4.00 ಘಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04.03.2023 ರಂದು** ಸಂಜೆ 5.00 ಘಂಟೆಯವರೆಗೆ ಒಟ್ಟು ಕಾಮಗಾರಿಗಳ ಸಂಖ್ಯೆ **1 ಕಾಮಗಾರಿಯ ಮೊತ್ತ–ರೂ.12.50 ಲಕ್ಷಗಳು** 1)I.no.36154 (Reserved for ST) ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ವಾಸಾಇ/ಡಿವಿಜಿ/988/ಕೆಎಸ್‌ಎಂಸಿಎ/2022–23

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ 6, ಬೀದರ–585 226
ನಂ.ಕುಸ:ಕಪಪಮೀವಿವಿ(ಬೀ)/ನೇಮಕಾತಿ:ಶಿಕ್ಷಕರ:ಅಥಣಿ/2022–23 ದಿನಾಂಕ: 01–03–2023
ಪರಿಷ್ಕ್ರತ ನೇಮಕಾತಿ ಅಧಿಸೂಚನೆ
ವಿಷಯ: ಬೋಧಕ ಹುದ್ದೆಗಳ ನೇರ ನೇಮಕಾತಿ ಕುರಿತು
ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಸಂ: ಪಸಂಮೀ/73/ಪಅಸೇ/2021 ದಿನಾಂಕ: 29–10–2022
2. ಅಧಿಸೂಚನೆ ಸಂಖ್ಯೆ:ಕುಸ:ಕಪಪಮೀವಿವಿ(ಬೀ):ನೇಮಕಾತಿ:ಶಿಕ್ಷಕರ: ಅಥಣಿ:2022–23 ದಿನಾಂಕ 20–01–2023
3. Notification No.R/KVAFSU(B)/Rectt-T(Athani)/2022-23 Dt. 14-2-2023
4. ಮಾನ್ಯ ಕುಲಪತಿಗಳ ಅನುಮೋದನೆ ಕಪಪಮೀವಿವಿ, ಬೀದರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕುರಿತು ಸಂಪೂರ್ಣ ಖಾಲಿ ಇರುವ ಹುದ್ದೆಗಳ ವಿವರ, ವಿದ್ಯಾರ್ಹತೆ, ಸ್ಕೋರ್‌ಕಾರ್ಡ್, ಸಾಮಾನ್ಯ ಸೂಚನೆಗಳು ಮತ್ತು ಇತರೆ ವಿವರಗಳನ್ನು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ **www.kvafsu.edu.in** ನಲ್ಲಿ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kvafsu.edu.in** ಮೂಲಕ ಸಲ್ಲಿಸುವುದು.
ಆದೇಶದ ಮೇರೆಗೆ ಸಹಿ/– (ಶಿವಸಂಕರ್.ಎಸ್. ಭಾಅಸೇ) ಕುಲಸಚಿವರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟಿಇಸಿ ವಿಭಾಗ, ಬಿಬಿಎಂಪಿ, ಬೆಂಗಳೂರು – 560002.
ಸಂಖ್ಯೆ: ಕಾಅ/ರಮೂಸೌ/ಟಿಇಸಿ/ಟೆಂಡರ್/28/2022–23 ದಿನಾಂಕ: 01–03–2023
ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಸರ್ಕಾರವು ಈ ಕೆಳಗೆ ತಿಳಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ದಿನಾಂಕ: 17–12–2022 ರ ಜಿ.ಓ. ಸಂಖ್ಯೆ: ಯುಡಿಡಿ 70 ಎಂಎನ್‌ವೈ 2021, ಬೆಂಗಳೂರು ಅನುಸಾರ ತಾತ್ವಿಕ ಒಪ್ಪಿಗೆ ನೀಡಿದೆ ಮತ್ತು ಬಜೆಟ್ ಮಂಜೂರು ಮಾಡಿದೆ.
ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ – ಟಿಇಸಿ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಆಯ್ದ ಅಧಿಕ ಸಾಂದ್ರತೆಯುಳ್ಳ ಕಾರಿಡಾರ್‌ಗೆ ಚರಂಡಿಗಳು, ಪಾದಚಾರಿ ಮಾರ್ಗ ಸುಧಾರಣೆಗಳು ಮತ್ತು ಡಾಂಬರೀಕರಣ. ಪ್ಯಾಕೇಜ್ ಸಂಖ್ಯೆ.01 ಸ್ಥಳ: ಎ) ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ ಬಳ್ಳಾರಿ ರಸ್ತೆ. ಬಿ) ಗೊರಗುಂಟೆಪಾಳ್ಯ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ ಹೊರವರ್ತುಲ ರಸ್ತೆ.	73.90	73.90

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **02–03–2023** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **09–03–2023 ರಂದು 15.00 ಗಂಟೆವರೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟಿಇಸಿ, ಬಿಬಿಎಂಪಿ ಇಲ್ಲಿ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **09–03–2023ರಂದು 16.00 ಗಂಟೆಗೆ ಅಧೀಕ್ಷಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ ಇಲ್ಲಿ ನಡೆಯುವುದು.** 4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **16–03–2023ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **18–03–2023ರಂದು 16.30 ಗಂಟೆಗೆ ರಸ್ತೆ ಮೂಲ ಸೌಕರ್ಯ ಕಛೇರಿ – ಟಿಇಸಿ, ಬಿಬಿಎಂಪಿ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ–ಟಿಇಸಿ ವಿಭಾಗ, ಬಿಬಿಎಂಪಿ.

ಸಮಗ್ರ ಶಿಕ್ಷಣ – ಕರ್ನಾಟಕ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.
ಸಂಖ್ಯೆ: ಸಶಿಕ/ಕೆ.ಶಿ.ಕ/ಎನ್.ಇ.ಪಿ–ಸೆಲ್/2022–23 ದಿನಾಂಕ: 02.03.2023
ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ವಿಷಯ : ಕರ್ಮಯೋಗಿ ಶಿಕ್ಷಕ್ ತರಬೇತಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ತರಬೇತಿ ಸಾಹಿತ್ಯ ರಚಿಸಿ ವಿತರಿಸುವ ಕರಿತು ಸೇವಾ ಅರ್ಹ ಸಂಸ್ಥೆಗಳಿಂದ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಿದೆ ಅರ್ಹ ಸಂಸ್ಥೆಗಳು ಟೆಂಡರ್ ಸಲ್ಲಿಸಲು ಇ–ಪ್ರೊಕ್ಯೂರ್‌ಮೆಂಟ್ http://eproc.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 08.03.2023ರ ಸಂಜೆ 5:30 ಗಂಟೆಯವರೆಗೆ.**
ಸಹಿ/– ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ –ಕರ್ನಾಟಕ
ವಾಸಾಸಂಇ/ವಾಪ್ರ/ಜಿಎ/5009/2022–23

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊಸದುರ್ಗ
ಸಂ.ತಾ.ಸಾ.ಆ.(ಹೊ)/ಟೆಂಡರ್/ಸಿ.ಆರ್(1)/98/2022–23 ದಿನಾಂಕ: 24.02.2023
ಇ–ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿಯಲ್ಲಿ)
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹೊಸದುರ್ಗ ಇಲ್ಲಿಗೆ Lobomed 5 steps surgical microscope ಅನ್ನು ಸರಬರಾಜು ಮಾಡಲು ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಸಂಗ್ರಹಣಾ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ನಮೂನೆಗಳನ್ನು http://eproc.karnataka.gov.in ರಲ್ಲಿ ಅಂತರ್ಜಾಲದಲ್ಲಿ ಟೆಂಡರ್ ಫಾರಂಗಳನ್ನು (ದ್ವಿಲಕೋಟೆ) ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 01.03.2023ರಿಂದ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 16.03.2023 ಅಪರಾಹ್ನ 05:00 ಗಂಟೆಯವರೆಗೆ, ಕಾರಣಾಂತರದಿಂದ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಮತ್ತು ಡೌನ್‌ಲೋಡ್ ಮಾಡುವ, ಟೆಂಡರ್ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://eproc.karnataka.gov.in ರಲ್ಲಿ ಪಡೆಯಬಹುದು. **ಅಂದಾಜು ಮೊತ್ತ ರೂ. 4.50 ಲಕ್ಷಗಳು.**
ಸಹಿ/– ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.
RO No. 1066: DIPR/CTA/KSMCA/2022-23

ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಕೊಠಡಿ ಸಂಖ್ಯೆ 201, ಎರಡನೇ ಮಹಡಿ, ಜಿಲ್ಲಾ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110. ಇಮೇಲ್: eomdmbanrural21@gmail.com
ಸಂಖ್ಯೆ: ಜಿ.ಪಂ./ಮ.ಉ.ಯೋ./ಬಾ.ವಾ./ಟೆಂಡರ್/05/23–24 ದಿನಾಂಕ: 27–02–2022
ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ)
ಶಿಕ್ಷಣಾಧಿಕಾರಿಗಳು, ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್ ಜಿಲ್ಲಾ ಪಂಚಾಯತ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಕಛೇರಿಗೆ ಏಪ್ರಿಲ್ 2023 ರಿಂದ ಮಾರ್ಚ್ 2024 ರವರಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಖಾಸಗಿ ವಾಹನದ ಅವಶ್ಯಕತೆ ಇದ್ದು, ವಾಹನ ಪೂರೈಸಲು ನೊಂದಾಯಿತ ಟ್ರಾವೇಲ್ಸ್ ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15–03–2023 ರ ಸಂಜೆ 4.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (www.eproc.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ವಿವರಗಳಿಗಾಗಿ 080–2989 9522 ಗೆ ಸಂಪರ್ಕಿಸಬಹುದು.
ಸಹಿ/– ಶಿಕ್ಷಣಾಧಿಕಾರಿಗಳು, ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/4975/2022–23

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
ನಮ್ಮ ಮೆಟ್ರೋ namma metro | G20
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು - 560038. ದೂರವಾಣಿ: 080-25191039
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂ: ಬಿಎಂಆರ್‌ಸಿಎಲ್/ ಒ&ಎಂ/ ಟಿಆರ್/ಒಎಲ್‌ಟಿಸಿ/2022–23/03 ದಿ: 23.02.2023
ಟೆಂಡರ್ ಪ್ರಕಟಣೆ
ಬಿಎಂಆರ್‌ಸಿಎಲ್ ಇವರು ಕೆಳಕಂಡ ಕಾಮಗಾರಿಗೆ ಅರ್ಹ ಮತ್ತು ಅರ್ಹತೆ ಹೊಂದಿದ ಟೆಂಡರುದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ಚಟುವಟಿಕೆಗಳ ವೇಳಾಪಟ್ಟಿ ಕೆಳಕಂಡಂತಿರುವುದು:
ಕಾಮಗಾರಿಯ ಹೆಸರು: ಸ್ವೀಕರಣಾ ಉಪ ಕೇಂದ್ರಗಳಲ್ಲಿ ಸ್ಥಾಪಿಸಿರುವ ವಿದ್ಯುತ್ ಪರಿವರ್ತಕಗಳ ಆನ್ ಲೋಡ್ ಟ್ಯಾಪ್ ಚೇಂಜರ್‌ಗಳ (ಒಎಲ್‌ಟಿಸಿ) ಕೂಲಂಕಷ ದುರಸ್ತಿ ಮಾಡುವಿಕೆ. ಟೆಂಡರ್ ದಸ್ತಾವೇಜಿನ ಬೆಲೆ (ಹಿಂದಿರುಗಿಸುವುದಿಲ್ಲ): **ರೂ. 3,540/–** [3,000+540 (ಜಿಎಸ್‌ಟಿ 18% ನಂತೆ)]. ಟೆಂಡರ್ ದಸ್ತಾವೇಜಿನ ಆನ್‌ಲೈನ್ ಮಾರಾಟದ ಅವಧಿ: **23.02.2023 ರಿಂದ 15.03.2023ರ ಮಧ್ಯರಾತ್ರಿಯ ವರೆಗೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: **20.03.2023 ರಂದು ಮಧ್ಯಾಹ್ನ 3.00 ಗಂಟೆ ವರೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **20.03.2023 ರಂದು ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **23.02.2023** ರಿಂದ ನಮ್ಮ ವೆಬ್‌ಸೈಟ್: **www.bmrc.co.in** ಗೆ ಭೇಟಿ ನೀಡಿ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಒ&ಎಂ)

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2022–23/3408 ದಿನಾಂಕ:27.02.2023
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Bagalkot District (Bagalkot Constituency) (SCP Potential) Indent No. 24176 of Rs. 79.72 Lakhs (Others) (2) Bagalkot District (Bagalkot Constituency) (TSP Potential) Indent No. 24180 of Rs. 54.46 Lakhs (Others)** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡದಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ: 28.02.2023 ರಿಂದ 09.03.2023 ಸಾಯಂಕಾಲ 5.00 ಘಂಟೆಯವರೆಗೆ.**
2. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.03.2023 ಮುಂಜಾನೆ 11.00 ಘಂಟೆಗೆ.**
3. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16.03.2023 ಮುಂಜಾನೆ 11.00 ಘಂಟೆಗೆ.**
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/956/ಕೆಎಸ್‌ಎಂಸಿಎ/2022–23

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು–560002
ದೂರವಾಣಿ: 080–22213530/22241325
ನಿ.ಆ.ಶಾ: 080–22214379 ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in
ಡಿಕೆಸಿ–27011/49/2022 ದಿನಾಂಕ: 01.03.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ನಶಿಸಿಹೋಗುತ್ತಿರುವ ತಳಸಮುದಾಯದ ವಿಶಿಷ್ಟ ಕಲಾಪ್ರಕಾರಗಳ ರಾಜ್ಯಮಟ್ಟದ ಸಮಾರೋಪ ಸಮಾರಂಭವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಊಟ/ತಿಂಡಿ/ಕಾಫಿ/ಟೀ/ನೀರು/ಡ್ರೈಫ್ರೂಟ್ಸ್ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: ಡಿಕೆಸಿ–27011/49/2022, ದಿನಾಂಕ: 22.02.2023ರಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು 02.03.2023ರ ರಾತ್ರಿ 11.59 ಗಂಟೆಯವರೆಗೆ ಮುಂದೂಡಲಾಗಿದೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಇಲಾಖೆಯ ದೂರವಾಣಿ ಸಂಖ್ಯೆ: 080–22221271 & 080–22213530.
ಸಹಿ/– ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/5015/ಆಕಾರ್/2022–23

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
(Formerly Known as Mysore Minerals Limited)
(A Government of Karnataka Undertaking)
Regd. ಕಚೇರಿ: ಟಿಟಿಎಂಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.
ಫ್ಯಾಕ್ಸ್: 080–2221 3172 ದೂರವಾಣಿ: 080–22278813 / 14 / 15 / 16
Website: www.ksmc.karnataka.gov.in
No. 86/KSMCL/LAW/EOLF/2022-23/3304 Date: 01.03.2023
ಅಧಿಸೂಚನೆ
ಕೆಎಸ್‌ಎಂಸಿಎಲ್ ನಲ್ಲಿನ ಕಾನೂನು ವಿಷಯಗಳ ಸಮಸ್ಯೆಗಳ ಕುರಿತಂತೆ, ಕಾನೂನು ಅಭಿಪ್ರಾಯ/ಸಲಹೆಗಳನ್ನು ಪಡೆಯುವ ಸಲುವಾಗಿ Empanelment of Litigation Law Firms ರಚಿಸಲು ಉದ್ದೇಶಿಸಿದೆ. ಈ ಸಂಬಂಧ, ಅರ್ಹ ವ್ಯಾಜ್ಯ ಕಾನೂನು ಸಂಸ್ಥೆಗಳಿಂದ ಅರ್ಜಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ನಿರ್ದಿಷ್ಟವಾಗಿ ಗುತ್ತಿಗೆ ನಿರ್ವಹಣೆ/ಸಿವಿಲ್/ಸೇವೆ/ಕಾರ್ಮಿಕ ಗಣಿಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಕಾನೂನು ವಿಷಯಗಳಲ್ಲಿ ವ್ಯವಹರಿಸುವಲ್ಲಿ ಹೊಂದಿರುವ ಅನುಭವದೊಂದಿಗೆ ಮತ್ತು ಅಗತ್ಯ ದಾಖಲೆಗಳೊಂದಿಗೆ ಆಯಾ ಕಾನೂನು ಕ್ಷೇತ್ರಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ದಿನಾಂಕ **31.03.2023** ರಂದು ಅಥವಾ ಮೊದಲು ಸಲ್ಲಿಸಬಹುದಾಗಿದೆ. ಅರ್ಹತಾ ಮಾನದಂಡಗಳು ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಸ್ಥೆಯ **www.ksmc.karnataka.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಜಾ).
DIPR/CP/AAPL/RO5013/22-23

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
E-mail: jdfarmsahvs@gmail.com ದೂರವಾಣಿ ಸಂ: 080–23412767
ಸಂ: ಅಪಸಂ/ಮೇವು/ಅಲ್ಪಾವಧಿ ಮರುಟೆಂಡರ್/ಕರೆ–3/ವಿವ–12/2022–23 ದಿನಾಂಕ: 01.03.2023
ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2022–23 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಾನುವಾರು ಕ್ಷೇತ್ರಗಳು/ಕುಕ್ಕುಟ ಕ್ಷೇತ್ರಗಳು/ಹಂದಿ ಕ್ಷೇತ್ರಗಳು ಹಾಗೂ ಕುರಿ ಮತ್ತು ಮೇಕೆ ಕ್ಷೇತ್ರಗಳಿಗೆ ಪಶುಆಹಾರ ಖರೀದಿಸಲು ಅರ್ಹ ಟೆಂಡರದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಒಂದು ವರ್ಷದ ಅವಧಿಗೆ ಅಲ್ಪಾವಧಿ ಮರು–ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.14.00 ಕೋಟಿಗಳು.**
ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **01–03–2023** ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು **e-procurement Platform** ನಲ್ಲಿ ದಿನಾಂಕ: **01–03–2023** ರಿಂದ **15–03–2023**ರ ಸಾಯಂಕಾಲ **5.30** ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ e-procurement Portal ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಮೇವು ಮತ್ತು ಕ್ಷೀರ) ಮತ್ತು ಸದಸ್ಯ ಕಾರ್ಯದರ್ಶಿಗಳು, ಟೆಂಡರ್ ಆಹ್ವಾನ ಸಮಿತಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.
ವಾಸಾಸಂಇ/ವಾಪ್ರ/5008/ಎಎಎ/2022–23

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2 ಕಟ್ಟಡಗಳ ವಿಭಾಗ,
1ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು.
ದೂ: 080–22122856.
ಸಂಖ್ಯೆ: 55/2022–23 ದಿನಾಂಕ: 28.02.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಇಂಜಿನಿಯರ್, ನಂ. 2 ಕಟ್ಟಡಗಳ ವಿಭಾಗ, ಬೆಂಗಳೂರು ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರ ಅನ್ವಯ ಮತ್ತು ಕೆಡಬ್ಲ್ಯು–1, 2 ಮತ್ತು 3 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಪ್ರೊಸೆಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
ಕಾಮಗಾರಿ ಹೆಸರು : ಬೆಂಗಳೂರಿನ ಲಾಲ್‌ಬಾಗ್ ಸಿದ್ದಾಪುರ ವಸತಿಗೃಹ ಸಮುಚ್ಚಯದಲ್ಲಿರುವ ಬ್ಲಾಕ್–3 ರ ಹೊರಗೋಡೆಗಳಲ್ಲಿರುವ ಬಿರುಕುಗಳನ್ನು ದುರಸ್ತಿಗೊಳಿಸುವುದು, ಕೈಪಿಡಿಗಳ ದುರಸ್ತಿ, ಕಾರಿಡಾರ್‌ಗಳ ದುರಸ್ತಿ, ಮಡ್ಡಿ ಮಾಡುವುದು, ಹೊರಗೋಡೆಗಳಿಗೆ ಬಣ್ಣ ಬಳಿಯುವುದು ಹಾಗೂ ಇತರೆ ಅವಶ್ಯ ಕಾಮಗಾರಿಗಳು (**KPWD/2022-23/BD/WORK_INDENT 165691**)ಸೇರಿದಂತೆ ನಗರದ ವಿವಿದೆಡೆ ಇರುವ ಸರ್ಕಾರದ ಕಟ್ಟಡಗಳಲ್ಲಿ ಒಟ್ಟು 101 ಅಭಿವೃದ್ಧಿ ಕಾಮಗಾರಿಗಳು. ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ **ಕನಿಷ್ಠ: ರೂ. 4,82,855.96 ಗರಿಷ್ಠ:ರೂ. 55,89,125.67. ಇಎಂಡಿ: ರೂ. 6100/–. ಗರಿಷ್ಠ: 111900/–.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿದಂತೆ): **ತಲಾ 2 ತಿಂಗಳು.** ಗುತ್ತಿಗೆದಾರರ ದರ್ಜೆ: **3 ನೇ ದರ್ಜೆ ಮತ್ತು ಮೇಲ್ಪಟ್ಟು. ವರ್ಗ :** ಕಾಮಗಾರಿ ಸಂಖ್ಯೆ 1 ರಿಂದ 20 ಎಸ್‌ಸಿ, 21 ರಿಂದ 40 ಎಸ್‌ಟಿ , 41 ರಿಂದ 101 ಇತರೆ.
(1) ಟೆಂಡರ್ ಡಾಕ್ಯೂಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೋಡ್ ಮಾಡಕೊಳ್ಳಲು ನಿಗದಿಪಡಿಸಿರುವ **ದಿನಾಂಕ: 28.02.2023 ರಿಂದ 08.03.2023 ಸಂಜೆ 4.00 ಗಂಟೆ ವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 08.03.2023 ಸಂಜೆ 4.30 ಗಂಟೆಯ ವರೆಗೆ.** (3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ **ದಿನಾಂಕ: 10.03.2023 ರಂದು ಬೆಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ವಾಸಾಸಂಇ/ಉನಿ-ಸಿ.ಪಿ/5000/ಎಂಸಿಎ/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ವಿನಾ ಇನ್ನಾವುದೂ ಸರಿಯಾಗದು.

-ಡಿ.ವಿ. ಗುಂಡಪ್ಪ

ಮಹಾ ಅಧಿವೇಶನದ ತೀರ್ಮಾನಗಳು ಅನುಷ್ಠಾನಕ್ಕೆ ತರಬಲ್ಲದೇ ಕಾಂಗ್ರೆಸ್?

ರಾಯಪುರದಲ್ಲಿ ಈಚೆಗೆ ನಡೆದ 85ನೆಯ ಮಹಾ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷವು ಹೊಸ ದಿಕ್ಕೊಂದನ್ನು ಕಂಡುಕೊಳ್ಳಲು ಹಾಗೂ ತನಗೆ ಹೊಸ ರಾಜಕೀಯ ಚೌಕಟ್ಟೊಂದನ್ನು ಹುಡುಕಿಕೊಳ್ಳಲು ಯತ್ನಿಸಿದೆ. ಚುನಾವಣಾ ಪ್ರಣಾಳಿಕೆಯ ರೀತಿಯಲ್ಲಿ ಕಾಣಿಸುವ, ರಾಜಕೀಯ ಹಾಗೂ ಆಡಳಿತಕ್ಕೆ ಸಂಬಂಧಿಸಿದ ಅಜೆಂಡಾ ಒಂದನ್ನು ಪಕ್ಷವು ಅನಾವರಣ ಮಾಡಿದೆ. ಈ ವರ್ಷ ಹಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಕಾರಣ ಇದು ಮಹತ್ವ ಪಡೆದುಕೊಳ್ಳುತ್ತದೆ. ಅದಕ್ಕಿಂತ ಹೆಚ್ಚಾಗಿ, ಮುಂದಿನ ವರ್ಷ ದೇಶವು ಲೋಕಸಭಾ ಚುನಾವಣೆ ಎದುರಿಸಲಿದೆ. ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಮುನ್ನೆಲೆಗೆ ತರುವ ನಿಲುವನ್ನು ಪಕ್ಷವು ಪ್ರಜ್ಞಾಪೂರ್ವಕವಾಗಿ ಕೈಗೊಳ್ಳುವ ಯತ್ನ ನಡೆಸಿದೆ. 2004ರಿಂದ 2014ರವರೆಗಿನ ಸಂಯುಕ್ತ ಪ್ರಗತಿಪರ ಮೈತ್ರಿಕೂಟದ (ಯುಪಿಎ) ಆಡಳಿತ ಅವಧಿಯಲ್ಲಿ ಅನುಸರಿಸಿದ್ದ ನಿಲುವಿನಿಂದ ಕೆಲವು ಹೆಜ್ಜೆ ಮುಂದಕ್ಕೆ ಹೋಗಲು ಪಕ್ಷವು ಪ್ರಯತ್ನ ಮಾಡಿದೆ. ಸಮಾಜದ ತಳ ವರ್ಗಗಳು ಹಾಗೂ ಸಮಾಜದ ಪರಿಧಿಗೆ ತಳ್ಳಲ್ಪಟ್ಟ ವರ್ಗಗಳ ಆಕಾಂಕ್ಷೆಗಳಿಗೆ ಒಂದು ಸ್ಥಾನ ಕಲ್ಪಿಸಿ, ಆ ಮೂಲಕ ಈ ವರ್ಗಗಳ ನಡುವೆ ಪಕ್ಷದ ಬಗೆಗಿನ ಸದಭಿಪ್ರಾಯವನ್ನು ಹೆಚ್ಚಿಸುವ ಯತ್ನ ನಡೆಸಿದೆ. ಹಲವು ರಾಜ್ಯಗಳಲ್ಲಿ ಸಾಮಾಜಿಕ ನ್ಯಾಯವನ್ನು ಆದ್ಯತೆಯನ್ನಾಗಿ ಇರಿಸಿಕೊಂಡ ರಾಜಕೀಯ ಪಕ್ಷಗಳ ಉಗಮದ ನಂತರದಲ್ಲಿ ಹಾಗೂ ಈ ವರ್ಗಗಳ ಪೈಕಿ ಕೆಲವನ್ನು ಬಿಜೆಪಿ ತನ್ನ ಮತಬುಟ್ಟಿಗೆ ಸೆಳೆದುಕೊಂಡ ನಂತರದಲ್ಲಿ ಕಾಂಗ್ರೆಸ್ ಈ ವರ್ಗಗಳ ನಡುವೆ ತನ್ನ ನೆಲೆಯನ್ನು ಒಂದಷ್ಟು ಕಳೆದುಕೊಂಡಿತ್ತು. ಜಾತಿ ಗಣತಿ ನಡೆಸುವ ಭರವಸೆ, ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಪ್ರತ್ಯೇಕ ಸಚಿವಾಲಯ ರಚನೆ, ನ್ಯಾಯಾಂಗದ ಉನ್ನತ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡಗಳು (ಎಸ್‌ಟಿ) ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸುವ ಮಾತುಗಳು ಪಕ್ಷವನ್ನು ಪುನರ್‌ರೂಪಿಸುವ ಅಂಶಗಳಾಗಿ ಕಾಣಿಸುತ್ತಿವೆ. ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ (ಸಿಡಬ್ಲ್ಯುಸಿ) ಶೇಕಡ 50ರಷ್ಟು ಸ್ಥಾನಗಳನ್ನು ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳಿಗೆ, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾಗಿ ಇಡುವ ತೀರ್ಮಾನವನ್ನು ಕೂಡ ಪಕ್ಷವು ಕೈಗೊಂಡಿದೆ.

ಜನಬೆಂಬಲ ಪಡೆದುಕೊಳ್ಳಲು ಒಂದು ಅಜೆಂಡಾ ರೂಪಿಸಿದರೆ ಸಾಕಾಗುವುದಿಲ್ಲ ಎಂಬುದನ್ನು ಕಾಂಗ್ರೆಸ್ ಪಕ್ಷವು ನೆನಪಿನಲ್ಲಿ ಇರಿಸಿಕೊಳ್ಳಬೇಕು

ಈ ಬದಲಾವಣೆಗಳು ತೋರಿಕೆಯ ಉದ್ದೇಶದವು ಅಲ್ಲ. ಬದಲಿಗೆ, ಪಕ್ಷದ ನಿಲುವಿನಲ್ಲಿ ಆಗಿರುವ ಬದಲಾವಣೆ. ಆದರೆ, ಈ ತೀರ್ಮಾನಗಳನ್ನೆಲ್ಲ ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯು ಪಕ್ಷಕ್ಕೆ ಇದೆಯೇ ಎಂಬುದನ್ನು ಕಾದುನೋಡಬೇಕು. ಹಿಂದಿನ ವರ್ಷ ಉದಯಪುರದಲ್ಲಿ ನಡೆದ ಚಿಂತನ ಶಿಬಿರದಲ್ಲಿ ಪಕ್ಷ ಕೈಗೊಂಡಿದ್ದ ಹಲವು ತೀರ್ಮಾನಗಳು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಈ ಹಿಂದಿನ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪಕ್ಷವು ವಿಸ್ತರಿಸಲು ಬಯಸಿದೆ. ಹಾಗಾಗಿ ಅದು ಕಡು ಬಡವರಿಗೆ ಹಾಗೂ ಅತ್ಯಂತ ದುರ್ಬಲ ವರ್ಗಗಳಿಗೆ ಕನಿಷ್ಠ ಆದಾಯ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೆ ತರುವ ಭರವಸೆ ನೀಡಿದೆ. ಆರೋಗ್ಯದ ಹಕ್ಕಿನ ಮೇಲೆ ಗಮನ ನೀಡುವ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪಕ್ಷವು ಜನರ ಮುಂದಿರಿಸಿದೆ. ಒಬ್ಬಂಟಿ ಮಹಿಳೆಯರಿಗೆ, ಹಿರಿಯರಿಗೆ, ಅಂಗವೈಕಲ್ಯ ಹೊಂದಿರುವವರಿಗೆ ಕೂಡ ಸಾಮಾಜಿಕ ಭದ್ರತಾ ಕ್ರಮಗಳನ್ನು ಜಾರಿಗೆ ತರುವ ಭರವಸೆ ನೀಡಿದೆ. ಈ ಎಲ್ಲ ಕ್ರಮಗಳ ಮೂಲಕ ಬಿಜೆಪಿಯನ್ನು ಎದುರಿಸುವ ಭರವಸೆಯಲ್ಲಿ ಕಾಂಗ್ರೆಸ್ ಇರುವಂತಿದೆ. ಧಾರ್ಮಿಕ ತಾರತಮ್ಯ ಮತ್ತು ದ್ವೇಷ ಹರಡುವ ಕೃತ್ಯಗಳನ್ನು ನಿಯಂತ್ರಿಸಲು ಪ್ರತ್ಯೇಕ ಕಾನೂನು ರೂಪಿಸುವ ಬಗ್ಗೆಯೂ ಕಾಂಗ್ರೆಸ್ ಪ್ರಸ್ತಾಪಿಸಿದೆ.

ಜನರ ಮೇಲೆ ಪರಿಣಾಮ ಬೀರಲು ಹಾಗೂ ಅವರ ಬೆಂಬಲ ಪಡೆದುಕೊಳ್ಳಲು ಒಂದು ಅಜೆಂಡಾ ರೂಪಿಸಿದರೆ ಸಾಕಾಗುವುದಿಲ್ಲ ಎಂಬುದನ್ನು ಪಕ್ಷವು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಈಚೆಗಷ್ಟೇ ಭಾರತ್ ಜೋಡೊ ಯಾತ್ರೆಯನ್ನು ಪೂರ್ಣಗೊಳಿಸಿರುವ ರಾಹುಲ್ ಗಾಂಧಿ ಮತ್ತು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಪ್ರಮುಖ ನಾಯಕರಾಗಿ ಬಿಂಬಿತರಾಗಲಿದ್ದಾರೆ. ಆದರೆ, ಪಕ್ಷವು ಸಿಡಬ್ಲ್ಯುಸಿ ಸ್ಥಾನಗಳಿಗೆ ಚುನಾವಣೆ ನಡೆಸಲಿಲ್ಲ ಎಂಬುದು ಇಲ್ಲಿ ಗಮನಾರ್ಹ. ಚುನಾವಣೆಯ ಬದಲಿಗೆ ಪಕ್ಷವು ಈ ಸ್ಥಾನಗಳಿಗೆ ಅರ್ಹರನ್ನು ನೇಮಕ ಮಾಡುವ ಅಧಿಕಾರವನ್ನು ಅಧ್ಯಕ್ಷರಿಗೆ ಬಿಟ್ಟುಕೊಡುವ ಹಳೆಯ ಪದ್ಧತಿಗೆ ಶರಣುಹೋಯಿತು. ಬಿಜೆಪಿಯನ್ನು ರಾಜಕೀಯವಾಗಿ ಎದುರಿಸಲು ಸಮಾನಮನಸ್ಕ ಪಕ್ಷಗಳ ಜೊತೆಗೂಡಿ ಕೆಲಸ ಮಾಡಲು ಕಾಂಗ್ರೆಸ್ ತೀರ್ಮಾನಿಸಿದೆ. ಆದರೆ, ಬಿಜೆಪಿ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಬಯಸುತ್ತಿರುವ ಸ್ಥಾನಕ್ಕೆ ಇತರ ಪಕ್ಷಗಳು ಒಪ್ಪಿಗೆ ನೀಡಲಿವೆಯೇ ಎಂಬುದು ಇನ್ನಷ್ಟೇ ಗೊತ್ತಾಗಬೇಕಿದೆ.

ದಿನದ ಟ್ವೀಟ್

ವಿರೋಧವೇಕೆ?

ದೇಶದ 80 ಕೋಟಿ ಜನರಿಗೆ ಸರ್ಕಾರ ಉಚಿತವಾಗಿ ಆಹಾರಧಾನ್ಯ ವಿತರಿಸುವುದನ್ನು ಕೆಲವರು ವಿರೋಧಿಸುವುದೇಕೆ ಎಂಬುದೇ ನನಗೆ ಅರ್ಥವಾಗುವುದಿಲ್ಲ. ನಮ್ಮದು ಬಡ ರಾಷ್ಟ್ರ, ಬಡವರಿಗೆ ಸಬ್ಸಿಡಿ ಕೊಡುವ ಅಗತ್ಯವಿದೆ. ಅವರಿಗೆ ಉಚಿತವಾಗಿ ಆಹಾರಧಾನ್ಯಗಳನ್ನು ಕೊಡುವುದರಿಂದ, ಅದರಿಂದ ಉಳಿಯುವ ತಮ್ಮ ಅಲ್ಪಸ್ವಲ್ಪ ಗಳಿಕೆಯನ್ನು ಅವರು ಹಾಲು, ಬಿಸ್ಕತ್ತಿನಂತಹ ಪದಾರ್ಥಗಳ ಖರೀದಿಗೆ ಬಳಸಬಹುದು.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ದೇಶದ ಮುಂಚೂಣಿ ಥಿಂಕ್ ಟ್ಯಾಂಕ್‌ಗಳಲ್ಲಿ ಒಂದಾದ ಸೆಂಟರ್ ಫಾರ್ ಪಾಲಿಸಿ ರಿಸರ್ಚ್ ಸಂಸ್ಥೆಯು ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆಯ ಅಡಿ ಹೊಂದಿದ್ದ ಪರವಾನಗಿಯನ್ನು ಕೇಂದ್ರ ಸರ್ಕಾರವು ಅಮಾನತು ಮಾಡಿದೆ. ಇದರ ಆಡಳಿತ ಮಂಡಳಿಯಲ್ಲಿ ಹಾಗೂ ಹಿರಿಯ ಬೋಧಕರಲ್ಲಿ ಮಾಜಿ ವಿದೇಶಾಂಗ ಕಾರ್ಯದರ್ಶಿ ಮತ್ತು ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಕೂಡ ಇದ್ದಾರೆ. ಪರವಾನಗಿ ಅಮಾನತು ಮಾಡುವ ಮೂಲಕ ಯಾವ ಸಂದೇಶ ನೀಡಲಾಗುತ್ತಿದೆ? ಅಕಾಡೆಮಿಕ್ ಸ್ವಾತಂತ್ರ್ಯ ಇಲ್ಲವೆಂದೇ? ಆಲೋಚಿಸಿ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 2-3-1998

• ಮತ ಎಣಿಕೆ ಕಾರ್ಯ ಇಂದು

ನವದೆಹಲಿ, ಮಾರ್ಚ್ 1 (ಪಿಟಿಐ)– ಲೋಕಸಭೆಯ 543 ಕ್ಷೇತ್ರಗಳ ಪೈಕಿ ಮೂರು ಹಂತಗಳಲ್ಲಿ ಚುನಾವಣೆ ನಡೆದಿರುವ 533 ಸ್ಥಾನಗಳು, ತ್ರಿಪುರಾ, ಗುಜರಾತ್ ಹಿಮಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ನಾಳೆ ಬೆಳಿಗ್ಗೆ ಬಿಗಿ ಭದ್ರತಾ ವ್ಯವಸ್ಥೆಯೊಂದಿಗೆ ಆರಂಭವಾಗುವುದು.

ದೇಶದಾದ್ಯಂತ 870 ಪಟ್ಟಣಗಳಲ್ಲಿ ಮತ ಎಣಿಕೆಗಾಗಿ 1,400 ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಬೆಳಿಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾಗುವುದು. ಇದಕ್ಕೆ ಬೇಕಾಗುವ ಎಲ್ಲ ಸಿದ್ಧತೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ.

• ಸುಬ್ಬುಲಕ್ಷ್ಮಿ, ಕಲಾಂ ಸೇರಿ ಐವರಿಗೆ 'ಭಾರತ ರತ್ನ' ಪ್ರದಾನ

ನವದೆಹಲಿ, ಮಾರ್ಚ್ 1 (ಪಿಟಿಐ)– ಖ್ಯಾತ ವಿದುಷಿ ಎಂ.ಎಸ್. ಸುಬ್ಬುಲಕ್ಷ್ಮಿ ಮತ್ತು ರಕ್ಷಣಾ ಸಚಿವರ ವಿಜ್ಞಾನ ಸಲಹೆಗಾರ ಅಬ್ದುಲ್ ಕಲಾಂ ಅವರಲ್ಲದೆ ಮೂವರು ಗಣ್ಯರಿಗೆ ಮರಣೋತ್ತರವಾಗಿ ನೀಡಲಾದ 'ಭಾರತ ರತ್ನ' ಪ್ರಶಸ್ತಿಯನ್ನು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ಪ್ರದಾನ ಮಾಡಿದರು.

ಖ್ಯಾತ ಚಲನಚಿತ್ರ ನಿರ್ದೇಶಕ ಸತ್ಯಜಿತ್ ರಾಯ್, ಸ್ವಾತಂತ್ರ್ಯ ಹೋರಾಟಗಾರ್ತಿ ಅರುಣಾ ಅಸಫ್ ಅಲಿ ಮತ್ತು ಮಾಜಿ ಪ್ರಧಾನಿ ಗುಲ್ಜಾರಿಲಾಲ್ ನಂದಾ ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿ ನೀಡಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 2-3-1973

• ಒರಿಸ್ಸಾ ಸರ್ಕಾರ ಪತನ: ಬಿಜು ಪರ ಕಾಂಗ್ರೆಸ್ ಶಾಸಕರ ಪಕ್ಷಾಂತರ

ಭುವನೇಶ್ವರ್, ಮಾರ್ಚ್ 1– ಕೆಲವು ಕಾಂಗ್ರೆಸ್ ಶಾಸಕರ ಪಕ್ಷಾಂತರದ ಫಲವಾಗಿ ಒರಿಸ್ಸಾ ಮುಖ್ಯಮಂತ್ರಿ ಶ್ರೀಮತಿ ನಂದಿನಿ ಸತ್ಪಥಿ ಅವರು ಇಂದು ತಮ್ಮ ಸಚಿವ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿ, ವಿಧಾನ ಸಭೆಯನ್ನು ವಿಸರ್ಜಿಸುವಂತೆ ರಾಜ್ಯಪಾಲ ಬಿ.ಡಿ. ಜತ್ತಿ ಅವರಿಗೆ ಸಲಹೆ ಇತ್ತರು.

ಬಿಜು ಪಟ್ನಾಯಕ್ ನೇತೃತ್ವದ ಪ್ರಗತಿ ಶಾಸಕರ ಪಕ್ಷಕ್ಕೆ ಆಡಳಿತ ಪಕ್ಷದ ಕೆಲವು ಶಾಸಕರು ಪಕ್ಷಾಂತರ ಹೊಂದಿರುವುದಾಗಿ ಹೇಳಲಾಗಿದೆ.

ಸಚಿವ ಸಂಪುಟದ ತುರ್ತು ಸಭೆ ಬಳಿಕ ಮುಖ್ಯಮಂತ್ರಿ ನಂದಿನಿ ಅವರು ಬೆಳಿಗ್ಗೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ಶ್ರೀ ಬಿ.ಡಿ. ಜತ್ತಿ ಅವರಿಗೆ 15 ಮಂದಿ ಸದಸ್ಯರ ತಮ್ಮ ಸಂಪುಟದ ರಾಜೀನಾಮೆಯನ್ನು ಸಲ್ಲಿಸಿದರು.

• ಗಾಂಧೀಜಿ ಟೀಕಾಕಾರರಿಗೆ ಅಧಿಕಾರದಲ್ಲಿ, ಕಾಂಗ್ರೆಸ್‌ನಲ್ಲಿ ಇರಲು ಹಕ್ಕಿಲ್ಲ: ಎನ್. ರಾಚಯ್ಯ

ಬೆಂಗಳೂರು, ಮಾರ್ಚ್ 1– 'ಗಾಂಧೀಜಿಯನ್ನು ಟೀಕೆ ಮಾಡುವವರು ಕಾಂಗ್ರೆಸ್ಸಿನಲ್ಲಿಯೇ ಆಗಲಿ, ಅಧಿಕಾರದಲ್ಲಿಯೇ ಆಗಲಿ ಇರಲು ಹಕ್ಕಿಲ್ಲ' ಎಂದು ಕಾಂಗ್ರೆಸ್ ಸದಸ್ಯ ಶ್ರೀ ಎನ್. ರಾಚಯ್ಯ ಅವರು ಇಂದು ವಿಧಾನಪರಿಷತ್ತಿನಲ್ಲಿ ಹೇಳಿದರು.

'ನೆಹರೂ ಮತ್ತು ಗಾಂಧೀಜಿ ಅವರನ್ನು ಟೀಕೆ ಮಾಡುವವರು ಇದ್ದಾರೆ. ಅವರೇನೂ ಮಾಡಿಲ್ಲ ಎಂದು ಹೇಳುತ್ತಾರೆ. ನೆಹರೂ ಅವರಂಥ ಸಮಾಜವಾದಿ ಇನ್ನು ಯಾರೂ ಇಲ್ಲ. ಗಾಂಧೀಜಿ ಅವರಂಥ ಕ್ರಾಂತಿಕಾರಿ ಬೇರೊಬ್ಬರಿಲ್ಲ' ಎಂದು ಅವರು ಹೇಳಿದರು.

ಶಾಂತಿ ಪ್ರಸ್ತಾವದ ಮೂಲಕ ಚೀನಾ ಇದೀಗ ತನ್ನ ಕಾಯಿಯನ್ನು ನಡೆಸಿದೆ

ಶಾಂತಿ ಮಂತ್ರ: ಫಲಿಸೀತೆ ಚೀನಾ ತಂತ್ರ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಉಕ್ರೇನ್ ಯುದ್ಧಕ್ಕೆ ಹಿಂದಿನ ವಾರ ವರ್ಷ ತುಂಬಿದ ಹಿನ್ನೆಲೆಯಲ್ಲಿ ಕೆಲವು ಮಹತ್ವದ ಬೆಳವಣಿಗೆಗಳಾದವು. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಉಕ್ರೇನ್ ರಾಜಧಾನಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟರು. ಉಕ್ರೇನ್ ಅಧ್ಯಕ್ಷರ ಜೊತೆಗೆ ಹೆಜ್ಜೆ ಹಾಕಿದರು. ಆ ಮೂಲಕ 'ನಾವು ನಿಮ್ಮೊಂದಿಗಿದ್ದೇವೆ' ಎಂಬ ಸಂದೇಶ ರವಾನಿಸಿದರು.

ಇದೇ ಹೊತ್ತಿಗೆ ಚೀನಾದ ಪ್ರತಿನಿಧಿ ವಾಂಗ್ ಯೀ ಅವರು ರಷ್ಯಾಕ್ಕೆ ಭೇಟಿಯಿತ್ತು ಪುಟಿನ್ ಅವರ ಕೈ ಕುಲುಕಿದರು. ಈ ಭೇಟಿ ನಡೆದ ಸಮಯ ಮತ್ತು ಸಂದರ್ಭ ಬೇರೆಯದೇ ಸಂದೇಶವನ್ನು ರವಾನಿಸಿತು. ಇದಕ್ಕೆ ಪೂರಕವಾಗಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ 'ರಷ್ಯಾಕ್ಕೆ ಚೀನಾ ಶಸ್ತ್ರಾಸ್ತ್ರಗಳನ್ನು ಪೂರೈಸುವ ಸಾಧ್ಯತೆ ಇದೆ. ಆ ದಿಸೆಯಲ್ಲಿ ಚೀನಾ ಮುಂದಡಿಯಿಟ್ಟರೆ ಪರಿಣಾಮ ಎದುರಿಸಬೇಕಾದೀತು' ಎಂದು ಎಚ್ಚರಿಸಿದರು.

ಇದರ ಬೆನ್ನಲ್ಲೇ ಉಕ್ರೇನ್ ಬಿಕ್ಕಟ್ಟಿನ ಕುರಿತು ತನ್ನ ನಿಲುವು ಸ್ಪಷ್ಟಪಡಿಸಲು 12 ಅಂಶಗಳ ಪ್ರಕಟಣೆಯೊಂದನ್ನು ಚೀನಾ ಹೊರಡಿಸಿತು. ಯಾವುದೇ ದೇಶದ ಸಾರ್ವಭೌಮತೆ, ಸ್ವಾತಂತ್ರ್ಯ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಇತರ ದೇಶಗಳು ಗೌರವಿಸಬೇಕು. ಶೀತಲ ಸಮರದ ಮಾನಸಿಕತೆಯನ್ನು ಬಿಡಬೇಕು. ಶಾಂತಿ ಮಾತುಕತೆಯನ್ನು ಉತ್ತೇಜಿಸಬೇಕು. ಪರಮಾಣು ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಬೆದರಿಕೆ ಕೂಡದು. ಆಹಾರದ ಅಭಾವ ನೀಗಲು ಧಾನ್ಯಗಳ ರಫ್ತು ಸುಲಲಿತವಿರಬೇಕು. ಏಕಪಕ್ಷೀಯವಾಗಿ ಯಾವುದೇ ದೇಶದ ಮೇಲೆ ನಿರ್ಬಂಧ ಹೇರಬಾರದು. ಜಾಗತಿಕ ಪೂರೈಕೆ ಜಾಲ ಸ್ಥಿರವಾಗಿರುವಂತೆ ನೋಡಿಕೊಳ್ಳಬೇಕು. ಸಂಘರ್ಷದ ಬಳಿಕ ಪುನರ್ ನಿರ್ಮಾಣ ಕಾರ್ಯಗಳಿಗೆ ಕೈ ಜೋಡಿಸಬೇಕು... ಹೀಗೆ 12 ಅಂಶಗಳ ಪಟ್ಟಿಯನ್ನು ಮುಂದಿಟ್ಟ ಚೀನಾ, ತನ್ನ ನಿಲುವು ಸ್ಪಷ್ಟಪಡಿಸುತ್ತಲೇ ಅಮೆರಿಕಕ್ಕೆ ತಿವಿಯಿತು ಮತ್ತು ಶಾಂತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಿದ್ಧ ಎಂಬ ಸಂದೇಶ ರವಾನಿಸಿತು.

ಒಟ್ಟಂದದಲ್ಲಿ ನೋಡುವಾಗ ಈ ಆಶಯಗಳೆಲ್ಲವೂ ಒಪ್ಪಿತವೇ. ಆದರೆ ಎಂದಾದರೂ ಈ ಆಶಯಗಳನ್ನು ಚೀನಾ ತನ್ನ ನಡತೆಯಲ್ಲಿ ತೋರಿದೆಯೇ? ಯಾವುದೇ ದೇಶದ ಸಾರ್ವಭೌಮತೆ, ಸ್ವಾತಂತ್ರ್ಯ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಎನ್ನುವ ಚೀನಾ, ಟಿಬೆಟ್ ಮತ್ತು ತೈವಾನ್ ವಿಷಯದಲ್ಲಿ ಯಾವ ಧೋರಣೆ ಹೊಂದಿದೆ? ಗಡಿ ವಿಸ್ತರಿಸುವ ವಾಂಛೆಯೊಂದಿಗೆ ಭಾರತದೊಂದಿಗೆ ಸಂಘರ್ಷಕ್ಕೆ ಇಳಿಯುವ ಚೀನಾದ ಜಗಳಗಂಟತನ ಹಲವು ಬಾರಿ ಜಾಹೀರಾಗಿದೆ. ಶೀತಲ ಸಮರದ ಮನಃಸ್ಥಿತಿ ಬಿಡಬೇಕು ಎನ್ನುವ ಚೀನಾ, ತನ್ನ ಪ್ರತಿಸ್ಪರ್ಧಿ ರಾಷ್ಟ್ರದ ಗೋಪ್ಯತೆಯನ್ನು ಕದಿಯಲು ಹೇಗೆಲ್ಲಾ ಪ್ರಯತ್ನಿಸುತ್ತದೆ ಎನ್ನುವುದನ್ನು 'ಬೇಹುಗಾರಿಕಾ ಬಲೂನ್ ಪ್ರಕರಣ' ಹೇಳುತ್ತಿದೆ. ಭಾರತದ ಬೆಳವಣಿಗೆಯನ್ನು ತಡೆಯಲು ವಾಮಮಾರ್ಗಗಳನ್ನು ಬಳಸಿದ ಚೀನಾ, ಪಾಕಿಸ್ತಾನದ ಸೇನೆಯನ್ನು ಭಾರತದ ವಿರುದ್ಧ ಉತ್ತೇಜಿಸಿದ್ದು, ಪಾಕಿಸ್ತಾನ ಅಣ್ವಸ್ತ್ರ ಹೊಂದಲು ಸಹಕರಿಸಿದ್ದು, ಶ್ರೀಲಂಕಾವನ್ನು ಸಾಲದ ಕೂಪದಲ್ಲಿ ಮುಳುಗಿಸಿ ಆಯಕಟ್ಟಿನ ಬಂದರುಗಳನ್ನು ತನ್ನದಾಗಿಸಿಕೊಂಡು ಯುದ್ಧನೌಕೆಗಳಿಗೆ ತಾಣ ಕಲ್ಪಿಸಲು ಪ್ರಯತ್ನಿಸಿದ್ದು ಇದೀಗ ಗೋಪ್ಯವಾಗಿ ಉಳಿದಿಲ್ಲ. ಹಾಗಾಗಿಯೇ ಚೀನಾದ ಈ ಶಾಂತಿ ಪ್ರಸ್ತಾವಕ್ಕೆ ಪ್ರತಿಕ್ರಿಯಿಸಿರುವ ಅಮೆರಿಕ 'ವಿಶ್ವಾಸಾರ್ಹತೆಯನ್ನು ಚೀನಾ ಉಳಿಸಿಕೊಂಡಿಲ್ಲ' ಎಂದಿದೆ.

ಈ 12 ಅಂಶಗಳ ಪಟ್ಟಿಯಲ್ಲಿ ಶೀತಲ ಸಮರದ ಮನಃಸ್ಥಿತಿ ಬಿಡಬೇಕು, ಏಕಪಕ್ಷೀಯವಾಗಿ ನಿರ್ಬಂಧ ಹೇರಬಾರದು ಎಂಬ ಅಂಶಗಳು ಇರುವುದರಿಂದ ರಷ್ಯಾ ಸಹಜವಾಗಿಯೇ ಚೀನಾದ ಪ್ರಸ್ತಾವವನ್ನು ಸ್ವಾಗತಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಕೂಡ ಷಿ ಜಿನ್ ಪಿಂಗ್ ಅವರನ್ನು ಭೇಟಿಯಾಗಿ ಮಾತನಾಡಲು ಉತ್ಸಾಹ ತೋರಿದ್ದಾರೆ! ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಅವರು ಏಪ್ರಿಲ್ ತಿಂಗಳಿನಲ್ಲಿ ಚೀನಾಕ್ಕೆ ಭೇಟಿಯಿತ್ತು ಮಾತುಕತೆ ನಡೆಸುವುದಾಗಿ ಹೇಳಿದ್ದಾರೆ.

ಹಾಗಾದರೆ ಚೀನಾದ ಈ ಶಾಂತಿ ಪ್ರಸ್ತಾವ ಉಕ್ರೇನ್ ಮತ್ತು ಇತರ ಐರೋಪ್ಯ ರಾಷ್ಟ್ರಗಳಿಗೆ ಒಪ್ಪಿತವೇ? ವಿಷಯ ಸ್ಪಷ್ಟವಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಈ ಸೆಣಸಾಟದಲ್ಲಿ ಜಯ ಎನ್ನುವುದು ಉಭಯ ಪಡೆಗಳಿಗೂ ಎಟುಕಲಾರದು. ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಉಕ್ರೇನ್ ಸೈನಿಕರನ್ನು ಹುರಿದುಂಬಿಸುತ್ತಿದ್ದಾರಾದರೂ ಗೆಲುವು ಎನ್ನುವುದು ಬಹಳ ದೂರ ಮತ್ತು ದುಬಾರಿ ಎಂಬುದು ಅವರಿಗೆ ತಿಳಿಯದ್ದೇನಲ್ಲ. ಉಳಿದಂತೆ, ಫ್ರಾನ್ಸ್ ಮತ್ತು ಜರ್ಮನಿ ಕೂಡ ಪೂರ್ಣ ಮನಸ್ಸಿನಿಂದ ಉಕ್ರೇನ್ ಬಗಲಿಗೆ ನಿಂತಿಲ್ಲ. ಕೇವಲ ನ್ಯಾಟೊದ ಒಗ್ಗಟ್ಟು ಉಳಿಸಿಕೊಳ್ಳಬೇಕು ಎಂಬ ಆಶಯ ಮತ್ತು ಅಮೆರಿಕದ ಒತ್ತಡದಿಂದಾಗಿ ಅವು ಉಕ್ರೇನ್ ಜೊತೆಗೆ ಗುರುತಿಸಿಕೊಳ್ಳುತ್ತಿವೆ. ಹಾಗಾಗಿ ಸಂಘರ್ಷದ ಭಾಗವಾಗಿರುವ ಮತ್ತು ಬಾಧಿತಗೊಂಡಿರುವ ದೇಶಗಳಿಗೆ ಈ ಯುದ್ಧ ಶೀಘ್ರ ಮುಗಿದರೆ ಸಾಕು ಎನಿಸಿದೆ.

ಆದರೆ ಅಮೆರಿಕದ ನಿಲುವು ಮಾತ್ರ ಭಿನ್ನವಾಗಿದೆ! ಹಣದುಬ್ಬರ, ಆರ್ಥಿಕ ಹಿಂಜರಿಕೆ, ಉದ್ಯೋಗ ನಷ್ಟದ ಸವಾಲುಗಳನ್ನು ಎದುರಿಸುತ್ತಿರುವ ಅಮೆರಿಕದಲ್ಲಿ, ಅಧ್ಯಕ್ಷ ಬೈಡನ್ ಅವರ ಜನಪ್ರಿಯತೆ ಇಳಿಜಾರಿನಲ್ಲಿದೆ. 2024ರ ಅಧ್ಯಕ್ಷೀಯ ಚುನಾವಣೆಗೆ ವೇದಿಕೆ ಸಿದ್ಧಮಾಡಿಕೊಳ್ಳುತ್ತಿರುವ ಡೊನಾಲ್ಡ್ ಟ್ರಂಪ್, ಬರೀ ಒಂದು ದಿನದಲ್ಲಿ ಈ ಯುದ್ಧಕ್ಕೆ ತಾನು ಅಂತ್ಯ ಹಾಡಬಲ್ಲೆ ಎನ್ನುತ್ತಿದ್ದಾರೆ. ಬೈಡನ್ ಅವರು ಉಕ್ರೇನಿಗೆ ರಹಸ್ಯವಾಗಿ ಬಂದಿಳಿದದ್ದು ಮತ್ತು ಪುಟಿನ್ ಅವರಿಗೆ ಪಾಠ ಕಲಿಸುವ ಮಾತನಾಡಿದ್ದು, ಇಳಿದ ಜನಪ್ರಿಯತೆಯನ್ನು ಮೇಲೆತ್ತಲು ಅವರು ನಡೆಸುತ್ತಿರುವ ಕಸರತ್ತಿನ ಒಂದು ಭಾಗ ಅಷ್ಟೇ. ರಷ್ಯಾಕ್ಕೆ ಪಾಠ ಕಲಿಸುವ ಮಂಪರಿನಲ್ಲಿರುವ ಅಮೆರಿಕ, ದೂರದೃಷ್ಟಿಯನ್ನು ಕಳೆದುಕೊಂಡಂತೆ ಕಾಣುತ್ತಿದೆ. ಈ ಸಂದರ್ಭವನ್ನು ಚೀನಾ ಚಾಣಾಕ್ಷತನದಿಂದ ಬಳಸಿಕೊಳ್ಳುತ್ತಿದೆ.

ಅಷ್ಟಕ್ಕೂ ಉಕ್ರೇನ್ ಬಿಕ್ಕಟ್ಟಿಗೆ ಸಂಧಾನದ ಮಾರ್ಗವನ್ನು ಸೂಚಿಸಿರುವ ಚೀನಾ ಏನನ್ನು ಸಾಧಿಸಲು ಹೊರಟಿದೆ? ಅಮೆರಿಕಕ್ಕೆ ಪ್ರತಿಯಾಗಿ ಚೀನಾಕೇಂದ್ರಿತ ಜಾಗತಿಕ ವ್ಯವಸ್ಥೆಯನ್ನು ರೂಪಿಸುವ ಧಾವಂತ ಚೀನಾಕ್ಕಿದೆ. ಒಂದೊಮ್ಮೆ ಚೀನಾದ ಮಧ್ಯಸ್ಥಿಕೆಯಲ್ಲಿ ಬಿಕ್ಕಟ್ಟು ಬಗೆಹರಿದರೆ, ರಷ್ಯಾದ ಜೊತೆಗಿನ ಚೀನಾದ ಸಂಬಂಧ ಗಟ್ಟಿಗೊಳ್ಳುವುದರ ಜೊತೆಗೆ ಐರೋಪ್ಯ ರಾಷ್ಟ್ರಗಳ ಮೇಲೆ ಚೀನಾದ ಪ್ರಭಾವ ಹೆಚ್ಚಲಿದೆ ಮತ್ತು ಅಮೆರಿಕದ ಪ್ರಭಾವ ಅಷ್ಟರಮಟ್ಟಿಗೆ ಯುರೋಪಿನಲ್ಲಿ ನಶಿಸಲಿದೆ.

ಚೀನಾ ತಳೆದಿರುವ ನಿಲುವಿಗೆ ಮತ್ತೊಂದು ಆಯಾಮವೂ ಇದೆ. ಹಿಂದಿನ ಸೆಪ್ಟೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪುಟಿನ್ ಅವರನ್ನು ಭೇಟಿಯಾದಾಗ 'ಇದು ಯುದ್ಧದ ಯುಗವಲ್ಲ' ಎಂಬ ಮಾತನ್ನು ನೇರವಾಗಿ ಆಡಿದ್ದರು. ಪುಟಿನ್ ಆ ಮಾತಿಗೆ ಎದುರಾಡಲಿಲ್ಲ. ಮೋದಿ ಅವರ ನಡೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಅಮೆರಿಕ, ಫ್ರಾನ್ಸ್ ಮತ್ತು ಜರ್ಮನಿ, ಬಿಕ್ಕಟ್ಟಿನ ಪರಿಹಾರಕ್ಕೆ ಭಾರತ ಪ್ರಯತ್ನಿಸಬೇಕು ಎಂದು ವಿವಿಧ ವೇದಿಕೆಗಳಲ್ಲಿ ಆಗ್ರಹಿಸಿದವು. ಒಂದೊಮ್ಮೆ ಬಿಕ್ಕಟ್ಟಿನ ನಿವಾರಣೆಯಲ್ಲಿ ಭಾರತ ಪ್ರಮುಖ ಪಾತ್ರ ವಹಿಸಿದರೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸ್ಥಾನ ಗಳಿಸುವುದು ಭಾರತಕ್ಕೆ ಸುಲಭವಾದೀತು ಎಂಬ ಆತಂಕ ಚೀನಾಕ್ಕೆ ಇದೆ. ಹಾಗಾಗಿ ಶಾಂತಿ ಪ್ರಸ್ತಾವದ ಮೂಲಕ ತನ್ನ ಕಾಯಿಯನ್ನು ಇದೀಗ ಚೀನಾ ನಡೆಸಿದೆ.

ಹಾಗಾದರೆ ಚೀನಾದ ತಂತ್ರಗಾರಿಕೆ ಯಶ ಕಂಡೀತೆ? ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯ ಬಗ್ಗೆ ಚೀನಾ ಮಾತನಾಡಿದೆಯಾದರೂ, ರಷ್ಯಾದ ಕ್ರಮವನ್ನು ಖಂಡಿಸಿಲ್ಲ. ಚೀನಾದ ಪ್ರಸ್ತಾವ ಬಹುಮಟ್ಟಿಗೆ ರಷ್ಯಾದ ಪರವಾಗಿಯೇ ಇದೆ. ಕೊರೊನಾ ಮತ್ತು ಇತರ ವಿಷಯಗಳಲ್ಲಿ ಅದು ಅನುಸರಿಸಿದ ನೀತಿಯಿಂದಾಗಿ ಚೀನಾದ ವಿಶ್ವಾಸಾರ್ಹತೆ ಮುಕ್ಕಾಗಿದೆ. ರಷ್ಯಾಕ್ಕೆ ಚೀನಾ ಶಸ್ತ್ರಾಸ್ತ್ರ ಪೂರೈಸುವುದನ್ನು ಕೆಲಕಾಲದ ಮಟ್ಟಿಗಾದರೂ ತಪ್ಪಿಸಬೇಕು ಎಂಬ ಏಕೈಕ ಉದ್ದೇಶದಿಂದ ಚೀನಾದ ಪ್ರಸ್ತಾವವನ್ನು ಉಕ್ರೇನ್ ಮತ್ತು ಫ್ರಾನ್ಸ್ ಸ್ವಾಗತಿಸಿರುವಂತೆ ಕಾಣುತ್ತಿದೆ.

ಜರ್ಮನಿಯ ಚಾನ್ಸಲರ್ ಇತ್ತೀಚೆಗೆ ಭಾರತಕ್ಕೆ ಭೇಟಿಯಿತ್ತ ವೇಳೆ, 'ಉಕ್ರೇನ್ ಯುದ್ಧದ ವಿಷಯವಾಗಿ ಯಾವುದೇ ಶಾಂತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಭಾರತ ಸಿದ್ಧ' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಚೀನಾಕ್ಕೆ ಪ್ರತಿಯಾಗಿ ಬಿಕ್ಕಟ್ಟಿನ ಇತ್ಯರ್ಥಕ್ಕೆ ಭಾರತ ಮಧ್ಯಸ್ಥಿಕೆ ವಹಿಸಬೇಕು ಎಂದು ಅಮೆರಿಕ ಒತ್ತಡ ಹೇರಿದರೆ ಅಚ್ಚರಿಯಿಲ್ಲ. ಅಂತೂ ಕುತೂಹಲದ ದಿನಗಳು ಮುಂದಿವೆ.

ಚುರುಮುರಿ

ಎಲೆಕ್ಷನ್ ಅಸ್ತ್ರ

• ಮಣ್ಣೆ ರಾಜು

'ಎಲೆಕ್ಷನ್‌ಗೆ ಅಸ್ತ್ರ ಬಳಸುತ್ತೇವೆ ಅಂತ ಕೆಲವು ರಾಜಕಾರಣಿಗಳು ಹೇಳಿಕೊಂಡಿದ್ದಾರೆ. ಅಸ್ತ್ರ ಬಳಸಿ ಹೋರಾಡಲು ಎಲೆಕ್ಷನ್ ಏನು ಯುದ್ಧವೇನ್ರೀ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಯುದ್ಧ ಮಾಡಿ ರಾಜ್ಯ ಗೆಲ್ಲುವ ಸ್ಥಿತಿ ಬಂತೇನ್ರೀ' ಕೇಳಿದಳು ಸುಮಿ.

'ಅದು ಮಾರಣಾಂತಿಕ ಅಸ್ತ್ರವಲ್ಲ, ಮಾನಹರಣ ಅಸ್ತ್ರ. ಪ್ರತಿಸ್ಪರ್ಧಿಗಳ ಮಾನ ಕಳೆದು ಮುಖಭಂಗ ಮಾಡಿ, ಮತದಾರರ ಮನ ಗೆಲ್ಲುವ ಅಸ್ತ್ರ. ಭ್ರಷ್ಟಾಚಾರ, ದುಷ್ಟಾಚಾರ, ಸಿ.ಡಿ ಹಗರಣ, ಲಂಚ ಪ್ರಕರಣ, ಬಾಡೂಟ, ಕೆಟ್ಟಾಟಗಳು ಪರಿಣಾಮಕಾರಿ ಅಸ್ತ್ರಗಳಂತೆ'.

'ರಾಜಕಾರಣಿಗಳೇ ಪರಸ್ಪರ ಬಾಣ ಬಿಟ್ಟುಕೊಂಡರೆ ಪ್ರಯೋಜನವಿಲ್ಲ, ಮತದಾರರ ಮೇಲೆ ಸಮ್ಮೋಹನಾಸ್ತ್ರ ಪ್ರಯೋಗಿಸಬೇಕು, ಅವರಿಗೆ ನಾಟುವಂತಹ ಭರವಸೆಯ ಬಾಣ ಬಿಡಬೇಕು ಅಲ್ವೇನ್ರೀ?'

'ರಸ್ತೆ, ಚರಂಡಿ, ನೀರಿನ ವ್ಯವಸ್ಥೆ ಮಾಡ್ತೀವಿ ಅನ್ನೋ ಬಾಣ ಬಿಡುತ್ತಿದ್ದಾರಲ್ಲಾ'.

'ನೀರು, ಚರಂಡಿ ಎಲ್ಲಾ ಎಲೆಕ್ಷನ್‌ಗಳಲ್ಲಿ ಬಳಕೆಯಾಗಿ ಮೊಂಡಾಗಿರುವ ಅಸ್ತ್ರ. ಪಡಿತರ ಅಕ್ಕಿ ಪ್ರಮಾಣ ಜಾಸ್ತಿ ಮಾಡ್ತೀವಿ, ಮನೆ ಬಾಗಿಲಿಗೆ ಆಂಬುಲೆನ್ಸ್ ಕಳಿಸ್ತೀವಿ ಅನ್ನೋ ಬದಲು ಆಂಬುಲೆನ್ಸ್‌ನಲ್ಲಿ ಡಾಕ್ಟರನ್ನೇ ಮನೆ ಬಾಗಿಲಿಗೆ ಕಳಿಸ್ತೀವಿ ಅಂತ ಭರವಸೆ ನೀಡಬೇಕು'.

'ಜನರಿಗೆ ಅಷ್ಟೊಂದು ಸಲುಗೆ ಕೊಟ್ಟರೆ ನಮ್ಮ ಹಳ್ಳಿಗೂ ರೈಲು ಬಿಡಿ, ವಿಮಾನ ನಿಲ್ದಾಣ ಮಾಡಿ ಅಂತ ಕೇಳ್ತಾರೆ, ಮದುವೆಯಾಗಲು ರೈತರ ಮಕ್ಕಳಿಗೆ ವಧು ಸಿಗ್ತಿಲ್ಲ ಅಂತಾರೆ, ಹೆಣ್ಣು ಹುಡುಕಿ ಮದುವೆ ಮಾಡ್ತೀವಿ ಅಂತ ರಾಜಕಾರಣಿಗಳು ಭರವಸೆ ಕೊಡಲಾಗುತ್ತಾ?'

'ಚುನಾವಣೆ ಗೆಲ್ಲಬೇಕೆಂದರೆ ಕೊಡಲೇಬೇಕು. ಎಲೆಕ್ಷನ್‌ನಲ್ಲಿ ಕೊಟ್ಟ ಎಲ್ಲಾ ಭರವಸೆಗಳನ್ನು ಎಲ್ಲಿ ಈಡೇರಿಸಿದ್ದಾರೆ ಹೇಳ್ರೀ?'

ಸಂಗತ

ವನ್ಯಪ್ರಭೇದ: ಕಳ್ಳದಂಧೆ ತಡೆಗೀಗ 50 ವರ್ಷ

ಅಕ್ರಮವಾಗಿ ವ್ಯಾಪಾರವಾಗುತ್ತಿರುವ ವನ್ಯಜೀವಿ ಮತ್ತು ಸಸ್ಯ ಸಂತತಿಗಳು ವಿನಾಶಗೊಳ್ಳದಂತೆ ತಡೆಯುವ ಮುಖ್ಯ ಉದ್ದೇಶ ತಕ್ಕಮಟ್ಟಿಗೆ ಯಶಸ್ವಿಯಾಗಿದೆ

• ಗುರುರಾಜ್ ಎಸ್. ದಾವಣಗೆರೆ

ವಿಶೇಷ ವನ್ಯಸಂಪತ್ತು ಇರುವ ರಾಷ್ಟ್ರಗಳ ಅನುಕೂಲಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವನ್ಯಜೀವಿ ಹಾಗೂ ಸಸ್ಯ ಪ್ರಭೇದಗಳ ಕಳ್ಳಮಾರಾಟವನ್ನು ನಿಷೇಧಿಸಲು ರೂಪಿಸಲಾದ 'ಸೈಟ್ಸ್'ಗೆ (ಕನ್ವೆನ್ಷನ್ ಆನ್ ಇಂಟರ್ ನ್ಯಾಷನಲ್ ಟ್ರೇಡ್ ಇನ್ ಎನ್‌ಡೇಂಜರ್ಡ್ ಸ್ಪೀಶೀಸ್ ಆಫ್ ವೈಲ್ಡ್ ಫೋನ ಆ್ಯಂಡ್ ಫ್ಲೋರ) ಈಗ ಐವತ್ತು ವರ್ಷ ತುಂಬುತ್ತಿದೆ. 3 ಮಾರ್ಚ್, 1973ರಂದು ಸಹಿ ಹಾಕಿದ 20 ದೇಶಗಳು ಈ ಐದು ದಶಕಗಳಲ್ಲಿ ಬಿಗಿ ಕಾನೂನು ರೂಪಿಸಿ ಅಕ್ರಮಗಳನ್ನು ತಡೆಯುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿವೆ.

ಕಾನೂನಿನ ಕಣ್ಣು ತಪ್ಪಿಸಿ ವ್ಯಾಪಾರವಾಗುತ್ತಿರುವ ವನ್ಯಜೀವಿ ಮತ್ತು ಸಸ್ಯ ಸಂತತಿಗಳು ವಿನಾಶಗೊಳ್ಳದಂತೆ ತಡೆಯುವುದು ಸೈಟ್ಸ್‌ನ ಮುಖ್ಯ ಉದ್ದೇಶ. ಯುಎನ್‌ಇಪಿ (ಯುನೈಟೆಡ್ ನೇಶನ್ಸ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂ) ಮಾರ್ಗದರ್ಶನದಲ್ಲಿ ಜಿನಿವಾದಿಂದ ಕೆಲಸ ಮಾಡುವ 'ಸೈಟ್ಸ್'ಗೀಗ ವಿಶ್ವದ 183ಕ್ಕೂ ಹೆಚ್ಚು ದೇಶಗಳ ಸದಸ್ಯತ್ವವಿದೆ. ಇಲ್ಲಿ ನಿರ್ಧರಿಸಲಾಗುವ ಕಾರ್ಯಸೂಚಿಯನ್ನು ಸದಸ್ಯ ದೇಶಗಳೆಲ್ಲ ರಾಷ್ಟ್ರಮಟ್ಟದಲ್ಲಿ ಕಾನೂನು ರೂಪಿಸಿಕೊಂಡು ಅನುಸರಿಸಲೇಬೇಕು. ಆಮದು, ರಫ್ತು ಎಲ್ಲವೂ ಪರವಾನಗಿಯ ಮೂಲಕವೇ ಆಗಬೇಕು. ಸದಸ್ಯ ದೇಶ ಪ್ರತ್ಯೇಕ ಸಮಿತಿಯೊಂದನ್ನು ರಚಿಸಿಕೊಂಡು, ವೈಜ್ಞಾನಿಕ ಮಂಡಳಿಯೊಂದರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಬೇಕು ಮತ್ತು ಪಟ್ಟಿಯಲ್ಲಿರುವ ಪ್ರಭೇದಗಳನ್ನಷ್ಟೇ ಆಮದು, ರಫ್ತು ಮಾಡಬೇಕು. ಯಾವ್ಯಾವ ವನ್ಯಪ್ರಾಣಿ ಮತ್ತು ಸಸ್ಯಗಳನ್ನು ವ್ಯಾಪಾರ, ಸಂಶೋಧನೆ, ಮುದ್ದುಪ್ರಾಣಿಯಂತೆ ಸಾಕಲು ಬಳಸಬಹುದೆಂದು ಮೂರು ಅನುಬಂಧಗಳಲ್ಲಿ ಪಟ್ಟಿ ಮಾಡಲಾಗಿದೆ.

ಮೊದಲ ಅನುಬಂಧದಲ್ಲಿ ಸಾವಿರದಷ್ಟು ಪ್ರಭೇದಗಳನ್ನು ಪಟ್ಟಿ ಮಾಡಲಾಗಿದೆ. ಇವುಗಳನ್ನು ಯಾವ ಕಾರಣಕ್ಕೂ ವ್ಯಾಪಾರ ಮಾಡುವಂತಿಲ್ಲ. ಉದಾಹರಣೆಗೆ, ಹುಲಿ, ಆನೆ, ಏಷ್ಯಾಟಿಕ್ ಲಯನ್, ಗೊರಿಲ್ಲ, ಸಮುದ್ರ ಆಮೆ, ಲೇಡಿ ಸ್ಲಿಪ್ಪರ್ ಆರ್ಕಿಡ್ (ಹೆಣ್ಣಿನ ಚಪ್ಪಲಿ ಆಕಾರದ ಆರ್ಕಿಡ್), ದೈತ್ಯ ಪಾಂಡಗಳು ಅಳಿವಿನಂಚಿಗೆ ಸಿಲುಕಿರುವುದರಿಂದ ಸಂಶೋಧನೆಯ ಕಾರಣಗಳಿಗೆ ಮಾತ್ರ ಬಳಸಬಹುದು. ಅನಿವಾರ್ಯ ಹಾಗೂ ವಿಶೇಷ ಸಂದರ್ಭಗಳಲ್ಲಿ ಇವುಗಳ ರಫ್ತಿಗೆ ಅವಕಾಶ ಕಲ್ಪಿಸಬಹುದಾಗಿದೆ.

ಅನುಬಂಧ ಎರಡರಲ್ಲಿ ಮೂವತ್ತೈದು ಸಾವಿರ ಪ್ರಭೇದಗಳನ್ನು ಪಟ್ಟಿ ಮಾಡಲಾಗಿದೆ. ಇವು ಸದ್ಯಕ್ಕೆ ಅಳಿವಿನಂಚಿಗೆ ಸರಿದಿಲ್ಲವಾದರೂ ಇವುಗಳ ವ್ಯಾಪಾರವನ್ನು ನಿಯಂತ್ರಿಸದಿದ್ದರೆ ಶೀಘ್ರವಾಗಿ ಅನುಬಂಧ ಒಂದಕ್ಕೆ ಸೇರ್ಪಡೆಯಾಗಬಹುದೆಂಬ ಕಾರಣಕ್ಕೆ ತೀವ್ರ ನಿಗಾ ವಹಿಸಬೇಕೆಂಬ ಒತ್ತಾಯವಿದೆ. ಈ ಪ್ರಭೇದಗಳನ್ನು ಹೋಲುವ ತದ್ರೂಪಿ ಪ್ರಾಣಿ, ಸಸ್ಯಗಳ ವ್ಯಾಪಾರವೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜೋರಾಗಿದೆ. ಅದನ್ನೂ ತಡೆಯಬೇಕಿದೆ. ಇವುಗಳ ರಫ್ತು, ಆಮದಿಗೆ ಸಕ್ಷಮ ಪ್ರಾಧಿಕಾರದ ಪರವಾನಗಿ ಇರಲೇಬೇಕೆಂಬ ನಿಯಮವಿದೆ. ಅಮೆರಿಕದ ಜಿನ್ಸೆಂಗ್ (ಅಶ್ವಗಂಧ) ಬೇರು, ಪ್ಯಾಡಲ್‌ಫಿಶ್, ಸಿಂಹ, ಅಮೆರಿಕನ್ ಅಲಿಗೇಟರ್, ಮಹೋಗನಿ ಮರ ಮತ್ತು ಹಲವು ಜೀವಂತ ಹವಳಗಳು ಈ ಅನುಬಂಧದಲ್ಲಿವೆ.

ಅನುಬಂಧ ಮೂರರಲ್ಲಿ ನೂರೈವತ್ತು ಪ್ರಭೇದಗಳಿವೆ. ಇವುಗಳ ವ್ಯಾಪಾರಕ್ಕೆ ಆಮದು, ರಫ್ತು ಮಾಡಿಕೊಳ್ಳುವ ಉಭಯ ದೇಶಗಳ ಸಂಪೂರ್ಣ ಒಪ್ಪಿಗೆ, ಬೇಡಿಕೆ ಮತ್ತು ಸೂಕ್ತ ಪರವಾನಗಿ ಇರಬೇಕು. ಅನುಬಂಧ ಒಂದು ಮತ್ತು ಎರಡರಲ್ಲಿ ಪ್ರಾಣಿ, ಸಸ್ಯಗಳನ್ನು ಸೇರಿಸುವ ಇಲ್ಲವೇ ಕೈಬಿಡುವ ಅಧಿಕಾರ 'ಸೈಟ್ಸ್'ಗೆ ಮಾತ್ರ ಇದೆ. ಅನುಬಂಧ ಮೂರರಲ್ಲಿರುವ ಪ್ರಭೇದಗಳನ್ನು ಸೇರಿಸುವ ಅಥವಾ ಕೈಬಿಡುವ ಅಧಿಕಾರ ಆಯಾ ದೇಶಗಳಿಗಿದೆ.

ಸೈಟ್ಸ್‌ನ ಅಡಿಯಲ್ಲಿ ಸಾವಿರಾರು ಪ್ರಾಣಿ ಹಾಗೂ ಸಸ್ಯ ಪ್ರಭೇದಗಳನ್ನು ಗುರುತಿಸಿ ಅಕ್ರಮ ವ್ಯಾಪಾರದಿಂದ ರಕ್ಷಿಸಲಾಗಿದೆ. ವಿಶ್ವದ ಶೇಕಡ 7–8ರಷ್ಟು ಜೀವಿ ಪ್ರಭೇದಗಳಿರುವ ನಮ್ಮಲ್ಲಿ ಅಪಾಯದಂಚಿನ ಪ್ರಾಣಿ, ಸಸ್ಯಗಳ ಅಂತರರಾಷ್ಟ್ರೀಯ ವ್ಯಾಪಾರವನ್ನು ಸಂಪೂರ್ಣ ನಿಷೇಧಿಸಲಾಗಿದೆ.



ನಕ್ಷತ್ರ ಆಮೆ, ಸಣ್ಣ ಉಗುರು ಮತ್ತು ಮೃದು ಚರ್ಮದ ನೀರುನಾಯಿಗಳ ಕಳ್ಳವ್ಯಾಪಾರ ಜಾಸ್ತಿಯಾಗಿರುವುದರಿಂದ ಅವನ್ನು ಅನುಬಂಧ ಎರಡರಿಂದ ಒಂದಕ್ಕೆ ಸ್ಥಳಾಂತರಿಸುವಂತೆ ಸೈಟ್ಸ್ ಅನ್ನು ಕೋರಿದ್ದೇವೆ. ಅಪಾಯದಲ್ಲಿರುವ ಗೆಕೊ ಹಲ್ಲಿ ಮತ್ತು ಬೆಣೆ ಮೀನುಗಳನ್ನು ಅನುಬಂಧ ಎರಡಕ್ಕೆ ಸೇರಿಸಬೇಕಿದೆ. ವಿಶ್ವದಲ್ಲೇ ಅತಿಹೆಚ್ಚು ಆನೆ ದಂತದ ಕಳ್ಳವ್ಯಾಪಾರ ಮಾಡುವ ವಿಯೆಟ್ನಾಂ, ಮೊಜಾಂಬಿಕ್ ಅನ್ನು ನಿಯಂತ್ರಿಸಬೇಕಿದೆ. ಹುಲಿಯ ದೇಹದ ಭಾಗ, ರೈನೋದ ಕೊಂಬು, ಆನೆಯ ದಂತದ ಕಳ್ಳ ವ್ಯಾಪಾರಕ್ಕೆ ಕುಖ್ಯಾತಿಯಾಗಿರುವ ವಿಯೆಟ್ನಾಂ ಮತ್ತು ಅಕ್ರಮ ವ್ಯಾಪಾರಕ್ಕಾಗಿ ಹುಲಿಗಳ ಸಂಖ್ಯೆಯನ್ನು 'ಟೈಗರ್ ಫಾರ್ಮ್'ಗಳಲ್ಲಿ ಸಾಕುಪ್ರಾಣಿಗಳಂತೆ ವೃದ್ಧಿಸುತ್ತಿರುವ ಚೀನಾ, ಲಾವೋಸ್, ಥಾಯ್ಲೆಂಡ್‌ಗಳನ್ನು ನಿಯಂತ್ರಿಸಲೇಬೇಕಿದೆ.

ಹುಲಿ ಸಂರಕ್ಷಿತ ಅರಣ್ಯ ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ವಿದ್ಯುತ್ ಹರಿಸಿ, ಬಲೆ ಹಾಕಿ ವನ್ಯಜೀವಿಗಳನ್ನು ಕೊಲ್ಲುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಸಂರಕ್ಷಿತ ಪ್ರದೇಶಗಳ ಹೊರಗೂ ಹುಲಿಯ ಕಳೇಬರಗಳು ಸಿಗುತ್ತಿದ್ದು, ಕಳ್ಳಬೇಟೆ ಮತ್ತು ಅಕ್ರಮ ಮಾರಾಟದ ಬಗ್ಗೆ ಅನುಮಾನಗಳು ಹುಟ್ಟುತ್ತಿವೆ. ಈ ಮಧ್ಯೆ, ತಾನು ನಿರ್ದೇಶನ ನೀಡಿದ್ದರೂ ವನ್ಯಜೀವಿಗಳ ಕಳ್ಳಬೇಟೆ ತಡೆ ಕಾರ್ಯಾಚರಣೆಯ ಬಗ್ಗೆ ಕರ್ನಾಟಕ ವರದಿ ನೀಡಿಲ್ಲ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಆಕ್ಷೇಪಿಸಿದೆ.

ವಾಚಕರ ವಾಣಿ

ಕುಂದಗನ್ನಡ ಅಕಾಡೆಮಿ: ನಿಲುವು ಬದಲಾಗಲಿ

ಕುಂದಾಪುರ ಕನ್ನಡ ಅಥವಾ ಕುಂದಗನ್ನಡ ಭಾಷಾ ಅಕಾಡೆಮಿಯ ಸ್ಥಾಪನೆಗಾಗಿ ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಅವರು ಪರಿಷತ್ತಿನಲ್ಲಿ ಈಚೆಗೆ ಹಕ್ಕೊತ್ತಾಯ ಮಂಡಿಸಿದ್ದು ಸರಿ. ಆದರೆ ಇದಕ್ಕೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಅವರು, ಪ್ರತ್ಯೇಕ ಕುಂದಾಪುರ ಕನ್ನಡ ಅಕಾಡೆಮಿ ಸ್ಥಾಪಿಸುವುದು ಕನ್ನಡ ಭಾಷಾ ಸಮಗ್ರತೆಯ ದೃಷ್ಟಿಯಿಂದ ಸೂಕ್ತವಲ್ಲ ಎಂದಿರುವುದು ವಿಷಾದನೀಯ. ಕನ್ನಡನಾಡು ಒಂದು ಕನ್ನಡ ಭಾಷೆಯ ನೆಲವಲ್ಲ. ಇದು ಬಹುರೂಪಿ ಕನ್ನಡಗಳ ನೆಲೆ. ಕವಿರಾಜಮಾರ್ಗಕಾರ ಹೇಳಿದಂತೆ 'ಕನ್ನಡಂಗಳ್' ತಾಣ. ಭಾಷಾ ಬಹುರೂಪತೆಯೇ ಕನ್ನಡದ ಅಂತಃಚೈತನ್ಯ. ಪ್ರಾದೇಶಿಕ ಹಾಗೂ ಸಮುದಾಯದ ನೆಲೆಯಲ್ಲಿ ಕಾಣಿಸುವ ಭಾಷಾ ಪ್ರಭೇದ ಮತ್ತು ವೈವಿಧ್ಯ ಒಂದು ಭಾಷೆಯ ಜೀವಂತಿಕೆ ಹಾಗೂ ಬೆಳವಣಿಗೆಯ ಲಕ್ಷಣ. ಈ ಬಹುರೂಪಿ ಸಾಂಸ್ಕೃತಿಕ ಚಹರೆಗಳಿಂದ ಸಂಪನ್ನಗೊಂಡ ಒಳಮಾತುಗಳು (ಉಪಭಾಷೆ ಅಲ್ಲ) ಕನ್ನಡದ ಅಭಿವ್ಯಕ್ತಿಯ ಶಕ್ತಿಯನ್ನು ವಿಶಿಷ್ಟವಾಗಿಸುತ್ತವೆ ಮತ್ತು ಹೆಚ್ಚಿಸುತ್ತವೆ. ಆ ಮೂಲಕ ಕನ್ನಡಕ್ಕೆ ಸಾಮರ್ಥ್ಯವನ್ನು, ಸಮಗ್ರತೆಯನ್ನು ಕಟ್ಟಿಕೊಡುತ್ತವೆ. ಇದು ನಮ್ಮ ಕನ್ನಡ ಬೆಳೆಯಬೇಕಾದ ಪರಿ.

ಕನ್ನಡದ ಸಮಗ್ರತೆಯನ್ನು ಕಟ್ಟುವುದೆಂದರೆ ಬಹುರೂಪಿ ಕನ್ನಡಗಳ ಅನನ್ಯತೆಯನ್ನು ಉಳಿಸುವುದು ಮತ್ತು ಬೆಳೆಸುವುದು. ಇಂದು ಕನ್ನಡದ ಮುಂದಿರುವ ಆತಂಕವೆಂದರೆ, ಸಾವಿನಂಚಿಗೆ ಸರಿಯುತ್ತಿರುವ ಭಾಷೆಗಳನ್ನು ಅಭಿವೃದ್ಧಿಪಡಿಸುವುದು. ಆ ಮೂಲಕವೇ ಕನ್ನಡಕ್ಕೆ ನಿಜವಾದ ಚೈತನ್ಯವನ್ನು, ಸಮಗ್ರತೆಯನ್ನು ತುಂಬುವುದು. ಹಾಗಾಗಿಯೇ ಕುಂದಾಪುರ ಕನ್ನಡ ಅಕಾಡೆಮಿ ಸ್ಥಾಪನೆಯೆಂದರೆ ನಿಜವಾದ ಅರ್ಥದಲ್ಲಿ ಕನ್ನಡಕ್ಕೆ ಸಮಗ್ರತೆ, ವಿಸ್ತಾರವನ್ನು ತರುವುದು. ಇನ್ನೊಂದು ಮಗ್ಗುಲಲ್ಲೂ ಕನ್ನಡದ ಸಮಗ್ರತೆಯನ್ನು ಮುಂದಿಟ್ಟು ಆಡುವುದಾದರೆ, ಅರೆಭಾಷೆ ಅಥವಾ ಗೌಡಕನ್ನಡ ಅಕಾಡೆಮಿಯ ಸ್ಥಾಪನೆಯಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಹೊಸ ವಿಸ್ತಾರ ಒದಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರ ಪ್ರಾದೇಶಿಕ ಭಾಷೆಯಾದ ತುಳುವನ್ನು ಎರಡನೇ ರಾಜ್ಯಭಾಷೆಯನ್ನಾಗಿ ಘೋಷಿಸುವ ಸನ್ನಾಹದಲ್ಲಿ ಇರುವುದನ್ನು ಕನ್ನಡದ ಸಮಗ್ರತೆಗೆ ಧಕ್ಕೆ ಎಂದು ಭಾವಿಸಬಹುದೇ? ಈ ಭಾಷಾಲೋಕದ ವಿಸ್ತಾರದ ಅರಿವು ನಮಗಿರಬೇಕು. ಕುಂದನಾಡಿನ ಜನರ ಬೇಡಿಕೆ ಕುರಿತ ತನ್ನ ನಿಲುವನ್ನು ಸರ್ಕಾರ ಮರುಪರಿಶೀಲಿಸಬೇಕು.

ಡಾ. ಗಾಯತ್ರಿ ನಾವಡ, ಪ್ರೊ. ಎ.ವಿ.ನಾವಡ, ಮಂಗಳೂರು

ತಳಮಟ್ಟದಿಂದಲೂ ಬೆಳಗಲಿ ಸಾಹಿತ್ಯದ ದೀಪ

ಹಾವೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹ 25 ಕೋಟಿ ವೆಚ್ಚವಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 28). ಆರ್ಥಿಕ ಸಂಕಷ್ಟದ ಈ ದಿನಮಾನಗಳಲ್ಲಿ ಇಂತಹ ದುಬಾರಿ ವೆಚ್ಚದಲ್ಲಿ ಸಾಹಿತ್ಯ ಸಮ್ಮೇಳನಗಳ ಆಚರಣೆ ಹಾಗೂ ಅವುಗಳ ಅಗತ್ಯದ ಬಗ್ಗೆ ಸರ್ಕಾರ ಮತ್ತು ಸಮಾಜ ಚಿಂತಿಸಲಿ. ಈ ಹಿಂದೆಲ್ಲಾ ನಡೆಯುತ್ತಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಆಗಿನ ಸರ್ಕಾರಗಳು ಈ ಪ್ರಮಾಣದಲ್ಲಿ ಹಣಕಾಸು ಕೊಡುತ್ತಿರಲಿಲ್ಲ. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಹಾಗೂ ದಾನಿಗಳಿಂದ ನೆರವು ಪಡೆದು ಸಮ್ಮೇಳನ ನಡೆಸುತ್ತಿದ್ದ ಕಾಲವಿತ್ತು. ಆಸಕ್ತರು, ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಸಮ್ಮೇಳನದ ಪ್ರಯೋಜನ ಪಡೆಯುತ್ತಿದ್ದರು. ಸರ್ಕಾರದಿಂದ ಯಥೇಚ್ಛ ಧನಸಹಾಯದ ಸೌಲಭ್ಯ ಸಿಕ್ಕಿದ ಮೇಲೆ ಸಮ್ಮೇಳನದ ಉದ್ದೇಶ ದಾರಿ ತಪ್ಪಿದಂತಿದೆ. ಹತ್ತು ಕೋಟಿ ರೂಪಾಯಿ ಕೊಟ್ಟಾಗಲೂ ಸಾಲದು, ಇಪ್ಪತ್ತು ಕೋಟಿ ರೂಪಾಯಿ ಕೊಟ್ಟರೂ ಸಾಲದು, ಮುಂದೆ ಮೂವತ್ತು ಕೋಟಿ ರೂಪಾಯಿ ಕೊಟ್ಟಾಗಲೂ ಸಾಲದು ಎನ್ನುವ ಸೊಲ್ಲು ತಪ್ಪುವುದಿಲ್ಲವೇನೊ. ಕೊಟ್ಟದ್ದನ್ನು ಬಳಸಿ, ಅದರಲ್ಲಿ ಇಂತಿಷ್ಟು ಉಳಿದಿದೆ ಎಂದು ಲೆಕ್ಕ ಕೊಟ್ಟ ಉದಾಹರಣೆ ಯಾರ ಕಾಲದಲ್ಲಾದರೂ ಇದೆಯೇ?

ಸಾಹಿತ್ಯದ ಜೊತೆಯಲ್ಲಿ ರಾಜಕೀಯ ಉದ್ದೇಶವನ್ನೂ ಇಟ್ಟುಕೊಂಡು ನಡೆಸುತ್ತಿರುವ ಈ ಸಮ್ಮೇಳನಗಳು ಊಟ, ವಸತಿ, ವಾಣಿಜ್ಯ ವಹಿವಾಟಿನ ದುಂದುಗಾರಿಕೆಗೆ ಒತ್ತು ಕೊಟ್ಟಿವೆ. ವೇದಿಕೆ ಕಾರ್ಯಕ್ರಮಗಳ ಗುಣಮಟ್ಟ ಮತ್ತು ಅವುಗಳ ಉಪಯುಕ್ತತೆಯ ಬಗ್ಗೆ ಮೌಲ್ಯಮಾಪನ ನಡೆಯುತ್ತಿಲ್ಲ. ವೇದಿಕೆ ನಿರ್ಮಾಣ, ಅಲಂಕಾರ, ನಗರ ಸಿಂಗಾರ, ಮೆರವಣಿಗೆಯಂತಹವುಗಳಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುವ ಬದಲು, ಇದೇ ಹಣವನ್ನು ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಕೊಡುವುದೊಳಿತು. ಆ ಘಟಕಗಳು ಇದರ ಜೊತೆಗೆ ಸ್ಥಳೀಯ ಸಂಪನ್ಮೂಲವನ್ನೂ ಕ್ರೋಡೀಕರಿಸಿ ತಾಲ್ಲೂಕು, ಹೋಬಳಿ ಕೇಂದ್ರಗಳ ಘಟಕಗಳಲ್ಲೂ ಸಾಹಿತ್ಯಿಕ ಕಾರ್ಯಕ್ರಮಗಳು, ಕಥೆ, ಕಾವ್ಯ, ಜನಪದ ಕಲೆಗಳ ಕಮ್ಮಟಗಳು, ಸ್ಪರ್ಧೆಗಳನ್ನು ಏರ್ಪಡಿಸುವ, ಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಲು ನೆರವಾಗುತ್ತದೆ. ಬೆಟ್ಟ ಅಗೆದು ಇಲಿ ಹಿಡಿಯುವ ಬದಲು, ಕಲೆ, ಸಾಹಿತ್ಯದ ದೀಪ ತಳಮಟ್ಟದಿಂದಲೂ ಬೆಳಗಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಸಾಹಿತ್ಯ ಎಲ್ಲಿತ್ತು?

ಹಾವೇರಿಯ ಸಾಹಿತ್ಯ ಸಮ್ಮೇಳನದ
ವೇದಿಕೆ ನಿರ್ಮಾಣಕ್ಕೆ ₹ 5 ಕೋಟಿ
ವಸತಿ ವ್ಯವಸ್ಥೆಗೆ ₹ 2 ಕೋಟಿ
ಆಹಾರಕ್ಕೆ ₹ 8 ಕೋಟಿ
ಮೆರವಣಿಗೆ, ಸಾಂಸ್ಕೃತಿಕ
ತಂಡಗಳಿಗೆ ₹ 99 ಲಕ್ಷ...
ಖರ್ಚು ಮಾಡಲಾಗಿದೆ.
ಸಾಹಿತ್ಯಕ್ಕೆ?
ಸಾಹಿತ್ಯ ಅಲ್ಲೆಲ್ಲಿತ್ತು ಸ್ವಾಮಿ?
ಸಾಹಿತ್ಯ ಕೋಟಿಗಳಲ್ಲಿಲ್ಲ
ಕುವೆಂಪು, ಬೇಂದ್ರೆ, ಮಾಸ್ತಿ,
ಅಡಿಗ ಮೊದಲಾದವರ
ಕೋಟುಗಳ ಒಳಗೆ ಇತ್ತು.

ಎ.ಆರ್.ಸೋಮಯಾಜಿ, ಬೆಂಗಳೂರು

ದೊರೆತನಕ ತಲುಪುವಂತಾಗಲಿ ಅಹವಾಲು

ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಭೇಟಿ ಕೊಡುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಚಾರ ಮತ್ತು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದಾರೆ. ಆದರೆ, ವರ್ಷಗಟ್ಟಲೆ ಬಾರದೆ ಚುನಾವಣಾ ಪೂರ್ವದಲ್ಲಿ ಭೇಟಿ ನೀಡುತ್ತಿರುವುದನ್ನು ಪ್ರಜ್ಞಾವಂತರೇಕೆ ಜನಸಾಮಾನ್ಯರೂ ಆಡಿಕೊಳ್ಳುವಂತಾಗಿದೆ. ಸಣ್ಣಪುಟ್ಟ ಕಾರ್ಯಕ್ರಮಗಳಲ್ಲೂ ಅವರು ಭಾಗವಹಿಸುತ್ತಿರುವುದು ಜನರ ಚಿಂತನೆಗೆ ಆಹಾರ ಒದಗಿಸುತ್ತಿದೆ. ಇಂತಹ ಟೀಕೆಗಳಿಗೆ ಆಸ್ಪದ ಕೊಡದಂತೆ ಪ್ರಧಾನಿಯವರು ರಾಜ್ಯಕ್ಕೆ ಆಗಾಗ ಭೇಟಿ ಕೊಡುತ್ತಿರಬೇಕು. ಇದರಿಂದ ಜನರಿಗೆ ತಮ್ಮ ಅಹವಾಲುಗಳನ್ನು ದೊರೆತನಕ ತಲುಪಿಸಲು ಅವಕಾಶ ದೊರಕುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏರುತ್ತಲೇ ಇದೆ ಎಲ್‌ಪಿಜಿ ಬೆಲೆ

ಪ್ರಜಾವಾಣಿ ವಾರ್ತೆ

ಗೃಹ ಬಳಕೆಯ, 14.2 ಕೆ.ಜಿ. ತೂಕದ ಸಬ್ಸಿಡಿರಹಿತ ಎಲ್‌ಪಿಜಿ ಸಿಲಿಂಡರ್ ಬೆಲೆ ಮತ್ತೊಮ್ಮೆ ಏರಿಕೆಯಾಗಿದೆ. ಪ್ರತಿ ಸಿಲಿಂಡರ್ ಬೆಲೆಯು ₹1,053ರಿಂದ (ದೆಹಲಿ ನಗರಕ್ಕೆ ಅನ್ವಯಿಸಿ) ₹1,103ಗೆ ಏರಿಕೆಯಾಗಿದೆ. ಈ ಬಾರಿಯ ಏರಿಕೆಯ ಪ್ರಮಾಣ ಶೇ 4.7ರಷ್ಟು. ಹಲವು ವರ್ಷಗಳಿಂದ ಸಿಲಿಂಡರ್ ಬೆಲೆ ಏರುಮುಖವಾಗಿಯೇ ಇದೆ.

ಕಳೆದ ಮೂರು ವರ್ಷಗಳ ಅವಧಿಯ ದತ್ತಾಂಶಗಳನ್ನು ಗಮನಿಸಿದರೆ, ಸಿಲಿಂಡರ್ ಬೆಲೆಯಲ್ಲಿ ಸರಿಸುಮಾರು ಒಂದು ಪಟ್ಟು ಹೆಚ್ಚಳ ಕಂಡುಬಂದಿದೆ. ಮೂರು ವರ್ಷಗಳ ಹಿಂದೆ ಅಂದರೆ, 2020ರ ಮೇ ತಿಂಗಳಲ್ಲಿ ಪ್ರತಿ ಎಲ್‌ಪಿಜಿ ಸಿಲಿಂಡರ್ ಬೆಲೆ ₹581 ಇತ್ತು. 2023ರ ಮಾರ್ಚ್‌ನಲ್ಲಿ ಸಿಲಿಂಡರ್ ಬೆಲೆ ₹1,103ಕ್ಕೆ ತಲುಪಿದೆ. ಅಂದರೆ, ಶೇ 90ರಷ್ಟು ಬೆಲೆ ಹೆಚ್ಚಳವಾಗಿದೆ.

ಕಳೆದ ಒಂದು ವರ್ಷದ ದತ್ತಾಂಶವನ್ನು ಗಮನಿಸಿದರೆ, ಸಿಲಿಂಡರ್ ಬೆಲೆಯಲ್ಲಿ ಶೇ 16ರಷ್ಟು ಏರಿಕೆ ದಾಖಲಾಗಿದೆ. 2022ರ ಮಾರ್ಚ್‌ನಲ್ಲಿ ₹950ಕ್ಕೆ ಸಿಗುತ್ತಿದ್ದ ಒಂದು ಸಿಲಿಂಡರ್‌ಗೆ ಸರಿಯಾಗಿ ಒಂದು ವರ್ಷದ ಬಳಿಕ, ₹1,103 ತೆರಬೇಕಿದೆ. ಎರಡು ವರ್ಷಗಳ ಹಿಂದೆ ಅಂದರೆ, 2021ರ ಮಾರ್ಚ್‌ನಲ್ಲಿ ಇದ್ದ ಬೆಲೆಗೆ ಹೋಲಿಸಿದರೆ, 2023ರ ಮಾರ್ಚ್ ಹೊತ್ತಿಗೆ ಶೇ 35ರಷ್ಟು ಬೆಲೆ ಏರಿಕೆ ಕಂಡುಬಂದಿದೆ. ಸಿಲಿಂಡರ್ ಬೆಲೆಯು ₹819ರಿಂದ ₹1,103ಕ್ಕೆ ಜಿಗಿದಿದೆ.

2022ರ ಜುಲೈನಲ್ಲಿ ಕೊನೆಯದಾಗಿ ಸಿಲಿಂಡರ್ ಬೆಲೆ ಏರಿಸಲಾಗಿತ್ತು. ಅಲ್ಲಿಂದ ಎಂಟು ತಿಂಗಳ ಕಾಲ ಬೆಲೆ ಏರಿಕೆಯಾಗಿರಲಿಲ್ಲ. ಈ ಮೂರು ವರ್ಷಗಳ ಅವಧಿಯಲ್ಲಿ ದರ ಇಳಿಕೆಯಾಗಿದ್ದು ಒಮ್ಮೆ ಮಾತ್ರ. ಅದೂ ಅತ್ಯಲ್ಪ. 2021ರ ಮಾರ್ಚ್ ತಿಂಗಳಲ್ಲಿ ₹819 ಇದ್ದ ಸಿಲಿಂಡರ್ ಬೆಲೆಯನ್ನು ಏಪ್ರಿಲ್ ತಿಂಗಳಲ್ಲಿ ₹809ಕ್ಕೆ ತಗ್ಗಿಸಲಾಗಿತ್ತು. 10 ರೂಪಾಯಿ ಇಳಿಕೆಯ ಲಾಭ ಮೂರು ತಿಂಗಳಿಗೇ ಕರಗಿತ್ತು. ಅದೇ ವರ್ಷದ ಜುಲೈ ಹೊತ್ತಿಗೆ ಬೆಲೆಯನ್ನು ₹834ಕ್ಕೆ ಏರಿಸಲಾಯಿತು. ಇದೊಂದು ಪ್ರಕರಣವನ್ನು ಹೊರತುಪಡಿಸಿದರೆ, ಬೆಲೆ ಕಡಿಮೆಯಾಗಿದ್ದೇ ಇಲ್ಲ.



ವಾಣಿಜ್ಯ ಸಿಲಿಂಡರ್ 2 ವರ್ಷಗಳಲ್ಲಿ ₹805 ಹೆಚ್ಚಳ

ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಸಿಲಿಂಡರ್ ಬೆಲೆಯಲ್ಲಿ ಈ ಬಾರಿ ಶೇ 18ರಷ್ಟು ಹೆಚ್ಚಳ ಮಾಡಲಾಗಿದೆ. ₹1,917ಕ್ಕೆ ಸಿಗುತ್ತಿದ್ದ ಸಿಲಿಂಡರ್ ಬೆಲೆ ₹2,268ಕ್ಕೆ ಜಿಗಿದಿದೆ. ಹಿಂದಿನ ಎರಡು ವರ್ಷಗಳ ದತ್ತಾಂಶವನ್ನು ಗಮನಿಸಿದರೆ, ಶೇ 55ರಷ್ಟು ಏರಿಕೆ ಕಂಡುಬಂದಿದೆ. 2021ರ ಜನವರಿಯಲ್ಲಿ ₹1,463 ಪಾವತಿಸಿದರೆ 19 ಕೆ.ಜಿ.ಯ ಒಂದು ಸಿಲಿಂಡರ್ ಖರೀದಿಸಬಹುದಿತ್ತು. ಅದರೆ, ಈಗ ಅದೇ ಸಿಲಿಂಡರ್‌ಗೆ ₹2,268 ಪಾವತಿಸಬೇಕಿದೆ. ಅಂದರೆ ಈ ಎರಡು ವರ್ಷಗಳಲ್ಲಿ ₹805 ಬೆಲೆ ಹೆಚ್ಚಳವಾಗಿರುವುದನ್ನು ಗಮನಿಸಬಹುದು.

ಚುನಾವಣೆ ಸಮಯದಲ್ಲಿ ಬೆಲೆ ಇಳಿಸುವ ಹಾಗೂ ಫಲಿತಾಂಶದ ಬಳಿಕ ಬೆಲೆ ಏರಿಸುವ ಪ್ರವೃತ್ತಿ ಸಾಮಾನ್ಯವಾಗಿದೆ. 2022ರ ಫೆಬ್ರುವರಿಯಿಂದ ಮಾರ್ಚ್ ಅವಧಿಯಲ್ಲಿ ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆ ನಡೆಯಿತು. ಈ ಅವಧಿಯಲ್ಲಿ ₹2,000 ಆಸುಪಾಸಿನಲ್ಲಿದ್ದ ಸಿಲಿಂಡರ್ ಬೆಲೆಯು, ಫಲಿತಾಂಶ ಪ್ರಕಟವಾದ ಕೂಡಲೇ ಏರಿತು. ಏಪ್ರಿಲ್ ತಿಂಗಳಲ್ಲಿ ಸುಮಾರು ₹269ಯಷ್ಟು ಹೆಚ್ಚಳವಾಗಿ, ₹2409ಕ್ಕೆ ತಲುಪಿತ್ತು. ನಂತರ, 2022ರ ಮೇ ತಿಂಗಳಲ್ಲಿ ಸಿಲಿಂಡರ್ ಬೆಲೆ ಅತ್ಯಧಿಕ ಅಂದರೆ, ₹2,508ಕ್ಕೆ ತಲುಪಿತ್ತು. ಇದು ಈವರೆಗಿನ ದುಬಾರಿ ಬೆಲೆ ಎನಿಸಿದೆ.

ದಿನಾಂಕ	ಬೆಲೆ
2021	
01 ಜ.	₹1,463
04 ಫೆ.	₹1,639
01 ಏ.	₹1,772
01 ಆ.	₹1,686
01 ಸೆ.	₹1,831
01 ನ.	₹2,133
01 ಡಿ.	₹2,235
2022	
01 ಫೆ.	₹2,040
22 ಮಾ.	₹2,138
01 ಏ.	₹2,406
01 ಮೇ	₹2,508
01 ಜೂ.	₹2,373
01 ಜು.	₹2,186
01 ಸೆ.	₹2,045
01 ನ.	₹1,893
2023	
01 ಜ.	₹1,917
01 ಮಾ.	₹2,268

*ವಾಣಿಜ್ಯ ಎಲ್‌ಪಿಜಿ ಬೆಲೆ (19 ಕೆ.ಜಿ. ಸಿಲಿಂಡರ್) (ಚೆನ್ನೈ ದರ)

ಸಹಾಯಧನ ಶೇ 93ರಷ್ಟು ಕಡಿತ

ಕೇಂದ್ರ ಸರ್ಕಾರವು ಎಲ್‌ಪಿಜಿಗೆ ನೀಡುತ್ತಿರುವ ಸಹಾಯಧನದಲ್ಲಿ ಭಾರಿ ಕಡಿತ ಮಾಡಿದೆ. 2020–21ರ ಬಜೆಟ್‌ನಲ್ಲಿ ಎಲ್‌ಪಿಜಿ ಸಹಾಯಧನಕ್ಕೆ ಮೀಸಲಿರಿಸಿದ್ದ ಅನುದಾನಕ್ಕೆ ಹೋಲಿಸಿದರೆ, 2023–24ರ ಬಜೆಟ್‌ನಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಶೇ 93.5ರಷ್ಟು ಕಡಿತ ಮಾಡಲಾಗಿದೆ. ಆದರೆ ಸಹಾಯ ಧನವನ್ನು ಕಡಿತ ಮಾಡುತ್ತಿರುವ ಕಾರಣ, ಎಲ್‌ಪಿಜಿ ಬಳಕೆ ಪ್ರಮಾಣ ಇಳಿಕೆಯಾಗುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

₹35,195 ಕೋಟಿ 2020-21ನೇ ಸಾಲಿನ ಬಜೆಟ್ ಪರಿಷ್ಕೃತ ಅಂದಾಜಿನಲ್ಲಿ ಎಲ್‌ಪಿಜಿ ಸಹಾಯಧನಕ್ಕೆ ಮೀಸಲಿರಿಸಿದ್ದ ಅನುದಾನ

₹14,073 ಕೋಟಿ 2021-22ನೇ ಸಾಲಿನ ಬಜೆಟ್ ಪರಿಷ್ಕೃತ ಅಂದಾಜಿನಲ್ಲಿ ಎಲ್‌ಪಿಜಿ ಸಹಾಯಧನಕ್ಕೆ ಮೀಸಲಿರಿಸಿದ್ದ ಅನುದಾನ

₹9,170 ಕೋಟಿ 2022-23ನೇ ಸಾಲಿನ ಬಜೆಟ್ ಪರಿಷ್ಕೃತ ಅಂದಾಜಿನಲ್ಲಿ ಎಲ್‌ಪಿಜಿ ಸಹಾಯಧನಕ್ಕೆ ಮೀಸಲಿರಿಸಿದ್ದ ಅನುದಾನ

₹2,257 ಕೋಟಿ 2023-24ನೇ ಸಾಲಿನ ಬಜೆಟ್‌ನಲ್ಲಿ ಎಲ್‌ಪಿಜಿ ಸಹಾಯಧನಕ್ಕೆ ಮೀಸಲಿರಿಸಿರುವ ಅನುದಾನ

ಎಲ್‌ಪಿಜಿ ಬಳಕೆ ಇಳಿಕೆ

ದೇಶದಲ್ಲಿ ಎಲ್‌ಪಿಜಿ ಬಳಕೆ ಇಳಿಕೆಯಾಗಿದೆ. 2022ರ ಜನವರಿಯಲ್ಲಿ ಬಳಕೆಯಾಗಿದ್ದ ಮನೆ ಎಲ್‌ಪಿಜಿ ಪ್ರಮಾಣಕ್ಕೆ ಹೋಲಿಸಿದರೆ, 2023ರ ಜನವರಿಯಲ್ಲಿ ಬಳಕೆಯಾದ ಮನೆ ಎಲ್‌ಪಿಜಿಯಲ್ಲಿ ಶೇ 3.80ರಷ್ಟು ಇಳಿಕೆಯಾಗಿದೆ. ಈ ಅವಧಿಯಲ್ಲಿ ಮನೆಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯಲ್ಲಿ ಶೇ 17ರಷ್ಟು ಏರಿಕೆಯಾಗಿದೆ. ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಆದ ಏರಿಕೆಗೂ, ಎಲ್‌ಪಿಜಿ ಬಳಕೆಯಲ್ಲಿ ಆದ ಇಳಿಕೆಗೂ ಸಂಬಂಧವಿದೆ ಎಂದು ವಿಶ್ಲೇಷಿಸಲಾಗಿದೆ.

2022ರ ಜನವರಿಯಲ್ಲಿ ದೇಶದಾದ್ಯಂತ ಒಟ್ಟು 26 ಲಕ್ಷ ಟನ್‌ಗಳಷ್ಟು ಮನೆಬಳಕೆ ಎಲ್‌ಪಿಜಿ ಬಿಕರಿಯಾಗಿತ್ತು. ಅದು ಆವರೆಗಿನ ಗರಿಷ್ಠ ಪ್ರಮಾಣದ ಬಳಕೆಯಾಗಿತ್ತು. ಆದರೆ, ನಂತರದ ಪ್ರತಿ ತಿಂಗಳಲ್ಲಿ ಬಿಕರಿಯಾದ ಎಲ್‌ಪಿಜಿ ಪ್ರಮಾಣ ಭಾರಿ ಏರಿಳಿತದಿಂದ ಕೂಡಿತ್ತು. 2022ರ ಡಿಸೆಂಬರ್‌ನಲ್ಲಿ ಬಿಕರಿಯಾದ ಎಲ್‌ಪಿಜಿ ಪ್ರಮಾಣವೂ ಅದೇ ಮಟ್ಟವನ್ನು (26 ಲಕ್ಷ ಟನ್) ಮುಟ್ಟುತ್ತಾದರೂ, 2023ರ ಜನವರಿಯಲ್ಲಿ 25.01 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆ.

ದೇಶದಲ್ಲಿ ಡಿಸೆಂಬರ್ ಮತ್ತು ಜನವರಿಯಲ್ಲಿ ಚಳಿ ಅತ್ಯಧಿಕ ಮಟ್ಟದಲ್ಲಿ ಇರುತ್ತದೆ. ಆ ಅವಧಿಯಲ್ಲಿ ದೇಶದಾದ್ಯಂತ ಎಲ್‌ಪಿಜಿ ಮತ್ತು ಡೀಸೆಲ್ ಬಳಕೆ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತದೆ. ಯಾವುದೇ ವರ್ಷದಲ್ಲಿ ಅತಿಹೆಚ್ಚು ಎಲ್‌ಪಿಜಿ ಬಿಕರಿಯಾಗುವುದು ಈ ಎರಡು ತಿಂಗಳಲ್ಲೆ. ಸಾಮಾನ್ಯವಾಗಿ ಡಿಸೆಂಬರ್‌ನಲ್ಲಿ ಬಿಕರಿಯಾದ ಎಲ್‌ಪಿಜಿಗಿಂತ, ಹೆಚ್ಚು ಎಲ್‌ಪಿಜಿ ಜನವರಿಯಲ್ಲಿ ಬಿಕರಿಯಾಗುತ್ತದೆ. 2021ರ ಡಿಸೆಂಬರ್‌ನಲ್ಲಿ 25 ಲಕ್ಷ ಟನ್‌ಗಳಷ್ಟು ಎಲ್‌ಪಿಜಿ ಬಿಕರಿಯಾಗಿದ್ದರೆ, 2022ರ ಜನವರಿಯಲ್ಲಿ 26 ಲಕ್ಷ ಟನ್‌ಗಳಷ್ಟು ಎಲ್‌ಪಿಜಿ ಬಿಕರಿಯಾಗಿತ್ತು. ಆದರೆ 2022ರ ಡಿಸೆಂಬರ್‌ನಲ್ಲಿ 26 ಲಕ್ಷ ಟನ್ ಎಲ್‌ಪಿಜಿ ಬಿಕರಿಯಾಗಿದ್ದರೆ, 2023ರ ಜನವರಿಯಲ್ಲಿ ಆ ಪ್ರಮಾಣ 25.01 ಲಕ್ಷ ಟನ್‌ಗಳಿಗೆ ಕುಸಿದಿದೆ. ಅಂದಾಜು 1 ಲಕ್ಷ ಟನ್‌ಗಳಷ್ಟು ಎಲ್‌ಪಿಜಿ ಬಳಕೆ ಕಡಿಮೆಯಾಗಿದೆ.

ಎಲ್‌ಪಿಜಿ ಬೆಲೆಯಲ್ಲಿ ಆಗುವ ಬದಲಾವಣೆಯು, ಎಲ್‌ಪಿಜಿ ಬಳಕೆಯನ್ನು ಪ್ರಭಾವಿಸುತ್ತದೆ. 2022ರ ಮಾರ್ಚ್‌ನಲ್ಲಿ ಮನೆ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಏರಿಕೆಯಾಗಿತ್ತು. ಆಗ ಎಲ್‌ಪಿಜಿ ಬಳಕೆಯಲ್ಲಿ ಪ್ರಮಾಣದಲ್ಲಿ ಭಾರಿ ಇಳಿಕೆಯಾಗಿತ್ತು. 2022ರ ಮಾರ್ಚ್, ಏಪ್ರಿಲ್‌ನಲ್ಲಿ ಪ್ರತಿ ತಿಂಗಳು ಬಿಕರಿಯಾದ ಎಲ್‌ಪಿಜಿ ಪ್ರಮಾಣ 22 ಲಕ್ಷ ಟನ್‌ಗಳಿಗೆ ಕುಸಿದಿತ್ತು.



ಆಧಾರ: ಕೇಂದ್ರ ಪೆಟ್ರೋಲಿಯಂ ಸಚಿವಾಲಯದ 'ಪೆಟ್ರೋಲಿಯಂ ಪ್ಲಾನಿಂಗ್ ಅಂಡ್ ಅನಲಿಸಿಸ್ ಸೆಲ್'ನ ವರದಿಗಳು, ಪಿಟಿಐ, ಐಒಸಿಎಲ್

ಸಿನಿ ಬಿಟ್ಸ್

ಏಲಿಯನ್ಸ್ ವಶದಲ್ಲಿ ಶರ್ಮಿಳಾ!

ಚಂದನವನದಲ್ಲಿ ಸೈನ್ಸ್ ಫಿಕ್ಷನ್ ಜಾನರ್‌ನ ಸಿನಿಮಾಗಳು ಬಂದಿರುವುದು ಬೆರಳೆಣಿಕೆಯಷ್ಟೇ. ಆ್ಯಕ್ಷನ್, ಲವ್‌ಸ್ಟೋರಿ ಸಿನಿಮಾಗಳ ನಡುವೆ ಕುತೂಹಲಕಾರಿಯಾದ ಕಥೆಯೊಂದನ್ನು ಹೊತ್ತು ಬಂದಿದೆ 'ಮಂಡಲ'. ಅಜಯ್ ಸರ್ಪೇಷ್ಕರ್ ನಿರ್ದೇಶನದ ಚೊಚ್ಚಲ ಚಿತ್ರ, ಸೈನ್ಸ್ ಫಿಕ್ಷನ್ ಕಂಥಾಹಂದರದ 'ಮಂಡಲ' ಮಾರ್ಚ್ 10ರಂದು ತೆರೆಕಾಣಲಿದೆ. ಅನಂತನಾಗ್, ಪ್ರಕಾಶ್ ಬೆಳವಾಡಿ, ಕಿರಣ್ ಶ್ರೀನಿವಾಸ್, ಶರ್ಮಿಳಾ ಮಾಂಡ್ರೆ, ಸಂಯುಕ್ತ ಹೊರನಾಡು ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಸಾಕಷ್ಟು ಕುತೂಹಲಕಾರಿ ಅಂಶಗಳು ಇದರಲ್ಲಿವೆ. ಈ ಸಿನಿಮಾಗೆ ಪ್ರಕಾಶ್ ಬೆಳವಾಡಿ ಹಾಗೂ ಅಜಯ್ ಚಿತ್ರಕಥೆ ರಚಿಸಿದ್ದಾರೆ.

ಚಿತ್ರದ ನಾಯಕಿ ಶರ್ಮಿಳಾ ಮಾಂಡ್ರೆ, 'ಮಾಯಾ' ಎಂಬ ಏರೋಸ್ಪೇಸ್ ಎಂಜಿನಿಯರ್ ಪಾತ್ರ ಮಾಡಿದ್ದಾರೆ. ಈಕೆ ಅನ್ಯಗ್ರಹ ಜೀವಿಗಳಿಂದ(ಏಲಿಯನ್ಸ್) ಅಪಹರಿಸಲ್ಪಟ್ಟ ಬಳಿಕ ನಡೆಯುವ ಘಟನೆಗಳೇ ಚಿತ್ರದ ಕಥಾಹಂದರ. 'ನಾನು ಹೆಚ್ಚಾಗಿ ಈ ಜಾನರ್‌ನ ಸಿನಿಮಾಗಳನ್ನು ವೀಕ್ಷಿಸುತ್ತೇನೆ. ಆದರೆ ಕನ್ನಡದಲ್ಲಿ ಯಾಕೆ ಈ ಮಾದರಿ ಸಿನಿಮಾಗಳು ಬರುತ್ತಿಲ್ಲ ಎಂದು ಯೋಚಿಸುತ್ತಿದ್ದೆ. ಆ ಸಮಯದಲ್ಲಿ ಸಿಕ್ಕ ಸಿನಿಮಾವಿದು. ಇದೊಂದು ಗಂಭೀರವಾದ ಪಾತ್ರ. ಬೇರೆ ಸಿನಿಮಾಗಳಿಗಿಂತ ಬಹಳ ಭಿನ್ನವಾದ ಶರ್ಮಿಳಾಳನ್ನು ನೀವು ಇಲ್ಲಿ ನೋಡಬಹುದು' ಎನ್ನುತ್ತಾರೆ ಶರ್ಮಿಳಾ ಮಾಂಡ್ರೆ. ನಟಿ ಸಂಯುಕ್ತ ಹೊರನಾಡು ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಒಲಿವರ್ ಎಲ್ವಿಸ್ ಹಾಗೂ ಮನೋಜ್ ಬೆಳ್ಳೂರು ವಿಎಫ್‌ಎಕ್ಸ್ ಚಿತ್ರಕ್ಕಿದೆ.

ಶರ್ಮಿಳಾ ಮಾಂಡ್ರೆ

ಮೇಘನಾ–ಅರವಿಂದ್ ತತ್ಸಮ ತದ್ಭವ

ನಟಿ ಮೇಘನಾ ರಾಜ್ ಸರ್ಜಾ ಮತ್ತೆ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳುವುದು ಯಾವಾಗ ಎನ್ನುವ ಪ್ರಶ್ನೆಗೆ ಉತ್ತರ ದೊರಕಿದೆ. ಅವರ ನಟನೆಯ ಹೊಸ ಸಿನಿಮಾ 'ತತ್ಸಮ ತದ್ಭವ'ದ ಫಸ್ಟ್ ಲುಕ್ ರಿಲೀಸ್ ಆಗಿದೆ.

ನಿರ್ದೇಶಕ ಪನ್ನಗ ಭರಣ ಹಾಗೂ ಸ್ಫೂರ್ತಿ ಅನಿಲ್ ಜಂಟಿಯಾಗಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. 'ದಿ ಕನ್ಫೆಷನ್' ಎನ್ನುವ ಅಡಿಬರಹವಿರುವ ಈ ಸಿನಿಮಾ ಕನ್ನಡ ಹಾಗೂ ಮಲಯಾಳಂನಲ್ಲಿ ತೆರೆ ಕಾಣಲಿದೆ. ಚಿತ್ರಕ್ಕೆ ವಿಶಾಲ್ ಆತ್ರೇಯ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಕಿರಿಕ್ ಪಾರ್ಟಿ', 'ಭೀಮಸೇನ ನಳಮಹಾರಾಜ' ಸಿನಿಮಾಗಳಲ್ಲಿ ಹಾಗೂ 'ಹೇಟ್ ಯು ರೋಮಿಯೊ' ಕನ್ನಡ ವೆಬ್ ಸಿರೀಸ್‌ನಲ್ಲಿ ನಟಿಸಿದ್ದ ಅರವಿಂದ್ ಅಯ್ಯರ್, ಈ ಸಿನಿಮಾದಲ್ಲಿ 'ಮ್ಯಾಥ್ಯೂ' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಮಾಥ್ಯೂ' ಎಂಬ ಪಾತ್ರ ಖಂಡಿತವಾಗಿಯೂ ವೀಕ್ಷಕರನ್ನು ಸೆಳೆಯಲಿದೆ ಎಂದಿದ್ದಾರೆ ಅರವಿಂದ್.

ಚಿತ್ರದ ಹಾಡುಗಳಿಗೆ ವಾಸುಕಿ ವೈಭವ್ ಸಂಗೀತ ನಿರ್ದೇಶನ, ಶ್ರೀನಿವಾಸ್ ರಾಮಯ್ಯ ಛಾಯಾಗ್ರಹಣವಿದೆ.

ಅರವಿಂದ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮೊಘಲ್ ಚಕ್ರವರ್ತಿ ಔರಂಗಜೇಬ್ ಬಗ್ಗೆ ನೀಡಿದ್ದಾರೆ ಎನ್ನಲಾದ ಹೇಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. 'ಔರಂಗಜೇಬ್ ನನ್ನ ಸಹೋದರನಿದ್ದಂತೆ' ಎಂದು ಠಾಕ್ರೆ ಹೇಳಿದ್ದಾರೆ ಎನ್ನಲಾಗುವ ವಿಡಿಯೊವನ್ನು ಜಾಲತಾಣ ಬಳಕೆದಾರರು ಹಂಚಿಕೊಳ್ಳುತ್ತಿದ್ದಾರೆ. ಮೊಘಲ್ ದೊರೆಯನ್ನು ಬೆಂಬಲಿಸುತ್ತಿರುವ ಠಾಕ್ರೆ ಒಬ್ಬ ದ್ರೋಹಿ ಎಂದು ಶಾಸಕ ನಿತೇಶ್ ರಾಣೆ ಆರೋಪಿಸಿದ್ದಾರೆ. ಆದರೆ, ಠಾಕ್ರೆ ಹೇಳಿದ್ದು 'ಔರಂಗಜೇಬ್' ಎಂಬ ಹೆಸರಿನ ಯೋಧನ ಕುರಿತು.

ಫೆ.19ರಂದು ಮುಂಬೈನ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಠಾಕ್ರೆ ಅವರು, ಜಮ್ಮು ಕಾಶ್ಮೀರದಲ್ಲಿ ಹತ್ಯೆಗೀಡಾದ ಸೇನೆಯ ಯೋಧ 'ಔರಂಗಜೇಬ್' ದೇಶಕ್ಕಾಗಿ ಪ್ರಾಣ ನೀಡಿದ್ದ ಘಟನೆಯನ್ನು ವಿವರಿಸಿದ್ದರು. '2018ರಲ್ಲಿ ಔರಂಗಜೇಬ್ ಎಂಬ ಸೈನಿಕನನ್ನು ಅಪಹರಿಸಿದ್ದ ಉಗ್ರರು ಬಳಿಕ ಹತ್ಯೆ ಮಾಡಿದ್ದರು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ್ದ ಆತ ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾನೆ ಎಂಬ ಕಾರಣಕ್ಕೆ ಆತನನ್ನು ನನ್ನ ಸಹೋದರ ಎನ್ನದಿರಲು ಆಗದು. ಆತ ಖಂಡಿತವಾಗಿ ನನ್ನ ಸಹೋದರನೇ' ಎಂದು ಠಾಕ್ರೆ ಹೇಳಿದ್ದರು. ಆದರೆ ಠಾಕ್ರೆ ಅವರ ಭಾಷಣದ ವಿಡಿಯೊದ ಆಯ್ದ ಭಾಗವನ್ನು ಬಳಸಿಕೊಂಡು, ಅವರು ಮೊಘಲ್ ದೊರೆ ಔರಂಗಜೇಬ್ ಕುರಿತು ಈ ಮಾತು ಹೇಳಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು 'ದಿ ಕ್ವಿಂಟ್' ಜಾಲತಾಣ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತಾಯಿ ತಂದೆಯರಲ್ಲಿ ಪರಮ ನಂಬಿಕೆ

ನಗುನಗುವ ಕಣ್ಗಳಿಗೆ ಹೊಗೆಯನೂದಲು ಬೇಡ |
ಜಗವ ಸುಡುಗಾಡೆನುವ ಕಟುತಪಸು ಬೇಡ ||
ಮಗುವು ತಾಯ್ತಂದೆ ಕಣ್ಮುಂದೆ ನಡೆವಂತೆ ನಡೆ |
ಮಿಗೆ ಚಿಂತೆ ತಲೆ ಹರಟೆ – ಮಂಕುತಿಮ್ಮ || 833 ||

ಪದ-ಅರ್ಥ: ಹೊಗೆಯನೂದಲು = ಹೊಗೆಯನು+ ಊದಲು, ಸುಡುಗಾಡೆನುವ = ಸುಡುಗಾಡು+ ಎನುವ, ಮಿಗೆ ಚಿಂತೆ = ಉಳಿದ ಚಿಂತೆ.

ವಾಚ್ಯಾರ್ಥ: ಸಂತೋಷವಾಗಿರುವ ಜೀವಗಳ ಬದುಕಿನಲ್ಲಿ ನೆಮ್ಮದಿಯನ್ನು ಕೆಡಿಸಬೇಡ. ಜಗತ್ತು ಬರೀ ಸುಡುಗಾಡು ಎನ್ನುವ ಋಣಾತ್ಮಕ ಮನೋಧರ್ಮವೂ ಬೇಡ. ತಂದೆ- ತಾಯಿಯರ ಎದುರಿನಲ್ಲಿ ಮಗು ನಿರಾತಂಕವಾಗಿ ಆಡಿಕೊಂಡಿರುವಂತೆ ಬದುಕು ಸಾಗಿಸು. ಉಳಿದುದೆಲ್ಲ ತಲೆ ಹರಟೆ.

ವಿವರಣೆ: ಬರ್ಟ್ರಾಂಡ್ ರಸೆಲ್ ಮೂರು ತರಹದ ದು:ಖಿಗಳನ್ನು ಗುರುತಿಸುತ್ತಾರೆ. ಒಬ್ಬನು ಸಿನ್ನರ್, (sinner) ಅವನು ಮಾಡಬಾರದ ಅಪರಾಧವನ್ನೇನೂ ಮಾಡಿದವನಲ್ಲ. ಆದರೆ ಸಣ್ಣ ಸಣ್ಣ ತಪ್ಪುಗಳನ್ನು ಮಾಡುತ್ತಲೇ, ದು:ಖಿಸುತ್ತಲೇ ಇರುತ್ತಾನೆ. ಎರಡನೆಯವನು ನಾರ್ಸಿಸಿಸ್ಟ್ (narcist). ಇವನು ಇನ್ನೊಂದುಬಗೆಯ ದು:ಖಿ. ಅವರಿಗೆ ತಮ್ಮ ಪ್ರತಿಭೆಯ ಬಗ್ಗೆ ಉತ್ಪ್ರೇಕ್ಷಿತ ಕಲ್ಪನೆ ಇದೆ. ಪ್ರಪಂಚ ತಮ್ಮ ಬುದ್ಧಿವಂತಿಕೆಯನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ, ಪ್ರಪಂಚದಲ್ಲಿಯ ದ್ವೇಷ, ಅಸೂಯೆಗಳಿಗೆ ತಾನೊಬ್ಬ ಬಲಿಪಶುವೆಂದೂ, ಇದೊಂದು ವ್ಯರ್ಥ ಪ್ರಪಂಚ, ಇದರಿಂದ ಯಾವ ಉದ್ಧಾರವೂ ಆಗುವುದಿಲ್ಲವೆಂಬ ತೀರ್ಮಾನ ಇವರದು. ಮೂರನೆಯವನು ಮೆಗಲೋಮೆನಿಯಾಕ್ (mega melonic). ಅವರಿಗೆ ಎಲ್ಲರ ಮೇಲೆ ಅಧಿಕಾರ ಚಲಾಯಿಸುವ ಹುಚ್ಚು. ಇತರರನ್ನು ಟೀಕಿಸುವ, ದಾಸ್ಯದಲ್ಲಿಡುವುದರಲ್ಲಿಯೇ ಅವರಿಗೆ ತೃಪ್ತಿ. ತಮ್ಮ ಸುತ್ತ ಮುತ್ತ ಇರುವವರಲ್ಲಿ ಯಾರಾದರೂ ಸಂತೋಷವಾಗಿದ್ದರೆ ಅವರಿಗೆ ಅಸಹನೆಯುಂಟಾಗುತ್ತದೆ. ಈ ಕಗ್ಗದಲ್ಲಿ ಇವರಲ್ಲಿ ಎರಡು ತರಹದ ಜನರನ್ನು ಕುರಿತು ಹೇಳಲಾಗಿದೆ. ಕೆಲವರು ಮೆಗಲೋಮೇನಿಯಾಕ್ ಎಂದರೆ ಪರದು:ಖಿಗಳು. ಅವರಿಗೆ ಯಾರು ಸಂತೋಷವಾಗಿದ್ದರೂ ಸಹನೆ ಇಲ್ಲ. ಅವರ ಶಾಂತಿಯನ್ನು ಕೆಡಿಸುವುದರಲ್ಲೇ ಇವರಿಗೆ ತೃಪ್ತಿ. ಅದು ಬೇಡ ಎನ್ನುತ್ತದೆ ಕಗ್ಗ. ನಗುನಗುವ ಕಣ್ಣುಗಳಿಗೆ ಹೊಗೆಯನೂದುವುದು ಎಂದರೆ ಸಂತಸದ ಬಾಳಿನಲ್ಲಿ ದು:ಖದ ತೊರೆಯ ನುಗ್ಗಿಸುವುದು. ಇದೊಂದು ಕ್ಷುದ್ರತೃಪ್ತಿ. ಇದು ಸಂತೋಷದ ಬಾಳಿಗೆ ಮಾರಕವಾದದ್ದು. ಕೆಲವರಿಗೆ ಪ್ರಪಂಚದ ಸೊಗಸು ಕಾಣುವ ಮನಸ್ಸೇ ಇಲ್ಲ. ಈ ಜಗತ್ತೊಂದು ನೀರ ಮೇಲಣ ಗುಳ್ಳೆ. ಅದು ನಶ್ವರವಾದದ್ದು. ಕೇವಲ ದುಃಖಮೂಲವಾದದ್ದು. ಇಲ್ಲಿ ನಡೆಸುವ ಜೀವನ ವ್ಯರ್ಥವಾದದ್ದು ಎಂಬ ಸದಾ ಪ್ರಲಾಪ ಈ ನಾರ್ಸಿಸಿಸ್ಟ್ ಜನರದು. ಇವೆರಡೂ ಬೇಡ. ಇರುವ ತನಕ ಜೀವನ ಸುಂದರವಾಗಬೇಕಾದರೆ ತಾಯಿ-ತಂದೆಯರ ಮುಂದೆ ಮಗುಹೇಗೆ ನಿಶ್ಚಿಂತೆಯಿಂದ, ನಿರಾಳವಾಗಿ ಬದುಕುತ್ತದೆಯೋ ಹಾಗೆ ಪರಬ್ರಹ್ಮದಲ್ಲಿ ಪರಮ ನಂಬಿಕೆಯನ್ನಿಟ್ಟು ಜೀವನ ಸಾಗಿಸುವುದು ಮುಖ್ಯ. ಉಳಿದ ವಿಷಯಗಳು ಕೇವಲ ತಲೆ ಹರಟೆ. ತಾವು ಮಗುವಾಗಿದ್ದಾಗ ಪ್ರವಾಸಕ್ಕೆ ಹೋದದ್ದು ನೆನಪಿದೆಯೆ? ನೀವು ಆಗ ಹೋಗಬೇಕಾದ ರೈಲು, ಉಳಿಯಬೇಕಾದ ಸ್ಥಳ, ಊಟದ ವ್ಯವಸ್ಥೆ, ಹಣಕಾಸಿನ ಬಗ್ಗೆ ಚಿಂತೆ ಮಾಡಿದ್ದಿರಾ? ಎಲ್ಲವನ್ನೂ ತಂದೆ- ತಾಯಿಯರು ನಿಭಾಯಿಸುತ್ತಾರೆಂಬ ನಂಬಿಕೆಯಲ್ಲಿ ಯಾವ ಯೋಚನೆಯೂ ಇಲ್ಲದಂತೆ ಮಗು ಸಂತೋಷಪಟ್ಟಂತೆ,ಜೀವನದಲ್ಲಿ ನಮ್ಮನ್ನು ಕಾಪಿಡುವ ಶಕ್ತಿಯೊಂದಿದೆಯೆಂದು ನಂಬಿ ನಡೆಯುವುದೇ ಸಂತೋಷದ ಮೂಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 2, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ದಶಮಿ ಗಂ. 06-40 ನಕ್ಷತ್ರ: ಆರ್ದ್ರಾ ಗಂ. 12-43 ಯೋಗ: ಆಯುಷ್ಮಾನ್ ಗಂ. 17-51, ಕರಣ: ಗರಜೆ ಗಂ. 06-40, ಕುಂಭ ಮಾಸದ 17 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 –03-00 ಸೂರ್ಯೋದಯ : 06-50 ಸೂರ್ಯಾಸ್ತ : 06-36, ಮುಸ್ಲಿಂ ದಿನಾಂಕ : 09 ಶಬನ್
ಅದೃಷ್ಟ ಸಂಖ್ಯೆ : 7, 3

ಮೇಷ: ದುಗುಡಗಳು ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಸರ್ವೇಸಾಮಾನ್ಯ ಆದರೆ ಅದನ್ನು ನಿರ್ವಹಿಸುವ ಸಾಮರ್ಥ್ಯವನು ಅರಿಯುವುದು ಉತ್ತಮ. ಬೃಹತ್ ಮಟ್ಟದ ವಾಹನ ಖರೀದಿಸುವವರಿಗೆ ಇದು ಸೂಕ್ತ ಸಮಯವವಲ್ಲ.

ವೃಷಭ: ತಂದೆ ತಾಯಿಯ ಜತೆ ಆಸ್ತಿ ಪಾಲುದಾರಿಕೆಯ ವಿಷಯವಾಗಿ ಮಾತನಾಡುವುದಿದ್ದಲ್ಲಿ ಮಾತಿನ ಮೇಲೆ ಹಿಡಿತವಿರಲಿ. ಒಡಹುಟ್ಟಿದವರನ್ನು ಹೊರಗಿನವರಂತೆ ಕಾಣುವುದು ಸರಿಯಲ್ಲ. ತರಕಾರಿ ಮಾರಾಟಗಾರರಿಗೆ ಲಾಭ.

ಮಿಥುನ: ತೀರ್ಥಯಾತ್ರೆಗಳನ್ನು ಮಾಡಬೇಕೆಂದುಕೊಂಡವರು ಆ ಬಗ್ಗೆಯಾಗಿ ಯೋಚಿಸಲು ಇದು ಪ್ರಶಸ್ತ ಸಮಯ. ಸ್ನೇಹಿತರೊಂದಿಗೆ ಮರೆಯಲಾಗದ ಕ್ಷಣಗಳನ್ನು ಕಳೆಯುವಿರಿ. ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಜಯ.

ಕರ್ಕಾಟಕ: ಹೆಚ್ಚಿನ ಕಡೆ ಜಗಳವನ್ನು ತಣಿಸಲು ಪ್ರಯೋಜನವಾಗುವ ಹಾಸ್ಯಪ್ರವೃತ್ತಿ ಇಂದು ಕೈ ಬಿಡುವ ಸಾಧ್ಯತೆ ಇದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಗುರುತಿಸಿಕೊಂಡಿರುವ ಯೋಗಪಟುಗಳಿಗೆ ಉತ್ತಮ ಅವಕಾಶ ಬರಲಿವೆ.

ಸಿಂಹ: ಕನ್ಯಾನ್ವೇಷಣೆಯ ಹಂತದಲ್ಲಿರುವ ಯೋಗ್ಯ ಹುಡುಗನಿಗೆ ಅನುರೂಪ ಕನ್ಯೆ ಲಭ್ಯವಾಗುವ ಸಂಭವವಿದೆ. ಕುಟುಂಬದವರಿಗೆ ಹೆಚ್ಚಿನ ಸಮಯ ನೀಡುವ ಬಗ್ಗೆ ಯೋಚನೆ ನಡೆಸಿ, ಸಮಯ ಎಂದಾಗ ಅವರ ಸಹಾಯವೇ ಮುಖ್ಯ.

ಕನ್ಯಾ: ಉದ್ವೇಗವನ್ನು ಶಾಂತಗೊಳಿಸಲು ಮನಸ್ಸಿಗೆ ಸಮಾಧಾನವಾಗುವಂತಹಾ ಸಂಗೀತವನ್ನು ಕೇಳಿ. ಅತ್ಯಾಪ್ತರಿಗಾಗಿ ಉಡುಗೊರೆ ಕೊಡುವ ಸಲುವಾಗಿ ಹುಡುಕುತ್ತಿರುವ ವಸ್ತುವು ಈ ದಿನ ಲಭ್ಯವಾಗುವುದು.

ತುಲಾ: ಗಣಕಯಂತ್ರದ ಮುಂದೆ ಕೂತು ಕೆಲಸ ನಡೆಸುವವರು ಕಣ್ಣಿನ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ. ನಿಮಗೆ ಬರಲು ಬಾಕಿ ಇದ್ದಂಥ ಹಳೇ ಸಾಲಗಳು ತೀರಿಸುವ ಬಗ್ಗೆ ಮಾತುಗಳನ್ನು ಕೇಳ್ಪಡುವಿರಿ. ಆದರೆ ನಂಬಲು ಅನರ್ಹ.

ವೃಶ್ಚಿಕ: ವೇದ ಶಾಸ್ತ್ರ ಪಾರಂಗತರಿಗೆ ಕೂಪ ಮಂಡೂಕದ ಭಾವನೆಯನ್ನು ಕಳಚಿಕೊಂಡು ಮುನ್ನುಗ್ಗಿದಲ್ಲಿ ಅತ್ಯಂತ ಒಳ್ಳೆಯ ಅವಕಾಶಗಳನ್ನು ಪಡೆಯುವಿರಿ ಎಂಬುವುದರಲ್ಲಿ ಎರಡನೆ ಮಾತಿಲ್ಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯತ್ನ ಅಗತ್ಯ.

ಧನು: ಮನೆಗೆ ಬಂದ ಹೊಸ ವ್ಯಕ್ತಿಯೊಂದಿಗೆ ಉತ್ತಮ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವಿರಿ. ಸಾಗರ ಸಮೀಪದ ಪ್ರವಾಸಗಳನ್ನು ನಿಶ್ಚಯಿಸಿದ್ದರೆ ತಾತ್ಕಾಲಿಕವಾಗಿ ಅದನ್ನು ಮುಂದೂಡಿ.

ಮಕರ: ಹಲವು ವಿಚಾರಗಳು ಒಂದೇ ಬಾರಿಗೆ ತಲುಪುವುದರಿಂದ ತಳಮಳವಾಗಬಹುದು. ವಿದೇಶದಲ್ಲಿ ನೆಲೆಸಿರುವವರಿಗೆ ಸ್ವಸ್ಥಾನದಲ್ಲಿರುವ ಪೋಷಕರ ಬಗ್ಗೆ ತಲೆಬಿಸಿಯಾಗುತ್ತದೆ. ಪಾರ್ವತಿಯನ್ನು ಭಜಿಸಿ.

ಕುಂಭ: ಉನ್ನತ ಶಿಕ್ಷಣವನ್ನು ಪಡೆದವರು ನಿಮ್ಮ ಓದಿಗೆ ತಕ್ಕಂತೆಯೇ ಕೆಲಸ ನಿರೀಕ್ಷಿಸುತ್ತಿದ್ದರೆ ಸದ್ಯದಲ್ಲಿ ಸಿಗುವುದು ಕಷ್ಟ. ಸುಖಮಯವಾಗಿರುವ ಜೀವನವನ್ನು ಮೂರನೇ ವ್ಯಕ್ತಿಗಳ ಮಾತು ಕೇಳಿ ಹಾಳುಮಾಡಿಕೊಳ್ಳದಿರಿ.

ಮೀನ: ಸಾಧು ಸಂತರ ಮಾತುಗಳು ಆಕರ್ಷಿಸುವ ಸಾಧ್ಯತೆ ಇದೆ. ಧಾರ್ಮಿಕವಾದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ದುಶ್ಚಟಗಳಿಗೆ ಒಳಗಾಗಿ ಅದರಿಂದ ಹೊರಬರಬೇಕೆಂದು ಇರುವವರು ಇಂದೇ ಪ್ರಯತ್ನ ಶುರುಮಾಡಿ.

ಪದಬಂಧ 5246

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಬೇರೆಯ ದೇಹ (4)
3. ಕಾಡಿನ ಪುಷ್ಪವಿದು (4)
5. ಹೊಟ್ಟೆ ಕಿಚ್ಚು ಈ ರೀತಿ ವ್ಯಕ್ತವಾಗಿದೆ (3)
6. ಈತ ತಿರುಪೆ ಬೇಡುವವನು (3)
8. ನೀರಿನ ಅಧಿದೇವತೆ (3)
9. ದಿನಾಂಕವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
10. ಸುಲಭವಾಗಿ ಬಿಡಿಸಲಾರದ ಗಂಟು (3)
11. ವನದ ಕೊನೆಗೆ ಮಾಡಿದ ಹೋಮ (3)
12. ಸುಮ್ಮನಿರಿ! ಹಿಗ್ಗು ಹೀಗೆ ಬಂದಿದೆ! (3)
14. ಕಣ್ಣೀರು ಇಲ್ಲಿ ಸುರಿಯುತ್ತಿದೆ (3)
16. ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
17. ನಡುವಿನ ಮಾವನಿಂದಾದ ಶೇಖರಣೆ (4)

ಮೇಲಿಂದ ಕೆಳಕ್ಕೆ
1. ಪತಿಯೊಡನೆ ಕಾಲಾಳು ಬಂದಿದ್ದಾನಲ್ಲಾ! (3)
2. ಈತ ನರಕಾಧಿಪತಿ (2)
3. ವಠಾರದಲ್ಲಿರುವ ಮದುವೆ ಗಂಡು (2)
4. ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
7. ಚಪ್ಪಾಳೆಯನ್ನು ಹೀಗೆನ್ನಿ (5)
8. ಈ ರೀತಿ ಗುಂಪುಗಳಾಗಿ ವಿಂಗಡಿಸು (5)
11. ಹರನನ್ನು ಸ್ತುತಿಸಿರುವ ಶೂರ (3)
13. ಹೊಸದಾಗಿ ಕಾಣುತ್ತಿರುವ ಧಾನ್ಯ! (3)
14. ಶ್ರೀ ಕೃಷ್ಣನ ಸೋದರ ಮಾವ (2)
15. ಯಜಮಾನಿ ನುಡಿದಿರುವ ಸತ್ಯ (2)



5245ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿಕರ 3.ಮೋಸಗಾರ 5.ಸಮಕ್ಷ 7.ರಾಣಿ 8.ತಡ 10.ಸುದಿನ 11.ಕಂಬಳಿ 13.ಷರಾ 15.ಪಾತಿ 16.ಗಡಸು 18.ರತ್ನಪಡಿ 19.ಮಧುಕರಿ

ಮೇಲಿಂದ ಕೆಳಕ್ಕೆ: 1.ಪರಾಜಿತ 2.ರಸ 3.ಮೋಕ್ಷ 4.ರಮಣಿ 6.ಮಸೀದಿ 7.ರಾಜಾರೋಷ 9.ಡಕಾಯಿತಿ 12.ಬಗ್ಗಡ 14.ರಾಯಭಾರಿ 15.ಪಾಮರ 16.ಗಡಿ 17.ಸುಮ

ಸುಡೊಕು 5632

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5631 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಷೇರುಪೇಟೆ ವಹಿವಾಟು 448



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17303
ಇಂದಿನ ಅಂತ್ಯ	17450
▲	146
ದಿನದ ಕನಿಷ್ಠ	17467

ವಿನಿಮಯ ದರ

$ ಡಾಲರ್	82.49
£ ಪೌಂಡ್	99.27
€ ಯುರೊ	87.91
¥ ಯೆನ್ (100ಕ್ಕೆ)	60.6

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690(1690)
ಸೋಯಾ (ರಿಫೈನ್ಡ್)	₹1110(1110)
ಸೂರ್ಯಕಾಂತಿ (ರಿಫೈನ್ಡ್)	₹1140(1135)
ಪಾಮೋಲಿನ್	₹965(957)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹337-590

ದ್ವಿತಳಿ (ಬಿ.ವಿ) ₹200-695

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

ತಿಪಟೂರು	₹8300-10500
ತುರುವೇಕೆರೆ	₹9600-9600

ರಾಸಾಯನಿಕ ಮಾರುಕಟ್ಟೆಗೆ ನಿಪ್ಪಾನ್

ಬೆಂಗಳೂರು: ನಿಪ್ಪಾನ್ ಪೇಂಟ್ ಕಂಪನಿಯು ಕಟ್ಟಡ ನಿರ್ಮಾಣ ರಾಸಾಯನಿಕಗಳ ಮಾರುಕಟ್ಟೆ ಪ್ರವೇಶಿಸಿದೆ. ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ಯೋಜನೆಯ ಭಾಗವಾಗಿ ನಿಪ್ಪಾನ್ ಕಂಪನಿಯು, ಮೂರು ವಲಯಗಳ ಮೇಲೆ ಹೆಚ್ಚಿನ ಗಮನ ನೀಡಲಿದೆ.

ಕಾಂಕ್ರೀಟ್ ಮಿಶ್ರಣಗಳು, ಕಾಂಕ್ರೀಟ್ ರಿಪೇರಿ, ಜಲ ನಿರೋಧಕ, ಹೈಬ್ರಿಡ್ ಸೀಲೆಂಟ್‌ಗಳು, ಸೀಲೆಂಟ್‌ಗಳ ಮಾರುಕಟ್ಟೆ ವಲಯದ ಮೇಲೆ ಕಂಪನಿಯು ಗಮನ ಕೇಂದ್ರೀಕರಿಸಲಿದೆ.

ಕಂಪನಿಯು ದ್ರವರೂಪದ ಉತ್ಪನ್ನಗಳನ್ನು ತನ್ನ ಚೆನ್ನೈ ಘಟಕದಲ್ಲಿ ಸಿದ್ಧಪಡಿಸಲಿದೆ. ಏರೋಸೋಲ್ ಆಧಾರಿತ ಉತ್ಪನ್ನಗಳನ್ನು ಸ್ಥಾಪಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಈ ಕ್ರಮಗಳ ಮೂಲಕ ನಿಪ್ಪಾನ್ ಕಂಪನಿಯು ಕಟ್ಟಡ ನಿರ್ಮಾಣ ರಾಸಾಯನಿಕಗಳ ವಲಯದಲ್ಲಿ ಪ್ರಮುಖ ಪಾಲುದಾರನಾಗಿ ಗುರುತಿಸಿಕೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ತಯಾರಿಕಾ ವಲಯ: ಬೆಳವಣಿಗೆ ಮಟ್ಟ ಅತ್ಯಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳ ಬೆಳವಣಿಗೆ ಪ್ರಮಾಣವು ಫೆಬ್ರುವರಿಯಲ್ಲಿ ಅತ್ಯಲ್ಪ ಇಳಿಕೆಯನ್ನು ಕಂಡಿದೆ. ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪಿಎಂಐ ಸೂಚ್ಯಂಕವು ಫೆಬ್ರುವರಿಯಲ್ಲಿ 55.3ಕ್ಕೆ ತಲುಪಿದೆ. ಇದು ಜನವರಿಯಲ್ಲಿ 55.4 ರಷ್ಟು ಇತ್ತು.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. ಅದಕ್ಕಿಂತ ಕಡಿಮೆ ಇದ್ದರೆ, ಕುಸಿತವೆಂದು ಅರ್ಥೈಸಲಾಗುತ್ತದೆ.

ಉದ್ಯೋಗ ಸೃಷ್ಟಿಯ ವಿಚಾರದಲ್ಲಿ ಹೆಚ್ಚಿನ ಬೆಳವಣಿಗೆ ಕಂಡುಬಂದಿಲ್ಲ. ಈಚಿನ ಬೇಡಿಕೆಗಳಿ ಆಗ್ತವಿರುವ ಸಿಬ್ಬಂದಿ ಕಂಪನಿಗಳ ಬಳಿ ಇದ್ದಾರೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಅವರು ಹೇಳಿದ್ದಾರೆ.

ಹೊಸ ವಾಣಿಜ್ಯ ಚಟುವಟಿಕೆಗಳ ಬೆಳವಣಿಗೆಗೆ ಹೆಚ್ಚಿನ ಕೊಡುಗೆಯು ದೇಶಿ ಮಾರುಕಟ್ಟೆಗಳಿಂದಲೇ ಬಂದಿದೆ. ವಿದೇಶಗಳಿಂದ ಬರುವ ಕಾರ್ಯಾದೇಶವು ಬಹಳ ಕಡಿಮೆ ಪ್ರಮಾಣದಲ್ಲಿ ಏರಿಕೆ ಕಂಡಿದೆ.

ತಂತ್ರಜ್ಞಾನ ಉದ್ಯಮದಲ್ಲಿ ಶೇಕಡ 8.4ರಷ್ಟು ಬೆಳವಣಿಗೆ

ಮುಂಬೈ (ಪಿಟಿಐ): ದೇಶದ ತಂತ್ರಜ್ಞಾನ ಉದ್ಯಮವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 8.4ರಷ್ಟು ಬೆಳವಣಿಗೆ ಕಾಣಲಿದೆ ಎಂದು ನಾಸ್ಕಾಂ ಅಂದಾಜಿಸಿದೆ. ಈ ಬೆಳವಣಿಗೆಯ ಪರಿಣಾಮವಾಗಿ ಉದ್ಯಮದ ವರಮಾನವು ₹ 20.21 ಲಕ್ಷ ಕೋಟಿಗೆ ತಲುಪಲಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಉದ್ಯಮದ ವರಮಾನವು ₹ 18.64 ಲಕ್ಷ ಕೋಟಿ ಆಗಿತ್ತು. 2023-24ನೆಯ ಹಣಕಾಸು ವರ್ಷದಲ್ಲಿ ಉದ್ಯಮದ ವರಮಾನ ಹೆಚ್ಚಳವು ಯಾವ ಮಟ್ಟದಲ್ಲಿ ಇರಲಿದೆ ಎಂದು ಅಂದಾಜು ಮಾಡುವುದು ಕಷ್ಟ ಎಂದು ನಾಸ್ಕಾಂ ಅಧ್ಯಕ್ಷ ದೇಬಜಾನಿ ಘೋಷ್ ಹೇಳಿದ್ದಾರೆ.

ಸರಕು ಮತ್ತು ಸೇವಾ ತೆರಿಗೆ ವರಮಾನ ಶೇಕಡ 12ರಷ್ಟು ಏರಿಕೆ • ಸೆಸ್ ಸಂಗ್ರಹದಲ್ಲಿ ದಾಖಲೆ

ಫೆಬ್ರುವರಿಯಲ್ಲಿ ಹೆಚ್ಚಿದ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಫೆಬ್ರುವರಿಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾದ ವರಮಾನ ಪ್ರಮಾಣವು ಶೇಕಡ 12ರಷ್ಟು ಹೆಚ್ಚಾಗಿದ್ದು, ₹ 1,49,577 ಕೋಟಿಗೆ ತಲುಪಿದೆ. ಆರ್ಥಿಕ ಚಟುವಟಿಕೆಗಳು ಹಾಗೂ ದುಬಾರಿ ಬೆಲೆಯ ಉತ್ಪನ್ನಗಳ ಖರೀದಿಯು ಹೆಚ್ಚಳ ಕಂಡಿದ್ದು ಈ ಏರಿಕೆಗೆ ಕಾರಣ.

ಆದರೆ, ಫೆಬ್ರುವರಿಯಲ್ಲಿ ಆಗಿರುವ ವರಮಾನ ಸಂಗ್ರಹವು ಜನವರಿ ತಿಂಗಳ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಕಡಿಮೆ. ಫೆಬ್ರುವರಿಯಲ್ಲಿ 28 ದಿನಗಳು ಮಾತ್ರ ಇರುವ ಕಾರಣ ಜಿಎಸ್‌ಟಿ ವರಮಾನ ಸಂಗ್ರಹ ಕೂಡ ಕಡಿಮೆ ಇರುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ. ಹಿಂದಿನ ವರ್ಷದ ಫೆಬ್ರುವರಿಯಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ, ಈ ವರ್ಷದ ಫೆಬ್ರುವರಿಯ ವರಮಾನ ಸಂಗ್ರಹ ಹೆಚ್ಚಿದೆ.

ಫೆಬ್ರುವರಿಯಲ್ಲಿ ದೇಶಿ ವಹಿವಾಟಿನಿಂದ (ಸೇವೆಗಳ ಆಮದು ಒಳಗೊಂಡಂತೆ) ಬರುವ ವರಮಾನವು ಶೇ 15ರಷ್ಟು ಹೆಚ್ಚಿದೆ. ಸರಕುಗಳ ಆಮದಿನಿಂದ ಬರುವ ವರಮಾನವು ಶೇ 6ರಷ್ಟು ಹೆಚ್ಚಾಗಿದೆ. 'ಇದು ದೇಶಿ ಮಾರುಕಟ್ಟೆಯಲ್ಲಿ ಸ್ವಾವಲಂಬನೆ ಹೆಚ್ಚಾಗುತ್ತಿರುವುದನ್ನು ತೋರಿಸುತ್ತಿದೆ. ಇದು ದೇಶದ ಅರ್ಥ ವ್ಯವಸ್ಥೆಯ ಪಾಲಿಗೆ ಒಳ್ಳೆಯ ಸೂಚನೆ' ಎಂದು ಕೆಪಿಎಂಜಿ ಇಂಡಿಯಾ ಸಂಸ್ಥೆಯ ಪರೋಕ್ಷ ತೆರಿಗೆ ಪಾಲುದಾರ ಅಭಿಷೇಕ್ ಜೈನ್ ಹೇಳಿದ್ದಾರೆ.

ಫೆಬ್ರುವರಿಯಲ್ಲಿ ಆಗಿರುವ ಸೆಸ್ ಸಂಗ್ರಹ ₹ 11,931 ಕೋಟಿ. ಇದು ಜಿಎಸ್‌ಟಿ ಜಾರಿಗೆ ಬಂದ ನಂತರದ ಅತಿ ಹೆಚ್ಚಿನ ಸೆಸ್ ಸಂಗ್ರಹ.

ಪಾನ್ ಮಸಾಲಾ ಮತ್ತು ತಂಬಾಕು ಉತ್ಪನ್ನ ತಯಾರಕರ ವಿರುದ್ಧ ತೆರಿಗೆ ಅಧಿಕಾರಿಗಳು ಕೈಗೊಂಡ ಕ್ರಮಗಳು ಹೆಚ್ಚಿನ ವರಮಾನ ಸಂಗ್ರಹಕ್ಕೆ ಹಾಗೂ ಹೆಚ್ಚಿನ ಸೆಸ್ ಸಂಗ್ರಹಕ್ಕೆ ಕಾರಣವಾಗಿರಬಹುದು ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಜಿಎಸ್‌ಟಿ: ಈ ವರ್ಷ ₹1.07 ಲಕ್ಷ ಕೋಟಿ ಸಂಗ್ರಹ

ನವದೆಹಲಿ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಫೆಬ್ರುವರಿ ಅಂತ್ಯದವರೆಗೆ ಕರ್ನಾಟಕದಲ್ಲಿ ₹1,07,894 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯವು ಶೇಕಡ 30ರಷ್ಟು ಪ್ರಗತಿ ಸಾಧಿಸಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ದೇಶದಲ್ಲಿ ಜಿಎಸ್‌ಟಿ ಸಂಗ್ರಹದ ಸರಾಸರಿ ಬೆಳವಣಿಗೆ ದರ ಶೇ 24ರಷ್ಟಿದ್ದು, ಕರ್ನಾಟಕ ಮೊದಲನೇ ಸ್ಥಾನದಲ್ಲಿದೆ. ಕೇರಳ ರಾಜ್ಯದ ದ್ವಿತೀಯ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಮೂರನೇ ಸ್ಥಾನದಲ್ಲಿದೆ. ಕೇಂದ್ರ ಹಣಕಾಸು 'ಇಲಾಖೆ ಬಿಡುಗಡೆ ಮಾಡಿರುವ ಮಾಸಿಕ ವರದಿಗಳ ಪ್ರಕಾರ, ಕಳೆದ ವರ್ಷ ಇದೇ ಅವಧಿಯಲ್ಲಿ ರಾಜ್ಯದಲ್ಲಿ ₹84,000 ಕೋಟಿ ಜಿಎಸ್‌ಟಿ ಸಂಗ್ರಹಿಸಲಾಗಿತ್ತು.

'ತೆರಿಗೆ ಸಂಗ್ರಹದಲ್ಲಿ ಸುಧಾರಣೆ, ಹೆಚ್ಚಿನ ಕಣ್ಗಾವಲು ಹಾಗೂ ಕೋವಿಡ್ ಬಿಕ್ಕಟ್ಟಿನ ಬಳಿಕ ಆರ್ಥಿಕ ಚಟುವಟಿಕೆ ಚೇತರಿಕೆ ಕಂಡಿರುವುದು ಇದಕ್ಕೆ ಕಾರಣ' ಎಂದು ಹಣಕಾಸು ಇಲಾಖೆಯ ಅಧಿಕಾರಿಯೊಬ್ಬರು ವಿಶ್ಲೇಷಿಸಿದರು. ಹಲವು ವಸ್ತುಗಳ ಮೇಲಿನ ತೆರಿಗೆ ಪ್ರಮಾಣವನ್ನು ಈ ವರ್ಷ ಗಣನೀಯವಾಗಿ ಹೆಚ್ಚಿಸಲಾಗಿದೆ. ಇದು ಸಹ ಜಿಎಸ್‌ಟಿ ಸಂಗ್ರಹ ಪ್ರಮಾಣ ಹೆಚ್ಚಳಕ್ಕೆ ಕಾರಣ.

ಜಿಎಸ್‌ಟಿ ಸಂಗ್ರಹ (₹ಕೋಟಿಗಳಲ್ಲಿ)

ತಿಂಗಳು	2021	2022	ಶೇ ಹೆಚ್ಚಳ
ಏಪ್ರಿಲ್	9,955	11,820	19
ಮೇ	5,754	9,232	60
ಜೂನ್	5,103	8,845	73
ಜುಲೈ	6,737	9,795	45
ಆಗಸ್ಟ್	7,429	9,583	29
ಸೆಪ್ಟೆಂಬರ್	7,783	9,760	25
ಅಕ್ಟೋಬರ್	8,259	10,996	33
ನವೆಂಬರ್	9,048	10,238	13
ಡಿಸೆಂಬರ್	8,335	10,061	21
ತಿಂಗಳು	2022	2023	ಶೇ ಹೆಚ್ಚಳ
ಜನವರಿ	5,800	6,085	-
ಫೆಬ್ರುವರಿ	9,176	10,809	18

ಮುಂಬೈ ಧಾರಣೆ

ಶೇಂಗಾ

1-03-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700(1700)
ಒಂದು ವಾರದ ಡೆಲಿವರಿ	1695(1695)
ಸೋಯಾ ಕಚ್ಚಾ	1017(1025)
ಪಾಮ್ ವಾರದ ಡೆಲಿವರಿ	963(955)
ಸೂರ್ಯಕಾಂತಿ ಎಣ್ಣೆ ಕಚ್ಚಾ	1040(1040)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ 55900(55250)

ಬೆಳ್ಳಿ ಕೆ.ಜಿ 64200(62950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಮೆರಿಕ ರಫ್ತು ಮಂಡಳಿಗೆ ಭಾರತೀಯರ ನೇಮಕ

ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ವ್ಯಾಪಾರ ವಿಚಾರದಲ್ಲಿ ಪ್ರಧಾನ ಸಲಹಾ ಸಂಸ್ಥೆ ಆಗಿರುವ ಅಮೆರಿಕದ ರಫ್ತು ಮಂಡಳಿಗೆ ಭಾರತ ಮೂಲದ ಉದ್ಯಮಿಗಳಾದ ಪುನೀತ್ ರೆಂಜೆನ್ ಮತ್ತು ರಾಜೇಶ್ ಸುಬ್ರಮಣ್ಯಂ ಅವರನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಿಸಿದ್ದಾರೆ.

'ಮಂಡಳಿಗೆ ನೇಮಕ ಮಾಡಿಕೊಳ್ಳಲು ಬಯಸುವ ಸದಸ್ಯರ ಪಟ್ಟಿಯನ್ನು ಮಂಗಳವಾರ ಬೈಡನ್ ಘೋಷಿಸಿದ್ದಾರೆ. ಈ ಪಟ್ಟಿಯಲ್ಲಿ ರೆಂಜೆನ್ ಮತ್ತು ಸುಬ್ರಮಣ್ಯಂ ಅವರ ಹೆಸರಿದೆ' ಎಂದು ಶ್ವೇತಭವನ ಹೇಳಿಕೆ ಬಿಡುಗಡೆ ಮಾಡಿದೆ.

ರೆಂಜೆನ್ ಅವರು ಡೆಲೊಯಿಟ್ ಕನ್ಸಲ್ಟಿಂಗ್ ಮಾಜಿ ಸಿಇಒ. ಸುಬ್ರಮಣ್ಯಂ ಅವರು ಫೆಡೆಕ್ಸ್ ಸಿಇಒ ಹಾಗೂ ಅಧ್ಯಕ್ಷರಾಗಿದ್ದಾರೆ.

ಎಕನಾಮಿಕ್ ಟೈಮ್ಸ್ 2022ರಲ್ಲಿ ರೆಂಜೆನ್ ಅವರನ್ನು 'ವರ್ಷದ ಜಾಗತಿಕ ಭಾರತೀಯ' ಎಂದು ಗುರುತಿಸಿತ್ತು. 2023ರಲ್ಲಿ ಸುಬ್ರಮಣ್ಯಂ ಅವರು 'ಪ್ರವಾಸಿ ಭಾರತೀಯ ಸಮ್ಮಾನ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಮಾರ್ಕೋನಿ' ಪುರಸ್ಕಾರ: ಭಾರತ ಮೂಲದ ಹರಿಬಾಲಕೃಷ್ಣನ್ ಆಯ್ಕೆ

ನ್ಯೂಯಾರ್ಕ್ (ಪಿಟಿಐ): ಮಸಾಚುಸೆಟ್ಸ್ 'ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ)ಯಲ್ಲಿ ಪ್ರಾಧ್ಯಾಪಕರಾಗಿರುವ, ಭಾರತ ಮೂಲದ ಹರಿ ಬಾಲಕೃಷ್ಣನ್ ಅವರು ಪ್ರತಿಷ್ಠಿತ 'ಮಾರ್ಕೋನಿ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

'ವೈರ್ ಮತ್ತು ವೈರ್‌ಲೆಸ್ ನೆಟ್‌ವರ್ಕಿಂಗ್, ಮೊಬೈಲ್ ಸೆನ್ಸಿಂಗ್ ಹಾಗೂ ಸಂಬಂಧಿಸಿದ ಕ್ಷೇತ್ರಗಳಲ್ಲಿ ನಡೆಸಿರುವ ಸಂಶೋಧನೆಗಳಿಗಾಗಿ ಹರಿ ಬಾಲಕೃಷ್ಣನ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಮಾರ್ಕೋನಿ ಸೊಸೈಟಿ ಪ್ರಕಟಣೆಯಲ್ಲಿ ತಿಳಿಸಿದೆ. ಅಕ್ಟೋಬರ್ 27ರಂದು ವಾಷಿಂಗ್ಟನ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

ಹರಿ ಬಾಲಕೃಷ್ಣನ್ ಅವರು ಎಂಐಟಿಯ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಕಂಪ್ಯೂಟರ್ ವಿಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕರ್ತಾರ್‌ಪುರಕ್ಕೆ ರಾಯಭಾರಿ ನೇಮಕ

ಇಸ್ಲಾಮಾಬಾದ್ (ಪಿಟಿಐ): ಸಿಖ್ಖರ ಪವಿತ್ರ ಯಾತ್ರಾ ಸ್ಥಳವಾದ ಗುರುದ್ವಾರ ದರ್ಬಾರ್ ಸಾಹಿಬ್ ಸಂಪರ್ಕಿಸುವ ಕರ್ತಾರ್‌ಪುರ ಕಾರಿಡಾರ್‌ಗೆ ಸರ್ದಾರ್ ರಮೇಶ್ ಸಿಂಗ್ ಅರೋರಾ ಅವರನ್ನು ರಾಯಭಾರಿಯಾಗಿ ಪಾಕಿಸ್ತಾನ ಸರ್ಕಾರ ಬುಧವಾರ ನೇಮಿಸಿದೆ.

ಸಂಕ್ಷಿಪ್ತ ಸುದ್ದಿ

ಉಗ್ರರಿಗೆ ಆಶ್ರಯ ಕೊಟ್ಟರೆ ತಕ್ಕ ಬೆಲೆ ತೆರಬೇಕು: ಭಾರತ

ವಿಶ್ವಸಂಸ್ಥೆ (ಪಿಟಿಐ): ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ನಿಷೇಧಿತ ಉಗ್ರ ಸಂಘಟನೆಗಳು ಸಕ್ರಿಯವಾಗಿರುವುದು ಪ್ರಾದೇಶಿಕ ಭದ್ರತೆಗೆ ಆತಂಕಕಾರಿ ಎಂದು ಭಾರತವು ವಿಶ್ವಸಂಸ್ಥೆಯಲ್ಲಿ ಹೇಳಿದೆ. ಉಗ್ರರಿಗೆ ಆಶ್ರಯ ನೀಡುವ ದೇಶಗಳು ತಕ್ಕ ಬೆಲೆ ತೆರಬೇಕು ಎಂದು ಭಾರತವು ಎಚ್ಚರಿಸಿದೆ.

ಪರೋಕ್ಷವಾಗಿ ಪಾಕಿಸ್ತಾನ ಹೆಸರು ಉಲ್ಲೇಖಿಸಿ, ಭಯೋತ್ಪಾದಕರಿಗೆ ಆಶ್ರಯ ಕೊಡುವ ದೇಶವು ಅದರ ಕೃತ್ಯಗಳಿಗೆ ತಕ್ಕ ಬೆಲೆ ತೆರಬೇಕು. ಭಯೋತ್ಪಾದನೆ ಪ್ರಾಯೋಜಿಸುವ ದೇಶವನ್ನು ಅದರ ಕೃತ್ಯಗಳಿಗೆ ವಿಶ್ವ ಸಮುದಾಯವು ಹೊಣೆ ಮಾಡಬೇಕು. ಭಾರತವು ಎಲ್ಲ ಬಗೆಯ ಭಯೋತ್ಪಾದನೆಯನ್ನು ಬಲವಾಗಿ ಖಂಡಿಸುತ್ತದೆ ಎಂದು ವಿಶ್ವಸಂಸ್ಥೆಗೆ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಪ್ರತಿಪಾದಿಸಿದ್ದಾರೆ.

ಭಯೋತ್ಪಾದನೆ ನಿಗ್ರಹ ಸಂಬಂಧ ಸದಸ್ಯ ರಾಷ್ಟ್ರಗಳ ರಾಯಭಾರಿಗಳ ಮಟ್ಟದ ತ್ರೈಮಾಸಿಕ ಸಭೆಗೆ ಹೇಳಿಕೆ ನೀಡಿರುವ ಅವರು, 'ಭಯೋತ್ಪಾದನೆಯ ಬೆದರಿಕೆ ಗಂಭೀರ ವಿಷಯವೆನ್ನುವುದು ನಿಜ. ಅಂತರರಾಷ್ಟ್ರೀಯ ಸಹಕಾರ, ಒಗ್ಗಟ್ಟಿನ ಪ್ರಯತ್ನಗಳ ನಡುವೆಯೂ ಭಯೋತ್ಪಾದನೆ ವಿಕಸನ ಹೊಂದುತ್ತಿದೆ. ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಲ್ಲಿ ಹರಡುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಇದು ತೀರಾ ವಿಷಾದನೀಯ' ಎಂದು ಹೇಳಿದ್ದಾರೆ.

ಉತ್ಪಾದನಾ ಚಟುವಟಿಕೆ: ಚೀನಾದ ಅಚ್ಚರಿಯ ಪ್ರಗತಿ

ಬೀಜಿಂಗ್ (ರಾಯಟರ್ಸ್): ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕತೆ ಎನಿಸಿರುವ ಚೀನಾದಲ್ಲಿ ತಯಾರಿಕಾ ಚಟುವಟಿಕೆಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚಿವೆ. ಕಳೆದ ಒಂದು ದಶಕಕ್ಕೆ ಹೋಲಿಸಿದರೆ, ಫೆಬ್ರುವರಿಯಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ಸಕ್ರಿಯರುವ ವೇಗ ಅತ್ಯಂತ ಮೂಡಿಸುವಂತಿದೆ ಎಂಬುದು ಸಂಬಂಧಪಟ್ಟ ಸೂಚ್ಯಂಕದಿಂದ (ಪಿಎಂಐ) ತಿಳಿದು ಬರುತ್ತದೆ.

ಕೋವಿಡ್-ನಿರ್ಬಂಧಗಳನ್ನು ಕಳೆದ ಡಿಸೆಂಬರ್‌ನಲ್ಲಿ ತೆರವು ಮಾಡಿದ ನಂತರ, ಉತ್ಪಾದನಾ ಕ್ಷೇತ್ರಕ್ಕೆ ಹೊಸ ವೇಗ ಸಿಕ್ಕಿದೆ ಎಂದು ಇವೇ ಸೂಚ್ಯಂಕಗಳು ಹೇಳುತ್ತವೆ.

'ಮುಂದಿನ ಕೆಲ ತಿಂಗಳಲ್ಲಿ ಆರ್ಥಿಕತೆ ಪುಟಿದೇಳಬಹುದು ಎಂದು ಅಂದಾಜಿಸಿದ್ದೆವು. ಆದರೆ, ತ್ವರಿತನ ವಿದ್ಯಮಾನಗಳನ್ನು ಗಮನಿಸಿದರೆ, ಈ ವರ್ಷದ ಆರ್ಥಿಕ ಪ್ರಗತಿ ದರ ಶೇ 5.50 ಗಡಿಯನ್ನು ದಾಟಬಹುದು' ಎಂದು 'ಕ್ಯಾಪಿಟಲ್ ಎಕನಾಮಿಕ್ಸ್' ಸಂಸ್ಥೆಯಲ್ಲಿ ಚೀನಾ ಆರ್ಥಿಕ ವ್ಯವಹಾರಗಳ ವಿಭಾಗದ ಮುಖ್ಯಸ್ಥರಾದ ಜೂಲಿಯನ್ 'ಇವಾನ್ಸ್-ಪ್ರಿಚರ್ಡ್ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೊಂದಿಗೆ Salary+OT. 18,800-78,000/-. 9964435081/ 9964499846

ಉತ್ತಮ ಅನುಭವವುಳ್ಳ ಫ್ಯಾಕ್ಟರಿ ಸಹಾಯಕರು, ಬಟ್ಟೆ ವಾಷಿಂಗ್ ಮಾಡುವ ಕೆಲಸಗಾರರು ಡ್ರೈಕ್ಲೀನಿಂಗ್ ಕಂಪನಿಗೆ ಬೇಕಾಗಿದ್ದಾರೆ ಸಂಬಳ 14000/ರಿಂದ 20,000/ ಊಟ ವಸತಿಯುತ್ತದೆ ಆಸಕ್ತಿಯುಳ್ಳವರು ಸಂಪರ್ಕಿಸಿ. ಬನ್ನೇರುಘಟ್ಟ ರಸ್ತೆ, ಬೆಂಗಳೂರು. 9663668007

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಬಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯುಳ್ಳವರು) 18,000 -56,000/- ವಸತಿಯೂಟದೊಂದಿಗೆ 9035520339/ 9036125229

Marketing & Sales

WANTED MARKETING EXECUTIVES SALARY : 15,000/- Male or Female For Walk in Interview Contact 9449011704, 8088811704 GAYATRI GRAPHICS INC.

Drivers

ಪ್ರಮುಖ ಟ್ರಾವೆಲ್ ಕಂಪನಿಗೆ ಡ್ರೈವರ್‌ಗಳು ಬೇಕಾಗಿದ್ದಾರೆ (ತಕ್ಷಣವೇ ಸೇರುವವರು) ಬೆಂಗಳೂರಿನಾದ್ಯಂತ ಮತ್ತು ಸ್ವಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮತ್ತು ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ವಸತಿ ವಿಮೆ + ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 080-47106868

Hospital & Medical Jobs

ವೃದ್ಧರನ್ನು ಆರೈಕೆ ಮಾಡಲು ಅನುಭವವಿರುವ ಯುವಕ-ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18-35 ವರ್ಷದವರಿಗೆ. ವಿದ್ಯಾರ್ಹತೆ- SSLC Pass/ Fail. ಸಂಬಳ 16,000ದಿಂದ ಪ್ರಾರಂಭ. 9916905188

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 / 9611225266

ವರ್ಕ್ ಫ್ರಮ್ ಹೋಮ್: ಫಾರಂತುಂಬುವ ಮತ್ತು ಪುಸ್ತಕ ಬರೆಯುವ ಮೂಲಕ ಗಳಿಸಿ ವಾರಕ್ಕೆ 7000-8000/-. ಕೊರಿಯರ್ ಸೌಲಭ್ಯವಿದೆ. 9980525789, 9980527256

ಸಮಾಜಸೇವೆ

Others

WANTED GOUSHALA in Karnataka Contact: 9845203777

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಬಿಡಿಸಿ:ಪರಿಹಾರ, ದಕ್ಷಿಣಕನ್ನಡದ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

10/04/2023: 6ದಿನಗಳು ರಿಯಾಯಿತಿದರದಲ್ಲಿ A/Cಟ್ರೈನಲ್ಲಿ ಕಾಶಿ,ಗಯಾ, ಪ್ರಯೋಗರಾಜ್,ಅಯೋಧ್ಯೆ, 26000/. 10.07.2023: 13/17ದಿನಗಳು ಅಮರನಾಥ್,ವೈಷ್ಣೋದೇವಿ, ಕಾಶ್ಮೀರ,ದೆಹಲಿ ಇತ್ಯಾದಿ. 27000/ಪ್ರತಿಜನಕ್ಕೆ ಅಂಡಮಾನ್,ಹಿಮಾಚಲಪ್ರದೇಶ. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್: 9845560219/ 9739847429.

ಮಾರುತಿ ಟ್ರಾವೆಲ್ ಅಂಧ್ರ ತೆಲಂಗಾಣ-4ದಿನ-25.03.23 ತಮಿಳುನಾಡು-ರಾಮೇಶ್ವರಂ-ಕೇರಳ-5ದಿನ-02.04.23 ಗುಜರಾತ್-ಮಹಾರಾಷ್ಟ್ರ-7ದಿನ 09.04.23 ಕಾಶಿ ಯಾತ್ರಾ-ನೇಪಾಳ-16ದಿನ-01.05.23 ವೈಷ್ಣೋದೇವಿ ಪ್ರವಾಸ 15ದಿನ -21.05.23 ಸಂಪರ್ಕಿಸಿ: 9916688569, 9019744707

★ಶ್ರೇಯಸ್ ಟೂರ್ಸ್★ 06.03.2023,08.04.2023 11ದಿನಗಳು ಕಾಶಿನೇಪಾಳ ರಾಷ್ಟ್ರ (ಮುಕ್ತಿನಾಥಸಹಿತ)ಪ್ರವಾಸ, 14.03.2023,05.05.2023 08ದಿನಗಳು ಕಾಶಿ,ನೈಮಿಷಾರಣ್ಯ ಅಯೋಧ್ಯಾ,ಪ್ರಯಾಗ,ಗಯಾ, 25.03.2023,05.04.2023, 06.05.2023, 21/16/13ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ ಪ್ರವಾಸ)ಅಸ್ಸಾಂ ಅರುಣಾಚಲ,ಮೇಘಾಲಯ ಮಣಿಪುರ,ತ್ರಿಪುರ,ನಾಗಾಲ್ಯಾಂಡ್. ಮಿಜೋರಾಂ.21.04.2023 11ದಿನಗಳು ಉತ್ತರಭಾರತ, ಓಂಕಾರ್ ಗುಜರಾತ್ ರಾಜ್ಯಪ್ರವಾಸ. 8073824856, 6366322639, 9538676065

ದೆಹಲಿ ಯಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 03.05.2023 08.05.2023 12.05.2023 24.05.2023 ರಿಂದ 14/18 ದಿನಗಳು. ಉಜ್ಜಯಿನಿ, ಓಂಕಾರೇಶ್ವರ ಮಾತ್ರಗಯಾ ಸೋಮನಾಥ್ ದ್ವಾರಕ 12.04.2023 ರಿಂದ 10 ದಿನಗಳು ಕಾಶಿ,ಗಯಾ,ನೈಮಿಶಾರಣ್ಯ, ಭುವನೇಶ್ವರ್ 03.04.2023 12.04.2023 22.04.2023 ರಿಂದ 10 ದಿನಗಳು. ಕಾಶ್ಮೀರ,ಗುಲ್‌ಮಾರ್ಗ್ ಸೋನ್‌ಮಾರ್ಗ್ ವೈಷ್ಣೋದೇವಿ 12.04.2023 17.04.2023 ರಿಂದ 9 ದಿನಗಳು, ನೇಪಾಳ ಮುಕ್ತಿನಾಥ್ ಕಾಶಿ,ಗೋರಖ್‌ಪುರ್ 15.05.2023 ರಿಂದ 10 ದಿನಗಳು ಸಂಪರ್ಕಿಸಿ. 26508925 9980993631 ಶ್ರೀಚೈತ್ರ ಟ್ರಾವೆಲ್ಸ್ ಬಸವನಗುಡಿ ಬೆಂಗಳೂರು-18

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿಸಲಾದ ವಸ್ತು, ವಿಷಯ, ವಿಚಾರಗಳ ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಜಾಹೀರಾತುಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ. ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

JOB To Place your Classified Ads Contact: 9886213331

DH Classifieds

BOOK YOUR AD on SATURDAY & GET 50% OFF* ON SUNDAY

*conditions apply

For more information contact:

9845114560 | 9901641752

9731810277 | 9886213331

080 - 45557163 / 164

ಗುಜರಾತ್ 'ಗಿಫ್ಟ್ ಸಿಟಿ'ಯಲ್ಲಿ ಆಸ್ಟ್ರೇಲಿಯಾ ಕ್ಯಾಂಪಸ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ವೊಲ್ಲೊಂಗಾಂಗ್ ಮತ್ತು ಡೇಕಿನ್ ವಿಶ್ವವಿದ್ಯಾಲಯಗಳು ಗುಜರಾತ್‌ನ ಅಂತರರಾಷ್ಟ್ರೀಯ ಆರ್ಥಿಕ ತಾಂತ್ರಿಕ ನಗರದಲ್ಲಿ (ಗಿಫ್ಟ್ ಸಿಟಿ) ಕ್ಯಾಂಪಸ್ ತೆರೆಯಲಿವೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಬುಧವಾರ ಘೋಷಿಸಿದರು.

ಆಸ್ಟ್ರೇಲಿಯಾ ಶಿಕ್ಷಣ ಸಚಿವ ಜಾಸನ್ ಕ್ಲೇರ್ ಅವರು ಭಾರತಕ್ಕೆ ಭೇಟಿ ನೀಡಿದ್ದು, ದೆಹಲಿ ವಿಶ್ವವಿದ್ಯಾಲಯದ ವೆಂಕಟೇಶ್ವರ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದ ವೇಳೆ ಪ್ರಧಾನ್ ಅವರು ಈ ಘೋಷಣೆ ಮಾಡಿದರು.

'ಮುಂದಿನ ವಾರ ಆಸ್ಟ್ರೇಲಿಯಾ ಪ್ರಧಾನಿ ಆಂಟನಿ ಅಲ್ಬನೀಸ್ ಅವರು ಭಾರತಕ್ಕೆ ಭೇಟಿ ನೀಡುತ್ತಿದ್ದು, ಈ ವೇಳೆ ಎರಡೂ ವಿಶ್ವವಿದ್ಯಾಲಯಗಳು ಒಪ್ಪಂದಕ್ಕೆ ಸಹಿ ಹಾಕಲಿವೆ. ಯುವ ಜನತೆಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದ ಈ ಒಪ್ಪಂದ ಮಾಡಿಕೊಳ್ಳುತ್ತಿದ್ದೇವೆ' ಎಂದು ಹೇಳಿದರು.

ಮಾಜಿ ಕ್ರಿಕೆಟಿಗ ಆಡಂ ಗಿಲ್‌ಕ್ರಿಸ್ಟ್ ಅವರು ಭಾರತದಲ್ಲಿ ಕ್ಯಾಂಪಸ್ ತೆರೆಯಲು ಸಹಾಯ ಮಾಡಲಿದ್ದಾರೆ ಎಂದು ಸಚಿವ ಕ್ಲೇರ್ ತಿಳಿಸಿದರು.

ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ ರೆಡ್ಡಿ ನಿರ್ದೇಶನ

ಆಂಧ್ರದಲ್ಲಿ 3 ಸಾವಿರ ದೇಗುಲ ನಿರ್ಮಾಣ

ಅಮರಾವತಿ (ಪಿಟಿಐ): ಹಿಂದೂ ಧರ್ಮದ ರಕ್ಷಣೆಗಾಗಿ ಆಂಧ್ರಪ್ರದೇಶದ ಹಳ್ಳಿಗಳಲ್ಲಿ ದೇವಾಲಯ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಸುಮಾರು ಮೂರು ಸಾವಿರ ದೇಗುಲಗಳನ್ನು ನಿರ್ಮಿಸುವ ಬಹುದೊಡ್ಡ ಯೋಜನೆ ಹಾಕಿಕೊಂಡಿದೆ.

ಹಿಂದೂಗಳ ಧಾರ್ಮಿಕ ನಂಬಿಕೆಗಳ ರಕ್ಷಣೆ ಮತ್ತು ಪ್ರಚಾರಕ್ಕಾಗಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ ರೆಡ್ಡಿ ಅವರ ನಿರ್ದೇಶನದಂತೆ ಈ ಉಪಕ್ರಮವನ್ನು ರಾಜ್ಯಸರ್ಕಾರ ಕೈಗೊಂಡಿದೆ ಎಂದು ಉಪಮುಖ್ಯಮಂತ್ರಿ ಕೊಟ್ಟು ಸತ್ಯನಾರಾಯಣ ಹೇಳಿದ್ದಾರೆ.

ಸಮಾಜದ ದುರ್ಬಲ ವರ್ಗಗಳಿರುವ ಪ್ರದೇಶಗಳಲ್ಲಿ ಹಿಂದೂ ದೇವಾಲಯಗಳನ್ನು ಭಾರಿ ಸಂಖ್ಯೆಯಲ್ಲಿ ನಿರ್ಮಿಸುವ ಕಾರ್ಯ ಪ್ರಾರಂಭಿಸಲಾಗಿದೆ ಎಂದು ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿ ಖಾತೆ ಸಚಿವರೂ ಆದ ಸತ್ಯನಾರಾಯಣ ಅವರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಪ್ರಾರಂಭಿಕವಾಗಿ 1,330 ದೇವಾಲಯಗಳ ನಿರ್ಮಾಣಕ್ಕೆ ತಲಾ ₹10 ಲಕ್ಷ ಅನುದಾನವನ್ನು ತಿರುಮಲ ತಿರುಪತಿ ದೇವಸ್ಥಾನದ ಶ್ರೀ ವಾಣಿ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿದೆ. ಇದರ ಜತೆಗೆ ಹೆಚ್ಚುವರಿಯಾಗಿ 1,465 ದೇವಸ್ಥಾನಗಳನ್ನು ನಿರ್ಮಿಸಲು ಪಟ್ಟಿಗೆ ಸೇರಿಸಲಾಗಿದೆ. ಅಲ್ಲದೆ, ಕೆಲವು ಶಾಸಕರ ಕೋರಿಕೆ ಮೇರೆಗೆ 200 ದೇಗುಲಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿ ಇಲಾಖೆಯು 978 ದೇವಾಲಯಗಳ ನಿರ್ಮಾಣ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ. ಕೆಲವು ದೇವಾಲಯಗಳ ಪುನರುಜ್ಜೀವನ ಮತ್ತು ದೇವಾಲಯಗಳಲ್ಲಿನ ಆಚರಣೆಗಳಿಗಾಗಿ ಹಂಚಿಕೆ ಮಾಡಿರುವ ₹270 ಕೋಟಿ ಅನುದಾನದಲ್ಲಿ ಈಗಾಗಲೇ ₹238 ಕೋಟಿ ಬಿಡುಗಡೆ ಮಾಡಲಾಗಿದೆ ಎಂದೂ ತಿಳಿಸಿದ್ದಾರೆ.

ಆರೆಸ್ಸೆಸ್ ವಾರ್ಷಿಕ ಸಭೆ 3ಂಗಳಾಂತ್ಯಕ್ಕೆ ನಿಗದಿ

ನವದೆಹಲಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ವಾರ್ಷಿಕ ಸಭೆ, ಅಖಿಲ ಭಾರತೀಯ ಪ್ರತಿನಿಧಿ ಸಭಾ (ಎಬಿಪಿಎಸ್) ಇದೇ ತಿಂಗಳು ಕೊನೆಯಲ್ಲಿ ಹರಿಯಾಣದ ಸಮಾಲ್ಖಾದಲ್ಲಿ ನಡೆಯಲಿದೆ ಎಂದು ಸಂಘದ ಮುಖ್ಯ ವಕ್ತಾರ ಸುನಿಲ್ ಅಂಬೇಕರ್ ತಿಳಿಸಿದ್ದಾರೆ.

ಸಭೆಯ ಕಾರ್ಯಸೂಚಿ ಸಂಬಂಧ ಇದೇ 12ರಿಂದ 14ರವರೆಗೆ ನಡೆಯುವ ಮೂರು ದಿನಗಳ ಸಭೆಯಲ್ಲಿ ಚರ್ಚಿಸಲಾಗುತ್ತದೆ. ಅಲ್ಲದೆ ಸಂಘದ ಕಳೆದ ವರ್ಷದ ಚಟುವಟಿಕೆಗಳ ಪರಾಮರ್ಶೆ, ಮುಂದಿನ ಯೋಜನೆಗಳು, ಮುಂದಿನ ವರ್ಷ ನಡೆಯುವ ಸಂಘದ ಶತಮಾನೋತ್ಸವದ ರೂಪರೇಷೆ ಕುರಿತು ಸರಣಿ ಚಿಂತನಾ ಗೋಷ್ಠಿಗಳು ನಿಗದಿಯಾಗಿವೆ.

ಮೂರು ದಿನಗಳ ಈ ಸಭೆಯಲ್ಲಿ ಕಾರ್ಯಕರ್ತರ ನಿರ್ಮಾಣ ಮತ್ತು ತರಬೇತಿ, ಶಿಕ್ಷಾ ವರ್ಗಗಳ (ವಾರ್ಷಿಕ ಶಿಬಿರಗಳು) ಯೋಜನೆ ಮತ್ತು ಸಂಘಟನೆ ಬಗ್ಗೆ ಚರ್ಚೆ ನಡೆಯಲಿದೆ. ದೇಶದ ಸದ್ಯದ ಪರಿಸ್ಥಿತಿಯ ಬಗ್ಗೆ ಚರ್ಚಿಸುವ ಜತೆ ಪ್ರಮುಖ ವಿಷಯಗಳ ಕುರಿತು ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ. ಈ ಸಭೆಯಲ್ಲಿ 1,400 ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಅಂಬೇಕರ್ ಹೇಳಿದ್ದಾರೆ.

ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಂಘದ ರಾಷ್ಟ್ರೀಯ ಕಾರ್ಯಕಾರಿ ಸದಸ್ಯರು, ರಾಜ್ಯ ಮಟ್ಟ ವಲಯ ಕಾರ್ಯಕಾರಿಗಳು, ಎಬಿಪಿಎಸ್ ಚುನಾಯಿತ ಪ್ರತಿನಿಧಿಗಳು, ವಿಭಾಗ ಪ್ರಚಾರಕರು ಸೇರಿ ಸಂಘದ ಸ್ಪೂರ್ತಿಯ ಸಂಘಟನೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಹಿಂದಿನ ಸಭೆಯಲ್ಲಿ ದೇಶದ ಪ್ರತಿ ಮಂಡಲದಲ್ಲಿ ಸಂಘದ ಅಸ್ತಿತ್ವ ಹೊಂದುವ ಮೂಲಕ ಒಂದು ಲಕ್ಷ ಶಾಖೆ ಸ್ಥಾಪಿಸುವ ಗುರಿಯನ್ನು ಮೂರು ವರ್ಷಗಳಲ್ಲಿ ಸಾಧಿಸುವ ಬಗ್ಗೆ ಪ್ರಮುಖ ಚರ್ಚೆ ನಡೆದಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ಚೆಟ್ಟಿ	33,699-42,699	ಕೆಂಪುಗೋಟು	22,199-34,299
ಸಕಲೇಶಪುರ		ಬಿಳಿಗೋಟು	20,419-35,199	ರಾಶಿ	42,119-45,866
ಕೋಕ	400-450	ಚಾಲಿ	33,209-36,799		
ಸಣ್ಣ ಮಧ್ಯಮ	550-600				
ರಾಶಿ	650-700				
ರಾಶಿ ಉತ್ತಮ	650-700				
ಜರಡಿ	800 - 900				
ಹಸಿರು ಮಧ್ಯಮ	1,250-1,300				
ಹಸಿರು ಸಾಧಾರಣ	900-1000				
ಹಸಿರು ಉತ್ತಮ	1,300-1,400				
ಹಸಿರು ಅತಿ ಉತ್ತಮ	1,500-1,550				
ಕಾಳು ಮಣಿ	-475				
ಅಡಿಕೆ ಶಿರಸಿ					

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮಾದರಿ	ಹಾಸನ ಪ್ಲಾಂಟೇಷನ್	ಚೆರ್ರಿ	ನ್ಯೂಯಾರ್ಕ್
ಎಪಿ	15,800	15,850	186.30 ಸೆಂಟ್ಸ್
ಎಸಿ	7,600	7,000	
ಆರ್‌ಪಿ	11,200	10,900	ಲಂಡನ್
ಆರ್‌ಸಿ	205	5,200	2,140ಡಾಲರ್

ಸಿಪಿಆರ್ ಪರವಾನಗಿ ಅಮಾನತು

ನವದೆಹಲಿ (ಪಿಟಿಐ): 'ಕಾನೂನು ಉಲ್ಲಂಘನೆ ಆರೋಪದ ಮೇಲೆ ಸೆಂಟರ್ ಫಾರ್ ಪಾಲಿಸಿ ರಿಸರ್ಚ್ (ಸಿಪಿಆರ್) ಸ್ವಯಂ ಸೇವಾ ಸಂಸ್ಥೆಗೆ (ಎನ್‌ಜಿಒ) ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅಡಿಯಲ್ಲಿ ನೀಡಲಾಗಿದ್ದ ಪರವಾನಗಿಯನ್ನು ಆರು ತಿಂಗಳ ಅವಧಿಗೆ ಕೇಂದ್ರ ಗೃಹ ಸಚಿವಾಲಯ ಅಮಾನತು ಮಾಡಿದೆ' ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಸಿಪಿಆರ್, ದೇಶದ ಪ್ರಮುಖ ವಿಚಾರ ವೇದಿಕೆ ಎಂದೇ ಗುರುತಿಸಿಕೊಂಡಿದೆ. ಪರವಾನಗಿ ಅಮಾನತು ಮಾಡಿರುವುದರಿಂದ ಇನ್ನು ಮುಂದೆ ಈ ಸಂಸ್ಥೆಯು ವಿದೇಶದಿಂದ ಯಾವುದೇ ರೀತಿಯ ದೇಣಿಗೆ ಸ್ವೀಕರಿಸಲು ಸಾಧ್ಯವಿಲ್ಲ. ಅರ್ಥಶಾಸ್ತ್ರಜ್ಞರಾಗಿದ್ದ ಪೈ ಪನಿಂಡಿಕರ್, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಯಾಗಿದ್ದ ದಿವಂಗತ ವೈ.ವಿ.ಚಂದ್ರಚೂಡ್ ಅವರು ಈ ಸಂಸ್ಥೆಯ ಸ್ಥಾಪಕರು.

ಜಿ–20: ಇಂದು ವಿದೇಶಾಂಗ ಸಚಿವರ ಮಹತ್ವದ ಸಭೆ • ಒಮ್ಮತ ಮೂಡಿಸಲು ಭಾರತ ಕಸರತ್ತು

ರಷ್ಯಾ–ಉಕ್ರೇನ್ ಕುರಿತ ಚರ್ಚೆಗೆ ಒತ್ತು

ನವದೆಹಲಿ (ಪಿಟಿಐ/ಎಎಫ್‌ಪಿ): ಭಾರತವು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಗುರುವಾರ ಇಲ್ಲಿ ವಿವಿಧ ರಾಷ್ಟ್ರಗಳ ವಿದೇಶಾಂಗ ವ್ಯವಹಾರಗಳ ಸಚಿವರ ಹಂತದಲ್ಲಿ ಮಹತ್ವದ ಸಭೆ ನಡೆಯಲಿದೆ. ರಷ್ಯಾ–ಉಕ್ರೇನ್ ನಡುವಣ ಸಂಘರ್ಷವು ಈ ಸಭೆಯ ಪ್ರಮುಖ ಚರ್ಚೆಯ ವಿಷಯವಾಗಿದೆ.

ಜಗತ್ತಿನ ದೊಡ್ಡ ಆರ್ಥಿಕತೆಯ ರಾಷ್ಟ್ರಗಳ ನಡುವೆ ಏಕತೆಯನ್ನು ಒಡಮೂಡಿಸುವ ಪ್ರಯತ್ನಕ್ಕೆ ಭಾರತ ಕೈಹಾಕಿದೆ. ಆದರೆ ರಷ್ಯಾ–ಉಕ್ರೇನ್ ನಡುವಣ ಬಿಕ್ಕಟ್ಟು ಆತಿಥೇಯರ ಈ ಪ್ರಯತ್ನಕ್ಕೆ ಅಡ್ಡಿ ಉಂಟುಮಾಡುವ ಸಾಧ್ಯತೆಯೇ ಹೆಚ್ಚಿದೆ.

ರಷ್ಯಾ ಹಾಗೂ ಚೀನಾದ ವಿದೇಶಾಂಗ ಸಚಿವರನ್ನು ಭೇಟಿಯಾಗುವ ಯಾವ ಆಲೋಚನೆಯೂ ಇಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಬುಧವಾರ ಸ್ಪಷ್ಟಪಡಿಸಿದ್ದಾರೆ.

‘ಉಕ್ರೇನ್ ಬಿಕ್ಕಟ್ಟನ್ನು ಶಮನಗೊಳಿಸುವ ಭರವಸೆಯನ್ನು ರಷ್ಯಾ ನೀಡಿದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಸದ್ಯಕ್ಕಂತೂ ಅಂತಹ ಯಾವ

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್‌.ಜೈಶಂಕರ್ (ಬಲ) ಅವರು ರಷ್ಯಾದ ವಿದೇಶಾಂಗ ಸಚಿವ ಸರ್ಗಿ ಲಾವರೊವ್ ಜೊತೆ ಮಾತುಕತೆ ನಡೆಸಿದ ಬಳಿಕ ಕೈಕುಲುಕಿದರು —ಪಿಟಿಐ ಚಿತ್ರ

ಲಕ್ಷಣಗಳೂ ಗೋಚರಿಸುತ್ತಿಲ್ಲ’ ಎಂದೂ ಅವರು ಹೇಳಿದ್ದಾರೆ.

‘ಸಭೆಯಲ್ಲಿ ಯಾವೆಲ್ಲಾ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ ಎಂಬುದನ್ನು ಈಗಲೇ ಹೇಳುವುದು ಕಷ್ಟ. ಸಭೆಯಲ್ಲಿ ಪಾಲ್ಗೊಳ್ಳಲಿರುವ ಬಹುತೇಕ ಸಚಿವರು ರಷ್ಯಾ ಮತ್ತು ಉಕ್ರೇನ್ ನಡುವಣ ಸಂಘರ್ಷದ ಕುರಿತ ಚರ್ಚೆಗೆ ಬಿಗಿಪಟ್ಟು ಹಿಡಿಯುವುದು ಸಹಜ. ಈ ಬಿಕ್ಕಟ್ಟಿನಿಂದಾಗಿ ಆಹಾರ, ಇಂಧನ, ರಸಗೊಬ್ಬರದ ಭದ್ರತೆಯ ಮೇಲೆ ಉಂಟಾಗಿರುವ ಪ್ರತಿಕೂಲ ಪರಿಣಾಮದ ಕುರಿತೂ ಚರ್ಚೆ ನಡೆಯುವ ನಿರೀಕ್ಷೆ ಇದೆ’ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ತಿಳಿಸಿದ್ದಾರೆ.

‘ಸದ್ಯ ಜಗತ್ತು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತ ಚರ್ಚೆಗೂ ವಿದೇಶಾಂಗ ಸಚಿವರು ಆದ್ಯತೆ ನೀಡಲಿದ್ದಾರೆ ಎಂದು ನಾವು ಭಾವಿಸಿದ್ದೇವೆ’ ಎಂದಿದ್ದಾರೆ.

ಜೈಶಂಕರ್ ದ್ವಿಪಕ್ಷೀಯ ಮಾತುಕತೆ: ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್‌.ಜೈಶಂಕರ್ ಅವರು ಜಿ–20 ಸಭೆಯಲ್ಲಿ ಪಾಲ್ಗೊಳ್ಳಲು ಬಂದಿರುವ ಬ್ರಿಟನ್, ರಷ್ಯಾ, ಮೆಕ್ಸಿಕೊ, ದಕ್ಷಿಣ ಆಫ್ರಿಕಾ, ನೆದರ್ಲೆಂಡ್ಸ್, ಅರ್ಜೆಂಟೀನಾ, ನೈಜೀರಿಯಾ ದೇಶಗಳ ವಿದೇಶಾಂಗ ಸಚಿವರ ಜೊತೆ ಬುಧವಾರ ಪ್ರತ್ಯೇಕವಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಜೈಶಂಕರ್ ಅವರು ಗುರುವಾರ ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಜೊತೆ ಮಾತುಕತೆ ನಡೆಸುವ ನಿರೀಕ್ಷೆ ಇದೆ.

ಭಾರತದ ಸಂಬಂಧಕ್ಕೆ ಮಹತ್ವ: ಚೀನಾ

ಬೀಜಿಂಗ್ (ಪಿಟಿಐ): ‘ಭಾರತದೊಂದಿಗಿನ ಬಾಂಧವ್ಯಕ್ಕೆ ಚೀನಾ ಮಹತ್ವ ನೀಡುತ್ತದೆ. ಉಭಯ ದೇಶಗಳು ಹಾಗೂ ನಾಗರಿಕರ ಹಿತದೃಷ್ಟಿಯಿಂದ ಉತ್ತಮ ಸಂಬಂಧದ ಅಗತ್ಯ ಇದೆ’ ಎಂದು ಚೀನಾ ಬುಧವಾರ ಹೇಳಿದೆ.

ಜಿ–20 ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡಿರುವ ವಿದೇಶಾಂಗ ಸಚಿವ ಕಿನ್ ಗಾಂಗ್ ಅವರು, ಸಚಿವ ಜೈಶಂಕರ್ ಅವರೊಂದಿಗೆ ಗುರುವಾರ ಪ್ರತ್ಯೇಕ ಸಭೆ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಚೀನಾದ ಈ ಹೇಳಿಕೆಗೆ ಮಹತ್ವದ ಬಂದಿದೆ.

‘ಭಾರತ ಜೊತೆಗಿನ ಸಂಬಂಧವನ್ನು ಸುಧಾರಿಸುವುದು ಗಾಂಗ್ ಅವರ ಭೇಟಿಯ ಉದ್ದೇಶಗಳಲ್ಲೊಂದು’ ಎಂದು ಹಾಂಗ್‌ಕಾಂಗ್ ಮೂಲದ ‘ಸೌತ್ ಚೀನಾ ಮಾರ್ನಿಂಗ್ ಪೋಸ್ಟ್’ ದೈನಿಕ ವರದಿ ಮಾಡಿದೆ.

ಪೂರ್ವ ಲಡಾಖ್ ಗಡಿಯಲ್ಲಿ ಸಂಘರ್ಷ ಆರಂಭವಾದ ನಂತರ 17 ಸುತ್ತು ಮಾತುಕತೆ ನಡೆದಿದ್ದರೂ, ಭಾರತ ಮತ್ತು ಚೀನಾ ನಡುವಿನ ಸಂಬಂಧ ಸುಧಾರಿಸಿಲ್ಲ. ಈ ಕಾರಣದಿಂದಾಗಿಯೂ ಗಾಂಗ್ ಹಾಗೂ ಜೈಶಂಕರ್ ಭೇಟಿಗೆ ಮಹತ್ವದ ಬಂದಿದೆ ಎಂದು ಮೂಲಗಳು ಹೇಳಿವೆ.

2021–22ನೇ ಸಾಲಿನ ಎಡಿಆರ್ ವರದಿಯಲ್ಲಿ ಉಲ್ಲೇಖ

ದೇಣಿಗೆ: ಬಿಜೆಪಿ ಶ್ರೀಮಂತ ಪಕ್ಷ ದ್ವಿತೀಯ ಸ್ಥಾನದಲ್ಲಿ ಟಿಎಂಸಿ

ನವದೆಹಲಿ (ಪಿಟಿಐ): ‘ದೇಶದ ಎಂಟು ರಾಷ್ಟ್ರೀಯ ಪಕ್ಷಗಳು 2021–22ನೇ ಹಣಕಾಸು ವರ್ಷದ ತಮ್ಮ ಆದಾಯವನ್ನು ಘೋಷಿಸಿಕೊಂಡಿವೆ. ಈ ಹಣಕಾಸು ಅವಧಿಯಲ್ಲಿ ಎಂಟೂ ಪಕ್ಷಗಳಿಗೆ ಒಟ್ಟು ₹3,289.34 ಕೋಟಿ ಆದಾಯ ಬಂದಿದೆ. ಈ ಮೊತ್ತದ ಅರ್ಧದಷ್ಟು ಆದಾಯ ಕೇವಲ ಬಿಜೆಪಿ ಪಕ್ಷಕ್ಕೆ ಸಂದಿದೆ’ ಎಂದು ಅಸೋಷಿಯೇಷನ್ ಫಾರ್ ಡೆಮೊಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಬುಧವಾರ ಹೇಳಿದೆ.

ಬಿಜೆಪಿ, ಕಾಂಗ್ರೆಸ್, ಟಿಎಂಸಿ, ಬಿಎಸ್‌ಪಿ, ಎನ್‌ಸಿಪಿ, ಸಿಪಿಐ, ಸಿಪಿಎಂ ಮತ್ತು ನ್ಯಾಷನಲ್ ಪೀಪಲ್ಸ್ ಪಕ್ಷ ತಮ್ಮ ಆದಾಯದ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿವೆ. ಈ ಮಾಹಿತಿಗಳನ್ನು ಒಟ್ಟುಗೂಡಿಸಿ ಎಡಿಆರ್ ವರದಿ ಬಿಡುಗಡೆ ಮಾಡಿದೆ.

ಪಕ್ಷಗಳ ಆದಾಯ ಕುರಿತ ಮಾಹಿತಿ, 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2021–22ರಲ್ಲಿ ಎಷ್ಟು ಏರಿಕೆಯಾಗಿದೆ, ಚುನಾವಣಾ ಬಾಂಡ್‌ಗಳ ಮೂಲಕ ಪಕ್ಷಗಳು ಎಷ್ಟು ದೇಣಿಗೆ ಸಂಗ್ರಹಿಸಿವೆ ಎಂಬ ಮಾಹಿತಿಗಳು ಈ ವರದಿಯಲ್ಲಿದೆ.

- 2021–22ರಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಒಟ್ಟು ₹2,673.05 ದೇಣಿಗೆ ಪಡೆದುಕೊಂಡಿದ್ದವು. ಇದರಲ್ಲಿ ಶೇ 67.79ರಷ್ಟು ಮೊತ್ತದ ಹಣವು ರಾಷ್ಟ್ರೀಯ ಪಕ್ಷಗಳಿಗೆ ಸಂದಾಯವಾಗಿದೆ ಎಂದು ಎಡಿಆರ್ ಸಲ್ಲಿಸಿದ್ದ ಆರ್‌ಟಿಐ ಅರ್ಜಿಗೆ ನೀಡಿದ ಉತ್ತರದಲ್ಲಿ ತಿಳಿಸಲಾಗಿದೆ.
- ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ನೀಡಿದರೆ, ದೇಣಿಗೆ ನೀಡಿದ ವ್ಯಕ್ತಿಯ ಮಾಹಿತಿ ಸಿಗುವುದಿಲ್ಲ. ಈ ಕಾರಣಕ್ಕಾಗಿಯೇ 2020–21 ಹಾಗೂ 2021–22ರಲ್ಲೂ ಚುನಾವಣಾ ಬಾಂಡ್ ಮೂಲಕವೇ ದೇಣಿಗೆ ಪಡೆದುಕೊಳ್ಳುವುದರ ಸಂಖ್ಯೆ ಹೆಚ್ಚಾಗಿದೆ ಎಂದು ಎಡಿಆರ್ ಹೇಳಿದೆ.

ಹೆಚ್ಚು ಆದಾಯ ಇರುವ ಪಕ್ಷಗಳು (₹ ಕೋಟಿಗಳಲ್ಲಿ)



ಪಕ್ಷಗಳ ಆದಾಯದ ಹೆಚ್ಚಳದ ವಿವರ (₹ಕೋಟಿಗಳಲ್ಲಿ)

ಪಕ್ಷ	2020–21	2021–22
ಬಿಜೆಪಿ	752.33	1917.12
ಟಿಎಂಸಿ	74.41	545.74
ಕಾಂಗ್ರೆಸ್	285.76	541.27

ಚುನಾವಣಾ ಬಾಂಡ್‌ಗಳ ಮೂಲಕ ಪಕ್ಷಗಳು ಪಡೆದ ದೇಣಿಗೆ (₹ಕೋಟಿಗಳಲ್ಲಿ)



ಪಾತಕಿ ಅತೀಕ್ ಆಪ್ತನ ಮನೆ ನೆಲಸಮ

ಉಮೇಶ್ ಪಾಲ್ ಹತ್ಯೆಗೂ ಮುನ್ನ ಶೂಟರ್‌ಗಳಿಗೆ ಮನೆಯಲ್ಲಿ ಆಶ್ರಯ ನೀಡಿದ್ದ ಆರೋಪ

ಪ್ರಯಾಗ್‌ರಾಜ್ (ಉತ್ತರ ಪ್ರದೇಶ) (ಪಿಟಿಐ): ಉಮೇಶ್ ಪಾಲ್ ಕೊಲೆ ಪ್ರಕರಣದ ಆರೋಪಿಯೂ ಆಗಿರುವ ಸಮಾಜವಾದಿ ಪಕ್ಷದ ನಾಯಕ, ಮಾಜಿ ಸಂಸದ ಮತ್ತು ಪಾತಕಿ ಅತೀಕ್ ಅಹ್ಮದ್‌ನ ಸಹಚರರ ವಿರುದ್ಧ ಕ್ರಮ ಕೈಗೊಂಡಿರುವ ಪ್ರಯಾಗ್ ರಾಜ್ ಅಭಿವೃದ್ಧಿ ಪ್ರಾಧಿಕಾರ ಬುಧವಾರ ಅತೀಕ್ ನಿಕಟವರ್ತಿ ಜಾಫರ್ ಅಹ್ಮದ್ ಎಂಬುವರ ಮನೆಯನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಿದೆ.

ಅತೀಕ್ ಅವರ ಪತ್ನಿ ಶೈಸ್ತಾ ಪರ್ವೀನ್ ಈ ಹಿಂದೆ ಇದೇ ಮನೆಯಲ್ಲಿ ವಾಸಿಸುತ್ತಿದ್ದರು ಎಂದು ಪ್ರಯಾಗ್‌ರಾಜ್ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಅಜಿತ್ ಸಿಂಗ್ ತಿಳಿಸಿದ್ದಾರೆ. ಅಲ್ಲದೆ ಉಮೇಶ್ ಪಾಲ್ ಕೊಲೆಗೂ ಕೆಲ ದಿನಗಳ ಮುನ್ನ ಶೂಟರ್‌ಗಳಿಗೆ ಈ ಮನೆಯಲ್ಲಿ ಆಶ್ರಯ ನೀಡಲಾಗಿತ್ತು ಎಂಬ ಆರೋಪವೂ ಇದೆ.

ಕಳೆದ ವಾರ ಧೂಮನ್‌ಗಂಜ್ ಪೊಲೀಸ್ ಠಾಣೆ ವ್ಯಾಪ್ತಿಯ ಜೈತಿಪುರದಲ್ಲಿ ಉಮೇಶ್ ಪಾಲ್ ಮತ್ತು ಅವರ ಭದ್ರತಾ ಸಿಬ್ಬಂದಿಯನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಬಿಎಸ್‌ಪಿ ಶಾಸಕ ರಾಜು ಪಾಲ್ ಕೊಲೆ ಪ್ರಕರಣದಲ್ಲಿ ಪಾಲ್ ಪ್ರಮುಖ ಸಾಕ್ಷಿಯಾಗಿದ್ದರು.

ಉಮೇಶ್ ಪಾಲ್ ಕೊಲೆ ಪ್ರಕರಣದ ಆರೋಪಿ ಅರ್ಬಾಜ್‌ನನ್ನು ಸೋಮವಾರ ಪೊಲೀಸರು ಎನ್‌ಕೌಂಟರ್‌ನಲ್ಲಿ ಕೊಂದಿದ್ದಾರೆ. ಈ ವೇಳೆ ಧೂಮನ್‌ಗಂಜ್ ಠಾಣೆಯ ಠಾಣಾಧಿಕಾರಿ ರಾಜೇಶ್ ಮೌರ್ಯ ಅವರೂ ಗಾಯಗೊಂಡಿದ್ದಾರೆ.

ಪಾಲ್ ಅವರ ಪತ್ನಿ ಜಯಾ ಪಾಲ್ ಅವರ ದೂರು ಆಧರಿಸಿ ಪಾತಕಿ ಅತೀಕ್ ಅಹ್ಮದ್, ಅವರ ಸಹೋದರ ಅಶ್ರಫ್, ಪತ್ನಿ ಶೈಸ್ತಾ ಪರ್ವಿನ್, ಇಬ್ಬರು ಪುತ್ರರು, ಸಹಾಯಕರಾದ ಗುಡ್ಡು ಮುಸ್ಲಿಂ ಮತ್ತು ಗುಲಾಮ್ ಸೇರಿದಂತೆ ಇತರ ಒಂಬತ್ತು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅತೀಕ್ ಪ್ರಸ್ತುತ ಗುಜರಾತ್‌ನ ಅಹಮದಾಬಾದ್‌ನ ಕಾರಾಗೃಹದಲ್ಲಿ ಬಂಧನದಲ್ಲಿದ್ದಾರೆ.

ಪ್ರಯಾಗ್ ರಾಜ್ ನ ಚಕಿಯಾ ಪ್ರದೇಶದಲ್ಲಿರುವ ಉಮೇಶ್ ಪಾಲ್ ಕೊಲೆ ಪ್ರಕರಣದ ಆರೋಪಿ ಮನೆಯನ್ನು ಪ್ರಯಾಗ್ ರಾಜ್ ಅಭಿವೃದ್ಧಿ ಪ್ರಾಧಿಕಾರದ ಬುಲ್ಡೋಜರ್ ಬುಧವಾರ ನೆಲಸಮಗೊಳಿಸಿವೆ ಚಿತ್ರ–ಪಿಟಿಐ

‘ಅತೀಕ್ ಎನ್‌ಕೌಂಟರ್ ಸಾಧ್ಯತೆ’

‘ಉತ್ತರ ಪ್ರದೇಶದ ಏಳು ಪೊಲೀಸರ ಕೊಂದ ಆರೋಪ ಎದುರಿಸುತ್ತಿದ್ದ ಪಾತಕಿ ವಿಕಾಸ್ ದುಬೆ ಮೂರು ವರ್ಷಗಳ ಹಿಂದೆ ಪೊಲೀಸ್ ಎನ್‌ಕೌಂಟರ್‌ನಲ್ಲಿ ಬಲಿಯಾಗಿದ್ದರು. ದುಬೆಯನ್ನು ಕರೆದೊಯ್ಯುತ್ತಿದ್ದ ಕಾರು ಕಾನ್ಪುರದ ಹೊರವಲಯದಲ್ಲಿ ಮುಗುಚಿ ಕೊಂಡಿತು. ಈ ವೇಳೆ ಆತ ತಪ್ಪಿಸಿಕೊಳ್ಳಲು ಮುಂದಾದಾಗ ನಡೆದ ಎನ್‌ಕೌಂಟರ್‌ನಲ್ಲಿ ಹತನಾಗಿದ್ದನು. ಪಾತಕಿ, ಮಾಜಿ ಸಂಸದ ಅತೀಕ್ ಅಹ್ಮದ್ ಅವರಿಗೂ ಅದೇ ರೀತಿಯ ಭವಿಷ್ಯ ಎದುರಾದರೂ ಆಶ್ಚರ್ಯವಿಲ್ಲ’ ಎಂದು ಬಿಜೆಪಿ ಸಂಸದ ಸುಬ್ರತ್ ಪಾಠಕ್ ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶದ ಸಚಿವ ಜಿ.ಪಿ.ಎಸ್. ರಾಥೋರ್ ಅವರೂ ಇದೇ ರೀತಿಯ ಸುಳಿವನ್ನು ನೀಡಿದ್ದಾರೆ. ಈ ರೀತಿಯ ಅಪರಾಧಿಗಳ ವಾಹನ ಮುಗುಚುವ ಸಾಧ್ಯತೆ ಇದೆ ಎಂದಿದ್ದಾರೆ.

ರಕ್ಷಣೆ ಕೋರಿ ‘ಸುಪ್ರೀಂ’ಗೆ ಮನವಿ

ನವದೆಹಲಿ (ಪಿಟಿಐ): ‘ಉಮೇಶ್ ಪಾಲ್ ಹತ್ಯೆ ಪ್ರಕರಣದಲ್ಲಿ ನನ್ನನ್ನು ಮತ್ತು ನನ್ನ ಕುಟುಂಬದವರನ್ನು ತಪ್ಪಾಗಿ ಸಿಲುಕಿಸಲಾಗಿದೆ ಮತ್ತು ನಕಲಿ ಎನ್‌ಕೌಂಟರ್ ಮೂಲಕ ಕೊಲ್ಲುವ ಸಾಧ್ಯತೆ’ ಎಂದು ಆರೋಪಿಸಿರುವ ಮಾಜಿ ಸಂಸದ ಅತೀಕ್ ಅಹ್ಮದ್, ಸೂಕ್ತ ರಕ್ಷಣೆ ಒದಗಿಸುವಂತೆ ಕೋರಿ ಸುಪ್ರೀಂಕೋರ್ಟ್‌ಗೆ ಬುಧವಾರ ಮನವಿ ಸಲ್ಲಿಸಿದ್ದಾರೆ.

‘ನನ್ನನ್ನು ನಾಶಪಡಿಸುವುದಾಗಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ವಿಧಾನಸಭೆಯಲ್ಲಿ ಹೇಳಿಕೆ ನೀಡಿದ್ದಾರೆ. ಆದ್ದರಿಂದ ನನ್ನ ಮತ್ತು ನನ್ನ ಕುಟುಂಬದ ಸದಸ್ಯರ ಜೀವಕ್ಕೆ ಕುತ್ತು ಇದೆ’ ಎಂದು ಅವರು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ‘ಉತ್ತರ ಪ್ರದೇಶದ ಪೊಲೀಸರು ನನ್ನನ್ನು ವಶಕ್ಕೆ ಪಡೆಯಲು ಕೋರುವ ಸಾಧ್ಯತೆ ಇದೆ. ಅಹಮದಾಬಾದ್‌ನಿಂದ ಪ್ರಯಾಗ್‌ರಾಜ್‌ಗೆ ಕರೆದೊಯ್ಯುವ ವೇಳೆ ಅವರು ನನ್ನನ್ನು ಕೊಲ್ಲುವ ಸಾಧ್ಯತೆ ಇದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಅದಾನಿ ಸಮೂಹದಲ್ಲಿ ಹೂಡಿಕೆ

ಎಸ್‌ಬಿಐ, ಎಲ್‌ಐಸಿಗೆ ಬಲವಂತ: ರಾಹುಲ್ ಟೀಕೆ

ನವದೆಹಲಿ (ಪಿಟಿಐ): ‘ಅದಾನಿ ಸಮೂಹವನ್ನು ರಕ್ಷಿಸುವುದಕ್ಕಾಗಿ ಅದರಲ್ಲಿ ಹಣ ಹೂಡಿಕೆ ಮಾಡುವಂತೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಾಗೂ ಭಾರತೀಯ ಜೀವ ವಿಮಾ ನಿಗಮವನ್ನು (ಎಲ್‌ಐಸಿ) ಬಲವಂತಪಡಿಸಲಾಗಿತ್ತು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ಮಿತ್ರಕಾಲ್–2’ ಸರಣಿಯ ಹಿನ್ನೆಲೆಯಲ್ಲಿ ಬುಧವಾರ ವಿಡಿಯೊವೊಂದನ್ನು ಬಿಡುಗಡೆ ಮಾಡಿರುವ ಅವರು, ‘ಅದಾನಿ ಸಮೂಹದ ಷೇರು ಮೌಲ್ಯ ಕುಸಿತದಿಂದಾಗಿ ಎಲ್‌ಐಸಿಗೆ ಪ್ರತಿ ದಿನ ಸುಮಾರು ₹1 ಸಾವಿರ ಕೋಟಿ ಮೊತ್ತ ನಷ್ಟವಾಗುತ್ತಿದೆ. ಉದ್ಯಮಿ ಗೌತಮ್ ಅದಾನಿಯ ಸಮೂಹದಲ್ಲಿ ಹೂಡಿಕೆ ಮಾಡುವಂತೆ ಎಸ್‌ಬಿಐ ಹಾಗೂ ಎಲ್‌ಐಸಿಯನ್ನು ಬಲವಂತಪಡಿಸಿದ್ದು ಯಾರು ಎಂಬ ಪ್ರಶ್ನೆಯನ್ನು ಈ ದೇಶದ ಜನರು ಕೇಳುತ್ತಿದ್ದಾರೆ’ ಎಂದಿದ್ದಾರೆ.

‘ಅದಾನಿ ಸಮೂಹದಲ್ಲಿ ಹೂಡಿಕೆ ಮಾಡುವುದು ಅಪಾಯಕಾರಿ ಎಂಬುದು ಗೊತ್ತಿದ್ದರೂ ಕೂಡ ಎಲ್‌ಐಸಿಯು ಕೋಟ್ಯಂತರ ಮೊತ್ತವನ್ನು ಹೂಡಿಕೆ ಮಾಡಿದ್ದು ಏಕೆ? ಈ ಪ್ರಶ್ನೆಗೆ ಉತ್ತರ ದೊರೆತ ಬಳಿಕವೇ ಈ ದೇಶಕ್ಕೆ ಆಗಿರುವ ನಷ್ಟ ಎಷ್ಟು ಎಂಬುದು ಗೊತ್ತಾಗಲಿದೆ’ ಎಂದು ಹೇಳಿದ್ದಾರೆ.

‘ನೀವು ನಿಮ್ಮ ಮಕ್ಕಳ ಭವಿಷ್ಯವನ್ನು ಅಪಾಯಕ್ಕೆ ದೂಡಲು ಬಯಸುತ್ತೀರಾ? ಅದಾನಿ ಸಮೂಹವನ್ನು ರಕ್ಷಿಸುವುದಕ್ಕಾಗಿ ನೀವು ಕಷ್ಟಪಟ್ಟು ದುಡಿದಿದ್ದ ಹಣವನ್ನು ಅದರಲ್ಲಿ ಹೂಡಿಕೆ ಮಾಡಿದ್ದು ಏಕೆ? ಖಾಸಗಿ ಸಂಸ್ಥೆಗಳು ಅದಾನಿ ಸಮೂಹದಲ್ಲಿ ಏಕೆ ಹಣ ಹೂಡಿಲ್ಲ? ಜನರು ಎಲ್‌ಐಸಿಯಲ್ಲಿ ಹೂಡಿರುವ ಹಣವು ಸುರಕ್ಷಿತವಾಗಿದೆಯೇ ಇಲ್ಲವೇ ಎಂಬುದನ್ನು ಖಾತರಿಪಡಿಸುವುದು ಪ್ರಧಾನಿಯವರ ಕರ್ತವ್ಯ ಅಲ್ಲವೇ’ ಎಂದು ಅವರು ನಾಗರಿಕರನ್ನು ಪ್ರಶ್ನಿಸಿದ್ದಾರೆ.

‘ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿದ್ದರಿಂದಾಗಿ 2023ರ ಜನವರಿ 24ರಿಂದ ಎಲ್‌ಐಸಿಗೆ ಆಗಿರುವ ನಷ್ಟ ಎಷ್ಟು ಎಂಬ ಸತ್ಯವನ್ನು ಪ್ರಧಾನಿಯವರು ಬಹಿರಂಗಪಡಿಸಲಿದ್ದಾರೆಯೇ? ಅದಾನಿ ಸಮೂಹವು ಬಹುಕಾಲದಿಂದಲೂ ಹಣ ಅಕ್ರಮ ವರ್ಗಾವಣೆ ಆರೋಪ ಎದುರಿಸುತ್ತಿದೆ. ಆ ಸಮೂಹದ ಶೆಲ್ ಕಂಪನಿಗಳ ಹಿಂದೆ ಇರುವವರು ಯಾರು’ ಎಂದೂ ರಾಹುಲ್ ಅವರು ಕೇಳಿದ್ದಾರೆ.

ರಾಹುಲ್‌ಗೆ ಮನೆ ಕೊಡಿ: ಬಿಜೆಪಿ ವ್ಯಂಗ್ಯ

ತಿರುವನಂತಪುರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ತಮಗೆ ಮನೆ ಇಲ್ಲವೆಂದು ಇತ್ತೀಚೆಗೆ ನೀಡಿದ ಹೇಳಿಕೆ ಕುರಿತು ವ್ಯಂಗ್ಯ ಮಾಡಿರುವ ಬಿಜೆಪಿ, ರಾಹುಲ್ ಅವರಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ವಸತಿ ನೀಡಬೇಕು ಎಂದು ಸ್ಥಳೀಯಾಡಳಿತಕ್ಕೆ ಮನವಿ ಮಾಡಿದೆ.

ರಾಹುಲ್ ಗಾಂಧಿ ಪ್ರತಿನಿಧಿಸುವ ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಬಿಜೆಪಿ ಮುಖಂಡರ ನಿಯೋಗವು, ಪಕ್ಷದ ವಯನಾಡು ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪಿ. ಮಧು ನೇತೃತ್ವದಲ್ಲಿ ಈ ಸಂಬಂಧ ಕಲ್ಪೆಟ್ಟಾ ಪುರಸಭೆಗೆ ಮನವಿ ಸಲ್ಲಿಸಿದೆ. ‘ಅಪಾರ ಸಂಪತ್ತನ್ನು ಹೊಂದಿದ್ದರೂ ರಾಹುಲ್ ಗಾಂಧಿ ಅವರು ತನಗೆ ಮನೆ ಇಲ್ಲವೆಂದು ಹೇಳಿಕೊಂಡಿರುವುದು ಹಾಸ್ಯಾಸ್ಪದ’ ಎಂದು ಕೆ.ಪಿ. ಮಧು ಟೀಕಿಸಿದ್ದಾರೆ. ಕಾಂಗ್ರೆಸ್‌ನ ರಾಯಪುರ ಸಮಾವೇಶದಲ್ಲಿ ರಾಹುಲ್ ಗಾಂಧಿ ‘ನನಗೀಗ 52 ವಯಸ್ಸು, ಸ್ವಂತ ಮನೆಯೇ ಇಲ್ಲ’ವೆಂದು ನೀಡಿದ್ದ ಹೇಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ನೆಟ್ಟಿಗರಿಂದ ವ್ಯಾಪಕ ಟ್ರೋಲ್‌ಗೆ ಗುರಿಯಾಗಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಘೋಷಿಸಿಕೊಂಡಿರುವ ₹15 ಕೋಟಿ ಮೌಲ್ಯದ ಆಸ್ತಿಯ ಪ್ರಮಾಣಪತ್ರವನ್ನು ಜಾಲತಾಣಿಗರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. 2014ರ ಚುನಾವಣೆಯಲ್ಲಿ ರಾಹುಲ್, ₹9.4 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದಾಗಿ ಅಫಿಡವಿಟ್ ಸಲ್ಲಿಸಿದ್ದರು.

ಕೇರಳದ ಸಿಪಿಎಂ ಸರ್ಕಾರ ನಿರ್ವಸತಿಗರಿಗೆ ವಸತಿ ಕಲ್ಪಿಸುವ ‘ಲೈಫ್ ಮಿಷನ್’ ಯೋಜನೆಯಲ್ಲಿ ರಾಹುಲ್ ಗಾಂಧಿಯವರಿಗೆ ಮನೆ ನೀಡಲು ಬಯಸಿದ್ದರೂ ತಮ್ಮ ಬಳಿ ಇರುವ ಅಪಾರ ಸಂಪತ್ತಿನಿಂದಾಗಿ ರಾಹುಲ್ ಅವರು ಫಲಾನುಭವಿಯಾಗಲು ಅನರ್ಹರಾದರು ಎಂದು ಟ್ರೋಲಿಗರು ಅಪಹಾಸ್ಯ ಮಾಡಿದ್ದಾರೆ.

ಮೇಘಾಲಯ, ತ್ರಿಪುರಾ, ನಾಗಾಲ್ಯಾಂಡ್‌ನಲ್ಲಿ ಇಂದು ಫಲಿತಾಂಶ

ಅಗರ್ತಲಾ (ಪಿಟಿಐ): ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡ್ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶ ಗುರುವಾರ ಪ್ರಕಟವಾಗಲಿದೆ. ಬೆಳಿಗ್ಗೆ 8ರಿಂದ ಮತ ಎಣಿಕೆ ಆರಂಭವಾಗಲಿದೆ ಎಂದು ಭಾರತೀಯ ಚುನಾವಣಾ ಆಯೋಗ ತಿಳಿಸಿದೆ.

ಮತದಾರರ ಒಲವು ಯಾವ ಕಡೆಗಿದೆ ಎಂದು ಮಧ್ಯಾಹ್ನದ ವೇಳೆಗೆ ಸ್ಪಷ್ಟವಾಗಲಿದೆ. ತ್ರಿಪುರಾದ 60 ವಿಧಾನ ಸಭಾ ಕ್ಷೇತ್ರಗಳಿಗೆ ಫೆ.16ರಂದು ಚುನಾವಣೆ ನಡೆದಿದ್ದು, ಶೇ 89.98ರಷ್ಟು ಮತದಾನವಾಗಿತ್ತು. ನಾಗಾಲ್ಯಾಂಡ್, ಮೇಘಾಲಯದ ತಲಾ 59 ಕ್ಷೇತ್ರಗಳಿಗೆ ಫೆ.27ರಂದು ನಡೆದ ಚುನಾವಣೆಯಲ್ಲಿ ಕ್ರಮವಾಗಿ 84.66 ಮತ್ತು 76.66ರಷ್ಟು ಮತದಾನವಾಗಿತ್ತು.

ಕಾಲೇಜು ಆಡಳಿತದ ವಿರುದ್ಧ ಕಿರುಕುಳ ಆರೋಪ

ಹೈದರಾಬಾದ್: ವಿದ್ಯಾರ್ಥಿ ಆತ್ಮಹತ್ಯೆ

ಹೈದರಾಬಾದ್ (ಪಿಟಿಐ): ‘ಇಲ್ಲಿಗೆ ಸಮೀಪದ ನರ್ಸಿಂಗಿಯಲ್ಲಿರುವ ಖಾಸಗಿ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಾಲೇಜು ಆಡಳಿತ ಹಾಗೂ ಕೆಲ ಬೋಧಕ ಸಿಬ್ಬಂದಿಯ ಕಿರುಕುಳದಿಂದ ಬೇಸತ್ತು ಆತ ಸಾವಿಗೀಡಾಗಿರುವುದಾಗಿ ಕುಟುಂಬದವರು ದೂರಿದ್ದಾರೆ’ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

‘ವಿದ್ಯಾರ್ಥಿಯು ಮೊದಲ ವರ್ಷದ ಇಂಟರ್‌ಮೀಡಿಯೆಟ್‌ನಲ್ಲಿ ಓದುತ್ತಿದ್ದ. ಮಂಗಳವಾರ ರಾತ್ರಿ ತರಗತಿ ಕೊಠಡಿಯಲ್ಲಿ ಆತ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದ. ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ವಿದ್ಯಾರ್ಥಿಗೆ ಮಾನಸಿಕ ಹಿಂಸೆ ನೀಡಲಾಗಿತ್ತು. ಆತನ ಸಾವಿಗೆ ಕಾಲೇಜು ಆಡಳಿತ ಮಂಡಳಿಯೇ ಹೊಣೆ’ ಎಂದು ಆರೋಪಿಸಿ ವಿದ್ಯಾರ್ಥಿಯ ಕುಟುಂಬದ ಸದಸ್ಯರು, ಸಂಬಂಧಿಕರು ಹಾಗೂ ಕೆಲ ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದ್ದಾರೆ.

‘ಕಾಲೇಜಿನ ಆವರಣದಲ್ಲಿರುವ ವಸತಿ ನಿಲಯದಲ್ಲಿ ಮಂಗಳವಾರ ಸಂಜೆ ಮಗನನ್ನು ಭೇಟಿಯಾಗಿ ಮಾತನಾಡಿದ್ದೆ. ಆತ ಚರ್ಮದ ಕಾಯಿಲೆಯಿಂದ ಬಳಲುತ್ತಿದ್ದ. ಹೀಗಾಗಿ ಔಷಧವನ್ನೂ ಕೊಟ್ಟು ಬಂದಿದ್ದೆ’ ಎಂದು ವಿದ್ಯಾರ್ಥಿಯ ತಂದೆಯು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ನನ್ನ ಮಗ ಚೆನ್ನಾಗಿ ಓದುತ್ತಿಲ್ಲ ಎಂದು ಹೇಳಿ ವಸತಿ ನಿಲಯದ ವಾರ್ಡನ್ ಹಾಗೂ ಇಬ್ಬರು ಬೋಧಕ ಸಿಬ್ಬಂದಿ ಆತನಿಗೆ ಥಳಿಸಿದ್ದಾರೆ. ಮಂಗಳವಾರ ರಾತ್ರಿ ಆತ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ತಿಳಿಯಿತು. ಕೂಡಲೇ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಇತರರ ವಿರುದ್ಧ ದೂರು ನೀಡಿದ್ದೆ’ ಎಂದು ಅವರು ಹೇಳಿದ್ದಾರೆ.

‘ಮೃತ ವಿದ್ಯಾರ್ಥಿಯ ತಂದೆ ಕೊಟ್ಟಿರುವ ದೂರಿನ ಆಧಾರದಲ್ಲಿ ಆರೋಪಿಗಳ ವಿರುದ್ಧ ಸಂಬಂಧಪಟ್ಟ ಐಪಿಸಿ ಕಲಂಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ತೆಲಂಗಾಣದಲ್ಲಿ ಕಳೆದ ಕೆಲವು ದಿನಗಳಲ್ಲಿ ವಿವಿಧ ಕಾರಣಗಳಿಗಾಗಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಮೂರನೇ ಪ್ರಕರಣ ಇದಾಗಿದೆ. ವಾರಂಗಲ್ ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಂಡಿದ್ದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಕೇಜ್ರಿವಾಲ್

ದೆಹಲಿ: ಸಚಿವ ಸಂಪುಟಕ್ಕೆ ಅತಿಶಿ, ಸೌರಭ್

ಪ್ರಜಾವಾಣಿ ವಾರ್ತೆ

ನವದೆಹಲಿ: ಭ್ರಷ್ಟಾಚಾರ ಪ್ರಕರಣಗಳಲ್ಲಿ ಬಂಧನಕ್ಕೊಳಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಮನೀಷ್ ಸಿಸೋಡಿಯಾ ಮತ್ತು ಸತ್ಯೇಂದ್ರ ಜೈನ್ ಅವರ ಸ್ಥಾನಕ್ಕೆ, ಎಎಪಿ ಶಾಸಕರಾದ ಅತಿಶಿ ಮತ್ತು ಸೌರಭ್ ಭಾರದ್ವಾಜ್ ಅವರನ್ನು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬುಧವಾರ ಆಯ್ಕೆ ಮಾಡಿದ್ದಾರೆ.

ಈ ಇಬ್ಬರ ಹೆಸರುಗಳನ್ನು ಅನುಮತಿಗಾಗಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಕೇಜ್ರಿವಾಲ್ ಅವರು ರವಾನಿಸಿದ್ದಾರೆ. ಆದರೆ ಮಧ್ಯಾಹ್ನದ ಬಳಿಕ ಖಾತೆ ಮರು ಹಂಚಿಕೆ ಸಂಬಂಧ ಹೊರಡಿಸಲಾದ ಗೆಜೆಟ್ ಅಧಿಸೂಚನೆ ಪ್ರಕಾರ ಸಿಸೋಡಿಯಾ ಮತ್ತು ಜೈನ್ ಸಚಿವರಾಗಿಯೇ ಮುಂದುವರಿದಿದ್ದಾರೆ. ಆದರೆ ಅವರಿಗೆ ಯಾವುದೇ ಖಾತೆ ಸೂಚಿಸಿಲ್ಲ. ಇದು ಈ ಇಬ್ಬರ ರಾಜೀನಾಮೆ ಅಂಗೀಕಾರವಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

ಸಿಸೋಡಿಯಾ ಅವರ ಬಳಿ ಇದ್ದ ಖಾತೆಗಳನ್ನು ಸಚಿವರಾದ ಕೈಲಾಶ್ ಗೆಹಲೋತ್ ಮತ್ತು ರಾಮ್ ಕುಮಾರ್ ಆನಂದ್ ಅವರಿಗೆ ವರ್ಗಾಯಿಸಲಾಗಿದೆ. ಜೈನ್ ಅವರು ಬಂಧನವಾದಾಗ ಅವರ ಖಾತೆಗಳನ್ನು ಸಿಸೋಡಿಯಾ ಅವರಿಗೆ ನೀಡಲಾಗಿತ್ತು. ಒಟ್ಟು 33 ಖಾತೆಗಳ ಪೈಕಿ ಸಿಸೋಡಿಯಾ ಅವರು 18 ಖಾತೆಗಳನ್ನು ನಿರ್ವಹಿಸುತ್ತಿದ್ದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಎಎಪಿಯ ಒಳ್ಳೆಯ ಕೆಲಸಗಳನ್ನು ನಿಲ್ಲಿಸಲು ಬಯಸಿದ್ದಾರೆ. ಸಿಸೋಡಿಯಾ ಮತ್ತು ಜೈನ್ ಅವರ ಉತ್ತಮ ಕೆಲಸಗಳನ್ನು ಅತಿಶಿ ಮತ್ತು ಸೌರಭ್ ಡಬಲ್ ಸ್ಪೀಡ್‌ನಲ್ಲಿ ಮುಂದುವರಿಸುತ್ತಾರೆ’ ಎಂದು ಕೇಜ್ರಿವಾಲ್ ಸುದ್ದಿಗಾರರಿಗೆ ತಿಳಿಸಿದರು. ಆದರೆ ಈ ಇಬ್ಬರು ನೂತನ ಸಚಿವರ ಸೇರ್ಪಡೆಗೆ ಕೇಜ್ರಿವಾಲ್ ಕಾಲಮಿತಿ ನಿಗದಿಪಡಿಸಿಲ್ಲ.

‘ಸಿಸೋಡಿಯಾ ಮತ್ತು ಜೈನ್ ಅವರು ಬಿಜೆಪಿಗೆ ಸೇರಿದರೆ ಅವರಿಗೆ ಇದರಿಂದ ಮುಕ್ತಿ ಸಿಗಲಿದೆ. ಒಳ್ಳೆಯ ಕೆಲಸ ಮಾಡುತ್ತಿದ್ದ ಕಾರಣ ಅವರನ್ನು ಬಂಧಿಸಲಾಗಿದೆ. ಇಲ್ಲದಿದ್ದರೆ ಅವರನ್ನು ಬಂಧಿಸುತ್ತಿರಲಿಲ್ಲ’ ಎಂದು ದೂರಿದ ಕೇಜ್ರಿವಾಲ್, ‘ಎಎಪಿ ಚಂಡಮಾರುತ ಇದ್ದಂತೆ. ಅದನ್ನು ತಡೆಯಲು ಸಾಧ್ಯವಿಲ್ಲ ಎಂಬುದನ್ನು ಬಿಜೆಪಿಗೆ ಹೇಳಲು ಬಯಸುತ್ತೇನೆ’ ಎಂದು ಗುಡುಗಿದರು.

ತಮ್ಮ ಸಂಪುಟದಲ್ಲಿ ಉಪಮುಖ್ಯಮಂತ್ರಿ ಇರುತ್ತಾರೆಯೇ ಎಂಬ ಪ್ರಶ್ನೆಗೆ, ‘ಅಗತ್ಯವಿದ್ದಲ್ಲಿ ಒಬ್ಬರನ್ನು ನೇಮಿಸಬಹುದು’ ಎಂದು ಪ್ರತಿಕ್ರಿಯಿಸಿದರು.

ಸಿಸೋಡಿಯಾ ಮತ್ತು ಜೈನ್ ಅವರ ರಾಜೀನಾಮೆಯನ್ನು ಲೆಫ್ಟಿನೆಂಟ್ ಗವರ್ನರ್ ಅಂಗೀಕರಿಸಿದ ನಂತರ, ಹೊಸ ಸಚಿವರ ಪ್ರಮಾಣ ವಚನ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯ ಎಎಪಿ ಸರ್ಕಾರದ ಮೊದಲ ಮಹಿಳಾ ಸಚಿವರಾಗಲು ಸಿದ್ಧರಾಗಿರುವ ಅತಿಶಿ, ದೆಹಲಿಯಲ್ಲಿ ಪಕ್ಷದ ಶೈಕ್ಷಣಿಕ ಸುಧಾರಣೆಗಳನ್ನು ಕಾರ್ಯಗತಗೊಳಿಸುವ ತಂಡದ ಪ್ರಮುಖ ಸದಸ್ಯೆಯಾಗಿದ್ದಾರೆ. 2013ರಲ್ಲಿ ಕೇಜ್ರಿವಾಲ್ ನಡೆಸಿದ 49 ದಿನಗಳ ಸರ್ಕಾರದಲ್ಲಿ ರಾಖಿ ಬಿರ್ಲಾ ಅವರು ಸಚಿವೆಯಾಗಿದ್ದರು. ಆ ನಂತರ ಕೇಜ್ರಿವಾಲ್ ಸಂಪುಟದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಇರಲಿಲ್ಲ.

ಕೇಜ್ರಿವಾಲ್ ರಾಜೀನಾಮೆಗೆ ಆಗ್ರಹ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ರಾಜೀನಾಮೆಗೆ ಒತ್ತಡ ಹೆಚ್ಚುತ್ತಿದ್ದು, ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದ್ದಾರೆ.

ದೆಹಲಿ ಘಟಕದ ಕಾಂಗ್ರೆಸ್ ಅಧ್ಯಕ್ಷ ಅನಿಲ್ ಚೌಧರಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಇಲ್ಲಿನ ಎಎಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಕೇಜ್ರಿವಾಲ್ ಹಾಗೂ ಮನೀಷ್ ಸಿಸೋಡಿಯಾ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ದೆಹಲಿಯ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಆಗಿರುವವರೆಗೂ ಹಗರಣ ಪ್ರಕರಣದಲ್ಲಿ ನ್ಯಾಯಯುತ ತನಿಖೆ ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಕೇಜ್ರಿವಾಲ್ ಅವರು ರಾಜೀನಾಮೆ ನೀಡಬೇಕು’ ಎಂದು ಕಾಂಗ್ರೆಸ್ ಒತ್ತಾಯಿಸಿದೆ.

‘ಹಗರಣದಲ್ಲಿ ಕೇಜ್ರಿವಾಲ್ ಅವರೇ ಸೂತ್ರಧಾರರು’ ಎಂದು ದೆಹಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ರಾಮ್‌ವೀರ್ ಸಿಂಗ್ ಬಿಧೋರಿ ಆರೋಪಿಸಿದರು.

ಅರವಿಂದ ಕೇಜ್ರಿವಾಲ್ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

‘ಗಡಿಯಲ್ಲಿ ಹೊಡೆದುರುಳಿಸಿದ್ದು ಪಾಕ್ ಡ್ರೋನ್’

ನವದೆಹಲಿ (ಪಿಟಿಐ): ಕಳೆದ ವರ್ಷ ಪಂಜಾಬ್‌ನ ಭಾರತ-ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ಗಡಿ ಭದ್ರತಾ ಪಡೆ ಹೊಡೆದುರುಳಿಸಿದ ಡ್ರೋನ್ ಚೀನಾ ಮತ್ತು ಪಾಕಿಸ್ತಾನದಲ್ಲಿ ಹಾರಾಟ ನಡೆಸಿತ್ತು ಎಂದು ಬಿಎಸ್‌ಎಫ್ ವಕ್ತಾರರು ವಿಧಿವಿಜ್ಞಾನ ವಿಶ್ಲೇಷಣೆ ವರದಿ ಉಲ್ಲೇಖಿಸಿ ತಿಳಿಸಿದ್ದಾರೆ.

2022ರ ಡಿ. 25ರಂದು ಅಮೃತಸರ ಜಿಲ್ಲೆಯ ರಜತಲ್ ಗಡಿ ಪೋಸ್ಟ್ ಬಳಿ ಪಾಕಿಸ್ತಾನದ ಅತ್ಯಾಧುನಿಕ ಡ್ರೋನ್ (ಕ್ವಾಡ್‌ಕಾಪ್ಟರ್) ಗುರುತಿಸಿ, ಹೊಡೆದುರುಳಿಸಲಾಗಿತ್ತು. ಡ್ರೋನ್ ಚೀನಾದ ಶಾಂಘೈನ ಫೆಂಗ್ಕ್ಸಿಯಾನ್ ಜಿಲ್ಲೆಯಲ್ಲಿ ಡಿ.11ರಂದು ಹಾರಾಟ ನಡೆಸಿದೆ. ಅಲ್ಲದೆ ಡಿ.24 ರಿಂದ 25ರವರೆಗೆ ಪಾಕಿಸ್ತಾನದ ಪಂಜಾಬ್‌ನ ಖನೆವಾಲ್ ಜಿಲ್ಲೆಯೊಳಗೆ 28 ಬಾರಿ ಹಾರಾಟ ನಡೆಸಿತ್ತು ಎಂದು ವಕ್ತಾರರು ತಿಳಿಸಿದ್ದಾರೆ.

ಡ್ರೋನ್‌ನ ಕಾನೂನುಬಾಹಿರ ಚಟುವಟಿಕೆ ಮತ್ತು ಅದನ್ನು ಉರುಳಿಸಿರುವ ಬಗ್ಗೆ ಗಡಿ ಭದ್ರತಾ ಪಡೆ ಕಳೆದ ವರ್ಷ ಅಮೃತಸರದಲ್ಲಿ ಎಫ್‌ಐಆರ್ ದಾಖಲಿಸಿದೆ ಎಂದು ಹೇಳಿದರು.

ಭಾರತ-ಪಾಕಿಸ್ತಾನ ಗಡಿ ಕಾಯುವ ಜವಾಬ್ದಾರಿ ಹೊಂದಿರುವ ಬಿಎಸ್‌ಎಫ್, ರಾಷ್ಟ್ರ ರಾಜಧಾನಿಯ ಶಿಬಿರದಲ್ಲಿ ಡ್ರೋನ್‌ಗಳಿಗಾಗಿ ವಿಧಿವಿಜ್ಞಾನ ವಿಶ್ಲೇಷಣಾ ಪ್ರಯೋಗಾಲಯ ಸ್ಥಾಪಿಸಿದೆ. ಕಳೆದ ವರ್ಷ ಪಾಕಿಸ್ತಾನದಿಂದ ಬರುತ್ತಿದ್ದ ಒಟ್ಟು 22 ಡ್ರೋನ್‌ಗಳು ಅಥವಾ ಮಾನವರಹಿತ ವೈಮಾನಿಕ ವಾಹನಗಳನ್ನು (ಯುಎವಿ) ಬಿಎಸ್‌ಎಫ್ ಹೊಡೆದುರುಳಿಸಿತ್ತು.

ಇಂದೋರ್ ಟೆಸ್ಟ್: ಆಸ್ಟ್ರೇಲಿಯಾಕ್ಕೆ ಮೊದಲ ದಿನವೇ ಇನಿಂಗ್ಸ್ ಮುನ್ನಡೆ; ಮ್ಯಾಥ್ಯೂಗೆ 5 ವಿಕೆಟ್

ಸ್ಪಿನ್ ದಾಳಿಗೆ ಭಾರತ ದೂಳೀಪಟ

ಪ್ರಜಾವಾಣಿ ವಾರ್ತೆ

ಇಂದೋರ್: ಸ್ಪಿನ್ ಬೌಲಿಂಗ್ ಎದುರು ಭಾರತ ತಂಡದ ದೌರ್ಬಲ್ಯವು ಮತ್ತೊಮ್ಮೆ ಜಗಜ್ಜಾಹೀರು ಗೊಂಡಿತು. ಆಸ್ಟ್ರೇಲಿಯಾದ ಹೊಸ ಸ್ಪಿನ್ನರ್ ಮ್ಯಾಥ್ಯೂ ಕುನೆಮನ್ ಎದುರು ರೋಹಿತ್ ಶರ್ಮಾ ಬಳಗ ಸಣ್ಣಮೊತ್ತಕ್ಕೆ ಕುಸಿಯಿತು.

ಬುಧವಾರ ಇಲ್ಲಿ ಆರಂಭವಾದ ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೂರನೇ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ರೋಹಿತ್ ಶರ್ಮಾ ಬಳಗವು ಆಸ್ಟ್ರೇಲಿಯಾದ ಸ್ಪಿನ್ನರ್‌ಗಳ ದಾಳಿಯ ಮುಂದೆ 33.2 ಓವರ್‌ಗಳಲ್ಲಿ 109 ರನ್ ಗಳಿಸಿ ಆಲೌಟ್ ಆಯಿತು.

ತಮ್ಮ ವೃತ್ತಿಜೀವನದ ಎರಡನೇ ಟೆಸ್ಟ್ ಆಡುತ್ತಿರುವ ಎಡಗೈ ಸ್ಪಿನ್ನರ್ ಮ್ಯಾಥ್ಯೂ ಕುನೆಮನ್ ಐದು ವಿಕೆಟ್ ಗೊಂಚಲು ಗಳಿಸಿದರು. ಅನುಭವಿ ನೇಥನ್ ಲಯನ್ (35ಕ್ಕೆ3) ಕೂಡ ಮಿಂಚಿದರು.

ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಪ್ರಾಬಲ್ಯ ಮೆರೆದು ಗೆದ್ದ ರೋಹಿತ್ ಬಳಗಕ್ಕೆ ಪ್ರವಾಸಿ ಪಡೆಯು ತಿರುಗೇಟು ನೀಡಿತು. ದಿನದಾಟದ ಮುಕ್ತಾಯಕ್ಕೆ ಆಸ್ಟ್ರೇಲಿಯಾ 47 ರನ್‌ಗಳ ಮುನ್ನಡೆ ಗಳಿಸಿತು. ರವೀಂದ್ರ ಜಡೇಜ (63ಕ್ಕೆ4) ಪರಿಣಾಮಕಾರಿ ದಾಳಿಯ ನಡುವೆಯೂ ಪ್ರವಾಸಿ ಬಳಗವು 54 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 156 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಉಸ್ಮಾನ್ ಖ್ವಾಜಾ (60; 147ಎ) ಮತ್ತು ಮಾರ್ನಸ್ (31; 91ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಹಂಗಾಮಿ ನಾಯಕ ಸ್ಟೀವ್ ಸ್ಮಿತ್ ಕೂಡ 26 ರನ್‌ಗಳ ಕಾಣಿಕೆ ನೀಡಿದರು.

ಒಂದೇ ದಿನ 14 ವಿಕೆಟ್ ಪತನ: ಹೋಳ್ಕರ್ ಮೈದಾನವು ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡಬಹುದೆಂಬ ನಿರೀಕ್ಷೆ ಆರಂಭಿಕ ಓವರ್‌ಗಳಲ್ಲಿಯೇ ಹುಸಿಯಾಯಿತು. ಸಣ್ಣ ಬಿರುಕುಗಳಿದ್ದ ಪಿಚ್‌ನಲ್ಲಿ ಸ್ಪಿನ್ನರ್‌ಗಳ ದರಬಾರು ನಡೆಯಿತು. ಒಂದೇ ದಿನ 14 ವಿಕೆಟ್‌ಗಳು ಪತನವಾದವು. ಭಾರತದ ಸಿರಾಜ್ ರನೌಟ್ ಆಗಿದ್ದು ಬಿಟ್ಟರೆ 13 ವಿಕೆಟ್‌ಗಳು ಸ್ಪಿನ್ನರ್‌ಗಳ ಪಾಲಾದವು. ಫಾರ್ಮ್ ಕಳೆದುಕೊಂಡಿರುವ ಕೆ.ಎಲ್. ರಾಹುಲ್ ಬದಲಿಗೆ ಸ್ಥಾನ ಪಡೆದ ಶುಭಮನ್ ಗಿಲ್ ಅವರೊಂದಿಗೆ ರೋಹಿತ್ ಇನಿಂಗ್ಸ್ ಆರಂಭಿಸಿದರು. ಇಬ್ಬರೂ ಆತ್ಮವಿಶ್ವಾಸದಿಂದ ಆಡಿದರು. ಆರನೇ ಓವರ್‌ನಲ್ಲಿ ಆಫ್‌ಸ್ಟಂಪ್‌ನತ್ತ ತಿರುವು ಪಡೆಯುತ್ತಿದ್ದ ಎಸೆತವನ್ನು ಮುನ್ನುಗ್ಗಿ ಹೊಡೆಯಲು ಯತ್ನಿಸಿದ ರೋಹಿತ್ ಬೀಟ್ ಆದರು. ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಸ್ಟಂಪಿಂಗ್ ಮಾಡಿದರು. ಇಲ್ಲಿಂದ ಆತಿಥೇಯ ಬ್ಯಾಟರ್‌ಗಳ 'ಪೆವಿಲಿಯನ್ ಪರೇಡ್' ಆರಂಭವಾಯಿತು.

ಊಟದ ವಿರಾಮಕ್ಕೆ 84 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ನಂತರ ಅಕ್ಷರ್ ಪಟೇಲ್ (12 ರನ್) ಮತ್ತು ಉಮೇಶ್ ಯಾದವ್ (17 ರನ್) ಒಂದಿಷ್ಟು ಹೋರಾಟ ನಡೆಸಿ ತಂಡದ ಮೊತ್ತವು ನೂರರ ಗಡಿ ದಾಟಿಸಿದರು.

ಇಡೀ ಇನಿಂಗ್ಸ್‌ನಲ್ಲಿ ವಿರಾಟ್ ಕೊಹ್ಲಿ (22 ರನ್) ಎಲ್ಲರಿಗಿಂತಲೂ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆದರು!

ಜಡೇಜ ಯಶಸ್ಸು: ದಿನದಾಟದಲ್ಲಿ ಆಸ್ಟ್ರೇಲಿಯಾ ತಂಡದ ನಾಲ್ಕು ವಿಕೆಟ್‌ಗಳನ್ನೂ ರವೀಂದ್ರ ಜಡೇಜ ಅವರೇ ಕಬಳಿಸಿದರು. ಅದರಲ್ಲೂ ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಟ್ರಾವಿಸ್ ಹೆಡ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ್ದರು. ಆದರೆ ಅಂಪೈರ್ ನಾಟೌಟ್ ಕೊಟ್ಟಿದ್ದರು. ಭಾರತ ತಂಡವು ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನೆ) ಮೊರೆ ಹೋಯಿತು.

ಟಿವಿ ಅಂಪೈರ್ ವಿವಿಧ ಆಯಾಮಗಳಲ್ಲಿ ಪರಿಶೀಲಿಸಿ ಔಟ್ ಎಂದು ತೀರ್ಪು ನೀಡಿದರು. ಆದರೆ ಇದೇ ರೀತಿ ಎರಡು ಬಾರಿ ಡಿಆರ್‌ಎಸ್‌ನಲ್ಲಿ ನಾಟೌಟ್ ಆದ ಉಸ್ಮಾನ್ ತಮ್ಮ ತಂಡಕ್ಕೆ ಬಲ ತುಂಬಿದರು. ಆದರೂ ಛಲಬಿಡದ ಜಡೇಜ ಮಾತ್ರ ವಿಕೆಟ್ ಬೇಟೆ ಮುಂದುವರಿಸಿದರು.

ಆಸ್ಟ್ರೇಲಿಯಾದ ಮ್ಯಾಥ್ಯೂ ಕುನೆಮನ್ ಬೌಲಿಂಗ್ –ಎಎಫ್‌ಪಿ ಚಿತ್ರ


ರವೀಂದ್ರ ಜಡೇಜ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 109 (33.2 ಓವರ್)

ರೋಹಿತ್ ಸ್ಟಂಪ್ಡ್ ಕ್ಯಾರಿ ಬಿ ಕುನೆಮನ್ 12 (23ಎ, 4X3), ಶುಭಮನ್ ಸಿ ಸ್ಮಿತ್ ಬಿ ಕುನೆಮನ್ 21 (18ಎ, 4X3), ಪೂಜಾರ ಬಿ ಲಯನ್ 1 (4ಎ), ವಿರಾಟ್ ಎಲ್‌ಬಿಡಬ್ಲ್ಯು ಬಿ ಮರ್ಫಿ 22 (52ಎ, 4X2), ಜಡೇಜ ಸಿ ಕುನೆಮನ್ ಬಿ ಲಯನ್ 4 (9ಎ), ಶ್ರೇಯಸ್ ಬಿ ಕುನೆಮನ್ 0 (2ಎ), ಭರತ್ ಎಲ್‌ಬಿಡಬ್ಲ್ಯು ಬಿ ಲಯನ್ 17 (30ಎ, 4X1, 6X1), ಅಕ್ಷರ್ ಔಟಾಗದೆ 12 (33ಎ, 4X1), ಅಶ್ವಿನ್ ಸಿ ಕ್ಯಾರಿ ಬಿ ಕುನೆಮನ್ 3 (12ಎ), ಉಮೇಶ್ ಎಲ್‌ಬಿಡಬ್ಲ್ಯು ಬಿ ಕುನೆಮನ್ 17 (13ಎ, 4X1, 6X2), ಸಿರಾಜ್ ರನೌಟ್ (ಹೆಡ್/ಲಯನ್) 0 (4ಎ)

ಇತರೆ 0

ವಿಕೆಟ್ ಪತನ: 1-27 (ರೋಹಿತ್ ಶರ್ಮಾ, 5.6), 2-34 (ಶುಭಮನ್ ಗಿಲ್, 7.2), 3-36 (ಚೇತೇಶ್ವರ್ ಪೂಜಾರ, 8.2), 4-44 (ರವೀಂದ್ರ ಜಡೇಜ, 10.5), 5-45 (ಶ್ರೇಯಸ್ ಅಯ್ಯರ್, 11.2), 6-70 (ವಿರಾಟ್ ಕೊಹ್ಲಿ, 21.4), 7-82 (ಶ್ರೀಕರ್ ಭರತ್, 24.5), 8-88 (ರವಿಚಂದ್ರನ್ ಅಶ್ವಿನ್, 28.3), 9-108 (ಉಮೇಶ್ ಯಾದವ್, 32.2), 10-109 (ಮೊಹಮ್ಮದ್ ಸಿರಾಜ್, 33.2)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 5-0-21-0, ಕ್ಯಾಮರಾನ್ ಗ್ರೀನ್ 2-0-14-0, ಮ್ಯಾಥ್ಯೂ ಕುನೆಮನ್ 9-2-16-5, ನೇಥನ್ ಲಯನ್ 11.2-2-35-3, ಟಾಡ್ ಮರ್ಫಿ 6-1-23-1

ಆಸ್ಟ್ರೇಲಿಯಾ 4ಕ್ಕೆ 156 (54 ಓವರ್)

ಹೆಡ್ ಎಲ್‌ಬಿಡಬ್ಲ್ಯು ಬಿ ಜಡೇಜ 9 (6ಎ, 4X1), ಉಸ್ಮಾನ್ ಸಿ ಶುಭಮನ್ ಬಿ ಜಡೇಜ 60 (147ಎ, 4X4), ಲಾಬುಷೇನ್ ಬಿ ಜಡೇಜ 31 (91ಎ, 4X1), ಸ್ಮಿತ್ ಸಿ ಭರತ್ ಬಿ ಜಡೇಜ 26 (38ಎ, 4X4), ಹ್ಯಾಂಡ್ಸ್‌ಕಂಬ್ ಬ್ಯಾಟಿಂಗ್ 7 (36ಎ), ಗ್ರೀನ್ ಬ್ಯಾಟಿಂಗ್ 6 (10ಎ)

ಇತರೆ 17 (ಬೈ 9, ಲೆಗ್‌ಬೈ 4, ನೋಬಾಲ್ 4)

ವಿಕೆಟ್ ಪತನ: 1-12 (ಟ್ರಾವಿಸ್ ಹೆಡ್, 1.4), 2-108 (ಮಾರ್ನಸ್ ಲಾಬುಷೇನ್, 34.3), 3-125 (ಉಸ್ಮಾನ್ ಖ್ವಾಜಾ, 42.3), 4-146 (ಸ್ಟೀವನ್ ಸ್ಮಿತ್, 48.5)

ಬೌಲಿಂಗ್: ರವಿಚಂದ್ರನ್ ಅಶ್ವಿನ್ 16-2-40-0, ರವೀಂದ್ರ ಜಡೇಜ 24-6-63-4, ಅಕ್ಷರ್ ಪಟೇಲ್ 9-0-29-0, ಉಮೇಶ್ ಯಾದವ್ 2-0-4-0, ಮೊಹಮ್ಮದ್ ಸಿರಾಜ್ 3-0-7-0

ದಾಖಲೆಗಳು

109
ಭಾರತವು ಸ್ವದೇಶದಲ್ಲಿ ಆಡಿದ ಟೆಸ್ಟ್‌ಗಳಲ್ಲಿ ಐದನೇ ಕನಿಷ್ಠ ಮೊತ್ತ ಇದಾಗಿದೆ. ಅಲ್ಲದೇ ಹೋಳ್ಕರ್ ಮೈದಾನದಲ್ಲಿ ದಾಖಲಾದ ಸಣ್ಣ ಮೊತ್ತವೂ ಹೌದು.

16ಕ್ಕೆ5
ಆಸ್ಟ್ರೇಲಿಯಾದ ಮ್ಯಾಥ್ಯೂ ಕುನೆಮನ್ ಅವರ ವೃತ್ತಿಜೀವನದ ಮೊದಲ ಐದು ವಿಕೆಟ್ ಗೊಂಚಲು ಇದಾಗಿದೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ.

500
ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ರವೀಂದ್ರ ಜಡೇಜ ಗಳಿಸಿದ ಒಟ್ಟು ವಿಕೆಟ್‌ಗಳು. ಟ್ರಾವಿಸ್ ಹೆಡ್ ವಿಕೆಟ್ ಗಳಿಸಿದ ಅವರು ಈ ಮೈಲುಗಲ್ಲು ತಲುಪಿದರು. ಟೆಸ್ಟ್‌ನಲ್ಲಿ 263, ಏಕದಿನ ಕ್ರಿಕೆಟ್‌ನಲ್ಲಿ 189 ಹಾಗೂ ಟಿ20ಯಲ್ಲಿ 51 ವಿಕೆಟ್‌ಗಳನ್ನು ಗಳಿಸಿದ್ದಾರೆ.

128
ಆಸ್ಟ್ರೇಲಿಯಾದ ಸ್ಪಿನ್ನರ್ ನೇಥನ್ ಲಯನ್ ಏಷ್ಯಾ ಖಂಡದಲ್ಲಿ ಆಡಿದ ಟೆಸ್ಟ್‌ಗಳಲ್ಲಿ ಗಳಿಸಿದ ಒಟ್ಟು ವಿಕೆಟ್‌ಗಳು. ಅವರು ತಮ್ಮ ದೇಶದ ದಿಗ್ಗಜ ಸ್ಪಿನ್ನರ್ ಶೇನ್ ವಾರ್ನ್ (127) ದಾಖಲೆಯನ್ನು ಮೀರಿ ನಿಂತರು.

ಯಶಸ್ವಿ ದ್ವಿಶತಕ;ಅಭಿಮನ್ಯು ಶತಕ

ಇರಾನಿ ಕಪ್ ಕ್ರಿಕೆಟ್: ಮೊದಲ ದಿನ ರನ್‌ಗಳ ಹೊಳೆ

ಗ್ವಾಲಿಯರ್ (ಪಿಟಿಐ): ಯಶಸ್ವಿ ಜೈಸ್ವಾಲ್ ಮತ್ತು ಅಭಿಮನ್ಯು ಈಶ್ವರನ್ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ರೆಸ್ಟ್ ಆಫ್ ಇಂಡಿಯಾ ತಂಡವು ಬುಧವಾರ ಆರಂಭವಾದ ಇರಾನಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ದೊಡ್ಡ ಮೊತ್ತ ಪೇರಿಸಿತು.

ಯಶಸ್ವಿ ದ್ವಿಶತಕ (213; 259ಎ, 4X30, 6X3) ಹಾಗೂ ಅಭಿಮನ್ಯು (154; 240ಎ, 4X17, 6X2) ಅವರಿಬ್ಬರ ಎರಡನೇ ವಿಕೆಟ್ ಜೊತೆಯಾಟದಲ್ಲಿ 371 ರನ್ ಸೇರಿಸಿದರು. ಇದರಿಂದಾಗಿ ತಂಡವು ಮೊದಲ ದಿನದಾಟದ ಮುಕ್ತಾಯಕ್ಕೆ 87 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 381 ರನ್ ಗಳಿಸಿತು. ಸೌರಭ್ ಕುಮಾರ್ ಹಾಗೂ ಬಾಬಾ ಇಂದ್ರಜೀತ್ ಕ್ರೀಸ್‌ನಲ್ಲಿದ್ದಾರೆ.

ಟಾಸ್ ಗೆದ್ದ ರೆಸ್ಟ್ ಆಫ್ ಇಂಡಿಯಾದ ನಾಯಕ ಮಯಂಕ್ ಅಗರವಾಲ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಅಭಿಮನ್ಯು ಜೊತೆಗೆ ಇನಿಂಗ್ಸ್ ಆರಂಭಿಸಿದ ಮಯಂಕ್ ಮೂರನೇ ಓವರ್‌ನಲ್ಲಿಯೇ ಆವೇಶ್ ಖಾನ್ ಎಸೆತದಲ್ಲಿ ಹಿಮಾಂಶುಗೆ ಕ್ಯಾಚಿತ್ತರು.

ಅಭಿಮನ್ಯುವಿನೊಂದಿಗೆ ಸೇರಿಕೊಂಡ ಯಶಸ್ವಿ, ಬೌಲರ್‌ಗಳ ಬೆವರಿಳಿಸಿದರು. ಟಿ20 ಕ್ರಿಕೆಟ್ ಮಾದರಿಯ ಬ್ಯಾಟಿಂಗ್ ಮಾಡಿದರು. ಇದರಿಂದಾಗಿ ಬೌಂಡರಿಗಳು ದಾಖಲಾದವು. 82.24ರ ಸ್ಟ್ರೈಕ್‌ರೇಟ್‌ನಲ್ಲಿ ದ್ವಿಶತಕ ಗಳಿಸಿದರು. ಹೋದ ವರ್ಷದ ರಣಜಿ ಋತುವಿನಲ್ಲಿಯೂ ಅವರು ರನ್‌ಗಳನ್ನು ಸೂರೆ ಮಾಡಿದ್ದರು.

ಇನ್ನೊಂದೆಡೆ ಅಭಿಮನ್ಯು ಕೂಡ ಕಲಾತ್ಮಕ ಬ್ಯಾಟಿಂಗ್ ಮೂಲಕ ಗಮನ ಸೆಳೆದರು. ದಿನದಾಟದ ಮುಕ್ತಾಯಕ್ಕೆ ಸ್ವಲ್ಪ ಹೊತ್ತಿಗೆ ಮುನ್ನ ಆವೇಶ್ ಖಾನ್ ಅವರ ಒಂದೇ ಓವರ್‌ನಲ್ಲಿ ಯಶಸ್ವಿ ಹಾಗೂ ಅಭಿಮನ್ಯು ಔಟಾದರು.

ಸಂಕ್ಷಿಪ್ತ ಸ್ಕೋರು: ರೆಸ್ಟ್ ಆಫ್ ಇಂಡಿಯಾ: 87 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 381 (ಯಶಸ್ವಿ ಜೈಸ್ವಾಲ್ 213, ಅಭಿಮನ್ಯು ಈಶ್ವರನ್ 154, ಆವೇಶ್ ಖಾನ್ 51ಕ್ಕೆ2)

ಯಶಸ್ವಿ ಜೈಸ್ವಾಲ್

6ರಿಂದ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿ

ಅಂಕಿತಾ, ಕರ್ಮನ್‌ಕೌರ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಾನ್ ಟೆನಿಸ್ ಸಂಸ್ಥೆಯು (ಕೆಎಸ್‌ಎಲ್‌ಟಿಎ) ಮಾರ್ಚ್ 6ರಿಂದ 12ರವರೆಗೆ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯನ್ನು ಆಯೋಜಿಸಲಿದೆ.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಪ್ರಮುಖ ಆಟಗಾರ್ತಿಯರಾದ ಭಾರತದ ಕರ್ಮನ್ ಕೌರ್ ಥಂಡಿ, ಅಂಕಿತಾ ರೈನಾ ಮತ್ತು ಜೆಕ್ ಗಣರಾಜ್ಯದ ಬ್ರೆಂಡಾ ಫ್ರುವಿರೊಟಾ ಕಣಕ್ಕಿಳಿಯಲಿದ್ದಾರೆ.

ಅಂಕಿತಾ ಅವರು ದೇಶದ ಅಗ್ರ ರ‍್ಯಾಂಕಿನ ಆಟಗಾರ್ತಿಯಾಗಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 163ನೇ ಸ್ಥಾನದಲ್ಲಿರುವ ಬ್ರೆಂಡಾ ಅವರು ಈ ವರ್ಷದ ಆಸ್ಟ್ರೇಲಿಯಾ ಓಪನ್ ಮುಖ್ಯ ಸುತ್ತು ಪ್ರವೇಶಿಸಿ ಗಮನಸೆಳೆದಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಈ ಹಿಂದೆ 30ನೇ ಸ್ಥಾನದಲ್ಲಿದ್ದ, ಜಪಾನ್‌ನ ಮಿಸಾಕಿ ಡೊಯಿ, ಫ್ರಾನ್ಸ್‌ನ ಅಮಂ ಡಿನ್ ಹೆಸೆ ಮತ್ತು ಗ್ರೀಸ್‌ನ ವ್ಯಾಲೆಂಟಿನಿ ಗ್ರಾಮಾಟಿಕೊಪೊಲು ಟವರು ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಇನ್ನುಳಿದ ಅಂತರರಾಷ್ಟ್ರೀಯ ಆಟಗಾರ್ತಿಯರಾಗಿದ್ದಾರೆ.

ಟೂರ್ನಿಯ ಮುಖ್ಯ ಸುತ್ತಿ ಪಂದ್ಯಗಳು ಮಾರ್ಚ್ 7ರಿಂದ ಆರಂಭವಾಗಲಿವೆ. 5ರಿಂದ ಆರರವರೆಗೆ ಅರ್ಹತಾ ಪಂದ್ಯಗಳು ನಡೆಯಲಿವೆ.

'ಇತ್ತೀಚಿಗೆ ಡಫಾನ್ಯೂಸ್ ಬೆಂಗಳೂರು ಓಪನ್ ಟೂರ್ನಿ ನಡೆಸಿದ್ದೆವು. ಕೆಪಿಬಿ ಟ್ರಸ್ಟ್ ಟೈಟಲ್ ಪ್ರಾಯೋಜಕತ್ವದಲ್ಲಿ ಐಟಿಎಫ್ ಮಹಿಳಾ ಓಪನ್ ನಡೆಯಲಿದ್ದು, ಟೆನಿಸ್‌ನ ರೋಚಕತೆಯನ್ನು ಉಣಬಡಿಸಲಿದೆ' ಎಂದು ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಮಹೇಶ್ವರ ರಾವ್ ತಿಳಿಸಿದ್ದಾರೆ.

ಅಂಕಿತಾ ರೈನಾ

ಇಂಗ್ಲೆಂಡ್‌ನ ಆ್ಯಂಡರ್ಸನ್ ಹಿಂದಿಕ್ಕಿದ ಭಾರತದ ಸ್ಪಿನ್ನರ್

ಟೆಸ್ಟ್ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಅಶ್ವಿನ್

ದುಬೈ (ಪಿಟಿಐ): ಭಾರತದ ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಐಸಿಸಿ ಟೆಸ್ಟ್ ಕ್ರಿಕೆಟ್ ರ‍್ಯಾಂಕಿಂಗ್‌ನ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ಬುಧವಾರ ಪ್ರಕಟವಾದ ರ‍್ಯಾಂಕಿಂಗ್‌ನಲ್ಲಿ ಅಶ್ವಿನ್ ಎರಡು ಸ್ಥಾನಗಳ ಬಡ್ತಿ ಪಡೆದು, ಇಂಗ್ಲೆಂಡ್‌ನ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರನ್ನು ಹಿಂದಿಕ್ಕಿದ್ದಾರೆ. ಅವರು ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ ಆರು ವಿಕೆಟ್ ಗಳಿಸಿದ್ದು ಅಶ್ವಿನ್ ಅವರ ರ‍್ಯಾಂಕಿಂಗ್ ಏರಿಕೆಗೆ ಕಾರಣವಾಗಿದೆ.

ಅಶ್ವಿನ್ ಅವರು 2015ರಲ್ಲಿ ಮೊದಲ ಬಾರಿ ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದರು. ಆ ಬಳಿಕವೂ ಹಲವು ಬಾರಿ ಮೊದಲ ಸ್ಥಾನ ಪಡೆದುಕೊಂಡಿದ್ದರು.

ಮೂರು ವಾರಗಳ ಅವಧಿಯಲ್ಲಿ ಅಗ್ರಸ್ಥಾನಕ್ಕೇರಿದ್ದ ಮೂರನೇ ಬೌಲರ್ ಆಗಿದ್ದಾರೆ ಅಶ್ವಿನ್. ಈ ಹಿಂದೆ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಅವರನ್ನು ಹಿಂದಿಕ್ಕಿ ಜೇಮ್ಸ್ ಆ್ಯಂಡರ್ಸನ್ ಅವರು ಮೊದಲ ಸ್ಥಾನಕ್ಕೆ ಜಿಗಿದಿದ್ದರು.

ಭಾರತದ ಇನ್ನೊಬ್ಬ ಬೌಲರ್ ಜಸ್‌ಪ್ರೀತ್ ಬೂಮ್ರಾ ನಾಲ್ಕನೇ ಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಎಂಟನೇ ಸ್ಥಾನಕ್ಕೇರಿದ್ದಾರೆ.

ಟೆಸ್ಟ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಜಡೇಜ ಮತ್ತು ಅಶ್ವಿನ್ ಅಗ್ರ ಎರಡು ಸ್ಥಾನಗಳಲ್ಲಿದ್ದಾರೆ. ಈ ವಿಭಾಗದಲ್ಲಿ ಇಂಗ್ಲೆಂಡ್‌ನ ಜೊ ರೂಟ್ ಅವರು ಎಂಟನೇ ಸ್ಥಾನಕ್ಕೇರಿದ್ದಾರೆ.

ಟೆಸ್ಟ್ ಬೌಲರ್‌ಗಳ ರ‍್ಯಾಂಕಿಂಗ್ (ಅಗ್ರ 5)

ಸ್ಥಾನ	ಬೌಲರ್	ದೇಶ	ರೇಟಿಂಗ್
1	ಆರ್. ಅಶ್ವಿನ್	ಭಾರತ	864
2	ಜೇಮ್ಸ್ ಆ್ಯಂಡರ್ಸನ್	ಇಂಗ್ಲೆಂಡ್	859
3	ಪ್ಯಾಟ್ ಕಮಿನ್ಸ್	ಆಸ್ಟ್ರೇಲಿಯಾ	858
4	ಜಸ್‌ಪ್ರೀತ್ ಬೂಮ್ರಾ	ಭಾರತ	795
5	ಶಾಹೀನ್ ಅಫ್ರಿದಿ	ಪಾಕಿಸ್ತಾನ	787

ಆರ್. ಅಶ್ವಿನ್– ಪಿಟಿಐ ಚಿತ್ರ

ಡಬ್ಲ್ಯುಪಿಎಲ್: ಮುಂಬೈ ತಂಡಕ್ಕೆ ಹರ್ಮನ್‌ಪ್ರೀತ್ ನಾಯಕಿ

ಬೆಂಗಳೂರು: ಚೊಚ್ಚಲ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಹರ್ಮನ್‌ಪ್ರೀತ್ ಕೌರ್ ಅವರನ್ನು ನಾಯಕಿಯನ್ನಾಗಿ ನೇಮಿಸಲಾಗಿದೆ.

ಇತ್ತೀಚೆಗಷ್ಟೇ 150 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ ಭಾರತದ ಮೊದಲ ಆಟಗಾರ್ತಿ ಎನಿಸಿರುವ ಹರ್ಮನ್‌ಪ್ರೀತ್, ಭಾರತ ರಾಷ್ಟ್ರೀಯ ತಂಡದ ನಾಯಕಿಯೂ ಆಗಿದ್ದಾರೆ. ಮಹಿಳೆಯರ ವಿಶ್ವಕಪ್‌ನ ನಾಕೌಟ್ ಹಂತದ ಪಂದ್ಯದಲ್ಲಿ ಗರಿಷ್ಠ ವೈಯಕ್ತಿಕ ರನ್ (171*) ಗಳಿಸಿದ ಸಾಧನೆ ಅವರ ಹೆಸರಲ್ಲಿದೆ.

'ಮುಂಬೈ ಇಂಡಿಯನ್ಸ್ ಮಹಿಳಾ ತಂಡದ ಮೊಟ್ಟಮೊದಲ ನಾಯಕಿಯಾಗಿ ಹರ್ಮನ್‌ಪ್ರೀತ್ ಕೌರ್ ಅವರ ಹೆಸರನ್ನು ಘೋಷಿಸಲು ಖುಷಿಯಾಗುತ್ತಿದೆ. ರಾಷ್ಟ್ರೀಯ ತಂಡದ ನಾಯಕಿಯಾಗಿ ಅವರು, ಭಾರತೀಯ ಮಹಿಳಾ ತಂಡಕ್ಕೆ ಕೆಲವು ಸ್ಮರಣೀಯ ಗೆಲುವುಗಳನ್ನು ತಂದುಕೊಟ್ಟಿದ್ದಾರೆ' ಎಂದು ಮುಂಬೈ ಫ್ರಾಂಚೈಸ್ ಮಾಲೀಕರಾಗಿರುವ ನೀತಾ ಅಂಬಾನಿ ಹೇಳಿದ್ದಾರೆ.

ಮಾರ್ಚ್ 4ರಂದು ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಡಬ್ಲ್ಯುಪಿಎಲ್‌ನ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಕೌರ್

ಶಾಟ್‌ಪಟ್: ದಾಖಲೆ ಉತ್ತಮಪಡಿಸಿಕೊಂಡ ತಜಿಂದರ್

ಕರ್ನಾಟಕದ ಕಲಾವತಿ, ಕರೀಷ್ಮಾಗೆ ಚಿನ್ನ

ತೋರಣಗಲ್ಲು, ಬಳ್ಳಾರಿ: ಕರ್ನಾಟಕದ ಕಲಾವತಿ ಬಸಪ್ಪ ತೇಲಿ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಥ್ರೊ ಸ್ಪರ್ಧೆಗಳ ಮಹಿಳೆಯರ ಡಿಸ್ಕಸ್ ಥ್ರೊನಲ್ಲಿ ಚಿನ್ನದ ಪದಕ ಗೆದ್ದರು.

ಬುಧವಾರ ಇಲ್ಲಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್‌ನಲ್ಲಿ ಆರಂಭವಾದ ಸ್ಪರ್ಧೆಯಲ್ಲಿ ಕಲಾವತಿ 44.83 ಮೀಟರ್ಸ್ ಸಾಧನೆಯ ಮೂಲಕ ಅಗ್ರಸ್ಥಾನ ಗಳಿಸಿದರು. ರಾಜ್ಯದವರೇ ಆದ ಎಂ.ಎಸ್. ಸುಷ್ಮಾ ಕಂಚು ಜಯಿಸಿದರು. ಮಹಿಳೆಯರ ಹ್ಯಾಮರ್ ಥ್ರೊನಲ್ಲಿ ಕರ್ನಾಟಕದ ಅಮ್ರೀನ್ ಸುಬ್ರಮಣ್ಯಂ ಮೂರನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ರಾಜಸ್ಥಾನದ ಮಂಜುಬಾಲಾ (53.83 ಮೀ.) ಚಿನ್ನ ಜಯಿಸಿದರು.

ಮಹಿಳೆಯರ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಕರ್ನಾಟಕದ ಕರೀಷ್ಮಾ ಸನಿಲ್ (47.60 ಮೀ.) ಚಿನ್ನ ಜಯಿಸಿದರು.

ಪುರುಷರ ಶಾಟ್‌ಪಟ್‌ನಲ್ಲಿ ಹರಿಯಾಣದ ತಜಿಂದರ್ ಪಾಲ್ ಸಿಂಗ್ ತೂರ್ (19.95 ಮೀ.) ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ (19.94 ಮೀ.) ಉತ್ತಮಪಡಿಸಿಕೊಂಡರು.

ಡಿಸ್ಕಸ್ ಥ್ರೊನಲ್ಲಿ ಹರಿಯಾಣದ ಮಂಜೀತ್ (51.24 ಮೀ.), ಹ್ಯಾಮರ್‌ಥ್ರೊನಲ್ಲಿ ರಾಜಸ್ಥಾನದ ಯುವರಾಜ್ ಜಾಖಡ್ (52.69 ಮೀ.) ಚಿನ್ನ ಗೆದ್ದರು.

ಆರ್‌ಎಸ್‌ಪಿಬಿಗೆ ಜಯ

ಬೆಂಗಳೂರು: ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಮತ್ತು ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಪಿಎಸ್‌ಪಿಬಿ) ತಂಡಗಳು ಹಾಕಿ ಇಂಡಿಯಾ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ ಇಲಾಖಾ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿದವು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ಆರ್‌ಎಸ್‌ಪಿಬಿ 6–0ರಿಂದ ಸ್ಪೋರ್ಟ್ಸ್ ಅಥಾರಿಟಿ ಆಫ್ ಗುಜರಾತ್ ಹಾಕಿ ಅಕಾಡೆಮಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡಕ್ಕಾಗಿ ಗುರುಸಾಹಿಬ್ ಜೀತ್ ಸಿಂಗ್ (4 ಮತ್ತು 34ನೇ ನಿಮಿಷ) ಮತ್ತು ಜೋಗಿಂದರ್ ಸಿಂಗ್ (8 ಮತ್ತು 25ನೇ ನಿ.) ತಲಾ ಎರಡು ಗೋಲು ದಾಖಲಿಸಿದರು. ಅಜಿತ್ ಕುಮಾರ್ ಪಾಂಡೆ (28ನೇ ನಿ.) ಮತ್ತು ಹರ್‌ಸಾಹಿಬ್ ಸಿಂಗ್ (33ನೇ ನಿ.) ಕೊಡುಗೆ ನೀಡಿದರು.

ಪಿಎಸ್‌ಪಿಬಿ 9–1ರಿಂದ ತಮಿಳುನಾಡು ಪೊಲೀಸ್ ತಂಡಕ್ಕೆ ಸೋಲುಣಿಸಿತು. ಆಲ್ ಇಂಡಿಯಾ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ 5–2ರಿಂದ ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ ಎದುರು, ಆಲ್ ಇಂಡಿಯಾ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ 6–2ರಿಂದ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ವಿರುದ್ಧ ಗೆದ್ದವು.

ಟೆನಿಸ್: ಋತುಜಾ ಭೋಸ್ಲೆ, ವೈದೇಹಿಗೆ ಜಯ

ಬೆಂಗಳೂರು: ಭಾರತದ ಋತುಜಾ ಭೋಸ್ಲೆ ಮತ್ತು ವೈದೇಹಿ ಚೌಧರಿ ಅವರು ಐಟಿಎಫ್ ಮಹಿಳಾ 25ಕೆ ಟೆನಿಸ್ ಟೂರ್ನಿಯ ಮೊದಲ ಸುತ್ತುಗಳಲ್ಲಿ ಜಯ ಸಾಧಿಸಿದರು.

ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸ್‌ಲೆನ್ಸ್ ಕೇಂದ್ರದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ಪಂದ್ಯಗಳಲ್ಲಿ ಬುಧವಾರ ಋತುಜಾ 6-3, 6-4ರಿಂದ ಲಾತ್ವಿಯಾದ ಡಯಾನಾ ಮರ್ಸಿಂಕೆವಿಕಾ ಎದುರು, ವೈದೇಹಿ 7-5, 6-4ರಿಂದ ಸ್ಲೊವೇನಿಯಾದ ದಲಿಲಾ ಜಕುಪೊವಿಚ್ ವಿರುದ್ಧ ಗೆದ್ದರು. ಹುಮೆರಾ ಬಹಾರ್ಮಸ್ 6-3, 3-6, 6-2ರಿಂದ ಭಾರತದವರೇ ಆದ ಸಹಜಾ ಯಮಲಪಲ್ಲಿ ಎದುರು ಜಯ ಸಾಧಿಸಿದರು.

ಹೈದರಾಬಾದ್ ರೇಸ್

ಮಲಾಲ ಗೆಲ್ಲುವ ನಿರೀಕ್ಷೆ

ಪೊಯೆಟ್ಸ್ ಡ್ರೀಮ್ ಪ್ಲೇಟ್ ಮೊದಲನೇ ಡಿವಿಷನ್ ಗುರುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಲಾಲ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.50ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟೆಂಪ್ಟೇಶನ್ಸ್ 3, ಟಾಪ್ ಡೈಮಂಡ್ 1, ಪವರ್ ರೇಂಜರ್ 6
2ನೇ ರೇಸ್: ಪಾಕೆಟ್ ರಾಕೆಟ್ 8, ಐಸ್ ಬ್ಲೂ 2, ಸ್ಮಾರ್ಟ್ ಸ್ಟ್ರೈಕರ್ 3
3ನೇ ರೇಸ್: ಸಾಲಿಸ್‌ಬ್ಯೂರಿ 1, ಹಾಟ್ ಸೀಟ್ 6, ಅಮಾಲ್ಫಿಟಾನ 3
4ನೇ ರೇಸ್: ಯೇಲ್‌ಟೌನ್ 1, ಪಾಂಚೊ 4, ಶಾಜಿಯಾ 7
5ನೇ ರೇಸ್: ಮಲಾಲ 2, ಮಿಸ್ ಮಾರ್ವಲಸ್ 5, ಟಾಪ್ ಇನ್ ಕ್ಲಾಸ್ 6
6ನೇ ರೇಸ್: ಇಂದ್ರಧನುಶ್ 2, ಎಕ್ಸ್‌ಕ್ಲೂಸಿವ್ ಲಕ್ 4, ಕ್ಲಾಸಿಕಲ್ ಮ್ಯೂಸಿಕ್ 1
7ನೇ ರೇಸ್: ಬ್ಲಾಸ್ಟ್ ಇನ್ ಕ್ಲಾಸ್ 3, ಆಕಾಶ್ 6, ಫಾಟೂಮ 4
8ನೇ ರೇಸ್: ಮಾರಿಯರ್ ಇನ್ವಿಕ್ಟಸ್ 2, ಗಾಲ್ವಾನ್ 4, ಕ್ಲಾಸಿಕ್ ಡೇಮ್ 10
9ನೇ ರೇಸ್: ಜ್ಯಾಕ್ ಡೇನಿಯಲ್ 3, ಜನಾಸು 7, ಸರ್ವೈವರ್ 2

ಉತ್ತಮ ಬೆಟ್: ಬ್ಲಾಸ್ಟ್ ಇನ್ ಕ್ಲಾಸ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3,4,5	5,6,7,8,9	1,2,3	4,5,6	7,8,9

ಫ್ರಾನ್ಸ್ ಫುಟ್‌ಬಾಲ್ ದಿಗ್ಗಜ ಜಸ್ಟ್ ಫಾಂಟೇನ್ ಇನ್ನಿಲ್ಲ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್ ಫುಟ್‌ಬಾಲ್ ತಂಡದ ದಿಗ್ಗಜ ಸ್ಟ್ರೈಕರ್ ಜಸ್ಟ್ ಲೂಯಿಸ್ ಫಾಂಟೇನ್ (89) ಬುಧವಾರ ನಿಧನರಾದರು.

1958ರ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಅವರು ಗಳಿಸಿದ್ದ 13 ಗೋಲುಗಳ ಸಾಧನೆ ಅವಿಸ್ಮರಣೀಯವಾಗಿದೆ. ಏಕೆಂದರೆ ಆರು ಪಂದ್ಯಗಳಲ್ಲಿ ಅವರು ಮಾಡಿದ್ದ ದಾಖಲೆಯನ್ನು ಮುರಿಯುವುದು ಬಹುಕಾಲದವರೆಗೆ ಸಾಧ್ಯವಾಗಿರಲಿಲ್ಲ. ಇದುವರೆಗೂ ಜಸ್ಟ್ ಅವರಿಗಿಂತ ಹೆಚ್ಚು ಗೋಲು ಗಳಿಸಿದವರು ಮೂವರು ಆಟಗಾರರು ಮಾತ್ರ. ಜರ್ಮನಿಯ ಮಿರೊಸ್ಲೋವ್ ಕ್ಲೋಸ್ (16), ಬ್ರೆಜಿಲ್‌ನ ರೊನಾಲ್ಡೊ (15) ಮತ್ತು ವೆಸ್ಟ್ ಜರ್ಮನಿಯ ಗೆರ್ಡ್ ಮುಲ್ಲರ್ (14) ಅವರು ಜಸ್ಟ್ ದಾಖಲೆಯನ್ನು ಮೀರಿದ್ದಾರೆ. ಈಚೆಗೆ ಕತಾರ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರು ಜಸ್ಟ್ ಸಾಧನೆಯನ್ನು ಸರಿಗಟ್ಟಿದ್ದರು.

1958ರ ವಿಶ್ವಕಪ್ ಸ್ವೀಡನ್‌ನಲ್ಲಿ ನಡೆದಿತ್ತು. ಆ ಟೂರ್ನಿಯಲ್ಲಿ ಬ್ರೆಜಿಲ್‌ನ 17 ವರ್ಷದ ಪೆಲೆಯ ಮಿಂಚಿನಾಟ ರಂಗೇರಿತ್ತು. ಅದರಿಂದಾಗಿಯೇ ಟೂರ್ನಿಯ ಬಗ್ಗೆ ಮಾತನಾಡುವಾಗಲೆಲ್ಲ ಪೆಲೆಯ ಸಾಧನೆಯೇ ಹೆಚ್ಚು ಚರ್ಚಿತವಾಗುತ್ತದೆ. ಬ್ರೆಜಿಲ್ ತಂಡವು ಸೆಮಿಫೈನಲ್‌ನಲ್ಲಿ ಫ್ರಾನ್ಸ್ ವಿರುದ್ಧ ಜಯಿಸಲು ಪೆಲೆ ಹ್ಯಾಟ್ರಿಕ್ ಕಾರಣವಾಗಿತ್ತು.

ಆದರೆ ಫಾಂಟೇನ್ ಅವರ ಸಾಧನೆಯು ವೈಯಕ್ತಿಕ ಶ್ರೇಷ್ಠವಾಗಿತ್ತು. ಮೂರನೇ ಸ್ಥಾನಕ್ಕಾಗಿ ನಡೆದಿದ್ದ ಪಂದ್ಯದಲ್ಲಿ ವೆಸ್ಟ್ ಜರ್ಮನಿ ವಿರುದ್ಧ ನಾಲ್ಕು ಗೋಲು ಬಾರಿಸಿದ್ದರು.

ಆದರೆ ಜಸ್ಟ್ ವೃತ್ತಿಜೀವನಕ್ಕೆ 1962ರಲ್ಲಿ ತೆರೆ ಬಿತ್ತು. ಆಗ ಅವರಿಗೆ ಕೇವಲ 28 ವರ್ಷವಾಗಿತ್ತು. ಕಾಲಿನ ಮೂಳೆಮುರಿತದಿಂದಾಗಿ ಹೆಚ್ಚು ವರ್ಷಗಳ ಕಾಲ ಆಟ ಮುಂದುವರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಒಟ್ಟು 21 ಪಂದ್ಯಗಳಲ್ಲಿ 30 ಗೋಲು ಗಳಿಸಿದ್ದಾರೆ.

ಆಟದಿಂದ ದೂರ ಸರಿದ ನಂತರ ಅವರು ಕೋಚ್ ಆಗಿಯೂ ಗಮನ ಸೆಳೆದರು. 1967ರಲ್ಲಿ ಫ್ರಾನ್ಸ್ ತಂಡದ ಕೋಚ್ ಆಗಿದ್ದರು.

ಜಸ್ಟ್ ಫಾಂಟೇನ್

ಸಂತೋಷ್ ಟ್ರೋಫಿ: ಫೈನಲ್‌ಗೆ ಕರ್ನಾಟಕ

ರಿಯಾದ್, ಸೌದಿ ಅರೇಬಿಯಾ (ಪಿಟಿಐ): ಅಮೋಘ ಲಯ ಮುಂದುವರಿಸಿದ ಕರ್ನಾಟಕ ತಂಡದವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ತಲುಪಿದ್ದಾರೆ

ಇಲ್ಲಿಯ ಕಿಂಗ್ ಫಹಾದ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ 3–1ರಿಂದ ಸರ್ವಿಸಸ್ ತಂಡವನ್ನು ಮಣಿಸಿತು. ಕರ್ನಾಟಕ 1975–76ರ ಆವೃತ್ತಿಯಲ್ಲಿ ಕೊನೆಯ ಬಾರಿ ಫೈನಲ್ ತಲುಪಿ ರನ್ನರ್ಸ್ ಅಪ್ ಆಗಿತ್ತು.

ಪಂದ್ಯದಲ್ಲಿ ಕರ್ನಾಟಕ ತಂಡದ ಪರ ರಾಬಿನ್ ಯಾದವ್ (42ನೇ ನಿಮಿಷ), ಅಂಕಿತ್ ಪಿ. (45 + 1ನೇ ನಿಮಿಷ) ಮತ್ತು ಎಂ. ಸುನಿಲ್ ಕುಮಾರ್ (77ನೇ ನಿ.) ಗೋಲು ಗಳಿಸಿ ಗೆಲುವಿನ ರೂವಾರಿಗಳಾದರು.

ಸರ್ವಿಸಸ್ ಪರ ಬಿ. ಥಾಪಾ 40ನೇ ನಿಮಿಷದಲ್ಲಿ ಗೋಲು ಗಳಿಸಿದರು.

ಮಾರ್ಚ್ 4ರಂದು ನಡೆಯುವ ಫೈನಲ್‌ನಲ್ಲಿ ಕರ್ನಾಟಕ ತಂಡವು ಮೇಘಾಲಯ ತಂಡವನ್ನು ಎದುರಿಸಲಿದೆ. ನಾಲ್ಕರ ಘಟ್ಟದ ಮತ್ತೊಂದು ಹಣಾಹಣಿಯಲ್ಲಿ ಮೇಘಾಲಯ 2–1ರಿಂದ ಪಂಜಾಬ್ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಮೊದಲ ಬಾರಿಗೆ ಟೂರ್ನಿಯ ಪ್ರಶಸ್ತಿ ಸುತ್ತು ತಲುಪಿತು

ಫುಟ್‌ಬಾಲ್ :ಸೆಮಿಫೈನಲ್‌ಗೆ ಎಫ್‌ಸಿಬಿಯು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇರ್ಫಾನ್ ಯಾದವಾಡ ಗಳಿಸಿದ ಎರಡು ಗೋಲುಗಳ ಬಲದಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡವು ಕೆಎಸ್‌ಎಫ್‌ಎ ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಎಫ್‌ಸಿಬಿಯು 2–0ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ 11ನೇ ನಿಮಿಷದಲ್ಲೇ ಮೊದಲ ಗೋಲು ಗಳಿಸಿದ ಇರ್ಫಾನ್, 17ನೇ ನಿಮಿಷದಲ್ಲಿ ಮತ್ತೊಮ್ಮೆ ಚೆಂಡನ್ನು ಗುರಿ ಸೇರಿಸಿದರು.

ಟೂರ್ನಿಗೆ ಗುರುವಾರ ವಿರಾಮದ ದಿನವಾಗಿದ್ದು, ಶುಕ್ರವಾರ ಮೊದಲ ಸೆಮಿಫೈನಲ್ ಪಂದ್ಯ ನಡೆಯಲಿದೆ. ಇದರಲ್ಲಿ ಡೆಲ್ಲಿ ಎಫ್‌ಸಿ– ಚೆನ್ನೈಯಿನ್ ಎಫ್‌ಸಿ ಸೆಣಸಲಿವೆ. ಶನಿವಾರ ನಡೆಯುವ ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಎಫ್‌ಸಿಬಿಯು– ಎಎಸ್‌ಸಿ ಮುಖಾಮುಖಿಯಾಗಲಿವೆ.

ಎಫ್‌ಸಿಬಿಯು ತಂಡದ ಇರ್ಫಾನ್ ಯಾದವಾಡ (ಕೆಂಪು ಪೋಷಾಕು) ಚೆಂಡನ್ನು ಹೆಡರ್ ಮೂಲಕ ಗುರಿ ಸೇರಿಸಿದರು– ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಉದ್ದೀಪನ ಮದ್ದು ಸೇವನೆ: ಐಶ್ವರ್ಯಗೆ 4 ವರ್ಷ ನಿಷೇಧ

ನವದೆಹಲಿ (ಪಿಟಿಐ): ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾದ ಕಾರಣ ಟ್ರಿಪಲ್ ಜಂಪ್ ಅಥ್ಲೀಟ್ ಐಶ್ವರ್ಯ ಬಾಬು ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ನಾಲ್ಕು ವರ್ಷಗಳ ನಿಷೇಧ ಹೇರಿದೆ.

25 ವರ್ಷದ ಐಶ್ವರ್ಯ ಮತ್ತು ಸ್ಪ್ರಿಂಟರ್ ಎಸ್. ಧನಲಕ್ಷ್ಮಿ ಅವರನ್ನು ಈ ಹಿಂದೆ ಈ ನಿಷೇಧಿತ ಅನಬಾಲಿಕ್ ಸ್ಟೆರಾಯಿಡ್ ಸೇವಿಸಿದ ಕಾರಣ, 2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ಗೆ ಆಯ್ಕೆ ಮಾಡಲಾದ ತಂಡದಿಂದ ಕೈಬಿಡಲಾಗಿತ್ತು.

ನಾಡಾದ ಅಪೀಲ್ ಪೆನಲ್‌ನಿಂದ ಐಶ್ವರ್ಯ ಅವರಿಗೆ ಫೆಬ್ರುವರಿ 13ರಂದು ನೋಟಿಸ್ ನೀಡಲಾಗಿದ್ದು, ನಿಷೇಧದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮಾರ್ಚ್ 6ರವರೆಗೆ ಗಡುವು ನೀಡಲಾಗಿದೆ.

ಕಳೆದ ವರ್ಷದ ಜನವರಿ 13 ಮತ್ತು 14ರಂದು ನಡೆದ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಐಶ್ವರ್ಯ ಅವರಿಂದ ಪರೀಕ್ಷೆಗಾಗಿ ಸ್ಯಾಂಪಲ್ ಸಂಗ್ರಹಿಸಲಾಗಿತ್ತು.

ಟ್ರಿಪಲ್ ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ (14.14 ಮೀಟರ್ಸ್) ನಿರ್ಮಿಸಿರುವ ಐಶ್ವರ್ಯ ಅವರನ್ನು ಕಳೆದ ವರ್ಷ ಜುಲೈನಲ್ಲಿ ತಾತ್ಕಾಲಿಕವಾಗಿ ಅಮಾನತು ಮಾಡಲಾಗಿತ್ತು.

ಐಶ್ವರ್ಯ ಬಾಬು

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕಾದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಲೈಂಗಿಕ ಸಮಸ್ಯೆ


ಶಕ್ತಿ, ತಾಜಾತನ ಮತ್ತು ಪರಿಪೂರ್ಣ ಉತ್ಸಾಹದ ಮಧುರ ಬಾಂಧವ್ಯಕ್ಕಾಗಿ ಧನ್ವಂತರಿ ಆಯುರ್ವೇದ.
ಇಂದ್ರಿಯವನ್ನು 7-8 ಇಂಚು ಉದ್ದ 3-4 ಇಂಚು ದಪ್ಪ, ಸೆಕ್ಸ್ ಸಮಯ 30-40 ನಿಮಿಷ ಹೆಚ್ಚಿಸುತ್ತದೆ. 21 ರಿಂದ 75 ವರ್ಷದವರ ತನು-ಮನವನ್ನು ನವ ಯೌವನದಿಂದಿರುವಂತೆ ಮಾಡುತ್ತದೆ.
100% ಗ್ಯಾರಂಟಿ. ಅಂಗವರ್ಧಕ ಮಿಷಿನ್ ಲಭ್ಯವಿದೆ.
ಮಹಿಳೆಯರ ಆಕರ್ಷಕ ಸ್ತನವರ್ಧನೆಗೆ ಔಷಧಿ ದೊರೆಯುತ್ತದೆ.
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
7411506650